ಶ್ರೀಸತ್ಯಾಭಿನವತೀರ್ಥಶ್ರೀಮಚ್ಚರಣವಿರಚಿತ

# ರಾಮಾಮೃತ ಮಹಾರ್ಣವ




ಅನುವಾದ :

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ



ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಪ್ರಕಾಶನ ವಿಭಾಗ

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)

**ಸಂಸ್ಥಾಪಕ-ನಿರ್ದೇಶಕರು : ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ**

''ಪಾಜಕ'', 89/24, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, 3ನೇ ಮುಖ್ಯರಸ್ತೆ,
1ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು-19. ✆ 080-26602802, 26611011

Internet: www.vyasamadhwa.org E-mail: info@vyasamadhwa.org

---

## ಸಂಸ್ಥೆಯ ಪ್ರಮುಖ ಯೋಜನೆಗಳು

1) ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ 2000ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

2) ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸ-ಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ 30000 ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

3) 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವಮೂಲ-ಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

4) 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ 26 ವಿದ್ವಾಂಸರಿಗೆ ರೂ. 750/- ನ್ನು ಸಲ್ಲಿಸುತ್ತಿದ್ದು, ಅದನ್ನು ಮುಂದೆ ರೂ. 1000/-ಕ್ಕೆ ಹೆಚ್ಚಿಸುವ ಯೋಜನೆಯೂ ಇದೆ.

5) ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

6) ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯ ವಿದ್ವಾಂಸರಿಗೆ ರೂ. 10,000/- ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

7) ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.25,000/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

8) ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

9) ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ವಿಚಾರಸಂಕಿರಣಗಳನ್ನು, ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.15,000/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

**ವಿಶೇಷ ಸೂಚನೆ :**

1) ಪ್ರತಿಷ್ಠಾನಕ್ಕೆ ನೀಡುವ ಎಲ್ಲಾ ಬಗೆಯ ದೇಣಿಗೆಗಳಿಗೂ ಆದಾಯತೆರಿಗೆ ನಿಯಮ 80ಜಿ ಅನ್ವಯ ಆದಾಯತೆರಿಗೆ ವಿನಾಯಿತಿ ಸೌಲಭ್ಯ ಉಂಟು.

2) ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.

ಶ್ರೀಸತ್ಯಾಭಿನವತೀರ್ಥ ಶ್ರೀಮಚ್ಚರಣವಿರಚಿತ

# ರಾಮಾಮೃತ ಮಹಾರ್ಣವ

(ಮೂಲ, ಕನ್ನಡ ಅನುವಾದ, ವಿವರಣೆ, ಹಾಗೂ
ದುರ್ಘಟಾರ್ಥದೀಪಿಕೆಯ ವಿಶೇಷಾಂಶಗಳೊಂದಿಗೆ)

ಸಂಪಾದನೆ, ಅನುವಾದ:

**ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ಪ್ರಕಾಶನ :

**ಐತರೇಯ ಪ್ರಕಾಶನ ವ್ಯಾಸನಕೆರೆ**

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಪ್ರಕಾಶನ ವಿಭಾಗ

'ಪಾಜಕ', ೮೯/೨೪, ೩ನೇ ಮುಖ್ಯರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್,
ಹನುಮಂತನಗರ, ಬೆಂಗಳೂರು - ೫೬೦ ೦೧೯.

**Ramāmṛtamahārṇavaṁ of Sri Satyabhinavatirtharu :** Edited and traslated by Vidyāvācaspati, Darśanaratnam, Pravacanācārya, Sacchāstra-vicakṣaṇaratnam, Śāstraprava-canakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍita-ratnam, Vidyāvāridhi, Sacchāstrapravacanapravīṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & **Karnataka Rajyotsava Award-2002, Śrī Vidyāmānya Mahāpraśasti** of Śrī Pejavar Math, Udupi and **Rashtraprati Award - 2005) Dr.Vyasanakere Prabhanjanacharya,** M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere,** Publication wing of **Śrī VyāsaMadhva Samśodhana Pratiṣṭhāna** Pājakâ, No.87/24, Third Main, First Cross, Mount Joy Extension, Hanumanthanagar, Bangalore - 560019. Pages: 52

Phone : 26602802; 26611011.

Internet : www.vyasamadhwa.org

E-mail : info@vyasamadhwa.org



First Edition : 2008

Price :

Typeset by :

**Śrī Vyāsa Madhva Samśodhana Pratiṣṭhāna**
**K. Subbanna,** (080) 26761614

Printed at :

**Vāgartha,** N.R. Colony, Bangalore, Ph: 22427677
Bangalore -19.

ಶ್ರೀಮದುತ್ತರಾದಿ ಮಠಾಧೀಶರಾದ

## ಪರಮಪೂಜ್ಯ ಶ್ರೀ ಸತ್ಯಾತ್ಮತೀರ್ಥಶ್ರೀಪಾದಂಗಳವರ

# ಅನುಗ್ರಹ ವಚನ

ಮಹಾತಪಸ್ವಿಗಳಾದ, ಜ್ಞಾನಿವರೇಣ್ಯರಾದ, ಶಾಪಾನುಗ್ರಹ-ಸಮರ್ಥರಾದ, ಶ್ರೀಸತ್ಯಾಭಿನವತೀರ್ಥರು ರಚಿಸಿದ ''ಶ್ರೀರಾಮಾ-ಮೃತಮಹಾರ್ಣವ'' ಎಂಬ ಗ್ರಂಥವು ಮಧ್ವಶಾಸ್ತ್ರದ ಅನೇಕಪ್ರಮೇಯಗಳನ್ನು ಹಾಗು ಸದಾಚಾರವನ್ನು ತಿಳಿಸುವ ಉತ್ತಮ ಕೃತಿಯಾಗಿದೆ. ಸ್ವೋಪಜ್ಞವ್ಯಾಖ್ಯಾನಸಹಿತವಾದ ಈ ಕೃತಿಯನ್ನು ಸಂಶೋಧಿಸಿ ಪ್ರಕಾಶನ ಮಾಡುತ್ತಿರುವ ಪಂ. ಡಾ|| ಪ್ರಭಂಜನಾಚಾರ್ಯ ವ್ಯಾಸನಕೆರೆ ಇವರು ಜಿಜ್ಞಾಸುವರ್ಗಕ್ಕೆ ಪರಮೋಪಕಾರ ಮಾಡಿದ್ದಕ್ಕಾಗಿ ತುಂಬಾ ಪ್ರಶಂಸಾಪಾತ್ರರಾಗಿದ್ದಾರೆ. ಇವರು ಯಾವಾಗಲೂ ಅಧ್ಯಯನಶೀಲರಾಗಿದ್ದಾರೆ. ಪಾಠ, ಪ್ರವಚನಗಳಿಂದ ಧರ್ಮಜಾಗೃತಿಯನ್ನು ಮಾಡುತ್ತಾರೆ. ನೂರಾರು ಗ್ರಂಥಗಳ ಸಂಶೋಧನ ಹಾಗೂ ಪ್ರಕಾಶನದಿಂದ ಮಾಧ್ವಸಮಾಜಕ್ಕೆ ಬಹಳ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಇವರಿಗೆ ನಮ್ಮ ಉಪಾಸ್ಯಮೂರ್ತಿಗಳಾದ ಶ್ರೀಮೂಲರಾಮ, ದಿಗ್ವಿಜಯರಾಮ, ವೇದವ್ಯಾಸದೇವರು ಜ್ಞಾನಭಕ್ತಿವೈರಾಗ್ಯಗಳನ್ನು ನೀಡಿ ಇವರಿಂದ ಇನ್ನೂ ಅಧಿಕವಾಗಿ ಸಾರಸ್ವತಸೇವೆಯು ನಡೆಯುವಂತೆ ಪರಮಾನುಗ್ರಹ ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

ಮುಕ್ಕಾಂ : ಶ್ರೀಮತ್ಸತ್ಯಾತ್ಮತೀರ್ಥಶ್ರೀಪಾದಂಗಳವರು

ರಾಣೆ ಬೆನ್ನೂರು ಉತ್ತರಾದಿಮಠ.

ಸರ್ವಧಾರಿ, ವೈ.ಶು.ಪೌರ್ಣಿಮೆ ೧೯/೦೫/೦೮

# ವಿಷಯಾನುಕ್ರಮಣಿಕೆ

ಮುನ್ನುಡಿ

ರಾಮಾಮೃತ ಮಹಾರ್ಣವ ೧-೧೭೨

ಪರಿಶಿಷ್ಟಗಳು :



* * *

**ಸತ್ಯನಾಥಾಬ್ಧಿಸಂಭೂತಃ ಸದ್ಯೋಗಣವಿಜೃಂಭಿತಃ ।**
**ಸತ್ಯಾಭಿನವತೀರ್ಥೇಂದುಃ ಸಂತಾಪಾನ್ ಹಂತು ಸಂತತಮ್ ॥**

# ಮುನ್ನುಡಿ

ರಾಮಾಮೃತಮಹಾರ್ಣವವು ಶ್ರೀಸತ್ಯಾಭಿನವತೀರ್ಥರ ಕೃತಿ. ಶ್ರೀಸತ್ಯಾಭಿನವ ತೀರ್ಥರು(೧೬೭೩-೧೭೦೬) ಶ್ರೀಸತ್ಯನಾಥತೀರ್ಥರ ಶಿಷ್ಯವರೇಣ್ಯರಾಗಿ ಶ್ರೀಮದುತ್ತರಾದಿ ಮಠದ ಪೀಠವನ್ನು ಅಲಂಕರಿಸಿದ ಮಹನೀಯರು.

## ಶ್ರೀಸತ್ಯನಾಥತೀರ್ಥರು (೧೬೪೮-೧೬೭೩)

ಶ್ರೀಸತ್ಯನಾಥತೀರ್ಥರು ಪಂಚಾಭಿನವಕರ್ತೃಗಳೆಂದು ಪ್ರಸಿದ್ಧರಾದ ಅಪೂರ್ವ ವ್ಯಕ್ತಿತ್ವದ ಮಹನೀಯರು. ಅಭಿನವಚಂದ್ರಿಕಾ(ತತ್ತ್ವಪ್ರಕಾಶಿಕಾ ಟಿಪ್ಪಣಿ), ಅಭಿನವತಾಂಡವ (ತರ್ಕತಾಂಡವದ ರೀತಿಯಲ್ಲಿ ನ್ಯಾಯವೈಶೇಷಿಕಮತದ ವಿಮರ್ಶಾತ್ಮಕಕೃತಿ), ಅಭಿನವಾಮೃತ (ಪ್ರಮಾಣಪದ್ಧತಿಯ ಟಿಪ್ಪಣಿ), ಅಭಿನವ-ಗದಾ (ಅಪ್ಪಯ್ಯದೀಕ್ಷಿತಕೃತ ಮಧ್ವತಂತ್ರಮುಖಮರ್ದನ ಎಂಬ ಕೃತಿಯ ಖಂಡನಾತ್ಮಕಕೃತಿ) ಎಂಬ ನಾಲ್ಕು ಅಭಿನವ ಎಂಬ ಹೆಸರಿನ ಕೃತಿಗಳನ್ನು ರಚಿಸಿ ಐದನೆಯ ಅಭಿನವವನ್ನಾಗಿ ತಮ್ಮ ಶಿಷ್ಯರಿಗೆ ಶ್ರೀಸತ್ಯಾಭಿನವತೀರ್ಥರು ಎಂದು ನಾಮಕರಣಮಾಡಿದ ಹಿರಿಮೆ ಇವರದು.

## ಶ್ರೀಸತ್ಯಾಭಿನವತೀರ್ಥರ ಚರಿತ್ರೆಯ ಆಕರಗಳು

ಶ್ರೀಸತ್ಯಾಭಿನವತೀರ್ಥರ ಚರಿತ್ರೆಯನ್ನು ತಿಳಿಯಲು ಅತ್ಯಂತ ಮುಖ್ಯವಾದ ಪ್ರಕಾಶಿತ ಆಕರ ಎಂದರೆ ದೈವಜ್ಞಭೀಮಾಚಾರ್ಯರ ಶ್ರೀಪೂರ್ಣಬೋಧಗುರು-ವಂಶಕಥಾಕಲ್ಪತರು ಎಂಬ ಉತ್ತರಾದಿ ಮಠದ ಇತಿಹಾಸವನ್ನು ಸಂಗ್ರಹಿಸುವ ಸಂಸ್ಕೃತ ಪದ್ಯಕೃತಿ. ಒಟ್ಟು ೨೫೭ ಶ್ಲೋಕಗಳಲ್ಲಿ ಸತ್ಯಾಭಿನವರ ಬಗ್ಗೆ ಅಪೂರ್ವ ಮಾಹಿತಿಯನ್ನು ಈ ಕೃತಿ ಒದಗಿಸುತ್ತದೆ. ಮತ್ತೊಂದು ಕೃತಿ ಶ್ರೀಸತ್ಯಾಭಿನವೋದಯ ಎಂಬ ಇವರನ್ನು ಕುರಿತಾದ ವಿಜಯ ಕಾವ್ಯ; ಅದು ಬೆಂಗಳೂರಿನ ಉತ್ತರಾದಿ ಮಠದ ಶ್ರೀಸತ್ಯಪ್ರಮೋದತೀರ್ಥಗ್ರಂಥಾಗಾರದಲ್ಲಿ ಉಪಲಬ್ಧವಿರುವ ಕೃತಿ; ಅದಿನ್ನೂ ಅಪ್ರಕಟಿತ. ಇದರೊಂದಿಗೆ ಛಲಾರಿ ಸಂಕರ್ಷಣಾಚಾರ್ಯರ ಸತ್ಯನಾಥಾಭ್ಯುದಯ, ಹಾಗು ಶ್ರೀಸತ್ಯನಾಥಮಾಹಾತ್ಮ್ಯರತ್ನಾಕರ ಮತ್ತು ಅವುಗಳಿಗೆ ಅವರ ಪುತ್ರರಾದ ಸುಬ್ರಹ್ಮಣ್ಯಾಚಾರ್ಯರು ರಚಿಸಿರುವ ವ್ಯಾಖ್ಯಾನಗಳಲ್ಲೂ ಶ್ರೀಸತ್ಯಾಭಿನವರ ಬಗ್ಗೆ ಅನೇಕ ಅಪೂರ್ವವಿವರಗಳು

ದೊರೆಯುತ್ತವೆ. ಕೊಂಕಣಾಭ್ಯುದಯ, ಸತ್ಕಥಾ ಮೊದಲಾದ ಕೃತಿಗಳಲ್ಲೂ ಇವರ ಬಗ್ಗೆ ಕೆಲವು ಮಾಹಿತಿ ದೊರೆಯುತ್ತದೆ.

## ಶ್ರೀಸತ್ಯಾಭಿನವತೀರ್ಥರು

ಶ್ರೀಸತ್ಯಾಭಿನವತೀರ್ಥರ ಪೂರ್ವಾಶ್ರಮದ ಹೆಸರು ಅತ್ಯಾರ್ಷ ನರಸಿಂಹಾಚಾರ್ಯರು. ಇವರಿಗೆ ಆಶ್ರಮವಾದ ಸ್ಥಳ ಸಂಗಲಗೀ; ಎಂದರೆ ಇಂದಿನ ಸಾಂಗಲೀ. ಶ್ರೀನರಸಿಂಹಾಚಾರ್ಯರು ಮೂಲತಃ ಶ್ರೀಸತ್ಯನಾಥತೀರ್ಥರ ವಿದ್ಯಾಶಿಷ್ಯರು. ಬಾಲ್ಯದಿಂದಲೂ ಅವರ ಬಳಿಯೇ ನೆಲೆಸಿ ಸಕಲಶಾಸ್ತ್ರಗಳನ್ನು ಅಧ್ಯಯನ ಮಾಡಿ ಅಪಾರವಿದ್ವತ್ತನ್ನು ಸಂಪಾದಿಸಿದ ಮಹನೀಯರು. ಅವರ ವಿಶೇಷಪ್ರೀತಿಗೂ ಪಾತ್ರರಾಗಿದ್ದುದು ಇವರ ಹಿರಿಮೆ. ಅವರೊಂದಿಗೆ ಶ್ರೀರಂಗದಲ್ಲಿ ನೆಲೆಸಿದ್ದಾಗ ಅವರು ಇವರಿಗೆ ಉದರವ್ಯಾಧಿಯೊಂದು ಕಾಡಲಿದೆಯೆಂದು ಎಚ್ಚರಿಕೆ ನೀಡಿ, ಸಾಂಗಲಿಗೆ ಕಳುಹಿಸಿ ಕೊಟ್ಟಿದ್ದರು. ಶ್ರೀಸತ್ಯನಾಥರು ದೀರ್ಘಕಾಲದ ಸಂಚಾರ ಮುಗಿಸಿ ಉಡುಪಿ ಮೊದಲಾದ ಕ್ಷೇತ್ರಗಳ ಮೂಲಕ ಸಾಂಗಲಿಗೆ ಮರಳುವ ವೇಳೆಗೆ ಇವರಿಗೆ ವ್ಯಾಧಿ ಉಲ್ಬಣಿಸಿತ್ತು. ಇವರ ಸ್ಥಿತಿಯನ್ನು ನೋಡಿ ಕೃಪೆ ತೋರಿದ ಶ್ರೀಸತ್ಯನಾಥರು ನಿಮ್ಮ ವ್ಯಾಧಿಗೆ ಪರಿಹಾರ ಮುಂದಿನ ಜನ್ಮದಲ್ಲಿಯೇ ಎಂದು ನುಡಿದು ಸನ್ಯಾಸ ಸ್ವೀಕರಿಸುವುದೇ ಜನ್ಮಾಂತರ ಎಂದು ತಿಳಿಸಿ ಅವರಿಗೆ ಸನ್ಯಾಸ ದೀಕ್ಷೆ ನೀಡಿದರು. ಕೂಡಲೆ ಅವರ ವ್ಯಾಧಿ ಪೂರ್ಣವಾಗಿ ಗುಣವಾಗಿ ಮುಂದೆ ಅನೇಕ ದಶಕಗಳ ಕಾಲ ವೇದಾಂತಸಾಮ್ರಾಜ್ಯವನ್ನು ಪಾಲಿಸಿದ್ದು ಇತಿಹಾಸ.

## ಚಿಕ್ಕಪಟ್ಟದಲ್ಲಿ ಶ್ರೀಸತ್ಯಾಭಿನವರು

ಆಶ್ರಮ ನೀಡಿದ ಶ್ರೀಸತ್ಯನಾಥತೀರ್ಥರು ಶ್ರೀವಂಶರಾಮ ಪ್ರತಿಮೆ ಹಾಗೂ ವ್ಯಾಸಮುಷ್ಟಿಯನ್ನು ನೀಡಿ ಸೂಕ್ತಸಾಮಗ್ರಿಗಳೊಂದಿಗೆ ಪೂರ್ವದಿಕ್ಕಿನ ದಿಗ್ವಿಜಯಕ್ಕೆ ಕಳುಹಿಸಿದರು. ಭಾಗ್ಯನಗರಕ್ಕೆ(ಹೈದರಾಬಾದ್) ತೆರಳಿ ಅಲ್ಲಿದ್ದ ಕವಿಗಳನ್ನು, ತಾರ್ಕಿಕರನ್ನು ಇತರ ವಾದಿಗಳನ್ನು ಜಯಿಸಿ ಮುಂದೆ ಸಪ್ತಸಾಗರ ಕ್ಷೇತ್ರಕ್ಕೆ ತೆರಳಿದರು. ಅಲ್ಲಿಯೂ ವಾದಿಜಯ ಕಾರ್ಯವನ್ನು ಪೂರೈಸಿ ವೇಣಾಸಾಗರಕ್ಕೆ ತೆರಳಿದಾಗ ಒಂದು ಅದ್ಭುತ ಘಟನೆ ನಡೆಯಿತು. ಅಲ್ಲಿ ಅವರು ಸ್ನಾನಕ್ಕೆಂದು ತೆರಳಿದ್ದಾಗ ಒಬ್ಬ ವೃದ್ಧಬ್ರಾಹ್ಮಣ ಆಗಮಿಸಿ ಇವರ ಕೈ ಹಿಡಿದು ಸಂಕಲ್ಪಮಂತ್ರಗಳನ್ನು

ಉಚ್ಚರಿಸಿ ಇವರ ಸ್ನಾನ ಪೂರೈಸುತ್ತಲೇ ಅಲ್ಲಿಂದ ಅದೃಶ್ಯನಾದ. ಇವರ ಮೇಲೆ ಶ್ರೀಹರಿಗಿದ್ದ ಕರುಣೆ ಶಿಷ್ಯವರ್ಗಕ್ಕೆ ತಿಳಿದು ಆದ ಆನಂದ ಅಷ್ಟಿಷ್ಟಲ್ಲ.

ಅಲ್ಲಿಂದ ಮುಂದೆ ಸಪ್ತಸಾಗರಕ್ಕೂ ಅಲ್ಲಿಂದ ವಸಿಷ್ಠಸಾಗರಕ್ಕೂ ತೆರಳಿದಾಗ ಅಲ್ಲಿ ಮತ್ತೊಂದು ತೆರನಾದ ಮಹಿಮೆ ನಡೆಯಿತು. ಹಿಂದೊಮ್ಮೆ ಆ ಕ್ಷಾರಮಯವಾದ ವಸಿಷ್ಠಸಾಗರಕ್ಷೇತ್ರದಲ್ಲಿ ಶ್ರೀವಿದ್ಯಾಧೀಶತೀರ್ಥರಿಂದ ಸಿಹಿನೀರು ನಿರ್ಮಿತವಾಗಿ ಜನತೆಗೆ ಉಪಕಾರವಾಗಿತ್ತು. ಅದು ಕಾಲಾಂತರದಲ್ಲಿ ಮರೆಯಾಗಿ ಹೋಗಿತ್ತು. ಅಲ್ಲಿಗೆ ಆಗಮಿಸಿದ ಶ್ರೀಸತ್ಯಾಭಿನವರು ಲೋಕಹಿತಕ್ಕೆಂದು ತಮ್ಮ ತಪಃಶಕ್ತಿಯಿಂದ ನಾಲ್ಕು ಸಿಹಿನೀರಿನ ಭಾವಿಗಳನ್ನು ನಿರ್ಮಿಸಿದರು. ಅವು ಇಂದಿಗೂ ಇವೆ ಎಂಬುದು ಪ್ರತೀತಿ. ಅಂತೂ ಶ್ರೀವಿದ್ಯಾಧೀಶತೀರ್ಥರನ್ನು ಸ್ಮರಿಸುವಂತಹ ಮಹಿಮೆ ತೋರಿಸಿದ ಹಿರಿಮೆ ಇವರದಾಯಿತು. ಮುಂದೆ ಅವರು ತೆರಳಿದ್ದು ಗೋದಾವರೀ ತೀರದ ಧರ್ಮಪುರೀ ಕ್ಷೇತ್ರಕ್ಕೆ; ಅಲ್ಲಿಂದ ಅವರು ಸಂಗಲಗಿಗೆ ತೆರಳಿ ಗುರುಗಳಾದ ಸತ್ಯನಾಥತೀರ್ಥರೊಂದಿಗೆ ನಿವೃತ್ತಿಸಂಗಮ ಕ್ಷೇತ್ರದಲ್ಲಿ ಚಾತುರ್ಮಾಸ್ಯ ದೀಕ್ಷೆಯನ್ನು ಕೈಗೊಂಡರು. ಅಲ್ಲಿಯ ಚಾತುರ್ಮಾಸ್ಯದ ಅನಂತರ ಗುರುಗಳೊಂದಿಗೆ ತಿರುಪತಿಯಾತ್ರೆಯನ್ನು ಪೂರೈಸಿ ದಕ್ಷಿಣ ಪಿನಾಕಿನೀ ತೀರದ ವೀರಚೋಳಪುರಕ್ಕೆ ತೆರಳಿದರು. ಅಲ್ಲಿ ಇವರಿಗೆ ಗುರುಗಳು ಸಂಸ್ಥಾನವನ್ನು ಒಪ್ಪಿಸಿ ವೃಂದಾವನಸ್ಥರಾದರು. ವೈಕುಂಠಯಾತ್ರೆಯ ಮುನ್ನ ಶ್ರೀಸತ್ಯಾಭಿನವರಿಗೆ ಅನೇಕ ಬಗೆಯಲ್ಲಿ ಮಾರ್ಗದರ್ಶನವನ್ನು ನೀಡಿ ಕಾಲ ಕೆಟ್ಟದ್ದಾದರೂ ಬಗೆ ಬಗೆಯ ಆಪತ್ತುಗಳು ಪುನಃ ಪುನಃ ಒದಗುವ ಸಂಭವವಿದ್ದರೂ ಶ್ರೀಹರಿವಾಯುಗಳ ಅನುಗ್ರಹದಿಂದ ಅವೆಲ್ಲವೂ ಪರಿಹಾರವಾಗಿ ಅವರ ಪೀಠಾಧಿಪತ್ಯ ಅತ್ಯಂತ ಸ್ಮರಣೀಯವಾಗುವುದು ಎಂಬ ಆದೇಶವನ್ನು ನೀಡಿದ ವಿಶೇಷ ವಿವರ ಶ್ರೀಸತ್ಯನಾಥಾಭ್ಯುದಯದಲ್ಲಿದೆ.

## ಪೀಠದಲ್ಲಿ ಶ್ರೀಸತ್ಯಾಭಿನವರು(೧೬೭೩-೧೭೦೬)

ಶ್ರೀಸತ್ಯಾಭಿನವರು ಪೀಠಕ್ಕೆ ಬಂದದ್ದು ೧೬೭೩ರರ ಮಾರ್ಗಶಿರಮಾಸ ಏಕಾದಶೀ ದಿನದಂದು. ಗುರುಗಳ ಹಿರಿಮೆಗೆ ಅನುಗುಣವಾದ ರೀತಿಯಲ್ಲಿ ವೈಭವದಿಂದ ಅವರ ವೃಂದಾವನಪ್ರತಿಷ್ಠಾನಾದಿಕಾರ್ಯಗಳನ್ನು ಪೂರೈಸಿದರು. ತಿರುವಣ್ಣಾಮಲೈ ಪ್ರಾಂತದ ಅರಸನಾದ ಜಗನ್ನಾಥಪ್ರಭು ಎಂಬವನು ಆರಾಧನೆಗೆ ಅಗತ್ಯವಾಗಿದ್ದ ಸಮಸ್ತ ಸಾಮಗ್ರಿಗಳನ್ನೂ ಪೂರೈಸಿ ಕೃತಾರ್ಥನಾದನು. ಗುರುಗಳ

ಆರಾಧನೆಯಂದು ಹತ್ತುಸಹಸ್ರ ಬ್ರಾಹ್ಮಣರ ಭೋಜನ ಮಾಡಿಸಿದ ಹಿರಿಮೆ ಶ್ರೀಸತ್ಯಾಭಿನವರದಾಯಿತು.

ಅವರು ಪೀಠವನ್ನು ವಹಿಸಿಕೊಂಡ ಕೂಡಲೇ ಗುರುಗಳು ನೀಡಿದ್ದ ಆದೇಶಕ್ಕನುಗುಣವಾಗಿ ಅನೇಕ ಬಗೆಯ ಸುಧಾರಣೆಗಳನ್ನು ತಂದರು. ವೆಂಕಟಪತಿ ಎಂಬವರನ್ನು ಪ್ರಧಾನ ಮಂತ್ರಿಗಳನ್ನಾಗಿ ನೇಮಿಸಿಕೊಂಡು ಅರವತ್ತು ಸಂಖ್ಯೆಯ ಸೇವಾಜನರನ್ನು ನೇಮಿಸಿಕೊಂಡರು. ದೇವಪೂಜೆಗೆ ಎಡಬಲಸೇವಕರು, ದ್ವಾರಪಾಲಕರು, ಸ್ನಾನಕ್ಕೆ, ಅಡಿಗೆಗೆ, ಬಡಿಸುವುದಕ್ಕೆ ಪ್ರತ್ಯೇಕ ಜನರು; ಪೂಜಾಸಾಧನ ವ್ಯವಸ್ಥೆಗೆ ಒಂದು ಗುಂಪು, ಭಗವತ್ಪೂಜೆಗೆಂದು ಅಮೂಲ್ಯವಾದ ವಸ್ತ್ರಾಲಂಕಾರಗಳು, ಚಿನ್ನ ಬೆಳ್ಳಿಯ ಪಾತ್ರೆಗಳು, ಛತ್ರ ಚಾಮರ ಪೀಠ ಮೊದಲಾದವುಗಳು, ತುಪ್ಪದ ದೀಪ ಮೊದಲಾದ ವಿಶೇಷ ವ್ಯವಸ್ಥೆ ಸಂಚಾರಕ್ಕೆಂದು ಕುದುರೆಗಳು, ಎತ್ತುಗಳು, ಅವುಗಳ ಪಾಲನೆಗೆ ಬಗೆ ಬಗೆಯ ಜನರು, ಹೀಗೆ ರಾಜವೈಭವದ ವ್ಯವಸ್ಥೆಯನ್ನು ಮಾಡಿದರು. ಪ್ರತಿನಿತ್ಯವು ಬೆಳಿಗ್ಗೆ ಆಮಂತ್ರಣೋತ್ಸವ, ಶ್ರೀಪಾದುಕಾರ್ಚನ, ಜಪ, ಪಾಠಪ್ರವಚನಗಳು, ನಿರ್ಮಾಲ್ಯವಿಸರ್ಜನೆ, ನವರತ್ನಾಭಿಷೇಕ, ಕೂರ್ಮಸಾಲಿಗ್ರಾಮಕ್ಕೆ ಕ್ಷೀರಾಭಿಷೇಕ, ದೇವಪೂಜೆಯ ಕಾಲದಲ್ಲಿ ವೇದಪಾರಾಯಣ, ನೈವೇದ್ಯಕಾಲದಲ್ಲಿ ರೇಷ್ಮೆ ವಸ್ತ್ರದ ಆಚ್ಛಾದನ, ಸುವರ್ಣ ಪಾತ್ರೆಗಳಲ್ಲಿ ಪಂಚಾಮೃತ ಫಲ, ಪಾನೀಯ, ತಾಂಬೂಲಾದಿಗಳ ಸಮರ್ಪಣೆ ಜನರಿಗೆ ಶ್ರೀಮೂಲರಾಮ, ವೇದವ್ಯಾಸರ ಸಂದರ್ಶನ ಮಾಡಿಸುವುದು, ವಿದ್ವಾಂಸರಿಗೆ ತೀರ್ಥಗಂಧಾಕ್ಷತೆಯ ಪ್ರದಾನ, ತೀರ್ಥಪ್ರಸಾದ ವಿತರಣೆ, ಸಾಯಂಕಾಲದಲ್ಲಿ ಚಿನ್ನದ ತೊಟ್ಟಿಲಲ್ಲಿ ಶ್ರೀಹರಿಗೆ ತೊಟ್ಟಿಲ ಪೂಜೆ, ಗೀತಾ ವಾದ್ಯ ನೃತ್ಯ, ಸಂಗೀತಗಳ ಸಮರ್ಪಣೆ, ಸಭೆಯಲ್ಲಿ ಕುಳಿತು ಗುರುಗಳ ಮಹಿಮೆಯ ನಿರೂಪಣೆ, ವಿದ್ವಾಂಸರು ಮೊದಲಾದವರಿಗೆಲ್ಲಾ ಮಂತ್ರಾಕ್ಷತಾ ಪ್ರದಾನ, ಬಳಿಕ ರಾತ್ರಿಯಲ್ಲಿ ಮಠದ ಆಯವ್ಯಯಾದಿಗಳ ವೀಕ್ಷಣೆ ಹೀಗೆ ವಿಶಿಷ್ಟವಾದ ವ್ಯವಸ್ಥೆ ನಿರ್ಮಾಣವಾದದ್ದು ಇವರಿಂದ ಎಂಬುದು ವಿಶೇಷ.

## ಸಂಚಾರ

ಬಳಿಕ ಶ್ರೀಸತ್ಯಾಭಿನವರು ದಕ್ಷಿಣದೇಶದ ಪ್ರಧಾನ ತೀರ್ಥಕ್ಷೇತ್ರಗಳನ್ನು ಸಂದರ್ಶಿಸತೊಡಗಿದರು. ಮೊದಲು ಕಂಚಿಗೂ ಅಲ್ಲಿಂದ ತಿರುಪತಿಗೂ ತೆರಳಿ, ಅಲ್ಲಿಂದ ಕಂಟಕದ್ವಾರ ಹಾಗೂ ಮಧ್ಯದ್ವೀಪಗಳ ಮೂಲಕ ಸಾಂಗಲಿಗೆ

ದಿಗ್ವಿಜಯ ಮಾಡಿದರು. ಅಲ್ಲಿಂದ ಗೋದಾವರೀ ತೀರದ ಧರ್ಮಪುರಿಗೆ ತೆರಳುತ್ತಾ ಮಾರ್ಗದಲ್ಲಿ ಭಾಗಾನಗರದ ಜನರು ಪ್ರಾರ್ಥಿಸಿದ್ದರಿಂದ ಅತ್ತ ತೆರಳಿದರು. ಆದರೆ ಆ ವೇಳೆಗೆ ಅಲ್ಲಿ ತುರುಷ್ಕರು ಆಕ್ರಮಿಸಿದುದನ್ನು ತಿಳಿದು ಅದರ ಬಳಿಯ ಬುದ್ದೊಲು ಎಂಬ ಗ್ರಾಮಕ್ಕೆ ತೆರಳಿದರು. ಆ ಸಮಯದಲ್ಲೊಮ್ಮೆ ಬ್ರಾಹ್ಮಣರೆಲ್ಲಾ ಸೇರಿ ಮಹಾದರದಿಂದ ಇವರಿಗೆ ಕನಕಾಭಿಷೇಕವನ್ನು ಮಾಡಿ ತಮ್ಮ ವಿಶೇಷಗೌರವವನ್ನು ಸೂಚಿಸಿದರು.

ಒಮ್ಮೆ ಅವರು ಸಂಚಾರದಲ್ಲಿದ್ದಾಗ ಕಾಷ್ಣಾನದಿಯ ತೀರದಲ್ಲಿದ್ದ ಹುಣಸೇ ಹಳ್ಳಿ ಎಂಬ ಸಣ್ಣ ಹಳ್ಳಿಯಲ್ಲಿ ಅತಿವೃಷ್ಟಿ ಪ್ರವಾಹಗಳಿಂದಾಗಿ ವಿಶೇಷವಾದ ಆಪತ್ತಿಗೆ ಒಳಗಾಗುವ ಪ್ರಸಂಗ ಒದಗಿತು. ಅಲ್ಲಿಂದ ರಾಯಬಾಗಿಗೆ ತೆರಳಿದಾಗಲೂ ಪರಿಸ್ಥಿತಿ ಸುಧಾರಿಸಲಿಲ್ಲ. ಮಾರನೆಯ ದಿನ ಪ್ರಾತಃಕಾಲದಲ್ಲಿ ಗುರುಗಳ ಪಾದುಕೆಗಳನ್ನು ಸಂದರ್ಶಿಸಿ ನಿತ್ಯದ ಕಾರ್ಯಕ್ರಮವನ್ನು ಪ್ರಾರಂಭಿಸತೊಡಗಿದಾಗ ಎಲ್ಲ ಆಪತ್ತುಗಳೂ ಪರಿಹಾರವಾಗಿ ಅತ್ಯಂತ ಅನುಕೂಲಕರವಾದ ಪ್ರಸಂಗಗಳು ಜರುಗಿ ಅಪಾರ ವೈಭವ ಪ್ರಾಪ್ತವಾಯಿತು.

## ಶ್ರೀಸತ್ಯಾಧೀಶತೀರ್ಥರು

ಬುದ್ದೊಲುವಿನಿಂದ ಅವರು ಸಂಚಾರ ಕ್ರಮೇಣ ಪುನಃ ಸಾಂಗಲಿಗೆ ಆಗಮಿಸಿ ಅಲ್ಲಿ ವಡ್ಡೀ ಜಗನ್ನಾಥಾಚಾರ್ಯರು ಎಂಬವರಿಗೆ ಸನ್ನ್ಯಾಸ ದೀಕ್ಷೆಯನ್ನು ನೀಡಿ ಪ್ರಣವೋಪದೇಶವನ್ನು ಮಾಡಿ ಶ್ರೀಸತ್ಯಾಧೀಶತೀರ್ಥರು ಎಂದು ನಾಮಕರಣ ಮಾಡಿದರು. ಮುಂದೆ ಕುಂಭಕೋಣದ ಬಳಿಯ ಕಾವೇರೀತೀರದ ನಾಚಾರ ಗುಡಿಗೆ ತೆರಳಿ ಅಲ್ಲಿ ಒದಗಿದ ವಾತರೋಗವನ್ನು ಗುರುಗಳ ಅನುಗ್ರಹದಿಂದ ಪರಿಹರಿಸಿಕೊಂಡು ಸಂಚಾರವನ್ನು ಮುಂದುವರೆಸಿದರು.

ಶ್ರೀಸತ್ಯಾಧೀಶತೀರ್ಥರು ಗುರುಗಳ ಆಜ್ಞೆಯಂತೆ ಪೂರ್ವದಿಕ್ಕಿನ ಸಂಚಾರವನ್ನು ಕೈಗೊಂಡು ತಮ್ಮ ಚಾತುರ್ಯದಿಂದ ವಿದ್ವತ್ತಿನಿಂದ ದಿಗ್ವಿಜಯವನ್ನು ಸಾಧಿಸಿ ಅಪಾರ ಸಂಪತ್ತನ್ನು ಸಂಗ್ರಹಿಸಿ ನಾಚಾರ ಗುಡಿಯಲ್ಲಿದ್ದ ಗುರುಗಳಿಗೆ ಸಮರ್ಪಿಸಿದರು. ಶ್ರೀಸತ್ಯಾಭಿನವರು ಅವರು ತಂದಿದ್ದ ಆಭರಣಗಳನ್ನು ಭಗವಂತನಿಗೆ ಸಮರ್ಪಿಸಿ ಧನವನ್ನೆಲ್ಲಾ ಬ್ರಾಹ್ಮಣರಿಗೆ ಸಂಭಾವನೆಯನ್ನಾಗಿ ನೀಡಿದರು. ಹೀಗೆ ಸತ್ಯಾಧೀಶರು ಮತ್ತೆ ಮತ್ತೆ ದಿಗ್ವಿಜಯವನ್ನು ಸಾಧಿಸಿ ಬಗೆ ಬಗೆಯ ಪದಾರ್ಥಗಳನ್ನು ತಂದು ಗುರುಗಳಿಗೆ ಒಪ್ಪಿಸಿ ಸಂಸ್ಥಾನವನ್ನು ಬೆಳೆಸುವ

ಕಾರ್ಯದಲ್ಲಿ ತೊಡಗಿದರು. ಮುಂದೆ ಅವರು ಸಪ್ತಗೋದಾವರೀ ತೀರಕ್ಕೆ ತೆರಳಿದ್ದಾಗ ಅನಾರೋಗ್ಯವುಂಟಾಯಿತು. ಹಾಗೆಯೇ ಅಲ್ಲಿಂದ ರಾಜಮಹೇಂದ್ರಿಗೆ ತೆರಳಿ ಅಲ್ಲಿಂದ ಗುರುಗಳಿಗೆ ವಿಷಯವನ್ನು ತಿಳಿಸಿ, ಸಂಸ್ಥಾನವನ್ನು ಅವರಿಗೆ ಒಪ್ಪಿಸಿ, ಆಷಾಢದ ಅಮಾವಾಸ್ಯೆಯಂದು ಸ್ನಾನ ಜಪಾದಿಗಳನ್ನು ಪೂರೈಸಿ ವೈಕುಂಠಯಾತ್ರೆ ಮಾಡಿದರು.

## ಚೋರಭಯದ ನಿವಾರಣೆ

ಶ್ರೀಸತ್ಯಾಧೀಶತೀರ್ಥರಿಂದ ಮರಳಿದ ಅಣುಸಂಸ್ಥಾನದ ಪ್ರತಿಮೆಗಳನ್ನು ತೆಗೆದುಕೊಂಡು ಶ್ರೀಸತ್ಯಾಭಿನವರು ಗೋದಾವರೀ ಯಾತ್ರೆಗೆ ತೆರಳಿದರು. ಮಾರ್ಗದಲ್ಲಿ ಹೈದರಾಬಾದಿನ ಬಳಿ ಒಂದು ಗ್ರಾಮದಲ್ಲಿ ನೆಲೆಸಿದ್ದಾಗ ಅವರನ್ನು ಕಳ್ಳರ ಗುಂಪೊಂದು ಆಕ್ರಮಿಸಿತು. ಮಠದ ಜನರ ಆಭರಣಾದಿಗಳ ದರೋಡೆಯನ್ನು ನಡೆಸಿತು. ಆಗ ಎಲ್ಲೆಡೆಗಳಿಂದ ಬಾಣಗಳ ಸುರಿಮಳೆ ನಡೆದು ಕಳ್ಳರೆಲ್ಲ ಅಂಜಿ ದೋಚಿದ ಪದಾರ್ಥಗಳನ್ನು ಅಲ್ಲಿಯೇ ಬಿಟ್ಟು, ಪಲಾಯನ ಮಾಡಿದರು. ಹೀಗೆ ಅಪಾರಚೋರಭಯದಿಂದ ಸಮಸ್ತ ಪರಿವಾರವನ್ನು ರಕ್ಷಿಸಿದ ಹಿರಿಮೆ ಶ್ರೀಪಾದರದಾಯಿತು. ಚೋರರ ನಾಯಕನು ವಿಷಯವನ್ನೆಲ್ಲಾ ತಿಳಿದು ಬಹಳ ಅಚ್ಚರಿಪಟ್ಟವನಾಗಿ ತನ್ನ ಸೇವಕರ ಮೂಲಕ ಅಪಾರ ಸಂಪತ್ತನ್ನು ಶ್ರೀಗಳಿಗೆ ಸಮರ್ಪಿಸಿದನು. ಅದರೊಂದಿಗೆ ಶ್ರೀರಾಮದೇವರ ದೀಪಾರಾಧನೆಗೆಂದು ತನಗೆ ಸೇರಿದ್ದ ಒಂದು ಗ್ರಾಮವನ್ನೂ ಸಹ ಅವರಿಗೆ ದಾನವಾಗಿತ್ತನು. ಒಬ್ಬ ಕಳ್ಳರ ಮುಖಂಡನನ್ನೇ ಹೀಗೆ ತಮ್ಮ ಅದ್ಭುತ ಪವಾಡದಿಂದ ಸಜ್ಜನನ್ನಾಗಿ ಪರಿವರ್ತಿಸಿದ ಅಪಾರಕೀರ್ತಿಯು ಇವರದಾಯಿತು.

## ಅಗ್ನಿಭಯದ ಪರಿಹಾರ

ಮುಂದೆ ಅವರು ಗೋದಾವರೀತೀರವನ್ನು ತಲುಪಿದರು. ಅದು ಗುರುವು ಸಿಂಹರಾಶಿಯಲ್ಲಿದ್ದ ಅತ್ಯಂತ ಶ್ರೇಷ್ಠಪರ್ವಕಾಲವಾಗಿತ್ತು. ಆ ಬಾರಿಯ ಚಾತುರ್ಮಾಸ್ಯವನ್ನು ಅವರು ಅಲ್ಲಿಯೇ ಪೂರೈಸಿದರು. ಮುಂದೆ ಗುರುವು ಕನ್ಯಾರಾಶಿಗೆ ಆಗಮಿಸಿದಾಗ ಕೃಷ್ಣಾತೀರದ ಕೋಲಪುರಕ್ಕೆ ತೆರಳಿ ಅಲ್ಲಿ ಕೆಲವು ಕಾಲ ತಂಗಿದರು. ಅಲ್ಲಿದ್ದಾಗ ಒಂದು ವಿಚಿತ್ರಘಟನೆ ನಡೆಯಿತು. ಅಲ್ಲಿದ್ದ ವೇಂಕಟ ಎಂಬ ಹೆಸರಿನ ಬ್ರಾಹ್ಮಣನ ಪ್ರಾರ್ಥನೆಯಂತೆ ಪರ್ಣಕುಟಿಯೊಂದರಲ್ಲಿ ಶ್ರೀಗಳ

ಪೂಜಾಕಾರ್ಯ ನಡೆದಿತ್ತು. ಪೂಜೆಯು ವೈಭವದಿಂದ ಸಾಗಿತ್ತು. ಆಗ ಇದ್ದಕ್ಕಿದ್ದಂತೆ ಆ ಪರ್ಣಕುಟಿಗೆ ಬೆಂಕಿ ಹತ್ತಿಕೊಂಡು ಎಲ್ಲೆಡೆಯಿಂದಲೂ ಪ್ರಜ್ವಲಿಸತೊಡಗಿತು. ಆಗ ವಿದ್ಯಾಧೀಶಾಚಾರ್ಯರೆಂಬವರು ಅದನ್ನು ಗಮನಿಸಿ ಎಲ್ಲರೂ ಅಲ್ಲಿಂದ ಹೊರಕ್ಕೆ ಬರಲು ವಿಜ್ಞಾಪಿಸಿಕೊಂಡರು. ಬೆಂಕಿಯು ಉರಿಯುತ್ತಿದ್ದಂತೆಯೇ ಎಲ್ಲರೂ ಹೊರಕ್ಕೆ ಧಾವಿಸಿದರು. ಶ್ರೀಗಳೂ ಸಹ ದೇವತಾ ಪ್ರತಿಮೆಗಳನ್ನು ಸಂಪುಟಗಳನ್ನು ತೆಗೆದುಕೊಂಡು ಎಡಬಲ ಸೇವಕರೊಂದಿಗೆ ಹೊರಕ್ಕೆ ಬಂದರು. ಇಡೀ ಪರ್ಣಕುಟಿಯೇ ಭಸ್ಮವಾದರೂ ಒಬ್ಬರಿಗೂ ಪ್ರಾಣಾಪಾಯವಾಗದಂತೆ ಶ್ರೀಗಳ ಅನುಗ್ರಹ ಪಾಲಿಸಿತು. ಅಲ್ಲಿಂದ ಬೇರೆಡೆಗೆ ತೆರಳಿ ಪೂಜೆ ನಡೆದು ಭಿಕ್ಷೆ ಪೂರೈಸಿತು.

## ನಾರೋಭಾಸ್ಕರನ ವಿಶಿಷ್ಟಸೇವೆ

ಶ್ರೀಸತ್ಯಾಭಿನವರು ಅಲ್ಲಿಂದ ತೆರಳಿ, ಭೀಮಾನದೀ ತೀರದ ಪಂಢರಪುರವನ್ನು ತಲುಪಿದರು. ಅಲ್ಲಿದ್ದಾಗ ಸುತ್ತಮುತ್ತಲ ಪ್ರಾಂತದಲ್ಲಿ ದಿಗ್ವಿಜಯ ಮಾಡುತ್ತಾ ತತ್ತ್ವಪ್ರಸಾರವನ್ನು ವಿಶೇಷರೀತಿಯಲ್ಲಿ ಮಾಡಿದರು. ಪ್ರತಿನಿತ್ಯ ಪ್ರಾತಃಕಾಲದಲ್ಲಿ ಬೆಳ್ಳಿಯ ಪೀಠದಲ್ಲಿ ಗುರುಗಳ ಪಾದುಕೆಗಳನ್ನಿರಿಸಿ ಅದರ ಮೇಲೆ ಸುವರ್ಣಛತ್ರವನ್ನೂ ಸ್ವರ್ಣದಂಡವನ್ನೂ ಇರಿಸಿ ಸುವರ್ಣರತ್ನಗಳಿಂದ ಅಕ್ಷತೆಗಳಿಂದ ಅವುಗಳನ್ನಾರಾಧಿಸಿ ಆರತಿ ಎತ್ತುತ್ತಿದ್ದರು. ಬಳಿಕ ನಿತ್ಯಾಹ್ನಿಕವನ್ನು ಪೂರೈಸಿ ಲೋಕೋದ್ಧಾರಕ್ಕೆಂದು ಸಂಚರಿಸುತ್ತಿದ್ದರು.

ಆ ಕಾಲದಲ್ಲಿ ದಿಲ್ಲಿಯ ಸಿಂಹಾಸನವನ್ನೇರಿದ್ದವನು ಔರಂಗಜೇಬನೆಂಬ ಒಬ್ಬ ಯವನ. ಅವನು ಸಂಚಾರಕ್ರಮೇಣ ದಕ್ಷಿಣಭಾರತಕ್ಕೆ ಆಗಮಿಸಿದ್ದ. ಅವನು ಭೀಮಾತೀರದ ಸನ್ನತಿ ಎಂಬ ಕ್ಷೇತ್ರದ ಸಮೀಪದಲ್ಲಿದ್ದ ಬ್ರಹ್ಮಪುರಿ ಎಂಬ ಸ್ಥಳಕ್ಕೆ ಆಗಮಿಸಿದ. ಮಹಾಸೈನ್ಯದೊಂದಿಗೆ ಬಂದಿದ್ದ ಅವನನ್ನು ನಾರೋಭಾಸ್ಕರ ಮೊದಲಾದ ಅನೇಕರು ಇದಿರುಗೊಂಡರು. ಆ ವೇಳೆಗೆ ಗ್ರಸ್ತಾಸ್ತಸೂರ್ಯಗ್ರಹಣದ ನಿಮಿತ್ತ ಶ್ರೀಸತ್ಯಾಭಿನವರು ಆ ಪ್ರಾಂತಕ್ಕೆ ದಯಮಾಡಿಸಿದರು. ಅದರಿಂದಾಗಿ ಬ್ರಾಹ್ಮಣರ ವಿಶೇಷ ಸಮಾವೇಶ ಅಲ್ಲಿ ನಡೆಯಿತು. ವಿಷಯ ತಿಳಿದ ನಾರೋಭಾಸ್ಕರ ಎಂಬ ಪ್ರಮುಖ ಮೊದಲಾದವರು ದೊರೆಯ ಬಳಿಗೆ ತೆರಳಿ ನಾರೋಶಂಕರ ಮೊದಲಾದವರ ಮುಂದೆ ಶ್ರೀಪಾದರ ಆಗಮನವನ್ನು ತಿಳಿಸಿ ಅವರ ಮಾಹಾತ್ಮ್ಯವನ್ನು ವರ್ಣಿಸಿದರು. ಶ್ರೀಮನ್ಮಧ್ವಾಚಾರ್ಯರ ಮಹಾ-

ಮಹಿಮೆಯನ್ನು ಸಂಸ್ಥಾನ ಪರಂಪರೆಯನ್ನು ವರ್ಣಿಸುತ್ತಾ ಶ್ರೀರಘುನಾಥತೀರ್ಥರ ಕಾಲದಲ್ಲಿ ನಡೆದ ಅದ್ಭುತದಿಂದಾಗಿ ವ್ಯಾಸಮುಷ್ಟಿಯು ಕೂರ್ಮಸಾಲಿಗ್ರಾಮವಾದುದನ್ನು ಅದು ಕ್ಷೀರಾಭಿಷೇಕದ ಕಾಲದಲ್ಲಿ ಸಂಚರಿಸುವುದನ್ನು ತಿಳಿಸಿದರು. ಅದನ್ನು ಕೇಳಿ ನಾರೋಶಂಕರನು ಕೂರ್ಮವು ಸುತ್ತುವುದು ಎಂದರೇನು ಎಂದು ಅಪಹಾಸ್ಯ ಮಾಡಿದ. ಅದನ್ನು ಕೇಳಿ ನೊಂದುಕೊಂಡ ನಾರೋಭಾಸ್ಕರನು ಮನೆಗೆ ತೆರಳಿ ಪತ್ನಿಯೊಂದಿಗೆ ಸಮಾಲೋಚಿಸಿ ಕೂರ್ಮಸಾಲಿಗ್ರಾಮವು ತಿರುಗುವುದನ್ನು ಪ್ರತ್ಯಕ್ಷ ತೋರಿಸಬೇಕೆಂದು ನಿಶ್ಚಯಿಸಿ ಶ್ರೀಪಾದರನ್ನು ಭಿಕ್ಷೆಗೆಂದು ಆಹ್ವಾನಿಸಿದರು. ಆ ವೇಳೆ ಅಲ್ಲಿಗೆ ಬರಲು ನಾರೋಶಂಕರನಿಗೂ ತಿಳಿಸಿದ. ಅದರಂತೆ ಶ್ರೀಪಾದರು ಸಮಸ್ತ ವೈಭವದೊಂದಿಗೆ ಅಲ್ಲಿಗೆ ಆಗಮಿಸಿದಾಗ ಅವರನ್ನು ಸಕಲ ವೈಭವದೊಂದಿಗೆ ಸ್ವಾಗತಿಸಿದ ನಾರೋಶಂಕರ ಪೂಜೆಗೆ ಪ್ರಾರ್ಥಿಸಿಕೊಂಡ. ಆದರಂತೆ ಪೂಜೆ ನಡೆದಾಗ ಕ್ಷೀರಾಭಿಷೇಕದ ಕಾಲದಲ್ಲಿ ಕೂರ್ಮಸಾಲಿಗ್ರಾಮವು ತಿರುಗತೊಡಗಿತು. ತನ್ನ ವಿಶೇಷ ಮಹಿಮೆಯನ್ನು ತೋರಲೋ ಎಂಬಂತೆ ಅಂದು ಸ್ವಲ್ಪ ಹೆಚ್ಚಾಗಿಯೇ ತಿರುಗಿತಂತೆ. ಅದನ್ನು ಕಣ್ಣಾರೆಕಂಡ ನಾರೋಶಂಕರ ಅದು ನಿಜಕ್ಕೂ ಅದ್ಭುತವೆಂದು ಒಪ್ಪಿಕೊಂಡು ಶ್ರೀಗಳಲ್ಲಿ ವಿಶೇಷ ಆದರಬುದ್ಧಿಯನ್ನು ಹೊಂದಿದ.

## ನಾರೋಶಂಕರನ ಪರಾಭವ

ಆಗೊಮ್ಮೆ ಸಹವಾಸಿ ಬ್ರಾಹ್ಮಣಪಂಗಡದ ಆ ನಾರೋಶಂಕರನು ಶ್ರೀಗಳ ಸಮ್ಮುಖದಲ್ಲಿಯೇ ಭೋಜನಕ್ಕೆ ಕೂಡಲು ಬಹಳವಾಗಿ ಆಗ್ರಹಿಸತೊಡಗಿ ವಿಫಲನಾಗಿ ಅಲ್ಲಿಂದ ಹೊರಡುವಂತಾಯಿತು. ಶ್ರೀಗಳ ಧರ್ಮಪಾಲನೆಯ ದೀಕ್ಷೆಯನ್ನು ಅರ್ಥಮಾಡಿಕೊಳ್ಳದ ಅವನು ಅದಕ್ಕೆ ಪ್ರತೀಕಾರ ಮಾಡಲೆಂದು ಔರಂಗಜೇಬನ ಬಳಿಗೆ ತೆರಳಿ ಅವರ ಬಗ್ಗೆ ಸಲ್ಲದ ಆರೋಪಗಳನ್ನು ಮಾಡಿ ಅವನ ಮನಸ್ಸನ್ನು ಕಲುಷಿತಗೊಳಿಸಿದ. ಶ್ರೀಗಳು ಮಾಡುವ ತಪ್ತಮುದ್ರಾಧಾರಣೆಯನ್ನು ಅಮಾನವೀಯ ಕಾರ್ಯ ಎಂಬಂತೆ ತಪ್ಪಾಗಿ ತಿಳಿಸಿದ್ದರಿಂದ ಕ್ರುದ್ಧನಾದ ಸುಲ್ತಾನನು ಅವರನ್ನು ಕರೆತರಲೆಂದು ತನ್ನ ಸೈನ್ಯವನ್ನೇ ಕಳುಹಿಸಿದನು. ನಾರೋಭಾಸ್ಕರನ ಮನೆಯಲ್ಲಿದ್ದ ಶ್ರೀಪಾದರನ್ನು ಆಕ್ರಮಿಸಲೆಂದು ಆ ಸೇನೆ ಬಂದಾಗ ಸಾವಿತ್ರೀ ಎಂಬ ಅವನ ಪತ್ನಿಯು ಶ್ರೀಗಳನ್ನು ಮಠದ ದೇವತಾ ವಿಗ್ರಹಗಳನ್ನು ಬೇರೆಡೆಗೆ ಗುಪ್ತಮಾರ್ಗದಿಂದ ಕಳುಹಿಸಿ ಆ ಕಾಲದಲ್ಲಾಗಬಹುದಾಗಿದ್ದ ಅನಾಹುತವನ್ನು ತಪ್ಪಿಸಿದಳು.ಅಲ್ಲದೇ ಸೈನಿಕರಿಗೆ ಶ್ರೀಗಳ ಮಾಹಾತ್ಮ್ಯವನ್ನು ತಿಳಿಸಿ ವಿರಕ್ತರಾದ ಅವರ ಬಳಿ ದೋಚುವಂತಹದೇನೂ ಸರ್ವಥಾ

ಇಲ್ಲವೆಂದು ಮನದಟ್ಟು ಮಾಡಿ ಅವರನ್ನು ಹಿಂದಿರುಗುವಂತೆ ಮಾಡಿದಳು. ಮರಳಿದ ಸೇನೆ ಸುಲ್ತಾನನಿಗೆ ಅದನ್ನೆಲ್ಲಾ ವಿಜ್ಞಾಪಿಸಿಕೊಂಡಾಗ ಅವನು ಅದನ್ನು ಪರೀಕ್ಷಿಸಲೆಂದು ಶ್ರೀಪಾದರನ್ನು ತನ್ನ ಬಳಿಗೆ ಬರುವಂತೆ ಆಹ್ವಾನವಿತ್ತನು. ನಾರೋಶಂಕರನ ಕುತಂತ್ರ ಬಯಲಾಗಿ ಅವನು ಮುಖಭಂಗಕ್ಕೆ ಒಳಗಾದ

## ಸುಲ್ತಾನನಿಂದ ಸಮ್ಮಾನ

ಅದರಂತೆ ಶ್ರೀಸತ್ಯಾಭಿನವರು ಪಾದಚಾರಿಗಳಾಗಿ ಹೊರಟು ನಿಂತಾಗ, ಮಾರ್ಗದ ಇಕ್ಕೆಲೆಗಳಲ್ಲೂ ನೆರೆದಿದ್ದ ಸಮಸ್ತಜನರು ಅವರಿಗೆ ದಂಡ ಪ್ರಣಾಮ ಮಾಡತೊಡಗಿದರು. ರಾಜಭವನಕ್ಕೆ ತೆರಳಿದ ಶ್ರೀಪಾದರು ನಾರೋಭಾಸ್ಕರನ ಕೋರಿಕೆಯಂತೆ ವಸ್ತ್ರಗೃಹದಲ್ಲಿ ತಂಗಿದರು. ನಾರೋಭಾಸ್ಕರನು ಸುಲ್ತಾನನ ಬಳಿಗೆ ತೆರಳಿ ನಾರೋಶಂಕರನ ಕುಹಕವನ್ನು ತಿಳಿಸಿ ಶ್ರೀಗಳು ನಿಜಕ್ಕೂ ಸಹ ಮಹಾ-ತಪಸ್ವಿಗಳು, ವಿರಕ್ತ ಶಿರೋಮಣಿಗಳು ಎಂಬುದನ್ನು ಅರಿಕೆ ಮಾಡಿಕೊಂಡನು. ಅದರಿಂದ ಪ್ರಭಾವಿತನಾದ ಸುಲ್ತಾನನು ಅವರನ್ನು ಸಂದರ್ಶಿಸಲು ಬಯಸಿದಾಗ ಸಿಂಹಾಸನದಲ್ಲಿ ಕುಳಿತು ಅಂತಹ ಮಹಾತ್ಮರ ದರ್ಶನ ಮಾಡಿದಲ್ಲಿ ಅವನಿಗೆ ಕೇಡಾದೀತೆಂದು ಭಾವಿಸಿ ಅವರನ್ನು ಸಾಕ್ಷಾತ್ತಾಗಿ ಕರೆತರದೆ ಕಲಾವಿದರಿಂದ ಶ್ರೀಗಳ ಚಿತ್ರವನ್ನು ಬರೆಯಿಸಿ ಅವನಿಗೆ ತೋರಿಸಿದನು. ಶ್ರೀಗಳ ಭವ್ಯ ಆಕೃತಿಯನ್ನು ಕಂಡ ಸುಲ್ತಾನನಿಗೆ ಅಪಾರ ಗೌರವವು ಮೂಡಿತು. ಅಲ್ಲದೆ ಶ್ರೀಗಳ ಹಿಂದೆ ಧನುರ್ಧಾರಿಯಾಗಿ ಶ್ರೀರಾಮನು ಮಹಾಸೈನ್ಯದೊಂದಿಗೆ ನಿಂತಂತೆ ಅವನಿಗೆ ಕಂಡು ಅಪಾರವಾದ ಅಂಜಿಕೆಯೂ ಉಂಟಾಯಿತು. ಕೂಡಲೇ ಅವನು ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ಅವರು ಸಾಕ್ಷಾತ್ತಾಗಿ ಇಲ್ಲಿಗೆ ಬರುವುದು ಬೇಡ ಎಂದು ತಿಳಿಸಿದನು. ಆಗ ನಾರೋಭಾಸ್ಕರನು ಅಂತಹ ಮಹಾತ್ಮರ ಬಗ್ಗೆ ಆ ವರೆಗೆ ನಡೆದುಕೊಂಡದ್ದು ತರವಲ್ಲ ಎಂದು ತಿಳಿಸಿ ಅದಕ್ಕೆ ಪ್ರತಿಯಾಗಿ ಅವರಿಗೆ ಗೌರವವನ್ನು ಸಮರ್ಪಿಸಲು ಸೂಚಿಸಿದನು. ಅದರಂತೆ ಸುಲ್ತಾನನು ತಾಮ್ರಪತ್ರದ ಶಾಸನವನ್ನು ಸಿದ್ಧಪಡಿಸಿ ಅಪಾರ ಕಾಣಿಕೆಗಳನ್ನಿತ್ತು ಅವರಿಗೆ ಆನೆಯ ಮೆರವಣಿಗೆಯನ್ನು ಏರ್ಪಡಿಸಿ ಅವರು ನೆಲೆಸಿದ್ದ ಸ್ಥಾನಕ್ಕೆ ಮರಳುವಂತೆ ವ್ಯವಸ್ಥೆ ಮಾಡಿದ. ಅಂತೂ ಸುಲ್ತಾನನಿಂದ ಅಪಾಯವೊದಗುವುದರ ಬದಲು ಶ್ರೀಪಾದರಿಗೆ ಅಪಾರ ಸನ್ಮಾನವೇ ಲಭಿಸಿ ನಾರೋಶಂಕರ ಮೊದಲಾದ ದುಷ್ಟವರ್ಗ ತಲೆತಗ್ಗಿಸು-ವಂತಾಯಿತು.

## ಶ್ರೀಸತ್ಯಾಧಿರಾಜತೀರ್ಥರು

ಹೀಗೆ ಎಲ್ಲ ಬಗೆಯ ಆಪತ್ತುಗಳನ್ನು ಶ್ರೀಹರಿಗುರುಗಳ ಅನುಗ್ರಹದಿಂದ ಗೆದ್ದ ಶ್ರೀಪಾದರು ಮುಂದೆ ಪಂಢರಪುರಕ್ಕೆ ತೆರಳಿದರು. ಅಲ್ಲಿಗೆ ಚಿಂತಾಮಣಿ ವಿದ್ಯಾಧೀಶಾಚಾರ್ಯರೆಂಬ ಉದ್ದಾಮಪಂಡಿತರನ್ನು ಕುಂಭಕೋಣದಿಂದ ಕರೆಯಿಸಿ ಅವರಿಗೆ ಸನ್ನ್ಯಾಸವನ್ನು ನೀಡಿ ಶ್ರೀಸತ್ಯಾಧಿರಾಜತೀರ್ಥರು[೧] ಎಂದು ನಾಮಕರಣ ಮಾಡಿದರು.; ಅವರಿಗೆ ಅಣುಸಂಸ್ಥಾನವನ್ನು ನೀಡಿ ಬಿಜಾಪುರದತ್ತ ದಿಗ್ವಿಜಯಕ್ಕೆಂದು ಕಳುಹಿಸಿದರು; ಅಲ್ಲಿ ಅವರು ಶಿಷ್ಯವರ್ಗಕ್ಕೆ ತಪ್ತಮುದ್ರಾ-ಧಾರಣಾದಿಗಳನ್ನು ಮಾಡಿಸಿ ಮುಂದೆ ಸಪ್ತಗೋದಾವರೀಕ್ಷೇತ್ರಕ್ಕೂ ಅಲ್ಲಿಂದ ರಾಜಮಹೇಂದ್ರಿಗೂ ತೆರಳಿದರು. ರಾಜಮಹೇಂದ್ರಿಯಲ್ಲಿ ಸತ್ಯಾಧೀಶರ ವೃಂದಾವನವನ್ನು ಸಂದರ್ಶಿಸಿದರು. ಸ್ವಪ್ನದಲ್ಲಿ ಅವರು ತಿಳಿಸಿದಂತೆ ಅವರಿಗೆ ಚಿನ್ನದ ಕಣ್ಣುಗಳನ್ನು ಸಮರ್ಪಿಸಿ, ಸಂಚಾರವನ್ನು ಮುಂದುವರೆಸಿ ಪುನಃ ಗುರುಗಳಾದ ಸತ್ಯಾಭಿನವರ ಬಳಿಗೆ ತೆರಳಿ ವಂದಿಸಿದರು. ಅವರು ತಮಗೆ ಮಾಡಿದ ಕನಕರತ್ನಾಭಿಷೇಕದ ದ್ರವ್ಯವನ್ನು ಶ್ರೀಸತ್ಯಾಭಿನವತೀರ್ಥರು ನೆರೆದಿದ್ದ ವಿಪ್ರವೃಂದಕ್ಕೆ ಪ್ರಸಾದವನ್ನಾಗಿ ಅನುಗ್ರಹಿಸಿದರು. ಅಲ್ಲಿಂದ ಸಂಚಾರ ಮುಂದುವರೆಸಿದ ಶ್ರೀಸತ್ಯಾಧಿರಾಜತೀರ್ಥರು ತಿರುಪತಿಯಾತ್ರೆಯನ್ನು ಪೂರೈಸಿ ಚೋಳಮಂಡಲದ ವೆಲ್ಲೂರಿಗೆ ತೆರಳಿ ಅಲ್ಲಿಯೇ ವೃಂದಾವನಸ್ಥರಾದರು. ಅವರು ವೃಂದಾವನಸ್ಥರಾದ ದಿವಸ ತಾರಣಸಂವತ್ಸರದ ಆಷಾಢಶುಕ್ಲನವಮೀ (೧೬/೦೬/೧೭೦೪).

## ಶ್ರೀಸತ್ಯಪೂರ್ಣರಿಗೆ ಉತ್ತರಾಧಿಕಾರ - ವೃಂದಾವನಪ್ರವೇಶ

ಮುಂದೆ ವಿಷಯ ತಿಳಿದ ಸತ್ಯಾಭಿನವ ತೀರ್ಥರು ಆ ಬಳಿಕ ಶ್ರೀವ್ಯಾಸ-ಕೇಶವಾಚಾರ್ಯ ಎಂಬ ಶ್ರೇಷ್ಠವಿದ್ವಾಂಸರನ್ನು ತಮ್ಮೊಂದಿಗೆ ಕರೆದುಕೊಂಡು ಚೋಳಮಂಡಲಕ್ಕೆ ತೆರಳಿದರು. ಕುಂಭಕೋಣ ಕ್ಷೇತ್ರದಲ್ಲಿ ಅವರಿಗೆ ಸನ್ನ್ಯಾಸವನ್ನು ನೀಡಿ ಶ್ರೀಸತ್ಯಪೂರ್ಣತೀರ್ಥರು ಎಂದು ನಾಮಕರಣ ಮಾಡಿದರು. ಅವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಅಭಿಷೇಕಿಸಿ, ಕುಂಭಕೋಣದ ಬಳಿಯ ನಾಚಾರಗುಡಿ ಎಂಬಲ್ಲಿ ವೈಕುಂಠಯಾತ್ರೆ ಮಾಡಿದರು. ಅವರು ವೈಕುಂಠಯಾತ್ರೆ ಮಾಡಿದ ದಿವಸ ಜ್ಯೇಷ್ಠ ಶುಕ್ಲಪಕ್ಷ ಚತುರ್ದಶೀ.

---

೧. ಸತ್ಯಾಧಿರಾಜಪ್ರಶಸ್ತಿ ಎಂಬ ವೆಂಕಾಮುಂಜೀ ಎಂಬ ಮರಾಠಿಕವಿಯ ಕೃತಿಯೊಂದು ಇವರ ಬಗ್ಗೆ ಉಪಲಬ್ಧವಿದೆ.

## ಗ್ರಂಥರಚನೆ ಇತ್ಯಾದಿ

ಶ್ರೀಸತ್ಯಾಭಿನವರ ಕಾಲ ಉತ್ತರಾದಿ ಮಠದ ಇತಿಹಾಸದಲ್ಲಿ ಅನೇಕ ರೀತಿಯಲ್ಲಿ ಅತ್ಯಂತ ಗಮನಾರ್ಹವೆನ್ನಿಸುವ ಕಾಲವಾಗಿತ್ತು. [೧]ದೆಹಲಿಯ ಔರಂಗಜೇಬ (೧೬೫೮-೧೭೦೭), ಹಾಗೂ ಕೆಳದಿಯ ಚೆನ್ನಮ್ಮ (೧೬೭೦-೧೬೯೮) ಅವರ ಸಮಕಾಲಿಕರಾಗಿದ್ದು, ಮ್ಲೇಚ್ಛರು ಚೋರರು ಮೊದಲಾದವರಿಂದ ತುಂಬಿದ್ದ ಅಂತಹ ವಿಷಮ ಸನ್ನಿವೇಶದಲ್ಲಿ ಬಗೆ ಬಗೆಯ ಆಪತ್ತುಗಳನ್ನು ಎದುರಿಸಿ ಜಯಿಸಿದ್ದು ಅವರ ಸಾಧನೆಯ ಒಂದು ಮುಖವಾದರೆ ಶ್ರೀಮಠಕ್ಕೆ ರಾಜವೈಭವವನ್ನು ತಂದಿತ್ತದ್ದು ಅದರ ಇನ್ನೊಂದು ಮುಖವಾಯಿತು. ವಿಶೇಷವಾಗಿ ತಮಿಳುನಾಡಿನ ಪ್ರಾಂತದಲ್ಲಿ ಸಂಚರಿಸಿ, ತತ್ತ್ವಪ್ರಸಾರ ಮಾಡಿದ್ದು ಇವರ ಮತ್ತೊಂದು ಹಿರಿಮೆ. ಇದಕ್ಕೆಲ್ಲಾ ಕಲಶಪ್ರಾಯವಾಗಿ ನಡೆದದ್ದು ಅಪೂರ್ವವಾದ ಜ್ಞಾನಕಾರ್ಯ. ಅನೇಕ ವಿದ್ವನ್ಮಣಿಗಳನ್ನು ನಿರ್ಮಿಸಿದ ಅವರ ಪಾಠಪ್ರವಚನಕೌಶಲ ಒಂದೆಡೆಯಾದರೆ ಅಪೂರ್ವ ಶೈಲಿಯ ವ್ಯಾಖ್ಯಾನಗಳನ್ನು ನೀಡಿದ್ದು ಅವರ ಮತ್ತೊಂದು ಬಗೆಯ ಕೌಶಲ. ಅಪ್ರತಿಮ ಗುರುಭಕ್ತಿ ಇವರ ಜೀವನದಲ್ಲಿ ಎದ್ದು ಕಾಣುವ ಅಸಾಧಾರಣವಾದ ಮಹತ್ತ್ವ.

## ಗ್ರಂಥಗಳು

ಸದ್ಯ ತಿಳಿದು ಬಂದಿರುವಂತೆ ಅವರು ರಚಿಸಿರುವ ಗ್ರಂಥಗಳು ಹೀಗಿವೆ :

೧. ಭಾಗವತದುರ್ಘಟಭಾವದೀಪಿಕಾ
೨. ಮಹಾಭಾರತತಾತ್ಪರ್ಯನಿರ್ಣಯಟಿಪ್ಪಣೀ - ದುರ್ಘಟಾರ್ಥಪ್ರಕಾಶಿಕಾ
೩. ಪುರುಷಸೂಕ್ತವ್ಯಾಖ್ಯಾನ
೪. ವಿಷ್ಣುಪಂಚಕ ನಿರ್ಣಯ
೫. ಶ್ರವಣದ್ವಾದಶೀ ನಿರ್ಣಯ
೬. ರಾಮಾಮೃತ ಮಹಾರ್ಣವ
೭. ರಾಮಾಮೃತಮಹಾರ್ಣವ ವ್ಯಾಖ್ಯಾನ - ದುರ್ಘಟಾರ್ಥದೀಪಿಕಾ
೮. ಸತ್ಯನಾಥಗುರುಪರಂಪರಾಸ್ತೋತ್ರ
೯. ಸತ್ಯನಾಥಗುರುಪರಂಪರಾಸ್ತೋತ್ರವ್ಯಾಖ್ಯಾನ

---

೧. ಪೂರ್ವೋಕ್ತ ಸುಗುಣೋಪೇತೈಃ ಸತ್ಯಾಭಿನವತೀರ್ಥಕೈಃ।
ಕೆಳದೀ ಚೆನ್ನಮಾಂಬಾಂ ರಾಜ್ಞೀಮುದ್ದಿಶ್ಯ ಲೇಖಿತಾಃ॥ (ಕೊಂಕಣಾಭ್ಯುದಯ -೬/೨೭೩)

೧. ಭಾಗವತದುರ್ಘಟಭಾವದೀಪಿಕಾ: (ಗ್ರಂಥಸಂಖ್ಯೆ ೮೧೬೦) ಇದು ಸಮಗ್ರ ಭಾಗವತದ ಅನೇಕ ಜಟಿಲ ಭಾಗಗಳಿಗೆ ರಚಿತವಾಗಿರುವ ಅಪೂರ್ವ ಕೃತಿ. ವಿಶೇಷವಾಗಿ ಅಪವ್ಯಾಖ್ಯಾನಗಳನ್ನು ನಿರಾಕರಿಸುವ ಅವರ ಕೃತಿ ಮೂಲ-ಶ್ಲೋಕಗಳ ಭಾವವನ್ನು ಹೊಸಬಗೆಯಲ್ಲಿ ಗ್ರಹಿಸಲು ನೆರವಾಗುತ್ತದೆ. ಇದು ಧಾರವಾಡದ ಶ್ರೀಜಿ.ಆರ್. ಸವಣೂರು ಅವರಿಂದ ಪ್ರಕಾಶಿತ.

೨. ಮಹಾಭಾರತತಾತ್ಪರ್ಯನಿರ್ಣಯ ದುರ್ಘಟಾರ್ಥದೀಪಿಕಾ : (ಗ್ರಂಥ-ಸಂಖ್ಯೆ ೩೨೨೦) ಮಹಾಭಾರತತಾತ್ಪರ್ಯನಿರ್ಣಯಕ್ಕೆ ಇಂದು ಉಪಲಬ್ಧವಿರುವ ೩೦ಕ್ಕಿಂತ ಹೆಚ್ಚಿನ ಟಿಪ್ಪಣಿಗಳಲ್ಲಿ ಇದು ವಿಶೇಷ ಬಗೆಯದು. ಮಹಾಭಾರತ ತಾತ್ಪರ್ಯನಿರ್ಣಯದ ಕೆಲವು ಗಹನಶ್ಲೋಕಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲುವುದು ಇದರ ಹಿರಿಮೆ. ತಾವು ವ್ಯಾಖ್ಯಾನಿಸುವ ಶ್ಲೋಕಗಳನ್ನು ಸಮಗ್ರವಾಗಿ ಉಲ್ಲೇಖಿಸಿ ಇತ್ಯತ್ರ ಎಂಬುದಾಗಿ ಅದರ ಬಗ್ಗೆ ವಿಶೇಷಾಂಶಗಳನ್ನು ತಿಳಿಸುವುದು ಇದರ ವೈಶಿಷ್ಟ್ಯ. ಇದರ ಸಮಸ್ತ ಹಸ್ತಪ್ರತಿ ನನ್ನ ಸಂಗ್ರಹದಲ್ಲಿದೆ. (ಶ್ರೀಜಯ-ತೀರ್ಥಸಂಸ್ಕೃತಹಸ್ತಲಿಖಿತಗ್ರಂಥಾಲಯ, ವ್ಯಾಸನಕೆರೆ). ಇದು ಬೆಳಗಾಂನ ಶ್ರೀಗಲಗಲಿರಾಮಾಚಾರ್ಯ ಅವರಿಂದ ಪ್ರಕಾಶಿತವೂ ಆಗಿದೆ (೧೯೬೮).

೩. ಪುರುಷಸೂಕ್ತವ್ಯಾಖ್ಯಾನ : ಪುರುಷಸೂಕ್ತಕ್ಕೆ ಇಂದು ಉಪಲಬ್ಧವಿರುವ ಅನೇಕವ್ಯಾಖ್ಯಾನಗಳಲ್ಲಿ ಇದೂ ಒಂದು. ಪುರುಷಸೂಕ್ತದ ಪ್ರತಿಯೊಂದು ಋಕ್ಕನ್ನೂ ಸಮಗ್ರ ಉಲ್ಲೇಖಿಸಿ ಇತಿ ಪ್ರಥಮಾ ಋಕ್, ಇತಿ ದ್ವಿತೀಯಾ ಋಕ್ ಎಂಬುದಾಗಿ ತಿಳಿಸುತ್ತಾ ವ್ಯಾಖ್ಯಾನಿಸಿರುವುದು ಇದರ ವೈಶಿಷ್ಟ್ಯ. ಎಂದಿನಂತೆ ಗಹನ ವಿಚಾರದ ಬಗ್ಗೆ ಇದು ಚೆಲ್ಲುವ ಬೆಳಕು ಅಪೂರ್ವ. ಇದು ಬೆಂಗಳೂರಿನ ಶ್ರೀಧನಂಜಯವರಖೇಡಕರ್‌ರವರಿಂದ ಸುಧಾಮುದ್ರಣಮಂದಿರದಿಂದ ಪ್ರಕಾ-ಶಿತ (೧೯೮೨).

೪. ವಿಷ್ಣುಪಂಚಕನಿರ್ಣಯ ಹಾಗೂ ೫. ಶ್ರವಣದ್ವಾದಶೀನಿರ್ಣಯಗಳ ಹಸ್ತ-ಪ್ರತಿಗಳು ನನ್ನ ಸಂಗ್ರಹದಲ್ಲಿ ಉಪಲಬ್ಧವಿವೆ.

೬. ಗುರುಸ್ತೋತ್ರವನ್ನು ಪರಿಶಿಷ್ಟದಲ್ಲಿ ಪೂರ್ಣವಾಗಿ ಕೊಡಲಾಗಿದೆ. ಅದಕ್ಕೆ ಅವರೇ ರಚಿಸಿದ ವ್ಯಾಖ್ಯಾನವು ನನ್ನ ಸಂಗ್ರಹದಲ್ಲಿದೆ.

## ರಾಮಾಮೃತಮಹಾರ್ಣವ

ಶ್ರೀಸತ್ಯಾಭಿನವರ ''ರಾಮಾಮೃತಮಹಾರ್ಣವ''ವು ಒಂದು ಅಪೂರ್ವ ಕೃತಿ. ಶ್ರೀಮನ್ಮಧ್ವಾಚಾರ್ಯರ 'ಕೃಷ್ಣಾಮೃತಮಹಾರ್ಣವ'ವನ್ನು ಅನುಕರಿಸಿ ರಚಿತ-ವಾಗಿರುವ ವಿಶಿಷ್ಟಕೃತಿ ಇದು.

ಇದು ಸುಮಾರು ೪೨೫೫ಶ್ಲೋಕಗಳ ವ್ಯಾಪ್ತಿಯ ಪುರಾಣ, ಸ್ಮೃತಿವಚನಗಳ ಸಂಕಲನ. ರಾಮೇಶ್ವರ, ಜನಾರ್ದನ ಮೊದಲಾದ ಕ್ಷೇತ್ರಗಳ, ಗಂಗಾ, ಕೃಷ್ಣಾ ಗೋದಾವರೀ, ತಾಮ್ರಪರ್ಣೀ ಮೊದಲಾದ ನದಿಗಳ ಮಾಹಾತ್ಮ್ಯವನ್ನು; ಹರಿಸರ್ವೋತ್ತಮತ್ವ, ದೇವತಾತಾರತಮ್ಯ, ಜೀವೇಶ್ವರಭೇದ ಮೊದಲಾದ ಪ್ರಮೇಯಗಳನ್ನು, ವಿಪ್ರಲಕ್ಷಣ, ಗುರುಲಕ್ಷಣ, ದ್ವಾದಶಪುತ್ರರ ಬಗ್ಗೆ ವಿವೇಚನೆ, ತೀರ್ಥಾಭಿಮಾನಿ ದೇವತಾವಿವರ, ಅರ್ಧೋದಯ ಮಹೋದಯಗಳ ಲಕ್ಷಣ, ಪುರಾಣಶ್ರವಣದ ವಿಧಿವಿಧಾನಗಳು, ಪೌರಾಣಿಕರ ಲಕ್ಷಣ, ಪುರಾಣಶ್ರವಣಕ್ಕೆ ಅಧಿಕಾರ ಅನಧಿಕಾರದ ವಿಶ್ಲೇಷಣೆ, ಪಾಠಪ್ರವಚನಗಳ ಹಿರಿಮೆ, ಸನ್ಯಾಸಧರ್ಮಗಳು, ಯತಿಗಳ ವಿಶೇಷ ಕರ್ತವ್ಯಗಳು ಮೊದಲಾದವುಗಳ ವಿವೇಚನೆ, ಯತಿಸಂಸ್ಕಾರವಿಧಿ ಮೊದಲಾದ ಅನೇಕ ಮಹತ್ವದ ವಿಚಾರಗಳ ವಿವೇಚನೆ ಈ ಗ್ರಂಥದ ಮುಖ್ಯವಿಷಯ. ಪ್ರಾಸಂಗಿಕವಾಗಿ ಅಪೂರ್ವವಾದ ವೇಂಕಟೇಶಸ್ತೋತ್ರ, ಘಟಿಕಾಚಲ ಶ್ರೀನರಸಿಂಹಸ್ತೋತ್ರ, ದಶಾವತಾರಸ್ತೋತ್ರ, ಪಂಚಾಯುಧಸ್ತೋತ್ರ ಮೊದಲಾದ ಅಪೂರ್ವಸ್ತೋತ್ರಗಳು ಉಲ್ಲೇಖಿಸಲ್ಪಟ್ಟಿವೆ.

ಶ್ರೀಮದಾಚಾರ್ಯರು ಶ್ರೀಮುಷ್ಣಕ್ಷೇತ್ರದಲ್ಲಿ ದಂಡತೀರ್ಥನಿರ್ಮಿಸಿದ ವಿವರ, ಬಳಿತ್ಥಾಸೂಕ್ತದ ಅರ್ಥ, ಶ್ರೀಮಧ್ವಾಚಾರ್ಯರ ವಾಯುತ್ವ ಮೊದಲಾದವುಗಳೂ ಸಹ ನಿರೂಪಿತವಾಗಿವೆ. ತೀರ್ಥಕ್ಷೇತ್ರಮಾಹಾತ್ಮ್ಯದ ಬಗ್ಗೆ ಇದು ಶ್ರೀವಾದಿರಾಜಸ್ವಾಮಿಗಳ ತೀರ್ಥಪ್ರಬಂಧವನ್ನು ಅನುಕರಿಸಿದರೆ, ಇತರ ವಿವರಗಳ ಬಗ್ಗೆ ಶ್ರೀಮದಾಚಾರ್ಯರ ಕೃಷ್ಣಾಮೃತಮಹಾರ್ಣವವನ್ನು ಅನುಕರಿಸುತ್ತದೆ ಎಂಬುದು ವಿಶೇಷ. ದೇವಪೂಜೆ, ವೈಶ್ವದೇವ, ಮಕರಸಂಕ್ರಾಂತಿ, ಕರ್ಕಸಂಕ್ರಾಂತಿಗಳ ಬಗ್ಗೆ ಇಲ್ಲಿ ಬಂದಿರುವ ವಿಶೇಷ ಉಲ್ಲೇಖಗಳು ಅವುಗಳ ನಿರ್ಣಯಕ್ಕೆ ತುಂಬಾ ಸಹಕಾರಿಯಾಗಿವೆ. ತಪ್ತಮುದ್ರಾಧಾರಣೆಯ ಬಗ್ಗೆ ಇದರಲ್ಲಿ ಬಂದಿರುವ ವಿವರಗಳು ಅತ್ಯಂತ ಗಮನಾರ್ಹವಾಗಿವೆ.

## ರಾಮಾಮೃತಮಹಾರ್ಣವ ಟೀಕಾ - ದುರ್ಘಟಾರ್ಥದೀಪಿಕಾ

ಹೀಗೆ ರಾಮಾಮೃತಮಹಾರ್ಣವವನ್ನು ರಚಿಸಿದ ಶ್ರೀಸತ್ಯಾಭಿನವತೀರ್ಥರೇ ಅದಕ್ಕೆ "ದುರ್ಘಟಾರ್ಥದೀಪಿಕಾ" ಎಂಬ ಟೀಕೆಯನ್ನೂ ಸಹ ರಚಿಸಿರುವುದು ಮತ್ತೊಂದು ವಿಶೇಷ. ಆ ಟೀಕೆಯಲ್ಲಿ ಪುರಾಣಾದಿ ಶ್ಲೋಕಗಳ ಅರ್ಥವಿವೇಚನೆಯ ಬಗ್ಗೆ ಅವರು ನೀಡಿರುವ ಬೆಳಕು ಅತ್ಯಂತ ಅಪೂರ್ವವಾದುದು. ಒಂದರ್ಥದಲ್ಲಿ ಶ್ರೀಮನ್ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯನಿರ್ಣಯ ಹಾಗೂ ಶ್ರೀಮದ್ಭಾಗವತತಾತ್ಪರ್ಯ ನಿರ್ಣಯಗಳ ಹಿನ್ನೆಲೆಯಲ್ಲಿ ಪುರಾಣಶ್ಲೋಕಗಳನ್ನು

ಹೇಗೆ ಅತ್ಯಂತ ಸುಸಂಗತವಾಗಿ ಅನ್ವಯಿಸಿಕೊಳ್ಳಬಹುದು ಎಂಬುದನ್ನು ಸಮಗ್ರವಾಗಿ ವಿವೇಚಿಸುವ ವೈಶಿಷ್ಟ್ಯ ಈ ಟೀಕೆಯದು. ಇದರ ಅಧ್ಯಯನ ಪುರಾಣಪ್ರಪಂಚದ ಅಧ್ಯೇತೃಗಳಿಗೆ ನಿಜವಾದ ಅರ್ಥದಲ್ಲಿ ಕೈಪಿಡಿಯೆನ್ನಿಸುತ್ತದೆ. ಧರ್ಮಶಾಸ್ತ್ರದ ವಿವರಗಳು ಉದ್ದಕ್ಕೂ ವಿಶ್ಲೇಷಿಸಲ್ಪಟ್ಟಿರುವುದು ಇದರ ಮತ್ತೊಂದು ವೈಶಿಷ್ಟ್ಯ.

ಕೃತಿಯು ಸಮಗ್ರ ಉಪಲಬ್ಧವಿಲ್ಲದೇ ಪ್ರಥಮಪರಿಚ್ಛೇದ ಮಾತ್ರ ದೊರೆತಿದೆ. ಸಮಗ್ರಕೃತಿ ದೊರೆತಲ್ಲಿ ಇನ್ನೂ ಅನೇಕ ಬಗೆಯ ಹೊಸ ವಿಚಾರಗಳು ಬೆಳಕಿಗೆ ಬರುವುದು ನಿಃಸಂಶಯ.

ನನ್ನ ಸಂಗ್ರಹದಲ್ಲಿನ ಹಸ್ತಪ್ರತಿಯನ್ನು ಆಧರಿಸಿ ಈ ಕೃತಿಯನ್ನು ಸಂಪಾದಿಸಲಾಗಿದೆ. ಸಂಸ್ಕೃತದಲ್ಲಿ ರಚಿತವಾಗಿರುವ ವ್ಯಾಖ್ಯಾನದೊಂದಿಗೆ ಇದರ ದೇವನಾಗರೀ ಆವೃತ್ತಿಯೂ ಸಹ ಇಷ್ಟರಲ್ಲಿಯೇ ಪ್ರಕಾಶಿತಗೊಳ್ಳಲಿದೆ.

ಸಮಗ್ರಕೃತಿಯನ್ನು ಅವಲೋಕಿಸಿ ಅನುಗ್ರಹವಚನವನ್ನು ನೀಡಿ ಪರಮಾನುಗ್ರಹ ಮಾಡಿರುವ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ ಚರಣಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸುವೆ.

ಬೆಂಗಳೂರಿನ ಶ್ರೀ ಆರ್.ಕೆ. ವಾಯಿಕರ್‌ರವರು ಹಾಗೂ ಶ್ರೀ ಕೆ. ವಿಷ್ಣುತೀರ್ಥ ಅವರು ತಮ್ಮ ಮಾತಾಪಿತೃಗಳಾದ ದಿ|| ಕೃಷ್ಣಾಚಾರ್ಯ ವಾಯಿಕರ್ ಹಾಗೂ ದಿ || ಗಂಗಾ ಬಾಯಿ ಇವರ ಸ್ಮರಣೆಗಾಗಿ ಇದರ ಪ್ರಕಾಶನಕ್ಕೆ ಪ್ರಾಯೋಜಕರಾಗಿ ಸೇವೆ ಸಲ್ಲಿಸಿರುವರು; ಅವರಿಗೆ ನಮ್ಮ ಪ್ರತಿಷ್ಠಾನದ ಶುಭ ಹಾರೈಕೆಗಳು.

ಡಿ.ಟಿ.ಪಿ. ಕಾರ್ಯ ಶ್ರೀ ಕೆ.ಸುಬ್ಬಣ್ಣ ಹಾಗೂ ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ್ದು. ಕರಡು ತಿದ್ದುವ ಕಾರ್ಯವನ್ನು ಚಿ || ಶ್ರೀನಿಧಿ ಹಾಗೂ ನನ್ನ ಪುತ್ರ ಚಿ || ಜಯಂತ ಇವರು ನಿರ್ವಹಿಸಿರುವರು. ಮುದ್ರಣ ಮೆ|| ವಾಗರ್ಥ ಅವರದು. ಇವರೆಲ್ಲರಿಗೂ ಪ್ರತಿಷ್ಠಾನವು ಋಣಿ.

೧೯-೦೫-೨೦೦೮ ವ್ಯಾಸನಕೆರೆ ಪ್ರಭಂಜನಾಚಾರ್ಯ
ವ್ಯಾಸಪೂರ್ಣಿಮಾ, ಕೂರ್ಮಜಯಂತಿ,
ವೈಶಾಖಮಾಸ - ಸರ್ವಧಾರಿ ಸಂ||.
ಬೆಂಗಳೂರು.

# ಶ್ರೀಸತ್ಯಾಭಿನವತೀರ್ಥರ ಕೃತಿಗಳ ಆದ್ಯಂತಶ್ಲೋಕಗಳು

## ೧. ಶ್ರೀಮದ್ಭಾಗವತದುರ್ಘಟಭಾವದೀಪಿಕಾ

ಆದಿ : ನಾರಾಯಣಂ ಪೂರ್ಣಗುಣಂ ವೇದವ್ಯಾಸಂ ಜಗದ್ಗುರುಮ್ ।
ನಮಾಮಿ ಶ್ರೀಮದಾಚಾರ್ಯಂ ಜಯತೀರ್ಥಮುನೀನ್ ವಿದೌ ॥

ಯತ್ಕೃಪಾಲೇಶಮಾತ್ರೇಣ ಪ್ರಾಪ್ತಾ ವೈಕುಂಠನಿರ್ವೃತಿಃ ।
ಸತ್ಯನಾಥಗುರೂನ್ ವಂದೇ ಪಿತ್ರೂಂಸ್ತಾನ್ ಸರ್ವಶೋ ಮಮ ॥

ತೇಷಾಮೇವ ಪ್ರಸಾದೇನ ತತ್ಪ್ರಸಾದೈಕಲಿಪ್ಸಯಾ ।
ಶ್ರೀಮದ್ಭಾಗವತಸ್ಯಾಹಂ ಭಾವಂ ವಕ್ಷ್ಯಾಮಿ ಶಕ್ತಿತಃ ॥

ಅಂತ್ಯ : ಪದವಾಕ್ಯಪ್ರಮಾಣಜ್ಞಾಃ ಕಲ್ಯಾಣಗುಣಶಾಲಿನಃ ।
ನೂತನಗ್ರಂಥಕರ್ತಾರಃ ಪಿತರೋ ಗುರವಶ್ಚ ಮೇ ॥
ಮಾತರಃ ಸುಹೃದೋ ನಿತ್ಯಮಿಚ್ಛಾಧಿಕಫಲಪ್ರದಾಃ ।
ಶ್ರೀಸತ್ಯನಾಥಗುರವೋ ಜಗತ್ಪೂಜಿತಪಾದುಕಾಃ ॥
ಮ್ಲೇಂಛರಾಜಮಹಾಚೋರಮಹಾಗ್ನಿಭ್ಯೋ ಮಹದ್ಭಯಮ್ ।
ಯತ್ಕೃಪಾಲೇಶಮಾತ್ರೇಣ ಗತಂ ನೈವ ವಿಚಾರಣಾ ॥
ತೇಷಾಂ ಶ್ರೀಗುರುರಾಜಾನಾಂ ಪಾದಪೀಠಸಮಾಶ್ರಯಾತ್ ।
ತೇಷಾಂ ಸಂಕಲ್ಪಮಾತ್ರೇಣ ಜಾತಾ ಟೀಕಾ ನ ಚಾನ್ಯಥಾ ॥
ಶ್ರೀಮದ್ಭಾಗವತಸ್ಯೇಯಂ ದುರ್ಘಟಾರ್ಥಪ್ರಬೋಧಿನೀ ।
ಏವಂ ರಾಮಾರ್ಚನಂ ಸರ್ವಂ ತತ್ಸಂಕಲ್ಪಾದ್ಧಿ ಜಾಯತೇ ॥
ಅತಸ್ತಜ್ಜನಿತಂ ಪುಣ್ಯಂ ತೇಷಾಮೇವ ನ ಸಂಶಯಃ ।
ಅಥಾಪಿ ತೇ ದಯಾಲುತ್ವಾತ್ ಪ್ರೀತಾ ಏವ ನ ಸಂಶಯಃ ॥
ಸತ್ಯಾಭಿನವಶಬ್ದೇನ ವಾಚ್ಯೇಽಸ್ಮಿನ್ ಮಯಿ ಸರ್ವದಾ ।
ಅತಃ ಸರ್ವೇಽಪಿ ಗುರವೋ ಜಗದ್ಗುರುಪದಾಶ್ರಯಾಃ ॥
ಜಯತೀರ್ಥಗುರುಃ ಪ್ರಾಜ್ಞಃ ಪೂರ್ಣಪ್ರಜ್ಞಸ್ತಥಾ ಗುರುಃ ।
ಬಳಿತ್ಥೇತ್ಯಾದಿಭಿರ್ವೇದೈರ್ವಾಯೋರಂಶ ಇತಿ ಶ್ರುತಃ ॥
ತದಂತಸ್ಥೋ ಹರಿರ್ನಿತ್ಯಂ ಸೀತಾಯಾಃ ಸಹಿತಃ ಪ್ರಭುಃ ।
ಶ್ರೀರಾಮಚಂದ್ರೋ ವ್ಯಾಸಶ್ಚ ಪ್ರೀತಾಸ್ತೇಭ್ಯೋ ನಮೋ ನಮಃ ॥

॥ ಇತಿ ಶ್ರೀಮದಶ್ರುತಪದವಾಕ್ಯಪ್ರಮಾಣವ್ಯಾಖ್ಯಾತೄಣಾಮ್ ಅಭಿನವಚಂದ್ರಿಕಾಭಿನವ-
ತಾಂಡವಾಭಿನವಗದಾಭಿನವಾಮೃತಾದಿಬಹುಗ್ರಂಥಕರ್ತೄಣಾಂ ಜಗತ್ಪೂಜ್ಯಪಾದುಕಾನಾಂ
ಶ್ರೀ ಸತ್ಯನಾಥಶ್ರೀಪಾದಾನಾಂ ಶಿಷ್ಯೇಣ ಸತ್ಯಾಭಿನವಯತಿನಾ ತ್ವಯಾ ಭಾಗವತಟಿಪ್ಪಣಂ
ಕಾರಯಿಷ್ಯಾಮೀತಿ ತದೀಯಾಮೋಘಸಂಕಲ್ಪಮಾತ್ರಮವಲಂಬ್ಯ ಕೃತಾಯಾಂ
ಶ್ರೀಭಾಗವತಟಿಪ್ಪಣ್ಯಾಂ ದುರ್ಘಟಭಾವದೀಪಿಕಾಯಾಂ ದ್ವಾದಶಸ್ಕಂಧಃ ಸಮಾಪ್ತಃ ॥

## ೨. ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ ಟಿಪ್ಪಣೀ - ದುರ್ಘಟಾರ್ಥಪ್ರಕಾಶಿಕಾ

ಆದಿ : ನತ್ವಾ ನಾರಾಯಣಂ ರಾಮಂ ಜಾನಕೀಪತಿಮಚ್ಯುತಮ್ ।
ಪೂರ್ಣಬೋಧಂ ಶಿವಗುರುಂ ಜಯತೀರ್ಥಗುರುಂ ತಥಾ ॥
ಪಿತೃಮಾತೃಭ್ರಾತೃರೂಪಾನ್ ಸತ್ಯನಾಥಗುರೂನಪಿ ।
ತಾತ್ಪರ್ಯನಿರ್ಣಯವ್ಯಾಖ್ಯಾಂ ಕರಿಷ್ಯಾಮಿ ಯಥಾಮತಿ ॥

ಅಂತ್ಯ : ರಾಮವ್ಯಾಸಾವಹಂ ವಂದೇ ಸಂಪೂರ್ಣಾನಂದಸದ್ಗುಣೌ ।
ಸೀತಯಾ ಸಹಿತೌ ಸ್ವಾಮಿಹೃದಯಾಬ್ಜನಿವಾಸಿನೌ ॥
ತಾತ್ಪರ್ಯನಿರ್ಣಯಗ್ರಂಥಕರ್ತಾರಂ ನೌಮಿ ಸರ್ವದಾ ।
ಶ್ರೀಮಧ್ವದೇವಂ ಸರ್ವಜ್ಞಂ ಗುರುರಾಜಹೃದಬ್ಜಗಮ್ ॥
ಯತ್ಪಾದಪೀಠಪೂಜಾಪ್ತಪುಣ್ಯಾಂಶೇನ ಕೃತಾ ಮಯಾ ।
ತಾತ್ಪರ್ಯನಿರ್ಣಯವ್ಯಾಖ್ಯಾ ತಾನ್ ಸೇವೇ ಜ್ಞಾನವಾರಿಧೀನ್ ॥
ಸತ್ಯನಾಥಗುರೂನ್ ನಿತ್ಯಂ ಸರ್ವಾಭೀಷ್ಟಪ್ರದಾಯಕಾನ್ ।
ತತ್ಸ್ಮೃತಿಃ ಸತತಂ ಭೂಯಾತ್ ಸಂಸೃತಿವ್ಯಾಧಿನಾಶನೀ ॥

॥ ಇತಿ ಶ್ರೀಮದಶ್ರುತಪದವಾಕ್ಯಪ್ರಮಾಣವ್ಯಾಖ್ಯಾತೄಣಾಮ್ ಅಭಿನವಚಂದ್ರಿಕಾಭಿನವ-
ತಾಂಡವಾಭಿನವಗದಾಭಿನವಾಮೃತಾದಿಬಹುಗ್ರಂಥಕರ್ತೄಣಾಂ ಜಗತ್ಪೂಜ್ಯಪಾದುಕಾನಾಂ
ಶ್ರೀ ಸತ್ಯನಾಥಶ್ರೀಪಾದಾನಾಂ ಶಿಷ್ಯೇಣ ಸತ್ಯಾಭಿನವಯತಿನಾ ಕೃತಾಯಾಂ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಟಿಪ್ಪಣ್ಯಾಂ ದುರ್ಘಟಾರ್ಥಪ್ರಕಾಶಿಕಾಯಾಂ
ದ್ವಾತ್ರಿಂಶೋಽಧ್ಯಾಯಃ ॥

## ೩. ಪುರುಷಸೂಕ್ತಮ್ - ದುರ್ಘಟಾರ್ಥಪ್ರಬೋಧಿನೀವ್ಯಾಖ್ಯಾ

ನಾರಾಯಣಂ ಪೂರ್ಣಗುಣಂ ವೇದವ್ಯಾಸಂ ಜಗದ್ಗುರುಮ್ ।
ನಮಾಮಿ ಶ್ರೀಮದಾಚಾರ್ಯಂ ಜಯತೀರ್ಥಮುನೀನ್ ವಿದೌ ॥

..............................

ತೇಷಾಂ ಸಂಕಲ್ಪಮಾತ್ರೇಣ ಜಾತಾ ಟೀಕಾ ನ ಚಾನ್ಯಥಾ ॥

ಶ್ರೀಮತ್ಪುರುಷಸೂಕ್ತಸ್ಯ ದುರ್ಘಟಾರ್ಥಪ್ರಬೋಧಿನೀ ।

.....................

ತದಂತಸ್ಥೋ ಹರಿರ್ನಿತ್ಯಂ ಸೀತಾಯಾಃ ಸಹಿತಃ ಪ್ರಭುಃ ।

ಶ್ರೀರಾಮಚಂದ್ರೋ ವ್ಯಾಸಶ್ಚ ಪ್ರೀತಾಸ್ತೇಭ್ಯೋ ನಮೋ ನಮಃ ॥

॥ ಇತಿ ಪದವಾಕ್ಯಪ್ರಮಾಣಪಾರಾವಾರೀಣಶ್ರೀಸತ್ಯನಾಥತೀರ್ಥಪೂಜ್ಯಚರಣಾನಾಂ ಶಿಷ್ಯೇಣ ಶ್ರೀಸತ್ಯಾಭಿನವಯತಿನಾ ಕೃತಃ ಪುರುಷಸೂಕ್ತಾರ್ಥಃ ಸಮಾಪ್ತಃ ॥

## ೪. ರಾಮಾಮೃತಮಹಾರ್ಣವಃ : (ಆದಿ)

ರಾಮಂ ಮಧ್ವಗುರುಂ ನತ್ವಾ ಸತ್ಯನಾಥಗುರೂನಪಿ ।

ವಕ್ಷ್ಯಾಮಿ ತಾಪಶಾಂತ್ಯರ್ಥಂ ರಾಮಾಮೃತಮಹಾರ್ಣವಮ್ ॥

## ೫. ರಾಮಾಮೃತಮಹಾರ್ಣವ ವ್ಯಾಖ್ಯಾ – ದುರ್ಘಟಾರ್ಥದೀಪಿಕಾ

### ವ್ಯಾಖ್ಯಾನ ಮಂಗಳಾಚರಣಶ್ಲೋಕಗಳು :

ಸೀತಾಪತಿಂ ರಾಮಚಂದ್ರಂ ನಮಾಮಿ ಜ್ಞಾನಸಿದ್ಧಯೇ ।

ಪೂರ್ಣಬೋಧಾನ್ ಸರ್ವಗುರೂನ್ ಸತ್ಯನಾಥಗುರೂನಪಿ ॥

ರಾಮಾಮೃತಸಮುದ್ರಸ್ಥಾ ಯೇ ಶ್ಲೋಕಾ ದುರ್ಘಟಾರ್ಥಕಾಃ ।

ತೇಷಾಮರ್ಥಮಹಂ ವಕ್ಷ್ಯೇ ಗುರೂಣಾಂ ಕರುಣಾಬಲಾತ್ ॥

॥ ಇತಿ ಶ್ರೀಮದಶ್ರುತಪದವಾಕ್ಯಪ್ರಮಾಣವ್ಯಾಖ್ಯಾತೄಣಾಮ್ ಅಭಿನವಚಂದ್ರಿಕಾಭಿನವ-ತಾಂಡವಾಭಿನವಗದಾಭಿನವಾಮೃತಾದಿಬಹುಗ್ರಂಥಕರ್ತೄಣಾಂ ಜಗತ್ಪೂಜ್ಯಪಾದುಕಾನಾಂ ಶ್ರೀ ಸತ್ಯನಾಥಶ್ರೀಪಾದಾನಾಂ ಶಿಷ್ಯೇಣ ಸತ್ಯಾಭಿನವಯತಿನಾ ಕೃತಾಯಾಂ ರಾಮಾಮೃತಮಹಾರ್ಣವಃ ಸಂಪೂರ್ಣಃ ॥

## ೬. ಸತ್ಯನಾಥಗುರುಪರಂಪರಾಸ್ತೋತ್ರ

(ಪರಿಶಿಷ್ಟದಲ್ಲಿ ಸಮಗ್ರವಾಗಿ ಕೊಡಲಾಗಿದೆ)

## ೭. ಸತ್ಯನಾಥಗುರುಪರಂಪರಾಸ್ತೋತ್ರವ್ಯಾಖ್ಯಾನ

ಆದಿ : ನತ್ವಾ ಹರಿಂ ಸರ್ವಗುರೂನ್ ಸತ್ಯನಾಥಗುರೂಂಸ್ತಥಾ ।

ಸತ್ಯನಾಥಗುರುಸ್ತೋತ್ರಂ ವ್ಯಾಕರೋಮಿ ಯಥಾಮತಿ ॥

ಅಂತ್ಯ : ಸತ್ಯನಾಥಗುರುಸ್ತೋತ್ರಂ ವ್ಯಾಖ್ಯಾತಂ ಯದನುಗ್ರಹಾತ್ ।

ಸತ್ಯನಾಥಗುರೂನ್ ವಂದೇ ಸತ್ಯನಾಥಕೃಪಾಕರಾನ್ ॥

* * *

|| ಶ್ರೀಮಧ್ವೇಶಾಯ ನಮಃ ||

ಶ್ರೀಸತ್ಯಾಭಿನವತೀರ್ಥ ಶ್ರೀಮಚ್ಚರಣಕೃತ

# ರಾಮಾಮೃತ ಮಹಾರ್ಣವ

## ವ್ಯಾಖ್ಯಾನದ ಮಂಗಳಾಚರಣ ಶ್ಲೋಕಗಳು

ಸೀತಾಪತಿಂ ರಾಮಚಂದ್ರಂ ನಮಾಮಿ ಜ್ಞಾನಸಿದ್ಧಯೇ ।
ಪೂರ್ಣಬೋಧಾನ್ ಸರ್ವಗುರೂನ್ ಸತ್ಯನಾಥಗುರೂನಪಿ ॥
ರಾಮಾಮೃತಸಮುದ್ರಸ್ಥಾ ಯೇ ಶ್ಲೋಕಾ ದುರ್ಘಟಾರ್ಥಕಾಃ ।
ತೇಷಾಮರ್ಥಮಹಂ ವಕ್ಷ್ಯೇ ಗುರೂಣಾಂ ಕರುಣಾಬಲಾತ್ ॥

ಅನು – ಸೀತಾಪತಿಯಾದ ಶ್ರೀರಾಮಚಂದ್ರನನ್ನು ಶ್ರೀಪೂರ್ಣಬೋಧರಾದ ಶ್ರೀಮನ್ಮಧ್ವಾಚಾರ್ಯರನ್ನು ಸಕಲಗುರುಗಳನ್ನು ಸತ್ಯನಾಥ ಗುರುಗಳನ್ನು ಸಹ ಜ್ಞಾನಸಿದ್ಧಿಗೋಸ್ಕರ ನಮಸ್ಕರಿಸುವೆನು. ರಾಮಾಮೃತಮಹಾರ್ಣವದಲ್ಲಿನ ದುರ್ಘಟಾರ್ಥದಿಂದ ಕೂಡಿದ ಶ್ಲೋಕಗಳ ಅರ್ಥವನ್ನು ಗುರುಗಳ ಕರುಣೆಯಿಂದ ವಿವರಿಸುವೆನು.

ವಿ – ೧. ಶ್ರೀಮನ್ಮಧ್ವಾಚಾರ್ಯರ ಸರ್ವಮೂಲಗ್ರಂಥಗಳಲ್ಲಿ ಒಂದಾದ ಕೃಷ್ಣಾಮೃತ-ಮಹಾರ್ಣವವನ್ನು ಅನುಸರಿಸಿ ಶ್ರೀರಾಮಾಮೃತಮಹಾರ್ಣವವೆಂಬ ಕೃತಿಯನ್ನು ರಚಿಸಿದ ಶ್ರೀಸತ್ಯಾಭಿನವತೀರ್ಥರು ಅದಕ್ಕೆ ತಾವೇ ರಾಮಾಮೃತಮಹಾರ್ಣವದುರ್ಘಟಾರ್ಥದೀಪಿಕಾ ಎಂಬ ವ್ಯಾಖ್ಯಾನವನ್ನು ರಚಿಸುತ್ತಾ ಮಾಡಿರುವ ಮಂಗಳಾಚರಣೆ ಇದು.

೨. ಕೃಷ್ಣಾಮೃತಮಹಾರ್ಣವಗ್ರಂಥದಂತೆ ಇಲ್ಲಿಯ ಶ್ಲೋಕಗಳೂ ಸಹ ಮಹಾಭಾರತ, ಶ್ರೀಮದ್ಭಾಗವತ, ಸ್ಕಂದಪುರಾಣ ಮೊದಲಾದ ಆಕರಗ್ರಂಥಗಳಲ್ಲಿನ ಶ್ಲೋಕಗಳ ಸಂಗ್ರಹವಾಗಿವೆ.

## ಮಂಗಳಾಚರಣ-ಗ್ರಂಥಾರಂಭ

೧. ರಾಮಂ ಮಧ್ವಗುರುಂ ನತ್ವಾ ಸತ್ಯನಾಥಗುರೂನಪಿ ।
ವಕ್ಷ್ಯಾಮಿ ತಾಪಶಾಂತ್ಯರ್ಥಂ ರಾಮಾಮೃತಮಹಾರ್ಣವಮ್ ॥

ಅನು – ಶ್ರೀರಾಮನನ್ನು, ಮಧ್ವಗುರುಗಳನ್ನು, ಸತ್ಯನಾಥಗುರುಗಳನ್ನು ಸಹ ನಮಸ್ಕರಿಸಿ, ತಾಪಪರಿಹಾರಕ್ಕೆಂದು ರಾಮಾಮೃತಮಹಾರ್ಣವವನ್ನು ಹೇಳುವೆನು.

ವಿ– ೧. ಇದು ಕೃಷ್ಣಾಮೃತಮಹಾರ್ಣವದಲ್ಲಿನ ಶ್ಲೋಕವನ್ನು ಹೋಲುವುದು ಗಮನಾರ್ಹ :

ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಕೃಷ್ಣಾಮೃತಮಹಾರ್ಣವಮ್ ॥

೨. 'ತಾಪಶಾಂತ್ಯರ್ಥಂ' ಎಂಬುದಕ್ಕೆ ತಾಪತ್ರಯಪರಿಹಾರಾರ್ಥಂ ಎಂದರ್ಥ. ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ಎಂಬುದಾಗಿ ತಾಪವು ಮೂರುವಿಧ. ದೇಹಕ್ಕೆ ಒದಗುವ ರೋಗರುಜಿನಾದಿಗಳು ಆಧಿಭೌತಿಕ ತಾಪಗಳು; ಮನಸ್ಸಿಗೆ ಉಂಟಾಗುವ ನೋವು ಆಧ್ಯಾತ್ಮಿಕತಾಪ; ಪ್ರಕೃತಿವಿಕೋಪದಿಂದಾಗಿ ಹುಟ್ಟುವ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ ಮೊದಲಾದವುಗಳು ಆಧಿದೈವಿಕ ತಾಪಗಳು. ಈ ರಾಮಾಮೃತಮಹಾರ್ಣವ ಕೃತಿಯ ಅಧ್ಯಯನದಿಂದ ಈ ಮೂರುವಿಧ ತಾಪಗಳು ಪರಿಹಾರವಾಗುವವು ಎಂದರ್ಥ.

೩. ರಾಮಾಮೃತಮಹಾರ್ಣವ ಎಂಬುದಕ್ಕೆ ರಾಮನೇ ಅಮೃತಮಹಾರ್ಣವ; ಅವನೇ ಸಕಲ ತಾಪಗಳ ಪರಿಹಾರಕ್ಕೆ ಮುಖ್ಯ ಉಪಾಯ ಎಂಬುದು ಮುಖ್ಯಾರ್ಥ. ಮತ್ತೊಂದು ಅರ್ಥದಲ್ಲಿ ರಾಮಾಮೃತಮಹಾರ್ಣವ ಕೃತಿ ಎಂದಾಗುವುದು.

## ರಾಮೇಶ್ವರ ಮಾಹಾತ್ಮ್ಯ

೨. ತತಃ ಸಕಲಪಾಪಘ್ನೀ ನಾಮ್ನಾ ಹ್ಯಮೃತವಾಪಿಕಾ ।
ಬ್ರಹ್ಮಕುಂಡಂ ತತಸ್ತೀರ್ಥಂ ತತಃ ಕುಂಡಂ ಹನೂಮತಃ ॥

ಅನು – ಆದರ ಬಳಿಕ ಸಕಲಪಾಪಗಳನ್ನು ಪರಿಹರಿಸುವ 'ಅಮೃತವಾಪಿಕಾ' ಎಂಬ ತೀರ್ಥವು, ಆದರ ನಂತರ ಬ್ರಹ್ಮಕುಂಡ ಎಂಬ ತೀರ್ಥವು, ಆದರ ನಂತರ ಹನುಮತ್ಕುಂಡ ಎಂಬ ತೀರ್ಥವು ರಾಮೇಶ್ವರದಲ್ಲಿವೆ.

ವಿ – ೧. ಇಲ್ಲಿಂದ ಮುಂದಿನ ನಾಲ್ಕುಶ್ಲೋಕಗಳು ರಾಮೇಶ್ವರಮಾಹಾತ್ಮ್ಯಪ್ರತಿಪಾದಕಗ್ರಂಥದಲ್ಲಿನ ವಚನಗಳು.

೨. ರಾಮೇಶ್ವರಕ್ಷೇತ್ರದಲ್ಲಿನ ಕೆಲವು ಮುಖ್ಯತೀರ್ಥಗಳ ಮಹಿಮೆ ಇವುಗಳಲ್ಲಿ ನಿರೂಪಿತವಾಗಿದೆ.

## ಗಂಗಾಗಯಾದಿ ತೀರ್ಥಗಳು

೩. ಗಂಗಾತೀರ್ಥಂ ತತಃ ಪಶ್ಚಾದ್ಗಯಾತೀರ್ಥಮತಃ ಪರಮ್ ।
ತತಸ್ತು ಕೋಟಿತೀರ್ಥಂ ಸ್ಯಾತ್ ಸಾಧ್ಯಂ ನಾಮಾಮೃತಂ ತತಃ ॥

ಅನು – ಆದರ ನಂತರ ಗಂಗಾತೀರ್ಥ, ಆದರ ಬಳಿಕ ಗಯಾತೀರ್ಥ, ಇನ್ನೂ ಮುಂದೆ ಕೋಟಿತೀರ್ಥ, ಅನಂತರ ಸಾಧ್ಯತೀರ್ಥ ಎಂಬವು ರಾಮೇಶ್ವರದಲ್ಲಿವೆ.

### ರಾಮೇಶ್ವರದರ್ಶನ ಮಾಹಾತ್ಮ್ಯ

೪. ದೃಷ್ಟ್ವಾಽಪಿ ರಾಮೇಶ್ವರಮೇಕದಾಽಪಿ
ಸ್ಪೃಷ್ಟ್ವಾ ನಮಸ್ಕೃತ್ಯ ಭವಂತಮೀಶ ।
ಪುನರ್ನ ಗರ್ಭಂ ಸ ನರಃ ಪ್ರಯಾಯಾತ್
ಕಿಂತ್ವದ್ವಯಂ ತೇ ಲಭತೇ ಸ್ವರೂಪಮ್ ॥

ಅನು – ಒಮ್ಮೆಯಾದರೂ ರಾಮೇಶ್ವರಕ್ಷೇತ್ರವನ್ನು ಸಂದರ್ಶಿಸಿ, ಸ್ಪರ್ಶಿಸಿ, ನಿನ್ನನ್ನು ನಮಸ್ಕರಿಸುವ ಮನುಷ್ಯನು ಎಲೈ ಈಶನೇ! ಮತ್ತೆ ಗರ್ಭವನ್ನು ಹೊಂದನು. ಅಷ್ಟೇ ಅಲ್ಲ ನಿನ್ನ ಅನುಪಮವಾದ ಸ್ವರೂಪವನ್ನು ಹೋಲುವ ದಿವ್ಯರೂಪವನ್ನು ಯಥಾಯೋಗ್ಯವಾಗಿ ಹೊಂದುವನು.

ವಿ – ಇಲ್ಲಿ ಮೇಲ್ನೋಟಕ್ಕೆ ರಾಮೇಶ್ವರದ ಸಂದರ್ಶನಾದಿಗಳನ್ನು ಮಾಡುವವನು ಬ್ರಹ್ಮಸ್ವರೂಪ- ವನ್ನು ಹೊಂದುವನು ಎಂಬ ಅರ್ಥ ತೋರುವುದು. ಆದರೆ ಅದರ ಮುಖ್ಯಾಭಿಪ್ರಾಯ ಅದಲ್ಲ. ಇಂತಹ ಸಾಧಕನಿಗೆ ಜ್ಞಾನಾನಂದಮಯವಾದ ಭಗವತ್ಸ್ವರೂಪಕ್ಕೆ ಕಿಂಚಿತ್ಸದೃಶವಾದ ಯಥಾಯೋಗ್ಯಸ್ವರೂಪಾಭಿವ್ಯಕ್ತಿ ಎಂದು ಮಾತ್ರವೇ ಅರ್ಥ.

೫. ಯೋ ರಾಮನಾಥಂ ಮನುಜೋ ಭವಂತ-
ಮುಪೇತ್ಯ ಬಂಧೂನ್ ಪ್ರಣಮನ್ ಸ್ಮರೇತ ।
ಸಂತಾರಯೇತ್ ತಾನಪಿ ಸರ್ವಪಾಪಾತ್
ಕಿಮದ್ಭುತಂ ತಸ್ಯ ಕೃತಾರ್ಥತಾಯಾಮ್ ॥

ಅನು – ಯಾವ ಮನುಷ್ಯನು ರಾಮೇಶ್ವರನಾದ ನಿನ್ನ ಬಳಿ ಬಂದು ಬಂಧುಗಳನ್ನು ಸ್ಮರಿಸುತ್ತಾ ಸಾಷ್ಟಾಂಗ ವಂದಿಸುವನೋ ಅವನು ಆ ಬಂಧುಗಳನ್ನೂ ಸಹ ಸಕಲ ಪಾಪಗಳಿಂದ ಪಾರು ಮಾಡುವನು. ಇನ್ನು ಅವನು ಕೃತಾರ್ಥನಾಗುವುದರಲ್ಲಿ ಏನು ಆಶ್ಚರ್ಯ !

ವಿ – ೧. ರಾಮೇಶ್ವರನಿಗೆ ವಂದಿಸುವಾಗ ತನಗೆ ಪ್ರಿಯವಾದ ಬಂಧುಗಳನ್ನು ಸ್ಮರಿಸಿದಲ್ಲಿ ಅವರಿಗೂ ಸಹ ಪಾಪಪರಿಹಾರವಾಗಿ ಸದ್ಗತಿ ಲಭಿಸುವುದು ಎಂದರ್ಥ.

೨. ಹೀಗೆ ಬಂಧುಗಳನ್ನು ಉದ್ಧರಿಸುವವನು ತಾನೂ ಸಹ ತಪ್ಪದೇ ಉದ್ಧಾರ ಹೊಂದುವನು ಎಂಬದು ಇದರ ಭಾವ.

## ತಾಮ್ರಪರ್ಣೀ ಮಾಹಾತ್ಮ್ಯ

೬. ತಾಮ್ರಪರ್ಣೀನದೀಂ ಸ್ಮೃತ್ವಾ ಯತ್ರಯತ್ರಾಪಿ ಮಾನವಃ।
ತೋಯಾಂತರೇಣ ಸ್ನಾತ್ವಾಽಪಿ ಲಭತೇ ಫಲಮುತ್ತಮಮ್ ॥

ಅನು – ಮಾನವನು ತಾಮ್ರಪರ್ಣೀನದಿಯನ್ನು ಸ್ಮರಿಸುತ್ತಾ ಬೇರಾವ ಜಲದಲ್ಲೇ ಮಿಂದರೂ ತಾಮ್ರಪರ್ಣೀಸ್ನಾನದ ಉತ್ತಮ ಫಲವನ್ನೇ ಪಡೆಯುವನು.

ವಿ – ೧. ಈ ಶ್ಲೋಕದಿಂದಾರಂಭಿಸಿ ಮುಂದಿನ ೫ ಶ್ಲೋಕಗಳು ತಾಮ್ರಪರ್ಣೀನದೀ ಮಾಹಾತ್ಮ್ಯಪ್ರತಿಪಾದಕ ಗ್ರಂಥದಲ್ಲಿನ ವಚನಗಳು.

೭. ನಿಷ್ಕಮಾತ್ರಂ ಜಲಂ ಪೀತಂ ತಾಮ್ರಪರ್ಣೀಸಮುದ್ಭವಮ್ ।
ನಾಶಯೇತ್ ಸರ್ವಪಾಪಾನಿ ಯಥಾ ವಹ್ನಿರ್ಮಹಾವನಮ್ ॥

ಅನು – ಒಂದು ಗುಟುಕನ್ನಾದರೂ ತಾಮ್ರಪರ್ಣೀನದಿಯ ನೀರನ್ನು ಪಾನ ಮಾಡಿದಲ್ಲಿ ಬೆಂಕಿಯು ದೊಡ್ಡ ಕಾಡನ್ನು ಭಸ್ಮ ಮಾಡುವಂತೆ ಅದು ಸಕಲಪಾಪಗಳನ್ನೂ ನಾಶ ಮಾಡುವುದು.

ವಿ : ೧. ತಾಮ್ರಪರ್ಣೀನದಿಯ ಪಾನದ ಮಹತ್ತ್ವ ಇಲ್ಲಿ ವರ್ಣಿತವಾಗಿದೆ.

೮. ತಾಮ್ರಪರ್ಣೀಮನಾದೃತ್ಯ ವೃಥಾಽನ್ಯತ್ರ ಪರಿಶ್ರಮಮ್ ।
ಸಮೀಪಸ್ಥಂ ಪರಿತ್ಯಜ್ಯ ದೂರಸ್ಥಂ ಬಹು ಮನ್ಯತೇ ।
ತತ್ರ ಸ್ನಾನಂ ವಿಜಾನಂತಿ ಕಾಕವದ್ದೂರದರ್ಶಿನಃ ॥

ಅನು – ಸಮೀಪದ ತಾಮ್ರಪರ್ಣಿಯನ್ನು ತಿರಸ್ಕರಿಸಿ ದೂರದ ಮತ್ತೊಂದು ತೀರ್ಥದಲ್ಲಿ ಸ್ನಾನಮಾಡುವ ಶ್ರಮ ವ್ಯರ್ಥವೇ ಸರಿ. ಅಂತಹ ಸ್ನಾನವನ್ನು ಜ್ಞಾನಿಗಳು ಕಾಕಸ್ನಾನ ಎನ್ನುವರು.

೯. ಇತಿ ಸೂಕ್ತತ್ರಯಂ ಜಪ್ತ್ವಾ ಸ್ನಾನಂ ಯಃ ಕುರುತೇ ನರಃ।
ಸರ್ವಪಾಪವಿನಿರ್ಮುಕ್ತಃ ಸ ಯಾತಿ ಪರಮಾಂ ಗತಿಮ್ ॥

ಅನು – ಹೀಗೆ ಈ ಮೂರು ಶ್ಲೋಕಗಳನ್ನು ಪಠಿಸುತ್ತಾ ಯಾವ ಮಾನವನು ತಾಮ್ರಪರ್ಣಿಯಲ್ಲಿ ಮೀಯುವನೋ, ಅವನು ಸಕಲಪಾಪಗಳಿಂದ ಬಿಡುಗಡೆ ಹೊಂದಿ ಪರಗತಿಯನ್ನು ಹೊಂದುವನು.

ವಿ – ೧. ತಾಮ್ರಪರ್ಣೀನದಿಯ ಸ್ನಾನಕಾಲದಲ್ಲಿ ತಪ್ಪದೇ ಪಠಿಸಬೇಕಾದ ಮೂರುಶ್ಲೋಕಗಳನ್ನು ಇಲ್ಲಿ ಉಲ್ಲೇಖಿಸಿರುವುದು ಗಮನಾರ್ಹ.

೨. ಶ್ರೀವಾದಿರಾಜಸ್ವಾಮಿಗಳು ತೀರ್ಥಪ್ರಬಂಧದಲ್ಲಿ ತಾಮ್ರಪರ್ಣಿನದಿಯು ಮಳೆಹನಿಯನ್ನು ಮುತ್ತಾಗಿಸುವ ಅಪೂರ್ವನದಿ ಎಂಬುದಾಗಿ ವರ್ಣಿಸಿರುವದು ಅದರ ವಿಶೇಷಮಹತ್ತ್ವಕ್ಕೆ ದ್ಯೋತಕ :

ತಾಮ್ರಪರ್ಣಿಸರಿತ್ತೋಯಂ ಸೇವನೀಯಂ ಮುಮುಕ್ಷುಭಿಃ।
ಮುಕ್ತೀಕರೋತಿ ಯತ್ರತ್ಯ ಶುಕ್ತಿರಪಿ ಪತಿತಂ ಜಲಮ್ ॥

## ಲಕ್ಷ್ಮೀಪುರ ಕ್ಷೇತ್ರ

೧೦. ತಾಮ್ರಪರ್ಣೀತಟೇ ಪುಣ್ಯೇ ದಕ್ಷಿಣೇ ಲೋಕಪಾವನೇ।
ಶ್ರೀಮಲ್ಲಕ್ಷ್ಮೀಪುರಂನಾಮ ಸರ್ವಕಾಮಫಲಪ್ರದಮ್ ॥

ಅನು – ತಾಮ್ರಪರ್ಣೀನದಿಯ ಲೋಕಪವಿತ್ರವಾದ ದಕ್ಷಿಣತೀರದಲ್ಲಿ ಸರ್ವಕಾಮನೆ-ಗಳನ್ನು ಈಡೇರಿಸುವ ಶ್ರೀಮಲ್ಲಕ್ಷ್ಮೀಪುರ ಎಂಬ ಕ್ಷೇತ್ರವಿದೆ.

## ಜನಾರ್ದನಕ್ಷೇತ್ರ ಮಾಹಾತ್ಮ್ಯ

೧೧. ಯತ್ರಯತ್ರ ಜನಾ ಯೇ ಚ ಭೋಜಯಿಷ್ಯಂತಿ ಭೂಸುರಾನ್।
ಜನಾರ್ದನಸ್ಯ ತತ್ ಸರ್ವಂ ಮಮಾಸ್ತು ಪರಮಾರ್ಪಿತಮ್ ॥

ಅನು – ಬೇರೆ ಸ್ಥಳಗಳಲ್ಲಿ ಬ್ರಾಹ್ಮಣರಿಗೆ ಭೋಜನ ಮಾಡಿಸುವ ಫಲ ಜನಾರ್ದನಕ್ಷೇತ್ರದಲ್ಲಿ ಬ್ರಾಹ್ಮಣಭೋಜನ ಮಾಡಿಸುವವರಿಗೆ ಲಭಿಸುವುದು.

೧೨. ತಸ್ಮಾಜ್ಜನಾರ್ದನಕ್ಷೇತ್ರಂ ಮತ್ಕಲಾಕ್ಷೇತ್ರಮಿತ್ಯಪಿ।
ಅಖಿಲೇಷು ಚ ಲೋಕೇಷು ವದಂತು ವಿಬುಧಾದಯಃ ॥

ಅನು – ಆದ್ದರಿಂದ ಜನಾರ್ದನಕ್ಷೇತ್ರವನ್ನು ನನ್ನ (ಶ್ರೀಹರಿಯ) ವಿಭೂತಿರೂಪವಿರುವ ಕ್ಷೇತ್ರ ಎಂಬುದಾಗಿ ಜ್ಞಾನಿಗಳೇ ಮೊದಲಾದವರು ಸಕಲಲೋಕಗಳಲ್ಲಿ ಘೋಷಿಸಲಿ.

ವಿ – ೧. ತಿರುವನಂತಪುರದಿಂದ ಸುಮಾರು ೫೦ ಕಿ.ಮೀ. ದೂರದಲ್ಲಿ ಇರುವ ಅಪೂರ್ವ ಯಾತ್ರಾಸ್ಥಳ ಜನಾರ್ದನಕ್ಷೇತ್ರ. ವರ್ಕಾಲ ಎಂಬದು ಇಂದಿನ ಅದರ ಹೆಸರು. ಶ್ರೀವಿಜಯದಾಸರು ತಮ್ಮ ಸುಳಾದಿಗಳಲ್ಲಿ ಇದನ್ನು ವಲ್ಕಲ ಕ್ಷೇತ್ರ ಎಂಬುದಾಗಿ ವರ್ಣಿಸಿರುವರು.

೨. ಇಲ್ಲಿ ಶ್ರೀಹರಿಯ ಭವ್ಯವಾದ ಜನಾರ್ದನಮೂರ್ತಿ ನೆಲೆಸಿದೆ. ಪಿತೃಕಾರ್ಯಕ್ಕೆ ಜನಾರ್ದನ ಅಧಿದೇವತೆ. ಆದ್ದರಿಂದ ಪಿತೃಕಾರ್ಯಕ್ಕೆ ಈ ಜನಾರ್ದನಕ್ಷೇತ್ರ ಅತ್ಯಂತ ಪ್ರಶಸ್ತವಾದ್ದುದು ಎಂಬದು ವಿಶೇಷ.

೧೩. ಅಹಮೇವಾಮೃತಜ್ಯಾಭೃತ್ ತಥಾಽಪಿ ನಿವಸಾಮ್ಯಜ ।
ಜನಾರ್ದನ ಇತಿ ಖ್ಯಾತೋ ಹಸ್ತಾಪೋಶನಮುದ್ರಯಾ ॥

ಅನು – ನಾನೇ ಅಮೃತವನ್ನು ಧರಿಸಿದವನಾಗಿ ಅಲ್ಲಿ ನೆಲೆಸಿರುವೆನು. ಹಸ್ತದಲ್ಲಿ ಆಪೋಶನ ಮುದ್ರೆಯನ್ನು ಹಿಡಿದು ಜನಾರ್ದನ ಎಂಬುದಾಗಿ ಪ್ರಸಿದ್ಧನಾಗಿರುವೆನು.

ವಿ – ೧. ಇಲ್ಲಿರುವ ಜನಾರ್ದನಮೂರ್ತಿಯ ಒಂದು ಕೈಯಲ್ಲಿ ಆಪೋಶನೋದಕವಿರುವುದು ವಿಶೇಷ. ಅದನ್ನೇ ಆಪೋಶನ ಮುದ್ರೆ ಎಂದು ಇಲ್ಲಿ ಕರೆದಿರುವರು.

೨. ಮೇಲಿನ ಮೂರು ಶ್ಲೋಕಗಳು ಅನಂತಶಯನಸಮೀಪಸ್ಥಜನಾರ್ದನಕ್ಷೇತ್ರ-ಮಾಹಾತ್ಮ್ಯಪ್ರತಿಪಾದಕಗ್ರಂಥದಲ್ಲಿನ ವಚನಗಳು.

## ನೂಪುರನದೀ ಮಾಹಾತ್ಮ್ಯ

೧೪. ಸಕೃತ್ಸ್ನಾನೇನ ಪಾಪಾನಿ ಕೋಟಿಜನ್ಮಕೃತಾನಿ ಚ ।
ಪ್ರಯಾಂತಿ ವಿಲಯಂ ಯಸ್ಮಾತ್ ತಸ್ಮಾತ್ ಕೋ ನ ನಿಷೇವತೇ ॥

ಅನು – ನೂಪುರನದಿಯಲ್ಲಿ ಒಮ್ಮೆ ಮಿಂದರೂ ಸಹ ಕೋಟಿಜನ್ಮಗಳಲ್ಲಿ ಮಾಡಿದ ಸಕಲ ಪಾಪಗಳೂ ಸಂಪೂರ್ಣನಾಶ ಹೊಂದುವವು. ಆದ್ದರಿಂದ ಅದನ್ನು ಯಾರು ತಾನೇ ಸೇವಿಸರು?

ವಿ – ೧. ಮಧುರೆಯಿಂದ ಉತ್ತರಕ್ಕೆ ಸುಮಾರು ೨೦ ಕಿ.ಮೀ. ದೂರದಲ್ಲಿ ವೃಷಭಾಚಲ(ಅಳಗರ್ ಕೋಯಿಲ್)ವೆಂಬ ಕ್ಷೇತ್ರವಿದೆ. ವರಾಹಪುರಾಣ, ವಾಮನಪುರಾಣ, ಅಗ್ನಿಪುರಾಣ ಮತ್ತು ಬ್ರಹ್ಮಾಂಡಪುರಾಣಗಳಲ್ಲಿ ಈ ವೃಷಭಾಚಲಕ್ಷೇತ್ರದ ವರ್ಣನೆ ಬಂದಿದ್ದು, ಅದರಂತೆ ಇದು ವೃಷಭರೂಪದಿಂದ ಯಮಧರ್ಮನು ಮಾಡಿದ ತಪಸ್ಸಿಗೆ ನಾರಾಯಣನು ಪ್ರತ್ಯಕ್ಷನಾದ ಸ್ಥಳ. ಇಲ್ಲಿರುವ ಹರಿಮೂರ್ತಿಗೆ 'ಸುಂದರರಾಜ' ಎಂದು ಹೆಸರು. ಮೂರ್ತಿಯ ಉಭಯಪಾರ್ಶ್ವಗಳಲ್ಲಿ ಶ್ರೀದೇವಿ ಭೂದೇವಿಯರ ವಿಗ್ರಹಗಳೂ ಇವೆ. ಇಲ್ಲಿರುವ ತೀರ್ಥಕ್ಕೆ ನೂಪುರಗಂಗಾ ಎಂದು ಹೆಸರು. ಅದರ ಮಹಿಮೆಯನ್ನು ಇಲ್ಲಿ ವರ್ಣಿಸಿರುವರು. ವೃಷಭರೂಪಿಯಾದ ಯಮನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಶ್ರೀಹರಿಯ ಕಾಲ್ಗೆಜ್ಜೆಯಿಂದ ಜನಿಸಿದ ತೀರ್ಥವಾದ್ದರಿಂದ ಇದಕ್ಕೆ ನೂಪುರಗಂಗಾ ಎಂದು ಹೆಸರು ಎಂಬದು ಇದರ ಪೌರಾಣಿಕ ಹಿನ್ನೆಲೆ.

೨. ತೀರ್ಥಪ್ರಬಂಧದಲ್ಲಿ ಶ್ರೀವಾದಿರಾಜಸ್ವಾಮಿಗಳು ಈ ನೂಪುರಗಂಗೆಯನ್ನು ವರ್ಣಿಸಿರುವರು:

ಹರಿನೂಪುರಜಾತೇಽಲಂ ಕುರು ಗಂಗೇ ಮನೋ ಮಮ ।
ಪರಿಹೃತ್ಯ ಘನೀಭೂತದುರಿತಸ್ತೋಮಕರ್ದಮಮ್ ॥ (ದ.ಪ್ರ. ೧೩)

೩. ಇದು ನೂಪುರನದೀಮಾಹಾತ್ಮ್ಯಪ್ರತಿಪಾದಕಗ್ರಂಥದ ವಚನ ಎಂದು ವ್ಯಾಖ್ಯಾನದಲ್ಲಿದೆ.

### ಸಂಸ್ಕಾರದ ಸಾಮಾನ್ಯವಿಭಾಗ

೧೫. ಸಾಮಾನ್ಯತಶ್ಚ ಸಂಸ್ಕಾರೋ ದ್ವಿವಿಧಃ ಪರಿಕೀರ್ತಿತಃ ।
ಬಾಹ್ಯಮಾಭ್ಯಂತರಂ ಚೇತಿ ತತ್ರಾದ್ಯಂ ಪಂಚಧಾ ವಿದುಃ ॥

ಅನು – ಸಾಮಾನ್ಯವಾಗಿ ಸಂಸ್ಕಾರವು ಬಾಹ್ಯ ಮತ್ತು ಆಂತರ ಎಂಬುದಾಗಿ ಎರಡು ಬಗೆ. ಅದರಲ್ಲಿ ಬಾಹ್ಯಸಂಸ್ಕಾರವು ಐದು ಬಗೆಯೆನ್ನುವರು.

### ಪಂಚ ಬಾಹ್ಯಸಂಸ್ಕಾರಗಳು

೧೬. ತಾಪಃ ಪುಂಡ್ರಸ್ತಥಾ ನಾಮ ಮಂತ್ರೋ ಯಾಗಸ್ತಥೈವ ಚ ।
ಏತೇ ಹಿ ಪಂಚ ಜೀವಸ್ಯ ದುಷ್ಟಸ್ಯ ಮಲಮೋಚಕಾಃ ॥

ಅನು – ತಾಪ, ಪುಂಡ್ರ, ನಾಮ, ಮಂತ್ರ ಮತ್ತು ಯಾಗ ಎಂಬ ಈ ಐದು ಬಾಹ್ಯಸಂಸ್ಕಾರಗಳು ದುಷ್ಟನ ದೋಷವನ್ನು ಸಹ ಪರಿಹರಿಸುವವು.

ವಿ : ೧. ಪಂಚಸಂಸ್ಕಾರಗಳು ಅತ್ಯಂತವಿಹಿತ; ಇವುಗಳು ದುಷ್ಟನ ದೋಷವನ್ನೂ ಪರಿಹರಿಸುವವು ಎಂದ ಮೇಲೆ ಇತರರಿಗೆ ಇನ್ನೂ ಹೆಚ್ಚು ಶ್ರೇಯಸ್ಕರ ಎಂದರ್ಥ.

೨. ಈ ಪಂಚಸಂಸ್ಕಾರಗಳ ಬಗ್ಗೆ ಹೆಚ್ಚಿನ ವಿವರಗಳನ್ನು "ಪಂಚಸಂಸ್ಕಾರಸಂಗ್ರಹ" ಎಂಬ ಗ್ರಂಥದಲ್ಲಿ ಕಾಣಬಹುದು; ಆ ಹೆಸರಿನ ಗ್ರಂಥವೊಂದನ್ನು ಶ್ರೀಮದಾಚಾರ್ಯರ ಅನುಜರಾದ ವಿಷ್ಣುತೀರ್ಥರೂ ಸಹ ರಚಿಸಿರುವ ಉಲ್ಲೇಖ ಸ್ಮೃತಿಮುಕ್ತಾವಲೀ ಮೊದಲಾದ ಗ್ರಂಥಗಳಲ್ಲಿ ಕಂಡು ಬರುತ್ತದೆ.

### ತಾಪ ; ತಪ್ತಮುದ್ರಾಧಾರಣೆ

೧೭. ತಪ್ತಾಭ್ಯಾಂ ಶಂಖಚಕ್ರಾಭ್ಯಾಮಂಕನಂ ಬಾಹುಮೂಲಯೋಃ ।
ಯದಾ ಚ ಗುರುಣಾ ಪ್ರಾಪ್ತಸ್ತಾಪಃ ಸಂಸ್ಕಾರ ಇಷ್ಯತೇ ॥

ಅನು – ಚೆನ್ನಾಗಿ ಕಾದ ಶಂಖಚಕ್ರಗಳಿಂದ ಭುಜಗಳ ಬುಡದಲ್ಲಿ ಗುರುಗಳು ಹಾಕುವ ಅಂಕಿತವು ತಾಪ ಎಂಬ ಸಂಸ್ಕಾರ ಎನ್ನಿಸುವುದು.

ವಿ : ಈ ಪಂಚಸಂಸ್ಕಾರಗಳಲ್ಲಿ ತಾಪ ಎಂಬ ಸಂಸ್ಕಾರದ ವಿವರ ಇಲ್ಲಿದೆ; ಇದನ್ನು ಗುರುಗಳಿಂದಲೇ ಪಡೆಯಬೇಕು ಎಂಬ ವಿಶೇಷಾಂಶ ಇಲ್ಲಿ ಉಕ್ತವಾಗಿದೆ.

### ಸೋಽಹಂ ಉಪಾಸನೆಯ ಆಂತರ್ಯ

೧೮. ಅತಿಸ್ನೇಹಸ್ಯ ಮಾತ್ರತ್ವಯಾಂಚಾಯೈ ಸೋಽಹಮಿತ್ಯಮುಮ್ ।
ಉಪಾಸನಾ ಶ್ರುತಿಶ್ಚಾಹ ನಾನಯೋರಭಿದಾ ಕ್ವಚಿತ್ ॥

ಅನು – ಪರಮಾತ್ಮನ ಬಗೆಗೆ ಅತ್ಯಂತಭಕ್ತಿಯನ್ನು ಪ್ರಾರ್ಥಿಸಲೆಂದು 'ಸೋಽಹಂ' ಎಂಬ ಉಪಾಸನೆಯು ಶ್ರುತಿಯಲ್ಲಿ ಉಕ್ತವಾಗಿದೆ. ಇದು ಸರ್ವಥಾ ಜೀವೇಶ್ವರರ ಅಭೇದವನ್ನು ಹೇಳುವಂತಹುದಲ್ಲ.

ವಿ – ೧. 'ಯೋಽಸೌ ಸೋಽಹಮ್' ಇತ್ಯಾದಿಯಾಗಿ ಉಪನಿಷತ್ತುಗಳಲ್ಲಿ ಸೋಽಹಂ ಉಪಾಸನೆ ವಿಹಿತವಾಗಿದೆ. ಇದನ್ನು ಮಾಯಾವಾದಿಗಳು ಜೀವಬ್ರಹ್ಮೈಕ್ಯಪರ ಎಂದು ತಪ್ಪಾಗಿ ವ್ಯಾಖ್ಯಾನಿಸಿರುವರು. ಆದರೆ ಅದರ ನಿಜವಾದ ಅರ್ಥ ಭಗವಂತನಲ್ಲಿ ಅತ್ಯಂತ ವಿಶಿಷ್ಟವಾದಂತಹ ಸ್ನೇಹವನ್ನು ಬೇಡುವುದು ಮಾತ್ರವೇ ಆಗಿದೆ ಎಂಬ ಅರ್ಥವನ್ನು ಈ ಪುರಾಣಶ್ಲೋಕ ತಿಳಿಸುತ್ತದೆ.

೨. 'ಸೋಽಹಮ್' ಶಬ್ದಕ್ಕೆ ಪುರಾಣದಿಂದಲೇ ಅಪೂರ್ವಾರ್ಥವನ್ನು ವಿವರಿಸಿರುವ ಹಿರಿಮೆ ಇಲ್ಲಿದೆ.

೩. ಮೇಲಿನ ನಾಲ್ಕುಶ್ಲೋಕಗಳು ಸಂಸ್ಕಾರಪ್ರತಿಪಾದಕಗ್ರಂಥದಲ್ಲಿನ ವಚನಗಳು.

### ಶ್ರೀಮುಷ್ಣಕ್ಷೇತ್ರದಲ್ಲಿ ಶ್ರೀಮಧ್ವಾಚಾರ್ಯರಿಂದ ದಂಡತೀರ್ಥ ನಿರ್ಮಾಣ

೧೯. ಭಿಕ್ಷಾಪ್ರದಾನಕಾಲೇ ತು ಸತೀ ಚಾಹಾಸ್ತಿ ಮೇಽಖಿಲಮ್ ।
ದೂರಮಸ್ತಿ ಜಲಂ ಗ್ರಾಮೇ ನ ಪಾದಕ್ಷಾಲನೇ ಜಲಮ್ ॥

ಅನು – ಭಿಕ್ಷೆನೀಡುವ ಸಮಯದಲ್ಲಿ ಸತಿಯು ನುಡಿದಳು 'ನನ್ನಲ್ಲಿ ಸಕಲವೂ ಉಂಟು. ಆದರೆ ಈ ಗ್ರಾಮದಲ್ಲಿ ನೀರು ತುಂಬಾ ದೂರದಲ್ಲಿದೆ. ಆದ್ದರಿಂದ ನನಗೆ ಪಾದಪೂಜೆ ಮಾಡಲು ಸಾಧ್ಯವಾಗುತ್ತಿಲ್ಲ'.

ವಿ – ಶ್ರೀಮುಷ್ಣಕ್ಷೇತ್ರಕ್ಕೆ ಶ್ರೀಮನ್ಮಧ್ವಾಚಾರ್ಯರು ದಿಗ್ವಿಜಯಮಾಡಿದಾಗ ನಡೆದ ಅಪೂರ್ವ ಘಟನೆಯೊಂದರ ಉಲ್ಲೇಖ ಇಲ್ಲಿ ನಿರೂಪಿತವಾಗಿದೆ. ಒಮ್ಮೆ ಭಿಕ್ಷೆಗೆಂದು ತೆರಳಿದ್ದಾಗ ತುಂಬು ಗರ್ಭಿಣಿಯಾದ ಒಬ್ಬ ಸ್ತ್ರೀ ಶ್ರೀಮದಾಚಾರ್ಯರಿಗೆ ಭಿಕ್ಷೆ ನೀಡುತ್ತಾ ತನ್ನ ಅಸಹಾಯಕತೆಯನ್ನು ತೋಡಿಕೊಂಡ ಬಗೆ ಇದಾಗಿದೆ.

೨೦. ಇತಿ ದುಃಖಾದ್ದದೌ ಭಿಕ್ಷಾಂ ತಚ್ಛ್ರುತ್ವಾ ಸ ಯತಿಃ ಕ್ಷಣಾತ್ ।
ಸ್ವವೇಣುದಂಡಾತ್ ತತ್ರೈವ ಖಾತ್ವಾ ಭೂತಲಮತ್ರ ವೈ ॥

ಅನು – ಹೀಗೆ ದುಃಖದಿಂದ ನೋಯುತ್ತಲೇ ಅವಳು ಭಿಕ್ಷೆ ನೀಡಿದಳು. ಅದನ್ನು ಕೇಳಿ ಯತಿಯಾದ ಶ್ರೀಮದಾಚಾರ್ಯರು ಆ ಕ್ಷಣದಲ್ಲೇ ತಮ್ಮ ಕೈಯಲ್ಲಿನ ವೇಣುದಂಡದಿಂದ ಅಲ್ಲಿ ಭೂಮಿಯನ್ನು ತೋಡಿದರು.

೨೧. ಸಮುದ್ಭೂತಂ ಜಲಂ ಪೀತ್ವಾ ತೀರ್ಥಂ ಚಕ್ರೇ ಮಹಾದ್ಭುತಮ್ ।
ಸ್ವದಂಡೇನ ತು ತತ್ ತೀರ್ಥಂ ವೇಣುದಂಡಮಿತೀರಿತಮ್ ॥

ಅನು – ಆಗ ಚಿಮ್ಮಿದ ನೀರನ್ನು ಕುಡಿದು ಅತ್ಯಂತ ಅದ್ಭುತವಾದ ತೀರ್ಥವೊಂದನ್ನು ನಿರ್ಮಿಸಿದರು. ಹೀಗೆ ಅವರ ದಂಡದಿಂದ ನಿರ್ಮಿತವಾದ ಆ ತೀರ್ಥ 'ವೇಣುದಂಡತೀರ್ಥ' ಎಂದು ಪ್ರಸಿದ್ಧವಾಯಿತು.

ವಿ – ೧. ಶ್ರೀಮಧ್ವಾಚಾರ್ಯರು ನಿರ್ಮಿಸಿದ ಅನೇಕ ದಂಡತೀರ್ಥಗಳಲ್ಲಿ ಇದೂ ಒಂದು. ಇಂದೂ ಶ್ರೀಮುಷ್ಣಕ್ಷೇತ್ರದ ಹೊರವಲಯದಲ್ಲಿ ಸ್ವಲ್ಪ ಎತ್ತರದ ಸ್ಥಳದಲ್ಲಿ ಈ ದಂಡತೀರ್ಥವನ್ನು ಕಾಣಬಹುದು.

೨. ಇದರ ಮಹಿಮೆ ನಾರದೀಯಪುರಾಣ ಮೊದಲಾದವುಗಳಲ್ಲಿ ಬಂದಿದೆ. ಇಲ್ಲಿ ಪ್ರಸಕ್ತಳಾದ ಸತಿ ಎಂಬ ಸ್ತ್ರೀಯ ಹೆಸರು ಕಾಂತಿ ಎಂಬುದಾಗಿಯೂ, ಅವಳು ಒಬ್ಬ ವಸುವಿನ ಪತ್ನಿ ಎಂಬುದಾಗಿಯೂ ಪುರಾಣಗಳಲ್ಲಿದೆ.(ವಿವರಗಳನ್ನು ನಮ್ಮ ಪ್ರಕಾಶನದ ಅನುವಾದಸಮೇತ ಸುಮಧ್ವವಿಜಯದಲ್ಲೂ, ಶ್ರೀಪೂರ್ಣಪ್ರಜ್ಞದರ್ಶನ ಎಂಬ ಕೃತಿಯಲ್ಲೂ ಕಾಣಬಹುದು)

## ಮಧ್ವಾವತಾರಕ್ಕಾಗಿ ಭಗವದಾಜ್ಞೆ

೨೨. ಇತಿ ವಿಜ್ಞಾಪಿತೋ ದೇವೈರ್ವಾಯುಮಾಹ ಜನಾರ್ದನಃ ।
ಉದ್ಧರಸ್ವ ಮಹಾಬಾಹೋ ಮಮ ಧರ್ಮಾನ್ ಸನಾತನಾನ್ ॥

ಅನು – ಹೀಗೆ ದೇವತೆಗಳಿಂದ ಪ್ರಾರ್ಥಿತನಾದ ಜನಾರ್ದನನಾದ ಶ್ರೀಹರಿ ವಾಯುದೇವರಿಗೆ ನುಡಿದ 'ಮಹಾಸಮರ್ಥನಾದ ವಾಯುವೇ! ನೀನು ನನ್ನ ಸನಾತನವಾದ ಧರ್ಮಗಳನ್ನು ಉದ್ಧರಿಸು'.

ವಿ – ೧. ಕಲಿಯುಗದಲ್ಲಿ ಆರಂಭದಲ್ಲಿಯೇ ದುರ್ಮತಗಳಿಂದಾಗಿ ದುರ್ಭಾಷ್ಯದಿಂದಾಗಿ ತತ್ತ್ವಜ್ಞಾನ ಮರೆಯಾಗಿ ಸಜ್ಜನರೆಲ್ಲ ದುಃಖಿತರಾದಾಗ ಬ್ರಹ್ಮಾದಿ ದೇವತೆಗಳು ಶ್ರೀಹರಿಯನ್ನು ಅವರೆಲ್ಲರ ಉದ್ಧಾರಕ್ಕಾಗಿ ಪ್ರಾರ್ಥನೆ ಮಾಡಿದಾಗ ಶ್ರೀಹರಿಯು ತ್ರಿಯುಗನಾದ್ದರಿಂದ ತಾನು

ಅವತರಿಸಲು ಬಯಸದೆ, ಅವತಾರರಹಿತರಾದ್ದರಿಂದ ಬ್ರಹ್ಮದೇವರಿಗೂ ಆದೇಶ ನೀಡದೆ, ಶ್ರೀವಾಯುದೇವರಿಗೆ ಅವತರಿಸಲು ಆಜ್ಞಾಪಿಸಿದ ವಿವರ ಸುಮಧ್ವವಿಜಯದ ದ್ವಿತೀಯಸರ್ಗದ ಆರಂಭದಲ್ಲಿ ನಿರೂಪಿತವಾಗಿದೆ. ಇಲ್ಲಿಯ ಈ ಪುರಾಣಶ್ಲೋಕ ಅದಕ್ಕೆ ಆಧಾರದಂತಿದೆ ಎಂಬದನ್ನು ಗಮನಿಸಬೇಕು.

೨. ಮೇಲಿನ ನಾಲ್ಕುಶ್ಲೋಕಗಳು ಶ್ರೀಮುಷ್ಣಮಾಹಾತ್ಮ್ಯಗ್ರಂಥದ ವಚನಗಳು.

## ಬಳಿತ್ಥೇತ್ಯಾದಿ ಶ್ರುತ್ಯರ್ಥ

೨೩. ಬಳಿತ್ಥಾ ತದ್ವಪುಷೇಽಧಾಯಿ ದರ್ಶತಂ ತನ್ಮಹಾತ್ಮನಃ।
ದೇವಸ್ಯ ಭರ್ಗಃ ಸಹಸೋ ಯತೋಽಜನಿ ಸನಾತನಃ॥

ಅನು – ಮಹಾತ್ಮರಾದ ಆ ವಾಯುದೇವರ ಜ್ಞಾನದಿಂದ ತುಂಬಿದ ದಿವ್ಯವಾದ ಆ ರೂಪವು ಮೂಲರೂಪದಲ್ಲಿದ್ದಂತೆಯೇ ಅವತರಿಸಲು ನಿಶ್ಚಯಿಸಿತು. ಆದರಿಂದಾಗಿಯೇ ಸನಾತನವಾದ ಜಗತ್ತಿನ ಭರಣಗಮನಕರ್ತೃವಾದ ಅವರ ರೂಪವು ಕೂಡಲೇ ಅವತರಿಸಿತು.

೨೪. ಯದೀಮುಪಹ್ವರತೇ ಸಸ್ರುತಃ ಸಾಧತೇಽಸಮಾಃ।
ಋತಸ್ಯ ಧೇನಾ ಅನಯದ್ರಾಮಸ್ಯಾನುಚರಃ ಪರಃ॥

ಅನು – ಶ್ರೀರಾಮದೇವರ ಅನುಚರನಾದ ಆ ವಾಯುದೇವರ ರೂಪವು ಋತರೂಪರಾದ ಅವರ ಮಾತುಗಳನ್ನು ಕೇಳಿಸಿಕೊಂಡು ಸೀತಾಕೃತಿಗೆ ತಲುಪಿಸಿತು.

೨೫. ವಪುರ್ದ್ವಿತೀಯಂ ಪೃಕ್ಷಶ್ಚ ಪಿತುಮಾನ್ ನಿತ್ಯ ಆಶಯೇ।
ಧರ್ಮಾನುಜೋ ಭೀಮಸೇನೋ ಬಲವಾನ್ ಪೃಕ್ಷನಾಮಕಃ॥
ಯದನು ಪ್ರದಿವೋ ಮಧ್ವೋ ಮಾತರಿಶ್ವಾ ಮಥಾಯತಿ॥

ಅನು – ಅವರ ಎರಡನೆಯ ರೂಪವು ಕುರುಸೇನೆ ಮೊದಲಾದ ದುಷ್ಟಸೇನೆಯನ್ನು ನಾಶ ಪಡಿಸಿತು; ಬಹ್ವನ್ನವನ್ನು ತಿಂದಿತು; ನಿತ್ಯದಲ್ಲೂ ವೇದಾದಿಶಾಸ್ತ್ರಗಳಲ್ಲಿ ವಿಹರಿಸಿತು; ಧರ್ಮರಾಜನ ತಮ್ಮನಾಗಿ ಭೀಮಸೇನ ಎಂಬ ಬಲಾಢ್ಯವಾದ ಆ ರೂಪ ಪೃಕ್ಷ ಎಂದು ಪ್ರಸಿದ್ಧವಾಯಿತು; ಆ ಬಳಿಕ ಮಧ್ವ ಎಂಬ ಅವರ ಮತ್ತೊಂದು ರೂಪ ಶ್ರೀಹರಿತತ್ತ್ವವನ್ನು ಜಗತ್ತಿಗೆ ಸಾರಿತು.

ವಿ – ಈ ಮೂರು ಶ್ಲೋಕಗಳಲ್ಲಿ ಬಳಿತ್ಥಾಸೂಕ್ತದ ಅರ್ಥದ ವಿವರಣೆ ಬಂದಿದೆ. ಇವು

ಶ್ರೀಮದಾಚಾರ್ಯರು ತಮ್ಮ ಬೃಹದ್ಭಾಷ್ಯಾದಿಗಳ ಕೊನೆಯಲ್ಲಿ ಉದಾಹರಿಸಿರುವ ಪ್ರಮಾಣ ವಾಕ್ಯಗಳಿಗೆ ಸಂವಾದಿಯಾಗಿರುವುದು ವಿಶೇಷ.

## ಶ್ರೀಮಧ್ವಾವತಾರ ವರ್ಣನೆ

೨೬. ತತಃ ಕಲಿಯುಗೇ ಪ್ರಾಪ್ತೇ ತೃತೀಯೋ ಮಧ್ವನಾಮಕಃ ।
ಅಸಚ್ಛಾಸ್ತ್ರಪ್ರವೃತ್ತೌ ತು ಕೃಪಯಾ ಪ್ರೇರಿತೋ ಮಯಾ ॥

ಅನು – ಬಳಿಕ ಕಲಿಯುಗವು ಬಂದಾಗ, ದುಷ್ಟಶಾಸ್ತ್ರಗಳ ಪ್ರವೃತ್ತಿ ಉಂಟಾದಾಗ ಮಧ್ವ ಎಂಬ ಹೆಸರಿನ ಮೂರನೆಯ ರೂಪವು ನನ್ನಿಂದ ಪ್ರೇರಿತವಾಯಿತು.

೨೭. ಭೂದೇವ್ಯಾ ದಕ್ಷಿಣೇ ಭಾಗೇ ಮಣಿಮದ್ಗರ್ವಶಾಂತಯೇ ।
ನ್ಯಕ್ಕುರ್ವಂಸ್ತತ್ಪ್ರಭಾಂ ಸದ್ಯೋ ಹ್ಯವತೀರ್ಣೋ ದ್ವಿಜಾನ್ವಯೇ ॥

ಅನು – ಭೂದೇವಿಯ ದಕ್ಷಿಣದಿಕ್ಕಿನಲ್ಲಿ ಮಣಿಮಂತನ ಸೊಕ್ಕನ್ನು ಮುರಿಯಲು, ಅವನ ಕಾಂತಿಯನ್ನು ಮಂಕಾಗಿಸುತ್ತ, ದ್ವಿಜಕುಲದಲ್ಲಿ ಕೂಡಲೇ ಅವತರಿಸಿತು.

ವಿ – ಇಲ್ಲಿ ಸದ್ಯಃ ಎಂಬ ಮಾತಿನಿಂದ ಶ್ರೀಮಧ್ವಾವತಾರಕ್ಕೆ ಗರ್ಭವಾಸದ ದುಃಖ ಇಲ್ಲ ಎಂಬ ವಿಶೇಷಾಂಶ ಸೂಚಿತವಾಗಿದೆ. ಸುಮಧ್ವವಿಜಯದಲ್ಲಿ ಗರ್ಭವಾಸದುಃಖವನ್ನು ಅನುಭವಿಸಿದ ಜೀವನನ್ನು ಹೊರಹಾಕಿ ಶ್ರೀವಾಯುದೇವರು ಆ ದೇಹದಲ್ಲಿ ಪ್ರವೇಶಿಸಿದರು ಎಂಬುದಾಗಿ ಬಂದಿರುವ ವಿವರಕ್ಕೆ ಇದು ಸಂವಾದಿಯಾಗಿದೆ :

ಸಂಪೂರ್ಣಲಕ್ಷಣಚಣಂ ನವರಾಜಮಾನದ್ವಾರಾಂತರಂ ಪರಮಸುಂದರಮಂದಿರಂ ತತ್ ।
ರಾಜೇವ ಸತ್ಪುರವರಂ ಭುವನಾಧಿರಾಜೋ ನಿಷ್ಕಾಸಯನ್ ಪರಮಸೌ ಭಗವಾನ್ ವಿವೇಶ ॥

೨. ಇಲ್ಲಿಯ ದಕ್ಷಿಣಭಾಗ ಎಂಬುದು ಪಾಜಕವು ದಕ್ಷಿಣಕನ್ನಡದಲ್ಲಿ ಇರುವುದಕ್ಕೆ ಸಂವಾದಿ.

## ಭಗವಂತನಿಂದ ಆಚಾರ್ಯರಿಗೆ ಅಷ್ಟ ವ್ಯಾಸಮುಷ್ಟಿಪ್ರದಾನ

೨೮. ಸ್ವಾಧಿಷ್ಠಾನಾನ್ ಪರಾನಷ್ಟೌ ಗ್ರಾವಾಣಃ ಕೃಪಯಾ ದದೌ ।
ಸಜ್ಜನೇಷು ತತಸ್ತೋಷಾನ್ಮಧ್ವಃ ಪ್ರತಿ ಜಗಾಮ ಹ ॥

ಅನು – ತಾವು ನೆಲೆಸಿದ ಶ್ರೇಷ್ಠವಾದ ಎಂಟು ಶಿಲೆಗಳನ್ನು ಶ್ರೀವ್ಯಾಸರೂಪದ ಶ್ರೀಹರಿಯು ಶ್ರೀಮನ್ಮಧ್ವಾಚಾರ್ಯರಿಗೆ ಸಜ್ಜನರ ಮೇಲಿನ ಕೃಪೆಯಿಂದ ನೀಡಿದನು. ಆಗ ಶ್ರೀಮಧ್ವಾಚಾರ್ಯರು ಸಂತೋಷದಿಂದ ಹಿಂದಿರುಗಿದರು.

೨-೧. ಶ್ರೀಮನ್ಮಧ್ವಾಚಾರ್ಯರು ದ್ವಿತೀಯಬಾರಿ ಉತ್ತರ ಬದರಿಯಲ್ಲಿ ಶ್ರೀವೇದವ್ಯಾಸರನ್ನು ಸಂದರ್ಶಿಸಿ ಅವರ ಆದೇಶದಂತೆ ತಾವು ರಚಿಸಿದ್ದ ಬ್ರಹ್ಮಸೂತ್ರಭಾಷ್ಯವನ್ನು ಸಮರ್ಪಿಸಿದಾಗ ಸಂತುಷ್ಟರಾದ ಅವರು ಮಹಾಭಾರತಕ್ಕೆ ತಾತ್ಪರ್ಯನಿರ್ಣಯವನ್ನು ರಚಿಸಲು ಆದೇಶಿಸಿದರು. ಅವರನ್ನು ಬಿಟ್ಟು ತೆರಳಲು ಶ್ರೀಮನ್ಮಧ್ವಾಚಾರ್ಯರು ಚಿಂತಿಸಿದಾಗ ತಮ್ಮ ನಿತ್ಯಸನ್ನಿಧಾನದಿಂದ ಕೂಡಿದ ವ್ಯಾಸಮುಷ್ಟಿಗಳೆಂದು ಖ್ಯಾತವಾದ ಎಂಟು ಶಿಲೆಗಳನ್ನು ನೀಡಿದರು ಎಂಬ ವಿವರ ಸುಮಧ್ವವಿಜಯದಲ್ಲಿದೆ. ಅದಕ್ಕೆ ಆಧಾರವಾದ ಪುರಾಣಶ್ಲೋಕ ಇದಾಗಿದೆ ಎಂಬದು ಗಮನಾರ್ಹ.

೨. ವ್ಯಾಸಮುಷ್ಟಿಗಳ ಸಂಖ್ಯೆಯನ್ನು ಖಚಿತವಾಗಿ ಎಂಟು ಎಂದು ತಿಳಿಸುವ ವಚನವಿದು.

### ಭಗವದ್ಗೀತೆಯ ಅಭಿಮಾನಿದೇವತೆಗಳು, ನಿಯಾಮಕ ಭಗವದ್ರೂಪಗಳು

೨೯. ಗೀತಾಭಿಮಾನಿನೋ ದೇವಾ ಅಧಿದೈವಾಸ್ತಥೈವ ಚ ।
ಜ್ಞಾತವ್ಯಾಃ ಜ್ಞಾನಸಿದ್ಧ್ಯರ್ಥಂ ತಾನ್ ದೇವಾನ್ ಮೇ ನಿಬೋಧತ ॥

ಅನು – ಭಗವದ್ಗೀತೆಯ ಅಭಿಮಾನಿದೇವತೆಗಳನ್ನು ಆದರ ಅಧಿದೈವರೂಪಗಳನ್ನು ಜ್ಞಾನಸಿದ್ಧಿಗೋಸ್ಕರ ತಿಳಿಯತಕ್ಕದ್ದು. ಆ ದೇವತೆಗಳ ವಿವರಗಳನ್ನು ನನ್ನಿಂದ ತಿಳಿದುಕೊಳ್ಳಿ.

೩೦. ವಿಶ್ವಶ್ಚ ತೈಜಸಶ್ಚೈವ ಪ್ರಾಜ್ಞಶ್ಚೈವ ತುರೀಯಕಃ ।
ಆತ್ಮಾ ಚೈವಾಂತರಾತ್ಮಾ ಚ ಜ್ಞಾನಾತ್ಮಾ ಪರಮಾತ್ಮಕಃ ॥

ಅನು – ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರೀಯ, ಹಾಗೂ ಆತ್ಮ, ಅಂತರಾತ್ಮ, ಜ್ಞಾನಾತ್ಮ ಮತ್ತು ಪರಮಾತ್ಮ ಎಂಬ ಎಂಟುರೂಪಗಳು,

೩೧. ಬ್ರಹ್ಮವಾಯೂ ಭಾರತೀ ಚ ತಥೈವ ಚ ಸರಸ್ವತೀ ।
ಶೇಷರುದ್ರವಿಪಾಶ್ಚೈವ ಸೌಪರ್ಣೀ ವಾರುಣೀ ತಥಾ ॥

ಅನು – ಬ್ರಹ್ಮ, ವಾಯು, ಭಾರತಿ ಮತ್ತು ಸರಸ್ವತೀ ಹಾಗೂ ಗರುಡಶೇಷರುದ್ರರು, ಸೌಪರ್ಣಿ ಮತ್ತು ವಾರುಣಿಯರು,

೩೨. ಪಾರ್ವತೀ ಚೇಂದ್ರಕಾಮೌ ಚ ಶಚೀರತ್ಯೌ ಕುಮಾರಕಃ ।
ಪ್ರದ್ಯುಮ್ನೋ ವಾಸುದೇವಶ್ಚ ತಥೈವ ಹ್ಯನಿರುದ್ಧಕಃ ।
ಪ್ರತ್ಯಧೀದೇವತಾಶ್ಚೈತಾ ಜ್ಞಾತಾಸ್ತೇ ಪುಣ್ಯದಾಯಕಾಃ ॥

ಅನು – ಪಾರ್ವತಿ ಮತ್ತು ಇಂದ್ರಕಾಮರು, ಶಚಿ, ರತಿ ಮತ್ತು ಸ್ಕಂದ ಅದರಂತೆ ಪ್ರದ್ಯುಮ್ನ ವಾಸುದೇವ ಅನಿರುದ್ಧ ಇವರು ಪ್ರತ್ಯಧಿದೇವತೆಗಳು. ಇವರ ಜ್ಞಾನವು ಪುಣ್ಯದಾಯಕ.

ವಿ – ೧. ಗೀತಾಗ್ರಂಥದ ಅಭಿಮಾನಿದೇವತೆಗಳು ಹಾಗೂ ನಿಯಾಮಕ ಭಗವದ್ರೂಪಗಳ ಅಪೂರ್ವ ವಿವರ ಇಲ್ಲಿ ಬಂದಿದೆ. ಇದರಲ್ಲಿ ವಿಶ, ತೈಜಸ, ಪ್ರಾಜ್ಞ, ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಮತ್ತು ಪ್ರದ್ಯುಮ್ನ, ವಾಸುದೇವ, ಅನಿರುದ್ಧ ಇವರನ್ನು ಅಧಿದೈವರೂಪಗಳೆಂದೂ, ಬ್ರಹ್ಮ, ವಾಯು ಮೊದಲಾದ ಇತರರನ್ನು ಅಭಿಮಾನಿದೇವತೆಗಳೆಂದು ತಿಳಿಯಬೇಕು ಎಂಬ ವಿವರ ಇದರ ವ್ಯಾಖ್ಯಾನದಲ್ಲಿ ಬಂದಿದೆ.

೨. ಗೀತೆಯನ್ನು ಶ್ರೀಕೃಷ್ಣನ ಪ್ರತಿಕೃತಿ ಎಂದು ವರ್ಣಿಸಿ, ಅದರ ಮೊದಲ ಐದು ಅಧ್ಯಾಯಗಳು ಅವನ ಮುಖಗಳು, ಅನಂತರದ ಹತ್ತು ಅಧ್ಯಾಯಗಳು ತೋಳುಗಳು, ಮುಂದಿನದು ಉದರ, ಕೊನೆಯ ಎರಡು ಅಧ್ಯಾಯಗಳು ಪಾದಗಳು ಎಂಬುದಾಗಿ ಪದ್ಮಪುರಾಣ ಉತ್ತರಖಂಡ ನಿರೂಪಿಸಿದೆ :

ವಕ್ತ್ರಾಣಿ ಪಂಚ ಜಾನೀಹಿ ಪಂಚಾಧ್ಯಾಯಾನನುಕ್ರಮಾತ್ ।
ದಶಾಧ್ಯಾಯಾ ಭುಜಾಶ್ಚೈಕ ಉದರಂ ದ್ವೌ ಪದಾಂಬುಜೇ ॥
ಏವಮಷ್ಟಾದಶಾಧ್ಯಾಯಾ ವಾಙ್ಮಯೀಮೂರ್ತಿರೈಶ್ವರೀ ।
ವಿಜ್ಞೇಯಾ ಜ್ಞಾನಮಾತ್ರೇಣ ಮಹಾಪಾತಕನಾಶಿನೀ ॥ (೧೭೫/೨೭-೨೮)

## ಹರಿಯೇ ಪರಗತಿ

೩೩. ನಾಹಂ ಜಾನೇ ನ ಜಾನೇಽಹಂ ನ ಜಾನೇ ಗತಿಮನ್ಯಥಾ ।

ಅನು – ನಾನು ತಿಳಿಯೆ, ನಾನು ಸರ್ವಥಾ ತಿಳಿಯೆ, ಬೇರೊಂದು ಗತಿ ನನಗೆ ತಿಳಿಯದು.

೩೪. ಸರ್ವಥಾ ನಾಥರಹಿತಂ ಸರ್ವಥಾ ದುಃಖಭಾಜನಮ್ ।
ಸರ್ವಥಾ ಶರಣಂ ಪ್ರಾಪ್ತಂ ಸರ್ವಥಾ ಪಾಹಿ ಮಾಂ ಹರೇ ॥

ಅನು – ಸರ್ವಥಾ ನಾನು ಅನಾಥ ಸರ್ವಥಾ ನಾನು ದುಃಖಭಾಗಿ, ನಾನು ಸರ್ವಥಾ ನಿನ್ನನ್ನು ಶರಣು ಹೊಕ್ಕವನು, ಶ್ರೀಹರಿ ನೀನು ನನ್ನನ್ನು ಸರ್ವಥಾ ಪಾಲಿಸು.

ವಿ : ಭಗವಂತನನ್ನು ಶರಣು ಹೊಂದಬೇಕಾದ ರೀತಿ ಇಲ್ಲಿ ಅಪೂರ್ವವಾಗಿ ನಿರೂಪಿತ-ವಾಗಿದೆ.

## ಭಗವನ್ನಾಮಸ್ತೋತ್ರದ ಮಾಹಾತ್ಮ್ಯ

೩೫. ನ್ಯೂನಾನಾಂ ಕರ್ಮಣಾಂ ಪೂರ್ತಿರ್ಯೇನ ಸ್ಯಾತ್ ಪಠಿತೇನ ಚ ।
ತಾದೃಕ್ ಸ್ತೋತ್ರಂ ಮಮ ಬ್ರೂಹಿ ಮಹಾಪಾತಕನಾಶನಮ್ ॥

ಅನು – ನ್ಯೂನವಾದ ಕರ್ಮಗಳ ಸಂಪೂರ್ತಿ ಯಾವುದನ್ನು ಪಠಿಸಿದರೆ ಲಭಿಸುವುದೋ ಅಂತಹ ಮಹಾಪಾತಕನಾಶಕವಾದ ಸ್ತೋತ್ರವನ್ನು ನನಗೆ ತಿಳಿಸು.

೩೬. ನಿರ್ಗುಣೋ ನಿಷ್ಕಲೋಽನಂತೋ ದಂಡಕಾಂತಕೃದವ್ಯಯಃ ।
ಹಿರಣ್ಯಾಕ್ಷಾಂತಕೃದ್ದೇವಃ ಪೂರ್ಣಷಾಡ್ಗುಣ್ಯವಿಗ್ರಹಃ ॥

ಅನು – ಶ್ರೀಹರಿಯು ಸತ್ತ್ವಾದಿಪ್ರಾಕೃತಗುಣರಹಿತ, ಷೋಡಶಕಲೆಯಿಂದ ಕೂಡಿದ ಪ್ರಾಕೃತದೇಹರಹಿತ, ದೇಶತಃ ಕಾಲತಃ ಗುಣತಃ ನಾಶರಹಿತ, ದಂಡಕದಲ್ಲಿ ನೆಲೆಸಿದ್ದ ಅಸುರನನ್ನು ನಾಶ ಮಾಡಿದವನು, ಸ್ವತಃ ಹ್ರಾಸರಹಿತನು, ಹಿರಣ್ಯಾಕ್ಷನನ್ನು ಸದೆ ಬಡೆದವನು, ಕ್ರೀಡಾದಿ ಗುಣವಿಶಿಷ್ಟನು, ಪರಿಪೂರ್ಣವಾದ ಐಶ್ವರ್ಯಾದಿ ಷಡ್ಗುಣ-ಶರೀರನು.

ವಿ – ಶ್ರೀಹರಿಯು ಪ್ರಾಕೃತಗುಣರಹಿತ, ಪ್ರಾಕೃತದೇಹರಹಿತ, ಸರ್ವಥಾ ನಾಶರಹಿತ, ಗುಣಮಯ ಶರೀರ ವೊದಲಾದ ಅಪೂರ್ವವಿವರಗಳು ಇಲ್ಲಿ ಬಂದಿವೆ.

೩೭. ಯ ಏತದ್ಧಾರಯೇದ್ಭಕ್ತ್ಯಾ ಕರೇ ಮೂರ್ಧ್ನಿ ಹೃದಂತರೇ ।
ತಂ ನಮಸ್ಯಂತಿ ಭೂತಾನಿ ಮುಚ್ಯತೇ ಸರ್ವತೋ ಭಯಾತ್ ॥

ಅನು – ಯಾವನು ಮನಸ್ಸಿನೊಳಗೆ ಇದನ್ನು ಭಕ್ತಿಯಿಂದ ಚಿಂತಿಸುತ್ತಾ, ಕೈಯ್ಯಲ್ಲಿ ತಲೆಯಲ್ಲಿ ಧರಿಸುವನೋ ಅವನನ್ನು ಸಕಲಪ್ರಾಣಿಗಳು ವಂದಿಸುವವು. ಅವನು ಎಲ್ಲೆಡೆಗಳಿಂದಲೂ ಭಯರಹಿತನಾಗುವನು.

ವಿ – ೧. ಶ್ರೀಹರಿಯನ್ನು ನಿರ್ಗುಣ, ನಿಷ್ಕಲ ಇತ್ಯಾದಿಯಾಗಿ ಚಿಂತಿಸುವುದು ಸಕಲಕರ್ಮಗಳ ನ್ಯೂನತೆಗೆ ಮುಖ್ಯಪರಿಹಾರ, ಪೂಜ್ಯತೆಗೂ ಅದು ಸಾಧನ ಎಂದು ಭಾವ.

೨. ಈ ಹಿನ್ನೆಲೆಯಲ್ಲೇ :

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ ।
ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥

ಎಂಬ ಸಕಲಕರ್ಮಗಳ ಕೊನೆಯಲ್ಲಿ ನಿತ್ಯಪಠ್ಯವಾಗಿ ವಿಹಿತವಾಗಿದೆ ಎಂದು ತಿಳಿಯಬಹುದು.

೩. ಇಲ್ಲಿ ಕರದಲ್ಲಿ ಧರಿಸುವುದು ಎಂದರೆ ಜಪ, ಶಿರಸ್ಸಿನಲ್ಲಿ ಧರಿಸುವುದು ಎಂದರೆ ಚಿಂತನೆ, ಹೃದಯದಲ್ಲಿ ಧರಿಸುವುದು ಎಂದರೆ ಧ್ಯಾನ ಎಂದು ತಿಳಿಯಬೇಕು.

### ವರಾಹದೇವರಿಗೆ ತುಲಸೀ ಅರ್ಚನೆಯ ಫಲ

೩೮. ಅಷ್ಟೋತ್ತರಶತೈರ್ದಿವ್ಯೈರ್ನಾಮಭಿಃ ಕಿಟಿರೂಪಿಣಃ।
ತುಲಸೀಮರ್ಚಯೇದ್ಯಸ್ತು ಸ ಮುಕ್ತೋ ನಾತ್ರ ಸಂಶಯಃ॥

ಅನು – ಯಾರು ವರಾಹರೂಪದ ನನ್ನನ್ನು ದಿವ್ಯವಾದ ನೂರೆಂಟು ನಾಮಗಳಿಂದ ತುಲಸಿಯಿಂದ ಪೂಜಿಸುವನೋ ಅವನು ಮುಕ್ತನೇ ಸರಿ. ಸಂಶಯ ಬೇಡ.

ವಿ – ೧. ಶ್ರೀಮುಷ್ಣಕ್ಷೇತ್ರದಲ್ಲಿನ ಶ್ರೀವರಾಹರೂಪದ ಶ್ರೀಹರಿಯ ಅಷ್ಟೋತ್ತರಶತನಾಮದ ಫಲಶ್ರುತಿ ಇದಾಗಿದೆ.

೨. ಇಲ್ಲಿ ಮೇಲ್ನೋಟಕ್ಕೆ ತುಲಸಿಯನ್ನೇ ಅರ್ಚಿಸುವುದು ಎಂಬ ಅರ್ಥ ಕಾಣುತ್ತದೆ. ಆದರೆ ಆದಕ್ಕೆ ತುಲಸಿಯಿಂದ ಶ್ರೀಹರಿಯನ್ನು ಪೂಜಿಸುವುದು ಎಂಬ ಅರ್ಥವೇ ವಿಹಿತ ಎಂಬದಾಗಿ ವ್ಯಾಖ್ಯಾನದಲ್ಲಿ ಸ್ಫುಟಪಡಿಸಲ್ಪಟ್ಟಿದೆ.

೩. ಭಗವಂತನ ಯಾವುದೇ ರೂಪಕ್ಕೂ ತುಲಸೀ ಅರ್ಚನೆ ವಿಹಿತ ಎಂಬುದು ಇದರಿಂದ ಸೂಚಿತ.

### ಅಷ್ಟೋತ್ತರಶತ ನಾಮಗಳ ಫಲ

೩೯. ಅಷ್ಟೋತ್ತರಶತಂ ತು ಯಃ ಪಠೇನ್ನಿಯತೇಂದ್ರಿಯಃ।
ಪಾಯಸೇನ ತಥಾ ಹುತ್ವಾ ವಂಧ್ಯೋ ಪುತ್ರವತೀ ಭವೇತ್॥

ಅನು – ಈ ಅಷ್ಟೋತ್ತರಶತನಾಮಸ್ತೋತ್ರವನ್ನು ಯಾವನು ಜಿತೇಂದ್ರಿಯನಾಗಿ ಸದಾ ಪಠಿಸುವನೋ ಅದರಂತೆ ಪಾಯಸದಿಂದ ಹೋಮಿಸುವನೋ ಅವನ ಬಂಜೆ ಪತ್ನಿಯೂ ಸಹ ಪುತ್ರವತಿಯಾಗುವಳು.

ವಿ – ಈ ವರಾಹಾಷ್ಟೋತ್ತರಶತನಾಮಸ್ತೋತ್ರದ ಪಠಣೆಯೊಂದಿಗೆ ಹೋಮವನ್ನೂ ಮಾಡಿದಾಗ ಬಂಜೆಯೂ ಸಹ ಪುತ್ರವತಿಯಾಗುವಳು ಎಂಬ ವಿಶೇಷಾಂಶ ಇದರಲ್ಲಿ ನಿರೂಪಿತವಾಗಿದೆ.

### ಅಷ್ಟೋತ್ತರಶತ ನಾಮದ ಪಠನೆಯ ಫಲ

೪೦. ಇಮಂ ಮಂತ್ರಂ ಪಠನ್ ನಿತ್ಯಮಂತೇ ಮೋಕ್ಷಮವಾಪ್ನುಯಾತ್।

ಅನು – ಈ ವರಾಹಾಷ್ಟೋತ್ತರಶತನಾಮಸ್ತೋತ್ರವನ್ನು ನಿತ್ಯದಲ್ಲೂ ವಿಶೇಷವಾಗಿ ಮರಣಕಾಲದಲ್ಲೂ ಪಠಿಸುತ್ತಿದ್ದರೆ ಮರಣಾನಂತರ ಮೋಕ್ಷವು ಲಭಿಸುವುದು.

೨. ಮೇಲಿನ ೨೩ ಶ್ಲೋಕಗಳು ವಾಯುಪುರಾಣದ ವಚನಗಳು.

### ಭಗವಂತನ ಸಿಂಹಾಸನದ ವರ್ಣನೆ

೪೧. ಉದ್ಯತ್ಕೋಟಿಸಹಸ್ರಭಾನುವಿಲಸತ್ಪದ್ಮಸ್ಫುರತ್ಕರ್ಣಿಕಾ-
ಮಾಣಿಕ್ಯಾದಿಮಣಿಪ್ರವೇಕಖಚಿತೇ ಸಿಂಹಾಸನೇ ಸಂಸ್ಥಿತಮ್ ॥

ಅನು – ಶ್ರೀಹರಿಯ ಮೂರ್ತಿ ಉದಿಸುವ ಕೋಟಿಸಹಸ್ರಸೂರ್ಯರಂತೆ ಹೊಳೆಯುವ ಕಮಲದ ಕಂಗೊಳಿಸುವ ಕರ್ಣಿಕೆಯಲ್ಲಿ ಮಾಣಿಕ್ಯ ಮೊದಲಾದ ಮಣಿಗಳ ಸಾಲಿನಿಂದ ಖಚಿತವಾದ ಸಿಂಹಾಸನದಲ್ಲಿ ಮಂಡಿಸಿದೆ.

ವಿ : ಇದು ನಿತ್ಯಪೂಜೆಯ ಸಮಯದಲ್ಲೂ ವಿಹಿತ ಎಂದು ತಿಳಿಯಬಹುದು.

### ಕೇಶವಾದಿನಾಮಗಳಿಂದ ತುಲಸೀಅರ್ಚನೆ

೪೨. ಯೋऽಮಾಯಾಂ ತ್ರಿರಾವೃತ್ತ್ಯಾ ತುಲಸ್ಯಾ ಕೇಶವಾದಿಭಿಃ ।
ಪೂಜಯೇತ್ ಪುಂಡರೀಕಾಕ್ಷಂ ಪಿತರೋऽಸ್ಯಾಪ್ನುಯುರ್ಹರಿಮ್ ॥

ಅನು – ಅಮಾವಾಸ್ಯೆಯಂದು ಕೇಶವಾದಿ ನಾಮಗಳಿಂದ ಮೂರು ಬಾರಿ ಪುಂಡರೀಕಾಕ್ಷನಾದ ಶ್ರೀಹರಿಯನ್ನು ತುಳಸಿಯಿಂದ ಪೂಜಿಸುವವರ ಪಿತೃಗಳು ಸದ್ಗತಿಯನ್ನು ಪಡೆಯುವರು.

ವಿ – ಅಮಾವಾಸ್ಯೆ ಪಿತೃಗಳ ದಿನ. ಅಂದು ತುಳಸಿಯಿಂದ ಶ್ರೀಹರಿಯ ಪೂಜೆ ಪಿತೃಗಳಿಗೆ ಸದ್ಗತಿದಾಯಕ ಎಂದು ಭಾವ.

### ಭಗವಂತನಲ್ಲಿ ಶರಣಾಗತಿಯ ಮಹತ್ತ್ವ

೪೩. ಶ್ರೀಕೃಷ್ಣ ವಿಷ್ಣೋ ತವ ಪಾದಪದ್ಮಯೋ-
ರ್ನ ಭಕ್ತಿಮಾನ್ ವಾ ನ ಚ ವೈದಿಕೋऽಪ್ಯಹಮ್ ।
ದುಷ್ಟೋ ದುರಾಚಾರ್ಯಹಮದ್ಯ ಕೇವಲಂ
ಪಾದಾರವಿಂದಂ ಶರಣಂ ಭಜಾಮಿ ತೇ ॥

ಅನು – ಹೇ ಶ್ರೀಕೃಷ್ಣ! ಮಹಾವಿಷ್ಣೋ! ನಾನು ನಿನ್ನ ಪಾದಕಮಲಗಳಲ್ಲಿ ಭಕ್ತಿ ಹೊಂದಿದವನಲ್ಲ. ವೇದೋಕ್ತವಾದ ಕರ್ಮಾಚರಣೆ ಮಾಡುವವನೂ ಅಲ್ಲ. ದುಷ್ಟನೂ

ದುರಾಚಾರಿಯೂ ಆದವನು. ಆದರೆ ಇಂದು ಕೇವಲ ನಿನ್ನ ಪಾದಕಮಲವನ್ನು ಶರಣು ಹೊಕ್ಕಿರುವೆ.

ವಿ : ಶ್ರೀಹರಿಯಲ್ಲಿ ಶರಣಾಗತಿ ಅತ್ಯಂತ ಮುಖ್ಯಕರ್ತವ್ಯ ಎಂದು ಭಾವ.

೪೪. ನೃಶಂಸಂ ಚ ಶಠಂ ಕ್ರೂರಂ ಜ್ಞಾತ್ವಾಽಪಿ ಶರಣಂ ಗತಮ್ ।
ಕೃಪಯಾ ಪಾಽಪಿ ಗೋವಿಂದ ಭಗವನ್ ಭಕ್ತವತ್ಸಲ ॥

ಅನು – ನಾನು ಕ್ರೂರಿ, ವಂಚಕ, ನಿಷ್ಠುರಿ ಎಂಬುದನ್ನು ತಿಳಿದು ಶರಣು ಹೊಂದಿರುವ ನನ್ನನ್ನು ಭಕ್ತವತ್ಸಲನಾದ ನೀನು ಎಲೈ ಗೋವಿಂದನೇ! ಕರುಣೆಯಿಂದ ಪಾಲಿಸು.

## ನಿಂದಾ ಸ್ತುತಿ

೪೫. ಪುತ್ರದುಃಖಂ ಪಿತುಶ್ಚೇತಿ ನ ದುಃಖಂ ವ್ಯಸನಂ ತವ ।
ಅರಕ್ಷಣೇ ತವೈವ ಸ್ಯಾತ್ ದುರ್ಯಶೋ ಲೋಕವಿಶ್ರುತಮ್ ॥

ಅನು – ಪುತ್ರನ ನೋವು ತಂದೆಗೂ ಒದಗುವುದು; ಆದ್ದರಿಂದ ನನಗೆ ದುಃಖವಾಗಲೀ ವ್ಯಸನವಾಗಲೀ ಇಲ್ಲ; ನನ್ನನ್ನು ರಕ್ಷಿಸದಿದ್ದಲ್ಲಿ ಲೋಕದಲ್ಲೆಲ್ಲಾ ನಿನಗೆ ಅಪಖ್ಯಾತಿ ಒದಗುವುದಲ್ಲವೆ?

ವಿ – ೧. ಇದೊಂದು ನಿಂದಾಸ್ತುತಿ. ಮಗನ ನೋವು ತಂದೆಯನ್ನು ಬಾಧಿಸುವಂತೆ ಮಕ್ಕಳಾದ ನಮ್ಮನ್ನು ಪಾಲಿಸದಿದ್ದಲ್ಲಿ ತಂದೆಯಾದ ಶ್ರೀಹರಿಗೆ ಅಪಖ್ಯಾತಿ ಆದ್ದರಿಂದ ಅದಕ್ಕಾಗಿಯಾದರೂ ಅವನು ನಮ್ಮನ್ನು ಪಾಲಿಸಲೇ ಬೇಕು ಎಂಬ ಇಲ್ಲಿಯ ಭಾವ.

೨. ಶ್ರೀಹರಿಯನ್ನು ಲೋಕದ ತಂದೆಯೆಂದು ತಿಳಿಯುವ ತತ್ತ್ವವನ್ನು ಇದು ನಿರೂಪಿಸಿದೆ.

೪೬. ಉಪೇಕ್ಷಸೇ ಯದಿ ತ್ವಂ ಮಾಂ ನ ಭಕ್ತೋ ದುಷ್ಟಧೀರಿತಿ ।
ತವ ಕಾರುಣ್ಯಪಾಶೇನ ನಿಬದ್ಧಸ್ತ್ವತ್ಪದಾಂಬುಜಮ್ ॥

ಅನು – ನಾನು ಭಕ್ತನಲ್ಲ. ದುಷ್ಟಬುದ್ಧಿಯವನು ಎಂದು ನೀನು ಉಪೇಕ್ಷಿಸುವಿಯೇನು! ಆದರೆ ನಿನ್ನ ಕರುಣಾಪಾಶದಿಂದ ನಿನ್ನ ಪಾದಕಮಲವನ್ನು ಕಟ್ಟಿಹಾಕಿರುವೆನಲ್ಲ.

ವಿ – ೧. ಶ್ರೀಹರಿಯ ಪಾದಕಮಲವನ್ನು ಭಕ್ತಿಯಿಂದ ಭಜಿಸುವವನನ್ನು ಶ್ರೀಹರಿಯು ಎಂದೂ ತೊರೆಯಲಾರ ಎಂಬುದು ಇಲ್ಲಿಯ ಭಾವ.

೨. ನೀನು ನನ್ನನ್ನು ಉಪೇಕ್ಷಿಸಿದರೂ ನಾನು ನಿನ್ನ ಪಾದಕಮಲವನ್ನು ಬಿಡಲಾರೆ ಎಂಬ ಭಕ್ತಿಭಾವವೂ ಇದರಲ್ಲಿ ತುಂಬಿದೆ.

೪೭. ನ ತ್ಯಜೇಯಮಹಂ ಕೃಷ್ಣ ಕಥಂಚನ ಕದಾಚನ ।
ಅತೋ ನಿರ್ಬಂಧತೋ ವಾಽಪಿ ರಕ್ಷಣೀಯೋ ಹ್ಯಹಂ ಪ್ರಭೋ ॥

ಅನು – ಹೇ ಶ್ರೀಕೃಷ್ಣ! ನಾನು ನಿನ್ನನ್ನು ಯಾವರೀತಿಯಲ್ಲೂ ಎಂದೂ ಸಹ ಬಿಡಲಾರೆ. ಈ ನಿರ್ಬಂಧದಿಂದಾದರೂ ನೀನು ನನ್ನನ್ನು ರಕ್ಷಿಸಲೇ ಬೇಕಾಗಿದೆ.

೪೮. ದಯಾಮೂರ್ತಿರಿತಿ ತ್ವಂ ಚ ಶರಣಾಗತವತ್ಸಲ ।
ಪ್ರಸಿದ್ಧಶ್ಚ ಮೃಷಾ ವಾ ಸ್ಯಾತ್ ಕೋ ಭಾರೋ ರಕ್ಷಣೇ ಮಮ ॥

ಅನು – ಹೇ ಶರಣಾಗತವತ್ಸಲನಾದ ಶ್ರೀಹರಿಯೇ! ನೀನು ದಯಾಮೂರ್ತಿಯೆಂದು ಪ್ರಸಿದ್ಧನಾದವನು. ಅದು ಸುಳ್ಳಾಗಕೂಡದಷ್ಟೆ. ನನ್ನನ್ನು ರಕ್ಷಿಸುವಲ್ಲಿ ನಿನಗೆ ಭಾರ ಏನಿದೆ?

೪೯. ರಾವಣಃ ಶಿಶುಪಾಲೋ ವಾ ಕಂಸೋ ವಾ ಪೌಂಡ್ರಕೋ ಬಲಿಃ ।
ಭವೇಯಂ ಚೇತ್ ಕೃತಾರ್ಥೋಽಸ್ಮಿ ತ್ವದ್ದ್ವೇಷಾತ್ ತ್ವತ್ಸ್ಮೃತಿರ್ಭವೇತ್ ॥

ಅನು – ನಾನು ರಾವಣ, ಶಿಶುಪಾಲ, ಕಂಸ, ಪೌಂಡ್ರಕವಾಸುದೇವ ಅಥವಾ ಬಲಿಚಕ್ರವರ್ತಿ ಆದಲ್ಲಿ ಕೃತಾರ್ಥನಾಗುವೆನು; ಆಗ ನಿನ್ನ ದ್ವೇಷಮಾಡುವುದರಿಂದಾಗಿ ನಿನ್ನ ಸ್ಮರಣೆ ಒದಗುವುದಲ್ಲವೇ!

ವಿ – ೧. ರಾವಣಾದಿಗಳ ಶ್ರೀಹರಿದ್ವೇಷದ ನಿಮಿತ್ತದಿಂದ ಮಾಡಿದ ಭಕ್ತಿಯಿಂದ ಮುಕ್ತರಾದ ವಿವರ ಶ್ರೀಮದ್ಭಾಗವತಾದಿಗಳಲ್ಲಿ ಸುಪ್ರಸಿದ್ಧ. ಇದರ ಹಿನ್ನೆಲೆಯಲ್ಲಿ ಭಕ್ತನ ಬೇಡಿಕೆ ಹೀಗಿದೆ. ನಾನೂ ಸಹ ರಾವಣಶಿಶುಪಾಲರಂತಾದರೆ ಆಗ ಶ್ರೀಹರಿಯಲ್ಲಿ ದ್ವೇಷಪೂರ್ವಕ ಭಕ್ತಿ ಮಾಡುವಂತಾಗುವುದರಿಂದ ಅವನನ್ನು ಸದಾ ಸ್ಮರಿಸುವಂತಾಗುವುದರಿಂದ ಮುಕ್ತಿ ಲಭಿಸುವುದು ಎಂದರ್ಥ.

೨. ಇಲ್ಲಿ ರಾವಣ,ಶಿಶುಪಾಲರಾಗುವುದರಲ್ಲಿ ತಾತ್ಪರ್ಯವಿಲ್ಲ; ಅವರು ಮಾಡಿದಂತೆ ಶ್ರೀಹರಿಯನ್ನು ಸಂತತ ಸ್ಮರಿಸಿ ಮುಕ್ತನಾಗುವುದಷ್ಟೇ ತಾತ್ಪರ್ಯ ಎಂದು ತಿಳಿಯಬೇಕು.

೩. ವಸ್ತುತಃ ರಾವಣಶಿಶುಪಾಲಾದಿಗಳು ಮುಕ್ತರಾದದ್ದು ದ್ವೇಷದಿಂದಲ್ಲ; ನಿಜವಾದ ಭಕ್ತಿಯಿಂದಲೇ; ದ್ವೇಷ ಅಂತಹ ಭಕ್ತಿಗೆ ನಿಮಿತ್ತವಾದದ್ದು ಅವರ ಅಧಿಕಾರವಿಶೇಷದಿಂದಾದ ಮಹತ್ವ ಎಂಬ ವಿಶೇಷಾಂಶ ಶ್ರೀಮದ್ಭಾಗವತ ತಾತ್ಪರ್ಯನಿರ್ಣಯಾದಿಗಳಲ್ಲಿ ನಿರೂಪಿತವಾಗಿದೆ.

೫೦. ಸರ್ವೇಶ್ವರಃ ಸರ್ವಗುರುರ್ಜಗತ್ಪಿತಾ ಸಮಸ್ತಲೋಕಾಧಿಪತಿಃ ಸ್ವತಂತ್ರಃ ।
ನಿರಂಕುಶೋ ನಿಸ್ಪೃಹ ಏಕ ಈಶ್ವರೋ ಜಗಚ್ಛರಣ್ಯಃ ಶರಣಾಗತಂ ಪಿತಃ ॥

ಅನು – ಶ್ರೀಹರಿಯು ಸರ್ವೇಶ್ವರ; ಸರ್ವರಿಗೂ ಗುರು; ಜಗತ್ತಿನ ತಂದೆ; ಸಮಸ್ತ ಲೋಕಗಳಿಗೆ ಒಡೆಯ; ಸ್ವತಂತ್ರ; ನಿರಂಕುಶ; ನಿಸ್ಪೃಹ; ಒಬ್ಬನೇ ಸ್ವಾಮಿ; ಜಗತ್ತಿಗೆ ಆಶ್ರಯ; ಶರಣು ಹೊಂದಿರುವವರನ್ನು ತಂದೆಯಂತೆ ಪಾಲಿಸುವವನು.

೫೧. ಯದಿ ಯೋಗಿಪ್ರಿಯೋऽಸಿ ತ್ವಮಹಂ ವಿಷಯತತ್ಪರಃ।
ಯದಿ ಸ್ತೋತ್ರಪ್ರಿಯೋ ವಾ ತ್ವಂ ನಾಹಂ ಸ್ತೋತಾ ಜಡೋऽಂಧದೃಕ್ ॥

ಅನು – ನೀನು ಯೋಗಿಪ್ರಿಯನಾಗಿರಬಹುದು; ಆದರೆ ನಾನು ವಿಷಯತತ್ಪರನಾದವನು; ನೀನು ಸ್ತೋತ್ರಪ್ರಿಯನಾಗಿರಬಹುದು; ಆದರೆ ನಾನು ಸ್ತೋತ್ರಮಾಡುವಂತಹವನಲ್ಲ; ನಾನೊಬ್ಬ ಮಂದ; ಕಣ್ಣು ಕಾಣದವನು.

ವಿ : ಶ್ರೀಹರಿಗೆ ಪ್ರಿಯವಾದ ಯಾವ ಕಾರ್ಯವನ್ನೂ ನಾವು ಮಾಡುತ್ತಿಲ್ಲ ಎಂಬ ಎಚ್ಚರದಿಂದ ಅವನನ್ನು ಆರಾಧಿಸಬೇಕು ಎಂದರ್ಥ.

೫೨. ಜಿಘೃಕ್ಷವಸ್ತ್ವಾಮಥ ದೈತ್ಯಪೂತನಾ-
ಕಂಸಾದಿಕಾಸ್ತ್ವತ್ಪದಮಾಪಿತಾ ಇತಿ।
ದ್ವೇಷಾತ್ ತ್ವದಾಜ್ಞಾಮವಮತ್ಯ ಕೇವಲಂ
ತೂಷ್ಣೀಂ ತ್ವದಂಘ್ರಿಂ ಶರಣಂ ಪ್ರಪದ್ಯೇ ॥

ಅನು – ದೈತ್ಯರಾದ ಪೂತನೆ, ಕಂಸ ಮೊದಲಾದವರು ದ್ವೇಷದಿಂದ ನಿನ್ನ ಆಜ್ಞೆಯನ್ನು ಮನ್ನಿಸದೆ ನಿನ್ನನ್ನು ಕೊಲ್ಲ ಹೊರಟು ನಿನ್ನ ಸ್ಥಾನವನ್ನು ಸೇರಿದವರು; ನಾನಾದರೋ ಕೇವಲ ಹಾಗೇನೂ ಮಾಡದೆ ಕೇವಲ ನಿನ್ನ ಪಾದವನ್ನು ಶರಣು ಹೊಂದುವೆನು.

ವಿ : ನಿನ್ನನ್ನು ಬಹಳವಾಗಿ ದ್ವೇಷಿಸಿದವರನ್ನೇ ಉದ್ಧರಿಸಿರುವಾಗ ಹಾಗೇನೂ ಮಾಡದ ನನ್ನನ್ನೇಕೆ ತೊರೆಯುವಿ? ಎಂಬುದು ಇಲ್ಲಿಯ ಪ್ರಾರ್ಥನೆಯ ಭಾವ.

೫೩. ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ।
ಯತ್ಪೂಜಿತಂ ಮಯಾ ವಿಷ್ಣೋ ಪರಿಪೂರ್ಣಂ ತದಸ್ತು ಮೇ ॥

ಅನು – ಮಂತ್ರರಹಿತವಾಗಿ ಕ್ರಿಯಾರಹಿತವಾಗಿ ಭಕ್ತಿಇಲ್ಲದೆಯೆ ಎಲೈ ರಮಾಪತಿಯೇ! ವಿಷ್ಣುವೇ! ನಾನು ನಿನ್ನನ್ನು ಪೂಜಿಸಿರುವೆನು. ನಿನ್ನ ಕೃಪೆಯಿಂದ ಅದು ಪೂರ್ಣವೆನ್ನಿಸಲಿ.

ವಿ : ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ।
ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥
– ಎಂಬ ಶ್ಲೋಕದ ರೂಪಾಂತರದಂತೆ ಈ ಶ್ಲೋಕವಿದೆ ಎಂಬುದು ಗಮನಾರ್ಹ.

## ದೀಪೋತ್ಸವದಲ್ಲಿ ವಿಷ್ಣುನಮಸ್ಕಾರದ ಮಹತ್ತ್ವ

೫೪. ಯಃ ಕಾವೇರ್ಯಾಂ ತುಲಾಮಾಸೇ ಸ್ನಾತಿ ವರ್ಷಶತತ್ರಯಮ್ ।
ತಸ್ಯ ದೀಪೋತ್ಸವೇ ವಿಷ್ಣೋರ್ನಮಸ್ಕಾರೋ ಹಿ ಲಕ್ಷ್ಯತೇ ॥

ಅನು – ದೀಪೋತ್ಸವಕಾಲದಲ್ಲಿ ಮಹಾವಿಷ್ಣುವಿಗೆ ನಮಸ್ಕರಿಸುವವನಿಗೆ ತುಲಾಮಾಸದಲ್ಲಿ ಕಾವೇರಿಯಲ್ಲಿ ಮೂರುನೂರುವರ್ಷಗಳ ಕಾಲ ಸ್ನಾನಮಾಡಿದ ಪುಣ್ಯಲಭಿಸುವುದು.

ವಿ – ಮೇಲಿನ ೨೧ಶ್ಲೋಕಗಳು ಆಗ್ನೇಯಪುರಾಣದವು ಎಂಬುದಾಗಿ ವ್ಯಾಖ್ಯಾನದಲ್ಲಿದೆ.

## ಮಧ್ಯಾಹ್ನಕಾಲದ ದೇವಪೂಜೆಯ ಮಹಿಮೆ

೫೫. ಮಧ್ಯಂದಿನೇ ಗತೇ ಸೂರ್ಯೇ ಯೋ ವಿಷ್ಣುಂ ಪರಿಪೂಜಯೇತ್ ।
ಸುವರ್ಣಸ್ಯ ಮಹೀ ದಾತುರ್ಯತ್ಪುಣ್ಯಂ ತದವಾಪ್ನುಯಾತ್ ॥

ಅನು – ಸೂರ್ಯ ಮಧ್ಯಾಹ್ನದಲ್ಲಿದ್ದಾಗ ಯಾವನು ವಿಷ್ಣುವನ್ನು ವಿಶೇಷವಾಗಿ ಪೂಜಿಸುವನೋ ಅವನಿಗೆ ಸುವರ್ಣಭೂಮಿಯನ್ನು ದಾನಮಾಡಿದ ಪುಣ್ಯಲಭಿಸುವುದು.

ವಿ – ೧. ಇದರಿಂದ ಮಹಾಪೂಜೆಗೆ ಮಧ್ಯಾಹ್ನಕಾಲ ವಿಶೇಷವಾಗಿ ವಿಹಿತ ಎಂಬ ಪ್ರಮೇಯ ನಿರೂಪಿತವಾಗಿದೆ.

೨. ಸುಮಧ್ವವಿಜಯದಲ್ಲಿ (೧೪/೨೬) ಶ್ರೀಮದಾಚಾರ್ಯರು ಮಧ್ಯಾಹ್ನದ ಮಹಾಪೂಜೆ ಮಾಡುತ್ತಿದ್ದ ವಿವರ ಬಂದಿರುವುದು ಇದಕ್ಕೆ ಸಂವಾದಿಯಾಗಿದೆ :

ಅಥ ದಶಶತಶೋಚಿಷ್ಯಾಪ್ರಯಾತಿ ಪ್ರತೀಚ್ಯಾಂ
ಪ್ರವಚನಮವಸಾಯ ಸ್ನಾತುಮಾಯಾತ್ ತಟಾಕಮ್ ।
ಪೃಥುಮತಿರಿಹ ತಾವಚ್ಛ್ರೇಷ್ಠಸಂಸರ್ಗಲೋಲ್ಯೈಃ
ಸಮಗಮಿ ಸಪದಿ ಸ್ವರ್ನಿಮ್ನಗಾದ್ಯೈಃ ಸುತೀರ್ಥೈಃ ॥

೩. ಮಧ್ಯಾಹ್ನದ ಪೂಜೆ - ಈ ನಿಯಮ ಧನುರ್ಮಾಸಕ್ಕೆ, ಸಾಧನದ್ವಾದಶೀ ಇತ್ಯಾದಿ ವಿಶೇಷ ಪ್ರಸಂಗಗಳಿಗೆ ಅನ್ವಯಿಸದು ಎಂಬದನ್ನು ಗಮನಿಸಬೇಕು.

೪. ಇದು ದೇವಪೂಜಾಮಾಹಾತ್ಮ್ಯಪ್ರತಿಪಾದಕಸಾರೋದ್ಧಾರಗ್ರಂಥದ ವಚನ ಎಂದು ವ್ಯಾಖ್ಯಾನದಲ್ಲಿದೆ.

### ಜೀವೇಶ್ವರಭೇದದ ಸತ್ಯತ್ವದ ಸಮರ್ಥನೆ

೫೬. ಯಥೇಶ್ವರಸ್ಯ ಜೀವಸ್ಯ ಭೇದಃ ಸತ್ಯೋ ವಿನಿಶ್ಚಯಾತ್ ।
ಏವಮೇವ ಹಿ ಮೇ ವಾಚಂ ಸತ್ಯಾಂ ಕರ್ತುಮಿಹಾರ್ಹಸಿ ॥

ಅನು – ಈಶ್ವರನಿಗೂ ಜೀವನಿಗೂ ಭೇದವು ಸತ್ಯ ಎಂಬುದು ಸುನಿರ್ಣೀತವಾಗಿರುವಂತೆ ನನ್ನ ಮಾತನ್ನೂ ಸಹ ನೀನು ಸತ್ಯವಾಗಿಸಬೇಕು.

ವಿ –೧. ಒಂದು ಮಾತನ್ನು ಸತ್ಯವೆನ್ನಿಸಲು ಪ್ರಮಾಣಮಾಡುವ ಪದ್ಧತಿ ಲೋಕರೂಢಿಯಲ್ಲಿದೆ. ಅದನ್ನು ಆಧ್ಯಾತ್ಮಿಕವಾಗಿ ಜೀವೇಶ್ವರಭೇದಸತ್ಯತ್ವಕ್ಕೆ ಅನ್ವಯಿಸುವಂತೆ ನಿರೂಪಿಸುವುದು ಈ ಶ್ಲೋಕದ ವೈಶಿಷ್ಟ್ಯ.

೨. ಜೀವೇಶ್ವರಭೇದವು ಸತ್ಯ ಎಂಬುದು ಸುನಿಶ್ಚಿತವಾದ ವಿಚಾರ ಎನ್ನುವ ಮೂಲಕ ಅಭೇದಪರ ವಾಕ್ಯಗಳಿಗೆ ಭೇದಪರವಾದ ಅರ್ಥವನ್ನೇ ಮಾಡಬೇಕು ಎಂಬ ಪ್ರಮೇಯವು ಇದರಿಂದ ಸೂಚಿತ.

೫೭. ಯಥೇಶ್ವರಶ್ಚ ಜೀವಶ್ಚ ಸತ್ಯಭೇದೌ ಪರಸ್ಪರಮ್ ।
ತೇನ ಸತ್ಯೇನ ಮಾಂ ದೇವಾಸ್ತ್ರಾಯಂತು ಸಹಕೇಶವಾಃ ॥

ಅನು – ಈಶ್ವರನು ಮತ್ತು ಜೀವರು ಪರಸ್ಪರಭಿನ್ನರಾಗಿರುವುದು ಸತ್ಯವಾದುದಷ್ಟೆ. ಈ ಸತ್ಯದಿಂದಾಗಿ ಕೇಶವ ಸಮೇತರಾದ ಸಕಲದೇವತೆಗಳೂ ನನ್ನನ್ನು ರಕ್ಷಿಸಲಿ.

ವಿ – ೧. ಜೀವೇಶ್ವರರ ಭೇದ ಶಾಸ್ತ್ರದ ಮಹಾಪ್ರಮೇಯವಾಗಿರುವುದರಿಂದ ಅಂತಹ ಪ್ರಮೇಯದ ಜ್ಞಾನ ಹೊಂದಿರುವವನನ್ನು ಶ್ರೀವಿಷ್ಣು ಮೊದಲಾದ ಎಲ್ಲ ದೇವತೆಗಳು ತಪ್ಪದೇ ರಕ್ಷಿಸುವರು ಎಂದು ಭಾವ.

೨. ಜೀವೇಶ್ವರಭೇದ ವಿಷ್ಣು ಮೊದಲಾದ ಸಕಲದೇವತೆಗಳಿಗೂ ಅತ್ಯಂತ ಪ್ರಿಯವಾದ ತತ್ತ್ವ ಎಂಬ ವಿಶೇಷಾಂಶವು ಇದರಿಂದ ಸೂಚಿತ.

೩. ಮೇಲಿನ ಎರಡು ಶ್ಲೋಕಗಳು ಭೇದಪ್ರತಿಪಾದಕಗ್ರಂಥದ ವಚನಗಳು ಎಂದು ವ್ಯಾಖ್ಯಾನದಲ್ಲಿದೆ.

### ಬ್ರಹ್ಮರುದ್ರಾದಿಗಳಿಗೆ ಭಗವಂತನ ಸಾಮ್ಯವಿಲ್ಲ

೫೮. ನಾಹಂ ನ ಚ ಶಿವೋಽನ್ಯೇ ಚ ತಚ್ಛಕ್ತ್ಯೈಕಾಂಶಭಾಗಿನಃ ।
ಬಾಲಃ ಕ್ರೀಡನಕೈರ್ಯದ್ವತ್ ಕ್ರೀಡತೇಽಸ್ಮಾಭಿರಚ್ಯುತ ॥

ಅನು – ನಾನಾಗಲೀ ಶಿವನಾಗಲೀ ಇತರರಾಗಲೀ ಆ ಶ್ರೀಹರಿಯ ಶಕ್ತಿಯ ಒಂದಂಶಕ್ಕೂ

ಸಾಟಿಯಾದವರಲ್ಲ. ಹೇ ಅಚ್ಯುತ! ನೀನು ಬಾಲಕ ಆಟಿಕೆಗಳಿಂದ ಹೇಗೋ ಹಾಗೆ ನಮ್ಮೊಂದಿಗೆ ಕ್ರೀಡಿಸುತ್ತಿರುವಿ.

ವಿ – ೧. ಇದು ಬ್ರಹ್ಮಸೂತ್ರಭಾಷ್ಯದಲ್ಲಿ ಶ್ರೀಮನ್ಮಧ್ವಾಚಾರ್ಯರಿಂದ ಉದಾಹೃತವಾದ ಪುರಾಣವಾಕ್ಯ; ಬ್ರಹ್ಮವೈವರ್ತದ ವಚನ ಎಂದು ವ್ಯಾಖ್ಯಾನದಲ್ಲಿದೆ.

## ಯತಿಗಳು ಆಶೀರ್ವದಿಸುವಂತಿಲ್ಲ

೫೯. ಯತೀನಾಂ ನಾಧಿಕಾರೋಽಸ್ತಿ ಹ್ಯಾಶಿಷಿ ವ್ಯಾಸಶಾಸನಾತ್ ।
ನಾರಾಯಣೇತಿ ಚ ಬ್ರೂಯಾತ್ ಪ್ರಣತಾಯುರ್ವಿವೃದ್ಧಯೇ ॥

ಅನು – ಯತಿಗಳು ಆಶೀರ್ವದಿಸಕೂಡದೆಂದು ಶ್ರೀವೇದವ್ಯಾಸರ ಶಾಸನ. ಅವರು ನಮಸ್ಕರಿಸಿದವರ ಆಯುರ್ವೃದ್ಧಿಗೋಸ್ಕರವಾಗ 'ನಾರಾಯಣ' ಎಂದು ನುಡಿಯಬೇಕು.

ವಿ – ೧. ತಮಗೆ ನಮಸ್ಕರಿಸಿದವರಿಗೆ ಯತಿಗಳು ಇತರರಂತೆ 'ಆಯುಷ್ಮಾನ್ ಭವ' ಎಂದು ಆಶೀರ್ವದಿಸುವಂತಿಲ್ಲ ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

೨. ಆಶೀರ್ವಾದಕ್ಕೆ ಪ್ರತಿನಿಧಿಯಾಗಿ 'ನಾರಾಯಣ, ನಾರಾಯಣ' ಎಂದು ಅವರು ನುಡಿಯ ಬೇಕು ಇದರಿಂದ ನಮಸ್ಕರಿಸಿದವರ ಆಯುಷ್ಯ ವೃದ್ಧಿಯಾಗುವುದು.

೩. ಇದರಿಂದ ಯತಿಗಳು ತಮ್ಮ ವ್ಯವಹಾರದಲ್ಲಿ ನಾರಾಯಣಸ್ಮರಣೆಗಳು ಎಂಬುದಾಗಿ ಉಲ್ಲೇಖಿಸುವುದರ ಔಚಿತ್ಯ ಅರ್ಥವಾಗುತ್ತದೆ.

೪. ಇದು ಯತಿಧರ್ಮಪ್ರತಿಪಾದಕಗ್ರಂಥವಚನ ಎಂಬುದಾಗಿ ವ್ಯಾಖ್ಯಾನದಲ್ಲಿದೆ.

## ಪಿನಾಕಿ ಶಬ್ದದ ನಿರ್ವಚನ

೬೦. ಪಿಬಂತಿ ಯೇ ನರಾ ನಾಕಂ ಮುಕ್ತಾ ಸಂಸಾರಸಾಗರಾತ್ ।
ತದಾಧಾರೋ ಯತೋ ವಿಷ್ಣುಃ ಪಿನಾಕೀತಿ ತತಃ ಸ್ಮೃತಃ ॥

ಅನು – ಮನುಷ್ಯರು ಸಂಸಾರಸಮುದ್ರದಿಂದ ಮುಕ್ತರಾಗಿ ಸುಖವನ್ನು ಅನುಭವಿಸುವರು. ಅವರಿಗೆ ಆಧಾರನಾದವನು ಮಹಾವಿಷ್ಣು. ಅದಕ್ಕೇ ಅವನಿಗೆ ಪಿನಾಕಿ ಎಂದು ಹೆಸರು.

ವಿ – ೧. ಶ್ರೀಹರಿಯು ಸರ್ವಶಬ್ದವಾಚ್ಯ ಎಂಬ ಮಹಾಪ್ರಮೇಯ ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದಲ್ಲಿ ನಿರೂಪಿತವಾಗಿದೆ.

೨. ಬ್ರಹ್ಮರುದ್ರಾದಿ ಸಕಲದೇವತೆಗಳ ನಾಮಗಳೂ ಸಹ ಶ್ರೀಹರಿಯ ನಾಮಗಳೇ ಆಗಿವೆ ಎಂಬುದು ಇದರಿಂದ ನಿರೂಪಿತ.

ಸರ್ವಚ್ಛಂದೋಭಿಧಶ್ಚೈವ ಸರ್ವದೇವಾಭಿಧಸ್ತಥಾ ।
ಸರ್ವಮುನ್ಯಭಿಧಶ್ಚೈವ ಸರ್ವವಸ್ತ್ವಭಿಧೋ ಹರಿಃ ॥ (ಐತರೇಯಭಾಷ್ಯ)

೩. ಪಿನಾಕಿ ಎಂಬ ರುದ್ರದೇವರ ಹೆಸರಿನ ಸಮನ್ವಯ ಇಲ್ಲಿ ಬಂದಿದೆ.

೪. ಪಿನಾಕವೆಂಬ ಧನುಸ್ಸನ್ನು ಕೈಯಲ್ಲಿ ಹಿಡಿದಿರುವುದರಿಂದ ರುದ್ರದೇವರಿಗೆ ಪಿನಾಕಿ ಎಂದು ಹೆಸರು ಎಂಬದು ಸಾಮಾನ್ಯವಾದ ಅರ್ಥ. ಮೋಕ್ಷದಲ್ಲಿ ಸುಖವನ್ನು ಅನುಭವಿಸುವ ಮುಕ್ತರಿಗೆ ಶ್ರೀಹರಿಯು ಸ್ವಾಮಿ ಆದ್ದರಿಂದ ಅವನಿಗೆ ಪಿನಾಕಿ ಎಂದು ಹೆಸರು ಎಂಬದು ಇಲ್ಲಿ ಪಿನಾಕಿಶಬ್ದವನ್ನು ಶ್ರೀಹರಿಗೆ ಸಮನ್ವಯ ಮಾಡಿರುವ ರೀತಿ.

೪. ಇದು ಬ್ರ.ಸೂ.ಭಾದಲ್ಲಿ (೧/೩/೩) ಉಲ್ಲೇಖಿಸಿರುವ ಬ್ರಹ್ಮಾಂಡಪುರಾಣದ ವಚನ.

## ಜೀವಬ್ರಹ್ಮರ ತಾದಾತ್ಮ್ಯದ ಗೌಣತ್ವ

೬೧. ಏವಮೇವ ಹಿ ಜೀವೋऽಪಿ ತಾದಾತ್ಮ್ಯಂ ಪರಮಾತ್ಮನಾ ।
ಪ್ರಾಪ್ತೋऽಪಿ ನಾಸೌ ಭವತಿ ಸ್ವಾತಂತ್ರ್ಯಾದಿವಿಶೇಷಣಾತ್ ।

ಅನು – ಇದೇ ರೀತಿಯಲ್ಲಿ ಜೀವನು ಪರಮಾತ್ಮನೊಂದಿಗೆ ತಾದಾತ್ಮ್ಯವನ್ನು ಹೊಂದಿದಾಗಲೂ ಅವನು ಪರಮಾತ್ಮನಾಗಲಾರ. ಸ್ವಾತಂತ್ರ್ಯಾದಿ ವಿಶೇಷಣಗಳನ್ನು ಹೊಂದಿದವನು ಪರಮಾತ್ಮನಲ್ಲವೇ!

ವಿ – ಇಲ್ಲಿ ತಾದಾತ್ಮ್ಯ ಎಂದರೆ ಸಾಯುಜ್ಯಮುಕ್ತಿ ಎಂದು ಅರ್ಥ.

## ಭಗವಂತನಿಗೆ ಸ್ವಪ್ರಯೋಜನವಿಲ್ಲ

೬೨. ಪೂರ್ಣಾನಂದಸ್ಯ ತಸ್ಯೇಹ ಪ್ರಯೋಜನಮತಿಃ ಕುತಃ ।

ಅನು – ಪೂರ್ಣಾನಂದನಾದ ಪರಮಾತ್ಮನಿಗೆ ಪ್ರಯೋಜನದ ಬುದ್ಧಿಯೆಲ್ಲಿದು?

ವಿ – ೧. ಶ್ರೀಹರಿಯು ಸೃಷ್ಟ್ಯಾದಿ ಸಕಲಮಹಾಕಾರ್ಯಗಳನ್ನೂ ಸಹ ಯಾವುದೇ ಪ್ರಯೋಜನದ ಅಪೇಕ್ಷೆಯನ್ನು ಹೊಂದದೇ ಮಾಡುವನು ಎಂದು ಭಾವ. ಇದಕ್ಕೆ ಅವನು ಪೂರ್ಣಾನಂದನಾಗಿರುವುದೇ ಕಾರಣ. ಪೂರ್ಣನಾದವನಿಗೆ ಕೊರತೆಯೆಲ್ಲಿಯದು ಎಂದಮೇಲೆ ಅವನು ಬೇರೊಂದು ಪ್ರಯೋಜನವನ್ನು ಹೇಗೆ ತಾನೆ ಬಯಸಿಯಾನು ಎಂದರ್ಥ.

೨. ಇದು ಬ್ರಹ್ಮಸೂತ್ರಗಳ 'ನ ಪ್ರಯೋಜನತ್ವಾಧಿಕರಣ'ದ ವಿವರಣೆಯಾಗಿದೆ.

೩. ಮೇಲಿನ ಎರಡು ಶ್ಲೋಕಗಳು ಬ್ರಹ್ಮವೈವರ್ತಪುರಾಣದ ವಚನಗಳು.

## ಶ್ರೀಹರಿಯ ಅನುಗ್ರಹದಿಂದಲೇ ದ್ರವ್ಯಾದಿಗಳ ಅಸ್ತಿತ್ವ

೬೩. ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥

ಅನು – ದ್ರವ್ಯ, ಕರ್ಮ, ಕಾಲ, ಸ್ವಭಾವ ಹಾಗೂ ಜೀವ ಇವರೆಲ್ಲ ಶ್ರೀಹರಿಯ ಅನುಗ್ರಹದಿಂದಲೇ ಇರುವರು. ಅವನು ಉಪೇಕ್ಷಿಸಿದಲ್ಲಿ ಇರಲಾರರು.

ವಿ – ೧. ಇದು ಶ್ರೀಮದಾಚಾರ್ಯರು ಉಲ್ಲೇಖಿಸಿರುವ ಶ್ರೀಮದ್ಭಾಗವತಪುರಾಣದ ವಾಕ್ಯ. (೨/೫/೧೪)

೨. ದ್ರವ್ಯಾದಿಗಳು ಅನಾದಿಪದಾರ್ಥಗಳಾದರೂ ಅವುಗಳ ಅಸ್ತಿತ್ವಕ್ಕೆ ಶ್ರೀಹರಿಯ ಅನುಗ್ರಹ ಅತ್ಯಗತ್ಯ ಎಂಬ ಮಹಾಪ್ರಮೇಯ ಇಲ್ಲಿ ನಿರೂಪಿತವಾಗಿದೆ. ಇದರಿಂದ ನಿತ್ಯಪದಾರ್ಥಗಳ ನಿತ್ಯತ್ವವೂ ಸಹ ಶ್ರೀಹರಿಯ ಅಧೀನ ಎಂಬ ತತ್ವ ಸ್ಫುಟಪಡುವುದು.

## ಜೀವಬ್ರಹ್ಮೈಕ್ಯದ ಅರ್ಥ

೬೪. ಭಿನ್ನಾ ಜೀವಾಃ ಪರೋ ಭಿನ್ನಸ್ತಥಾಽಪಿ ಜ್ಞಾನರೂಪತಃ ।
ಪ್ರೋಚ್ಯಂತೇ ಬ್ರಹ್ಮರೂಪೇಣ ವೇದವಾದೇಷು ಸರ್ವಶಃ ॥

ಅನು – ಜೀವರು ಭಿನ್ನರು; ಪರಮಾತ್ಮನೂ ಭಿನ್ನ; ಆದರೂ ಸಹ ಎಲ್ಲರೂ ಜ್ಞಾನಸ್ವರೂಪರಾದ್ದರಿಂದ ವೇದಗಳ ತೋರಿಕೆಯ ಅರ್ಥದಲ್ಲಿ ಜೀವರು ಬ್ರಹ್ಮ ಎಂಬುದಾಗಿ ಹೇಳಲ್ಪಡುವರು.

ವಿ – ೧. ಜೀವೇಶ್ವರರ ಭೇದ ನಿತ್ಯವಾದುದು; ಎಂದೂ ಜೀವ ಬ್ರಹ್ಮನಾಗಲಾರ; ಆದರೂ ಜೀವರನ್ನು ಬ್ರಹ್ಮನೆಂದು ವೇದಗಳಲ್ಲಿ ಹೇಳಿದಂತೆ ತೋರುವುದುಂಟು; ಅದಕ್ಕೆ ಜೀವರೂ ಸಹ ಪರಬ್ರಹ್ಮನಂತೆ ಯತ್ಕಿಂಚಿತ್ ಜ್ಞಾನಾದಿಗುಣದಿಂದ ಕೂಡಿದವರು ಎಂದು ಮಾತ್ರವೆ ಅರ್ಥ; ವಾಸ್ತವಿಕವಾಗಿ ಅವರು ಎಂದೂ ಬ್ರಹ್ಮತ್ವ ಹೊಂದಲು ಸಾಧ್ಯವೇ ಇಲ್ಲ ಎಂಬದು ತತ್ತ್ವ.

೨. ಇಲ್ಲಿ ವೇದವಾದ ಎಂಬುದಕ್ಕೆ ವೇದದ ಆಪಾತತಃ ಅರ್ಥ ಎಂದು ಭಾವ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಶ್ರೀಮದಾಚಾರ್ಯರು ಭಗವದ್ಗೀತೆಯ ವೇದವಾದರತಾಃ ಪಾರ್ಥ ಎಂಬ ಶ್ಲೋಕದ ವಿವರಣೆಯಲ್ಲಿ ತಿಳಿಸಿರುವರು.

೩. ಇದು ಭವಿಷ್ಯತ್ಪರ್ವದ ವಾಕ್ಯ.

## ಶ್ರೀಹರಿನೈವೇದ್ಯದಿಂದ ಪಿತೃಗಳ ಪೂಜೆ

೬೫. ಪೂಜಯಾಮಾಸ ದೇವೇಶಂ ತಚ್ಛೇಷೇಣ ಪಿತಾಮಹಾನ್ ||

ಅನು – ದೇವೇಶನಾದ ಶ್ರೀಹರಿಯನ್ನು ಪೂಜಿಸಿ ಅವನ ನೈವೇದ್ಯಶೇಷದಿಂದ ಪಿತೃಗಳನ್ನು ಪೂಜಿಸಿದನು.

ವಿ – ಶ್ರೀಹರಿಯ ನೈವೇದ್ಯಶೇಷದಿಂದಲೇ ಅನ್ಯದೇವತೆಗಳನ್ನೂ ಪಿತೃಗಳನ್ನೂ ಆರಾಧಿಸಬೇಕು. ಇಲ್ಲವಾದಲ್ಲಿ ಅವರು ಆ ಪೂಜೆಯನ್ನು ಸ್ವೀಕರಿಸುವುದಿಲ್ಲ ಎಂಬ ವಿಶೇಷಾಂಶ ಇಲ್ಲಿ ಬಂದಿದೆ.

೬೬. ಪಂಚರಾತ್ರವಿದೋ ಮುಖ್ಯಾಸ್ತಸ್ಯ ಗೇಹೇ ಮಹಾತ್ಮನಃ |
ಪ್ರಾಪಣಂ ಭಗವದ್ಭುಕ್ತಂ ಭುಂಜತೇ ಚಾಗ್ರಭೋಜನಮ್ ||

ಅನು – ಪಂಚರಾತ್ರವನ್ನು ಬಲ್ಲಂತಹ ಪ್ರಧಾನವ್ಯಕ್ತಿಗಳು ಮಹಾತ್ಮನಾದವನ ಮನೆಯಲ್ಲಿ ಶ್ರೀಹರಿಗೆ ಮೊದಲು ಸಮರ್ಪಿಸಿದ ನೈವೇದ್ಯದ ಶೇಷವನ್ನೇ ಸ್ವೀಕರಿಸುವರು.

ವಿ – ೧. ಇದೂ ಸಹ ದೇವತೆಗಳು ಪಿತೃಗಳು ಶ್ರೀಹರಿಯ ನೈವೇದ್ಯಶೇಷವನ್ನೇ ಸರ್ವಥಾ ಸ್ವೀಕರಿಸುವರು ಎಂಬ ಪ್ರಮೇಯಕ್ಕೆ ಸಾಧಕವಾದುದು.

೨. ಮೇಲಿನ ಎರಡು ಶ್ಲೋಕಗಳು ಮಹಾಭಾರತದ ಶಾಂತಿಪರ್ವದ ಮೋಕ್ಷಧರ್ಮ ಎಂಬ ಉಪಪರ್ವದ ವಚನಗಳು.

## ಶ್ರೀಹರಿಯ ನಿರ್ಮಾಲ್ಯಾದಿಗಳ ಹಿರಿಮೆ

೬೭. ಹೃದಿ ರೂಪಂ ಮುಖೇ ನಾಮ ನೈವೇದ್ಯಮುದರೇ ಹರೇಃ |
ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಯಸ್ಯ ಸೋಽಚ್ಯುತಃ ||

ಅನು – ಹೃದಯದಲ್ಲಿ ಶ್ರೀಹರಿಯ ರೂಪ, ಮುಖದಲ್ಲಿ ಶ್ರೀಹರಿಯ ನಾಮ, ಉದರದಲ್ಲಿ ಶ್ರೀಹರಿಯ ನೈವೇದ್ಯ, ಶಿರಸ್ಸಿನಲ್ಲಿ ಶ್ರೀಹರಿಯ ಪಾದೋದಕ ನಿರ್ಮಾಲ್ಯಗಳನ್ನು ಹೊಂದಿರುವವನು ಎಂದೂ ಸಹ ಚ್ಯುತನಾಗಲಾರ.

ವಿ – ೧. ಇದು ಶ್ರೀಕೃಷ್ಣಾಮೃತಮಹಾರ್ಣವದಲ್ಲಿ ಶ್ರೀಮದಾಚಾರ್ಯರಿಂದ ಉದಾಹೃತವಾಗಿರುವ ಪುರಾಣಶ್ಲೋಕ (ಸ್ಕಾಂದಪುರಾಣದ ವಚನ ಎಂದು ವ್ಯಾಖ್ಯಾನದಲ್ಲಿದೆ).

೨. ಶ್ರೀಹರಿಯ ನಿರ್ಮಾಲ್ಯಾದಿಗಳ ಧಾರಣೆ, ಮೋಕ್ಷ ಸಾಧನಕ್ಕೆ ನೆರವಾಗುವ ತತ್ತ್ವಜ್ಞಾನ ಪ್ರಾಪ್ತಿಗೆ ಅಗತ್ಯ ಎಂದರ್ಥ.

೩. ಇಲ್ಲಿ ಅಚ್ಯುತನಾಗುವನು ಎಂದರೆ ನಾಶರಹಿತನಾಗುವನು ಎಂದು ಭಾವ.

೪. ಶ್ರೀಜಗನ್ನಾಥದಾಸರ :

**ಹೃದಯದಿ ರೂಪವು ವದನದಿ ನಾಮವು - ಉದರದಿ ನೈವೇದ್ಯವು ಶಿರದಿ**
**ಪದಜಲ ನಿರ್ಮಾಲ್ಯವನೆ ಧರಿಸಿ ಕೋ-ವಿದರ ಸದನ ಹೆಗ್ಗದವ ಕಾಯ್ವದೆ**

– ಎಂಬ ಪದ್ಯ (ಫಲವಿದು ಬಾಳ್ದುದಕೆ -೭)ಇದರ ಅನುವಾದದಂತಿದೆ ಎಂಬುದು ಗಮನಾರ್ಹ.

## ವಿಪ್ರ, ಅಗ್ನಿಗಳ ಮೂಲಕ ಭಗವಂತನ ಭೋಜನ

೬೮. **ಮದರ್ಪಿತಂ ಪ್ರಗೃಹ್ಣಾಮಿ ಯಜ್ಞಹೋಮದ್ವಿಜಾತಿಷು ।**
**ಅಹಂ ಯದಿ ನ ಗೃಹ್ಣಾಮಿ ತೇಷಾಂ ಪ್ರಗ್ರಹಣಂ ಕುತಃ ॥**

ಅನು – ಯಜ್ಞ, ಹೋಮ ಮತ್ತು ಬ್ರಾಹ್ಮಣರಲ್ಲಿ ನೆಲೆಸಿದ್ದು ನಾನು ಅವರಿಗೆ ಅರ್ಪಿಸುವುದನ್ನು ಸ್ವೀಕರಿಸುವೆನು; ನಾನು ಸ್ವೀಕರಿಸದಿದ್ದಲ್ಲಿ ಅವನ್ನೆಲ್ಲಾ ಅವರೆಂತು ಸ್ವೀಕರಿಸಿಯಾರು?

ವಿ – ೧. ಯಜ್ಞ ಹೋಮಾದಿಗಳಲ್ಲಿ ಶ್ರೀಹರಿಯ ಪೂಜೆ ವಿಹಿತ. ಆಗ ಶ್ರೀಹರಿಯು ಆ ಪೂಜೆಯನ್ನು ಸ್ವೀಕರಿಸಲು ಕಾರಣವನ್ನು ಇಲ್ಲಿ ತಿಳಿಸಿರುವರು. ಶ್ರೀಹರಿಯು ಅದನ್ನು ಸ್ವೀಕರಿಸುವುದರಿಂದ ಇತರರು ಅದನ್ನು ಸ್ವೀಕರಿಸುವಂತಾಗುವುದು. ಇಲ್ಲವಾದಲ್ಲಿ ಅವರಾರೂ ಅದನ್ನು ಸ್ವೀಕರಿಸಲಾರರು ಎಂದರ್ಥ.

೨. ಇದರಿಂದ ಅನ್ಯದೇವತೆಗಳ ನೈವೇದ್ಯವನ್ನು ಮಾಡುವಾಗಲೂ ಅದನ್ನು ಮುಂಚಿತವಾಗಿ ಶ್ರೀಹರಿಗೆ ಸಮರ್ಪಿಸಲೇಬೇಕು ಎಂಬ ವಿಶೇಷಾಂಶ ಸೂಚಿತ.

೬೯. **ಭಕ್ತಾನಾಮದನಾರ್ಥಾಯ ಗೃಹ್ಣಾಮಿ ಕಮಲಾಸನ ।**

ಅನು – ಎಲೈ ಬ್ರಹ್ಮದೇವರೇ! ಭಕ್ತರು ತಿನ್ನಲು ಸಾಧ್ಯವಾಗಲೆಂದೇ ನಾನು ನನ್ನ ಪ್ರತಿಮೆಗೆ ಅರ್ಪಿಸುವ ನೈವೇದ್ಯವನ್ನು ಸ್ವೀಕರಿಸುವೆನು.

ವಿ – ಮೇಲಿನ ಎರಡು ಶ್ಲೋಕಗಳು ಮತ್ಸ್ಯಪುರಾಣದ ವಚನಗಳು.

## ಗೋದಾವರೀ ಮಾಹಾತ್ಮ್ಯ

೭೦. **ವರಂ ಗೋದಾವರೀತೀರೇ ನೀರೇಣೋದರಪೂರಣಮ್ ।**
**ಅನ್ಯತ್ರ ಶರ್ಕರಾಯುಕ್ತಂ ಪಾಯಸಂ ತು ಪರಿತ್ಯಜೇತ್ ॥**

ಅನು – ಗೋದಾವರೀ ತೀರದಲ್ಲಿ ನೀರು ಕುಡಿದು ಹೊಟ್ಟೆತುಂಬಿಸಿಕೊಳ್ಳುವುದು ಮೇಲು; ಬೇರೆಡೆ ಸಕ್ಕರೆ ಹಾಕಿದ ಪಾಯಸವನ್ನಾದರೂ ತೊರೆಯಬೇಕು.

ವಿ – ೧. ಇದು ಅಪೂರ್ವರೀತಿಯ ಗೋದಾವರೀ ಮಹಿಮೆಯ ವರ್ಣನೆ. ಗೋದಾವರಿಯು ಗಂಗೆಯ ಮತ್ತೊಂದು ಕವಲಾದ್ದರಿಂದ ಅದರ ತೀರದಲ್ಲಿ ಎಂತಹ ದಾರಿದ್ರ್ಯವನ್ನಾದರೂ ಅನುಭವಿಸುವುದೂ ಸಹ ಶ್ರೀಹರಿಪ್ರೀತಿಗೆ ಸಾಧನ. ಇತರೆಡೆಯ ಭಾಗ್ಯಕ್ಕಿಂತ ಗೋದಾವರೀ ತೀರದ ಬಡತನವೇ ಶ್ರೇಯಸ್ಕರ ಎಂದರ್ಥ.

೨. ಗೋದಾವರೀ ತೀರದಲ್ಲಿ ನೆಲೆಸುವುದು ಅತ್ಯಂತ ಪುಣ್ಯಕರ ಎಂಬುದು ಮುಖ್ಯ-ತಾತ್ಪರ್ಯ.

### ಸಿಂಹರಾಶಿಯಲ್ಲಿ ಗುರುವಿದ್ದಾಗ ಗೋದಾವರೀ ಸ್ನಾನದ ಮಹತ್ತ್ವ

೭೧. ಭಾಗೀರಥ್ಯಾಂ ಕುರುಕ್ಷೇತ್ರೇ ಪ್ರಭಾಸೇ ಸೂರ್ಯಪರ್ವಣಿ।
ತದ್ಗೌತಮ್ಯಾಂ ಸಕೃತ್ ಸ್ನಾತ್ವಾ ಸಿಂಹಸ್ಥೇ ಚ ಬೃಹಸ್ಪತೌ ॥

ಅನು – ಸೂರ್ಯಗ್ರಹಣಕಾಲದಲ್ಲಿ ಗಂಗಾ, ಕುರುಕ್ಷೇತ್ರ ಪ್ರಭಾಸಕ್ಷೇತ್ರಗಳಲ್ಲಿ ಮೀಯುವ ಫಲ ಗುರುವು ಸಿಂಹರಾಶಿಯಲ್ಲಿದ್ದಾಗ ಗೋದಾವರಿಯಲ್ಲಿ ಒಮ್ಮೆ ಸ್ನಾನ ಮಾಡುವ ಮೂಲಕ ಲಭಿಸುವುದು.

ವಿ – ೧. ಗುರುವು ಸಿಂಹರಾಶಿಯಲ್ಲಿದ್ದಾಗ ಗೋದಾವರೀ ಸ್ನಾನ ವಿಶೇಷಫಲಕಾರಕ ಎಂಬದು ಶಾಸ್ತ್ರಗಳ ಘೋಷಣೆ; ಅದನ್ನು ಇಲ್ಲಿ ಅತ್ಯಂತ ಕಾವ್ಯಮಯವಾಗಿ ವರ್ಣಿಸಿರುವರು :

ಸಿಂಹಸ್ಥಿತೇ ಗೌತಮೀ ದೇವಿ ಭದ್ರೇ ಬ್ರಹ್ಮಾಂಡಭಾಂಡೋಪಗತಾನಿ ಪುಣ್ಯೇ।
ಭುವ್ಯಂತರಿಕ್ಷೇ ದಿವಿ ನಾಗಲೋಕೇ ಸರ್ವಾಣಿ ತೀರ್ಥಾನಿ ತವೋದರೇ ಸ್ಯುಃ ॥
ತಿಸ್ರಃ ಕೋಟ್ಯೋಽರ್ಧಕೋಟ್ಯಶ್ಚ ತೀರ್ಥಾನಿ ಭುವನತ್ರಯೇ।
ಆಯಾಂತಿ ಗೌತಮೀಂ ಸ್ನಾತುಂ ಸಿಂಹಸ್ಥೇ ಚ ಬೃಹಸ್ಪತೌ ॥
ಷಷ್ಟಿವರ್ಷಸಹಸ್ರಾಣಿ ಭಾಗೀರಥ್ಯವಗಾಹನಮ್।
ಸಕೃದ್ಗೋದಾವರೀಸ್ನಾನಂ ಸಿಂಹಸ್ಥೇ ಚ ಬೃಹಸ್ಪತೌ ॥
ಕಥಂಚಿದಪಿ ಸಿಂಹಸ್ಥೇ ಗುರೌ ಸ್ನಾನಂ ಸಮಾಚರೇತ್।
ಗೌತಮ್ಯಾಂ ಜನ್ಮನಃ ಪುಂಸಾಂ ಯತ್ಫಲಂ ಜೀವಿತಸ್ಯ ತು ॥

ಛಲಾರಿ ನರಸಿಂಹಾಚಾರ್ಯರ ಸ್ಮೃತ್ಯರ್ಥಸಾಗರದಲ್ಲಿ ಉದಾಹೃತಪ್ರಮಾಣಗಳು

೨. ಬ್ರಹ್ಮಾಂಡದಲ್ಲಿನ ಸಕಲತೀರ್ಥಗಳೂ, ಗುರುವು ಸಿಂಹರಾಶಿಯಲ್ಲಿರುವಾಗ ಗೋದಾವರಿಯಲ್ಲಿ ನೆಲೆಸುತ್ತವೆ. ಅರವತ್ತು ಸಾವಿರವರ್ಷಗಳಷ್ಟು ಕಾಲ ಗಂಗಾಸ್ನಾನ ಮಾಡಿದ

ಫಲವು ಆಗ ಗೋದಾವರಿಯಲ್ಲಿ ಒಮ್ಮೆ ಸ್ನಾನ ಮಾಡಿದರೆ ಲಭಿಸುತ್ತದೆ. ಆದ್ದರಿಂದ ಹೇಗಾದರೂ ಆಗ ಗೋದಾವರೀ ಸ್ನಾನವನ್ನು ಮಾಡಲೇಬೇಕು. ಅದು ನಮ್ಮ ಬದುಕಿಗೇ ಸಾರ್ಥಕ್ಯ ತಂದು ಕೊಡುತ್ತದೆ ಎಂಬುದು ವಿಶೇಷ.

೩. ಇಲ್ಲಿ ಗೌತಮೀ ಎಂದರೆ ಗೋದಾವರೀ ಎಂದರ್ಥ. ಭಗೀರಥನಿಂದಾಗಿ ಭೂಮಿಗೆ ಇಳಿದ ಗಂಗೆಯ ಕವಲು ಭಾಗೀರಥೀ ಎನ್ನಿಸಿದಂತೆ ಗೌತಮಮುನಿಯಿಂದಾಗಿ ಭೂಮಿಗೆ ಹರಿದು ಬಂದ ಗಂಗೆಯ ಮತ್ತೊಂದು ಕವಲು ಗೌತಮೀ; ಮೃತ್ಗೋವಿಗೆ ಪ್ರಾಣ ನೀಡಿದ ಕಾರಣದಿಂದ ಇದು ಗೋದಾವರೀ ಎಂದು ಪ್ರಸಿದ್ಧವಾಗಿದೆ.

೭೨. **ಕಥಂಚಿದ್ಯದಿ ಸಿಂಹಸ್ಥೇ ಗುರೌ ಸ್ನಾನಂ ಸಮಾಚರೇತ್ ।**
**ಗೌತಮ್ಯಾಂ ಜನ್ಮನಃ ಪುಂಸಾಂ ತತ್ ಫಲಂ ಜೀವಿತಸ್ಯ ತತ್ ॥**

ಅನು – ಸಿಂಹರಾಶಿಯಲ್ಲಿ ಗುರುವಿದ್ದಾಗ ಹೇಗಾದರೂ ಗೋದಾವರಿಯಲ್ಲಿ ಸ್ನಾನ ಮಾಡಲೇಬೇಕು; ಅದು ಮಾನವನಿಗೆ ಹುಟ್ಟಿನ ಹಾಗು ಜೀವನದ ಫಲ.

ವಿ – ಸಿಂಹರಾಶಿಯಲ್ಲಿ ಗುರುವಿದ್ದಾಗ ಗೋದಾವರಿಯಲ್ಲಿ ಮೀಯುವುದು ಜನ್ಮದ ಸಾರ್ಥಕ್ಯಕ್ಕೂ ಬಾಳಿನ ಫಲಕ್ಕೂ ಸಾಧನ ಎಂದರ್ಥ.

೭೩. **ಜ್ಞಾನತೋಽಜ್ಞಾನತೋ ವಾಽಪಿ ಕೃತಾನ್ಯೇನಾಂಸಿ ಸಿಂಹಗೇ ।**
**ಗುರೌ ತಾನಿ ವಿನಶ್ಯಂತಿ ಗೌತಮ್ಯಾಂ ಸ್ನಾನತಃ ಸಕೃತ್ ॥**

ಅನು – ಸಿಂಹರಾಶಿಯಲ್ಲಿ ಗುರುವಿದ್ದಾಗ ಗೋದಾವರಿಯಲ್ಲಿ ಒಮ್ಮೆ ಸ್ನಾನ ಮಾಡಿದರೂ ತಿಳಿದೋ ತಿಳಿಯದೆಯೋ ಮಾಡಿದ ಎಲ್ಲ ಪಾಪಗಳು ನಾಶವಾಗುವವು.

ವಿ – ಮೇಲಿನ ನಾಲ್ಕು ಶ್ಲೋಕಗಳು ಗೋದಾವರೀಮಾಹಾತ್ಮ್ಯಪ್ರತಿಪಾದಕಗ್ರಂಥದ ವಚನಗಳು ಎಂದು ವ್ಯಾಖ್ಯಾನದಲ್ಲಿದೆ.

೭೪. **ತಿಸ್ರಃ ಕೋಟ್ಯರ್ಧಕೋಟ್ಯಸ್ತು ತೀರ್ಥಾನಿ ಭುವನತ್ರಯೇ ।**
**ಆಯಾಂತಿ ಗೌತಮೀಂ ಸ್ನಾತುಂ ಸಿಂಹಸ್ಥೇ ಚ ಬೃಹಸ್ಪತೌ ॥**

ಅನು – ಮೂರು ಲೋಕದಲ್ಲಿನ ಮೂರುವರೆ ಕೋಟಿ ತೀರ್ಥಗಳೆಲ್ಲ ಸಿಂಹರಾಶಿಯಲ್ಲಿ ಗುರುವಿದ್ದಾಗ ಗೋದಾವರಿಯಲ್ಲಿ ಮೀಯಲೆಂದು ಆಗಮಿಸುವವು.

ವಿ – ಸಕಲತೀರ್ಥಾಭಿಮಾನಿ ದೇವತೆಗಳು ಮಿಂದು ಪವಿತ್ರವಾಗುವಂತಹ ಅಪೂರ್ವತೀರ್ಥ ಸಿಂಹರಾಶಿಯಲ್ಲಿ ಗುರುವಿದ್ದಾಗ ಗೋದಾವರಿ ಎಂದರ್ಥ.

೭೫. ಸ್ನಾನೇನೈಕೇನ ಗೌತಮ್ಯಾಂ ವಿಧಿನಾ ಮುನಿಸತ್ತಮ ।
ಅಶ್ವಮೇಧೈರ್ದ್ವಾದಶಭಿರ್ಯತ್ ಕೃತಂ ಪುಣ್ಯಸಂಚಯಮ್ ।
ತತ್ ಸರ್ವಂ ಸಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥

ಅನು – ವಿಧ್ಯುಕ್ತವಾಗಿ ಒಮ್ಮೆ ಗೋದಾವರಿಯಲ್ಲಿ ಸ್ನಾನ ಮಾಡುವುದರಿಂದ ಹನ್ನೆರಡು ಅಶ್ವಮೇಧಯಾಗಗಳಿಂದ ಲಭಿಸುವ ಪುಣ್ಯವೆಲ್ಲ ಲಭಿಸಿಬಿಡುವುದು; ಈ ಬಗ್ಗೆ ವಿಚಾರ ಮಾಡಬೇಕಿಲ್ಲ.

## ಗೋದಾವರೀ ಮಾಹಾತ್ಮ್ಯ

೭೬. ಅಂಹಾಂಸಿ ಹಂಸಿ ಸತತಂ ಕಿಲ ರಾಶಿಪುಣ್ಯಂ
ಸಿಂಹಸ್ಥಿತೇ ಸುರಗುರೌ ನ ತದಂಬ ಯಾಚೇ ।
ಗೋದೇ ಸಮಸ್ತಫಲದೇ ದಿಶ ಕೃಷ್ಣಪಾದೇ
ಭಕ್ತಿಂ ವಿರಕ್ತಿಮಿತರತ್ರ ಪರತ್ರ ಮುಕ್ತಿಮ್ ॥

ಅನು – ಎಲೈ ಗೋದಾವರಿಯೇ! ನೀನು ಸರ್ವಕಾಲದಲ್ಲೂ (ಜನಗಳ) ದುರಿತಗಳನ್ನು ಪರಿಹರಿಸುವಿ ಅಲ್ಲವೆ. ಪುಣ್ಯವನ್ನು ಸಹ ಕೊಡುವೆಯಲ್ಲವೆ! ಅಮ್ಮ! ದೇವಗುರುಗಳಾದ ಬೃಹಸ್ಪತ್ಯಾಚಾರ್ಯರು ಸಿಂಹರಾಶಿಯಲ್ಲಿರುವಾಗ (ನೀನು ಈ ಪಾಪನಾಶ ಮತ್ತು ಪುಣ್ಯದಾನಗಳನ್ನು ಇನ್ನೂ ವಿಶೇಷವಾಗಿ ಮಾಡುವಿ, ಆದರೂ) ನಾನು ಅವುಗಳನ್ನು ಬೇಡುವುದಿಲ್ಲ. ಆದರೆ ಸಕಲಫಲಗಳನ್ನು ಕೊಡುವಂತಹ ಹೇ ಗೋದಾವರೀ! ಶ್ರೀಕೃಷ್ಣನ ಚರಣಗಳಲ್ಲಿ ಭಕ್ತಿಯನ್ನೂ ಸಂಸಾರದಲ್ಲಿ ವಿರಕ್ತಿಯನ್ನೂ ಪರಲೋಕದಲ್ಲಿ ಮುಕ್ತಿಯನ್ನೂ ಕರುಣಿಸು.

ವಿ – ಈ ಶ್ಲೋಕ ಶ್ರೀವಾದಿರಾಜಸ್ವಾಮಿಗಳ ತೀರ್ಥಪ್ರಬಂಧದಲ್ಲೂ ಕಂಡು ಬರುತ್ತದೆ. ಇಲ್ಲಿ ಶ್ರೀಸತ್ಯಾಭಿನವರು ಇದನ್ನು ಗೋದಾವರೀ ಮಾಹಾತ್ಮ್ಯಪ್ರತಿಪಾದಕವಾದ ಪುರಾಣಶ್ಲೋಕವೆಂಬಂತೆ ಉಲ್ಲೇಖಿಸಿರುವರು; ಇದರಿಂದ ಮೂಲತಃ ಇದು ಪುರಾಣಶ್ಲೋಕವೇ ಆಗಿದ್ದು ಶ್ರೀವಾದಿರಾಜಸ್ವಾಮಿಗಳಿಂದ ತೀರ್ಥಪ್ರಬಂಧದಲ್ಲಿ ಅಳವಡಿಸಲ್ಪಟ್ಟಿದೆಯೆಂದು ತಿಳಿಯಬಹುದು.

## ವಿಷ್ಣುಧರ್ಮದಲ್ಲಿ ಬಯಕೆಯೂ ಸಹ ನಿಷ್ಫಲವಾಗದು

೭೭. ಶ್ರೀಧರ್ಮಧಾಮಯಾತ್ರಾಯೈ ಇಯಾಸಾ ಚಾಥ ಸಂಸೃತೇಃ ।
ಸಂತಾರಯತಿ ಜಂತೂಂಸ್ತತ್ಕ್ಷೇತ್ರವಾಸಸ್ತು ಕಿಂಪುನಃ ॥

ಅನು – ಶ್ರೀಧರ್ಮಸ್ವರೂಪಿಯಾದ ಭಗವಂತನ ಯಾತ್ರೆಗೋಸ್ಕರ ಬಯಸುವುದೂ ಸಹ ಪ್ರಾಣಿಗಳಿಗೆ ಸಂಸಾರದಿಂದ ಬಿಡುಗಡೆಗೆ ಸಾಧನ ಎಂದ ಮೇಲೆ ಆ ಕ್ಷೇತ್ರದಲ್ಲಿ ನೆಲೆಸುವುದು ಸಂಸಾರಮೋಚಕ ಎಂದು ಹೇಳಬೇಕೇ!

ವಿ – ೧. ಇಲ್ಲಿ ಶ್ರೀಧರ್ಮಧಾಮ ಎಂಬ ಕ್ಷೇತ್ರದ ಉಲ್ಲೇಖವಿದೆ.

೨. ಈ ಶ್ಲೋಕವು 'ಪ್ರಾರಂಭಮಾತ್ರಮಿಚ್ಛಾ ವಾ ವಿಷ್ಣುಧರ್ಮೇ ನ ನಿಷ್ಫಲಾ' ಎಂಬ ಗೀತಾತಾತ್ಪರ್ಯೋದಾಹೃತ ಪ್ರಮಾಣವಚನಕ್ಕೆ ಸಂವಾದಿಯಂತಿದೆ.

### ರಹಸ್ಯತತ್ತ್ವದ ಅನುಷ್ಠಾನದಿಂದ ವಿಷ್ಣುಸಾಯುಜ್ಯಪ್ರಾಪ್ತಿ

**೭೮. ಅಥ ಚೈಕಂ ಹಿತಂ ವಚ್ಮಿ ಗುಹ್ಯಾದ್ಗುಹ್ಯತಮಂ ಶೃಣು ।**
**ಯದನುಷ್ಠಾಯ ನಿಷ್ಪಾಪೋ ವಿಷ್ಣುಸಾಯುಜ್ಯಮಾಪ್ನುಯಾತ್ ॥**

ಅನು – ನಿನಗೀಗ ರಹಸ್ಯದಲ್ಲೂ ರಹಸ್ಯವೆನಿಸುವ ಒಂದು ಹಿತವನ್ನು ತಿಳಿಸುವೆ, ಕೇಳು; ಅದನ್ನು ಅನುಸರಿಸಿದರೆ ಪಾಪರಹಿತನಾಗಿ ವಿಷ್ಣುಸಾಯುಜ್ಯವನ್ನು ಹೊಂದಬಹುದು.

ವಿ – ೧. ಇಲ್ಲಿ ನಿಷ್ಪಾಪನಾಗುವುದು ಎಂದರೆ ಬ್ರಹ್ಮಸೂತ್ರಗಳಲ್ಲಿ ಬಂದಿರುವಂತೆ ಕರ್ಮಕ್ಷಯವನ್ನು ಹೊಂದುವುದು ಎಂದರ್ಥ.

೨. ಇಲ್ಲಿ ಗುಹ್ಯಾದ್ಗುಹ್ಯತಮ ಎಂದು ಹೇಳಿರುವುದು ಭಗವದ್ಗೀತೆಯಲ್ಲಿ ಬಂದಿರುವಂತೆ 'ಮತ್ಕರ್ಮಕೃನ್ಮತ್ಪರಮಃ ಮದ್ಭಕ್ತಃ ಸಂಗವರ್ಜಿತಃ' ಇತ್ಯಾದಿ ಎಂದು ತಿಳಿಯಬಹುದು.

### ಕೃಷ್ಣಾನದಿಯ ಮಾಹಾತ್ಮ್ಯ

**೭೯. ಬ್ರಹ್ಮಾಮೃತಾನಂದರಸೇನ ಪೂರ್ಣಾಂ**
**ಜಲೇನ ಪೂರ್ಣಾಮಿತಿ ಮೇನಿರೇಽಜ್ಞಾಃ ।**
**ತಾಂ ತ್ವಾವಗಾಹಾಮಿ ನಮಾಮಿ ಕೃಷ್ಣೇ**
**ದೇವಾನ್ ಋಷೀಂಸ್ತರ್ಪಯಿಷ್ಯೇ ಪಿತೄಂಶ್ಚ ॥**

ಅನು – ಎಲೈ ಕೃಷ್ಣೆಯೇ! ಬ್ರಹ್ಮನ ಅಮೃತಾನಂದರಸದಿಂದ ತುಂಬಿರುವ ನಿನ್ನನ್ನು ಅಜ್ಞರು ನೀರಿನಿಂದ ತುಂಬಿದವಳು ಎಂದು ತಪ್ಪಾಗಿ ತಿಳಿಯುವರು. ನಾನು ನಿನ್ನಲ್ಲಿ ಮೀಯುವೆ. ನಮಸ್ಕರಿಸುವೆ. ದೇವತೆಗಳಿಗೂ, ಋಷಿಗಳಿಗೂ, ಪಿತೃಗಳಿಗೂ ತರ್ಪಣ ನೀಡುವೆ.

ವಿ – ೧. ಇಲ್ಲಿ ಕೃಷ್ಣಾನದಿಯ ನೀರನ್ನು ಬ್ರಹ್ಮಾಮೃತಾನಂದರಸ ಎಂದು ಕರೆಯುವ ಮೂಲಕ

ಅದರಲ್ಲಿರುವ ಭಗವಂತನ ವಿಶೇಷಸನ್ನಿಧಾನವು ಜ್ಞಾನದ್ವಾರಾ ಮೋಕ್ಷಕ್ಕೆ ಸಾಧನ ಎಂಬ ತತ್ತ್ವವನ್ನು ತಿಳಿಸಿರುವರು.

೨. ನದಿಗಳಲ್ಲಿ ಅವಗಾಹನಸ್ನಾನದಂತೆ ದೇವಾದಿಗಳ ತರ್ಪಣವೂ ವಿಹಿತ ಎಂಬ ತತ್ತ್ವವೂ ಇಲ್ಲಿ ಸೂಚಿತ.

### ಕೃಷ್ಣಾನದಿಯ ಮತ್ತೊಂದು ಬಗೆಯ ಹಿರಿಮೆ

೮೦. **ತಾವತ್ ಸಾ ಜಾಹ್ನವೀ ಜ್ಞೇಯಾ ಯಾವಚ್ಛ್ರೀಶೈಲಗಾಮಿನೀ ।**
**ಅತ ಊರ್ಧ್ವಂ ಶತಗುಣಾ ಯಾವತ್ ಸಾಗರಸಂಗಮಾ ॥**

ಅನು – ಶ್ರೀಶೈಲದವರೆಗೂ ಕೃಷ್ಣೆಯನ್ನು ಗಂಗೆಯೆಂದೂ, ಅಲ್ಲಿಂದ ಮುಂದೆ ಸಮುದ್ರಸೇರುವವರೆಗೂ ಅದು ಗಂಗೆಗಿಂತ ನೂರುಪಟ್ಟು ಮಿಗಿಲು ಎಂದೂ ತಿಳಿಯ-ಬೇಕು.

ವಿ – ೧. ಕೃಷ್ಣೆಯ ಮಹತ್ತ್ವವನ್ನು ಶ್ರೀಶೈಲದವರೆಗೆ ಹಾಗೂ ಅಲ್ಲಿಂದ ಮುಂದೆ ಸಮುದ್ರ ಸೇರುವವರೆಗೆ ಎಂದು ವಿಭಾಗಿಸಿರುವುದು ಇಲ್ಲಿಯ ವಿಶೇಷ.

೨. ನದೀತಾರತಮ್ಯದಲ್ಲಿ ಕೃಷ್ಣಾನದಿಯದು ಗೋದಾವರಿಯ ಅನಂತರದ್ದು ಎಂಬ ವಿಶೇಷ ಬ್ರಹ್ಮಾಂಡಪುರಾಣ ಹಾಗೂ ಶ್ರೀರಾಘವೇಂದ್ರಸ್ವಾಮಿಗಳ ನದೀತಾರತಮ್ಯಸ್ತೋತ್ರದಲ್ಲಿ ಉಕ್ತವಾಗಿದೆ :

**ವಿಷ್ಣುಪಾದಾಬ್ಜಸಂಭೂತಾ ಗಂಗಾ ಸರ್ವಾಧಿಕಾ ಮತಾ ।**
**ತತೋ ಗೋದಾವರೀ ನ್ಯೂನಾ ಕೃಷ್ಣವೇಣೀ ತತೋಽಧಮಾ ॥**

೩. ಮೇಲಿನ ಎರಡು ಶ್ಲೋಕಗಳು ಕೃಷ್ಣಾಮಾಹಾತ್ಮ್ಯಪ್ರತಿಪಾದಕಗ್ರಂಥದ ವಚನಗಳು ಎಂದು ವ್ಯಾಖ್ಯಾನದಲ್ಲಿದೆ.

೩. ಕೃಷ್ಣವೇಣೀನದಿಯು ದಕ್ಷಿಣಭಾರತದ ಮಹಾನದಿಗಳಲ್ಲೊಂದು. ಪೂನಾದಿಂದ ಸುಮಾರು ೧೨೦ ಕಿ.ಮೀ. ದೂರದಲ್ಲಿರುವ 'ಮಹಾಬಲೇಶ್ವರ' ಎಂಬಲ್ಲಿ ಹುಟ್ಟುವ ಈ ನದಿಯು ಸುಮಾರು ೧೨೫೦ ಕಿ.ಮೀ. ದೂರ ಹರಿದು ವಿಜಯವಾಡ ಬಳಿ ಪೂರ್ವಸಮುದ್ರ(ಬಂಗಾಳಕೊಲ್ಲಿ)ವನ್ನು ಸೇರುತ್ತದೆ. ಭೀಮಾ, ತುಂಗಭದ್ರಾ ಮೊದಲಾದವುಗಳು ಇದಕ್ಕೆ ಉಪನದಿಗಳು. ಕೃಷ್ಣಾ ಮತ್ತು ವೇಣೀ ಎಂಬ ಎರಡು ನದಿಗಳ ಒಟ್ಟುರೂಪವಾದ್ದರಿಂದ ಇದಕ್ಕೆ ಕೃಷ್ಣವೇಣೀ ಎಂದು ಹೆಸರು (ತುಂಗಭದ್ರಾ ಇದ್ದಂತೆ).

೪. ಇಲ್ಲಿಸ್ನಾನಮಾಡುವಾಗ ಜನಾರ್ದನರೂಪೀ ಶ್ರೀಕೃಷ್ಣನನ್ನು ಸ್ಮರಿಸಬೇಕೆಂದು ಬ್ರಹ್ಮಾಂಡ-ಪುರಾಣದಲ್ಲಿ ಹೇಳಿದೆ : ಕೃಷ್ಣವೇಣ್ಯಾಂ ನೃಪಶ್ರೇಷ್ಠ ಕೃಷ್ಣಃ ಸಾಕ್ಷಾಜ್ಜನಾರ್ದನಃ ॥

### ತಪ್ತಮುದ್ರಾಧಾರಣೆಯ ವಿಷಯದಲ್ಲಿ ಶ್ರುತಿಸ್ಮೃತಿಗಳು

**೮೧. ಚಕ್ರಂ ಬಿಭರ್ತಿ ವಪುಷಾಽಭಿತಪ್ತಂ ಬಲಂ ದೇವಾನಾಮಮೃತಸ್ಯ ವಿಷ್ಣೋಃ।**
**ಸ ಏತಿ ಲೋಕಂ ದುರಿತಾ ವಿಧೂಯ ವಿಶಂತಿ ಯದ್ಯತಯೋ ವೀತರಾಗಾಃ॥**

ಅನು – ದೇವತೆಗಳಿಗೂ ಬಲಪ್ರದವಾದ ಶ್ರೀಮಹಾವಿಷ್ಣುವಿನ ಚಕ್ರವನ್ನು ಕಾಯಿಸಿ ದೇಹದಮೇಲೆ ಧರಿಸುವವನು ಸಕಲಪಾಪಗಳನ್ನೂ ಕಳೆದುಕೊಂಡು ವೀತರಾಗರಾದ ಯತಿಗಳು ಪ್ರವೇಶಿಸುವ ಲೋಕವನ್ನು ಹೊಂದುವನು.

ವಿ – ೧. ಇದು ಆಥರ್ವಣಶ್ರುತಿ ವಚನ.

೨. ವೈಷ್ಣವರ ವಿಶಿಷ್ಟಸಂಸ್ಕಾರವಾದ ತಪ್ತಮುದ್ರಾಧಾರಣೆಯು ವೈದಿಕ ಎಂಬುದು ಇದರಿಂದ ಸಿದ್ಧವಾಗುವುದು.

**೮೨. ಚಕ್ರಮಾದಾಯಾಗ್ನೌ ತಾಪ್ಯ ಬ್ರಾಹ್ಮಣಸ್ಯ ದಕ್ಷಿಣೇ ಬಾಹೌ ಧಾರಯೇತ್।**
**ಉಪವಿಶತಿ। ಪಾಂಚಜನ್ಯಮಾದಾಯಾಗ್ನೌ ತಾಪ್ಯ ಬ್ರಾಹ್ಮಣಸ್ಯೋತ್ತರೇ**
**ಬಾಹೌ ಧಾರಯೇತ್॥**

ಅನು – ಗುರುವು ಆಸನದಲ್ಲಿ ಕುಳಿತು, ಚಕ್ರವನ್ನು ತೆಗೆದುಕೊಂಡು ಅಗ್ನಿಯಲ್ಲಿ ಕಾಯಿಸಿ ಬ್ರಾಹ್ಮಣನ ಬಲಭುಜದಲ್ಲಿ ಧಾರಣಮಾಡಿಸಬೇಕು. ಪಾಂಚಜನ್ಯಶಂಖವನ್ನು ತೆಗೆದುಕೊಂಡು ಅದನ್ನು ಅಗ್ನಿಯಲ್ಲಿ ಕಾಯಿಸಿ ಬ್ರಾಹ್ಮಣನ ಎಡಭುಜದಲ್ಲಿ ಧಾರಣಮಾಡಿಸಬೇಕು.

ವಿ – ೧. ಇದರಲ್ಲಿ ಕ್ರಮವಾಗಿ ಚಕ್ರಶಂಖಗಳನ್ನು ಧಾರಣಮಾಡಿಸುವ ವಿಧಾನವು ಉಕ್ತವಾಗಿದೆ; ಗುರುವು ಕುಳಿತುಕೊಂಡೇ ಮುದ್ರಾಧಾರಣೆ ಮಾಡಿಸಬೇಕು ಎಂಬುದು ಇಲ್ಲಿಯ ಮತ್ತೊಂದು ವಿಶೇಷ.

೨. ಇದು ಅಥರ್ವಣಶ್ರುತ್ಯಂತರವಚನ ಎಂಬುದಾಗಿ ವ್ಯಾಖ್ಯಾನದಲ್ಲಿದೆ.

**೮೩. ತಪ್ತಂ ಚಕ್ರಂ ಚ ದ್ವಿಭುಜೇ ಧಾರ್ಯಂ ಯತ್ ತ್ವನಿಶಂ ತ್ವಿತಿ।**

ಅನು – ಕಾಯಿಸಿದ ಚಕ್ರವನ್ನು ಎರಡು ಭುಜಗಳಲ್ಲೂ ಸದಾ ಧರಿಸಬೇಕು.

ವಿ – ೧. ಬಲಭುಜದಂತೆ ಎಡಭುಜದಲ್ಲೂ ಸಹ ಚಕ್ರವು ಧಾರ್ಯ ಎಂಬುದು ಇಲ್ಲಿಯ ವಿಶೇಷ.

೨. ಎಡಭುಜದಲ್ಲಿ ಶಂಖದೊಂದಿಗೆ ಚಕ್ರವನ್ನೂ ಧರಿಸಬೇಕು ಎಂಬ ವೈಕಲ್ಪಿಕ ಪಕ್ಷವನ್ನು ಈ ವಚನ ಸೂಚಿಸುತ್ತದೆ ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ.

೩. ಇಲ್ಲಿ ಸದಾ ಧರಿಸಬೇಕು ಎಂಬುದಕ್ಕೆ ನಿತ್ಯ ಗೋಪೀಚಂದನದಿಂದ ಚಕ್ರಶಂಖಗಳನ್ನು ತಪ್ಪದೆ ಧರಿಸಬೇಕು; ವಿಶೇಷಸಂದರ್ಭಗಳಲ್ಲಿ ತಪ್ತಮುದ್ರಾಧಾರಣೆ ಕರ್ತವ್ಯ ಎಂದು ಭಾವ ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ.

## ಊರ್ಧ್ವಪುಂಡ್ರಧಾರಣೆಯ ವಿಧಾನ

೮೪. ದ್ವಿರೇಖಮೂರ್ಧ್ವಪುಂಡ್ರಂ ಚ ಕರೋತಿ ।

ಅನು – ಊರ್ಧ್ವಪುಂಡ್ರವನ್ನು (ಲಲಾಟಮಧ್ಯದಲ್ಲಿ) ಎರಡು ರೇಖೆಗಳಂತೆ ಧರಿಸಬೇಕು.

ವಿ – ೧. ಹಣೆಯ ಮೇಲೆ ಧರಿಸುವ ನಾಮಕ್ಕೆ ಈ ಮಾತು ಅನ್ವಯಿಸುತ್ತದೆ; ಲಲಾಟದಲ್ಲಿ ಧರಿಸುವ ಊರ್ಧ್ವಪುಂಡ್ರ ಸಚ್ಛಿದ್ರವಾಗಿ ಎರಡು ಸಮಾನಾಂತರ ರೇಖೆಗಳಂತೆಯೇ ಇರಬೇಕು; ಆಗ ಅದು ಹರಿಮಂದಿರವೆನ್ನಿಸುತ್ತದೆ; ಇಲ್ಲವಾದಲ್ಲಿ ನಾಯಿಯ ಪಾದದಂತೆ ಮೈಲಿಗೆ ಎಂಬ ಎಚ್ಚರಿಕೆಯನ್ನು ಸ್ಮೃತಿಗಳು ನೀಡಿವೆ :

ಊರ್ಧ್ವಪುಂಡ್ರಂ ಲಲಾಟೇ ತು ಸಚ್ಛಿದ್ರಂ ಹರಿಮಂದಿರಮ್ ।
ಅಚ್ಛಿದ್ರಮೂರ್ಧ್ವಪುಂಡ್ರಂ ತು ಶುನಃ ಪಾದಂ ನ ಸಂಶಯಃ ॥

೨. ಮೇಲಿನ ಎರಡು ಶ್ಲೋಕಗಳು ಸ್ವಗಾಲೋಪನಿಷತ್ತಿನ ವಚನಗಳು.

೨. ಭುಜ, ಉದರ ಇತ್ಯಾದಿ ಇತರಸ್ಥಳಗಳಲ್ಲಿ ಧರಿಸುವ ಊರ್ಧ್ವಪುಂಡ್ರವು ಅಚ್ಛಿದ್ರವಾಗಿಯೇ ಇರಬೇಕು ಎಂಬ ವಿಶೇಷಾಂಶ ಮುಂದೆ ನಿರೂಪಿತವಾಗಿದೆ :

೮೫. ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ।
ಅತಪ್ತತನೂರ್ನ ತದಾಮೋಽಶ್ನುತೇ ಶೃತಾಸ ಇದ್ವಹಂತಸ್ತತ್ ಸಮಾಶತ ॥

ಅನು – ವೇದಪತಿಯಾದ ವಿಷ್ಣುವೇ! ನೀನು ಸಕಲಶರೀರಗಳನ್ನು ಅಂತರ್ಯಾಮಿ ರೂಪದಿಂದ ವ್ಯಾಪಿಸಿರುವಿ; ಅಂತಹ ನಿನ್ನ ಸುದರ್ಶನವು ಲೋಕಗಳಲ್ಲಿ ವಿಖ್ಯಾತವಾದದು. ಅಂತಹ ತಪ್ತಚಕ್ರದಿಂದ ಸಂಸ್ಕಾರ ಹೊಂದದ ದೇಹದವನು ಎಂದೂ ಪಾಪರಹಿತನಾಗಲಾರ; ನಿನ್ನ ಲೋಕವನ್ನು ಸೇರಲಾರ; ಅದರಿಂದ ಸಂಸ್ಕಾರ ಹೊಂದುವವರು ಆ ಬ್ರಹ್ಮನನ್ನು ಹೊಂದುವರು.

ವಿ – ೧. ಇದು ಋಗ್ವೇದದ ಸಪ್ತಮಾಷ್ಟಕದ ಮೂರನೇ ಅಧ್ಯಾಯದ ಮಂತ್ರ.

೨. ಇಲ್ಲಿ ಪವಿತ್ರ ಎಂದರೆ ಸುದರ್ಶನ ಎಂದರ್ಥ : ಸುದರ್ಶನೇ ಚ ದರ್ಭೇ ಚ ಪವಿತ್ರಂ ವರಣಸೂತ್ರಕೇ (ವೇದನಿಘಂಟು).

೩. ಇಲ್ಲಿ ಸುದರ್ಶನವನ್ನು ಧರಿಸುವುದು ಎಂದರೆ ಪ್ರತಿನಿತ್ಯವೂ ಗೋಪೀಚಂದನದಿಂದ ಧರಿಸುವುದು; ವಿಶೇಷ ಸಂದರ್ಭಗಳಲ್ಲಿ ತಪ್ತಮುದ್ರೆಗಳನ್ನು ಧರಿಸುವುದು ಎಂದರ್ಥ.

೪. ಇದು ಎಲ್ಲಾ ಆಶ್ರಮದವರಿಗೂ ಸ್ತ್ರೀಯರಿಗೂ ಸಹ ಕಡ್ಡಾಯವಾದುದು.

೫. ಇದಕ್ಕೆ ವಶಿಷ್ಠಸ್ಮೃತಿ ಹಾಗೂ ಪದ್ಮಪುರಾಣದ ವಚನಗಳು ವಿವರಣೆಯಂತಿವೆ :

ಶಂಖಂ ಚಕ್ರಂ ಸ್ಫುಟಂ ಕುರ್ಯಾತ್ ಪ್ರತಪ್ತಂ ಬಾಹುಮೂಲಯೋಃ ।
ಸರ್ವಾಶ್ರಮೇಷು ವಸತಾಂ ಸ್ತ್ರೀಣಾಂ ಚ ಶ್ರುತಿಚೋದನಾತ್ ॥ – ವಸಿಷ್ಠಸ್ಮೃತಿ

ಪವಿತ್ರಂ ಬ್ರಾಹ್ಮಣೈಃ ಸಮ್ಯಕ್ ಭುಜೇ ಧಾರ್ಯಂ ಹರೇಃ ಸದಾ ।
ತೇನ ತಪ್ತಾ ತನುರ್ಯೇಷಾಂ ತೇ ಯಾಂತಿ ಪರಮಂ ಪದಮ್ ॥– ಪದ್ಮಪುರಾಣವಚನ

## ಊರ್ಧ್ವಪುಂಡ್ರದ ಹಿರಿಮೆ

೮೬. ಧೃತೋರ್ಧ್ವಪುಂಡ್ರಃ ಕೃತಚಕ್ರಧಾರೀ
ವಿಷ್ಣುಂ ಪರಂ ಧ್ಯಾಯತಿ ಯೋ ಮಹಾತ್ಮಾ ।
ಸ್ವರೇಣ ಮಂತ್ರೇಣ ಸದಾ ಹೃದಿಸ್ಥಿತಂ
ಪರಾತ್ಪರಂ ಯನ್ಮಹತೋ ಮಹಾಂತಮ್ ॥

ಅನು – ಊರ್ಧ್ವಪುಂಡ್ರವನ್ನು ಧರಿಸಿ ಚತುರಶಿಲ್ಪಿಯಿಂದ ಮಾಡಲ್ಪಟ್ಟ ಚಕ್ರವನ್ನು ಧರಿಸಿ ಸರ್ವೋತ್ತಮನಾದ, ವೇದಗಳ ಸ್ವರಗಳಿಂದಲೂ ಮಂತ್ರಗಳಿಂದಲೂ ಪ್ರತಿಪಾದ್ಯನಾದ, ಸದಾ ಹೃದಯದಲ್ಲಿ ನೆಲೆಸಿರುವ ಶ್ರೀಹರಿಯನ್ನು ಯಾವನು ಧ್ಯಾನಿಸುವನೋ ಅವನೇ ಮಹಾತ್ಮ.

ವಿ – ೧. ಇದು ಕಠಶಾಖಾಶ್ರುತಿಯ ವಚನ.

೨. ಇಲ್ಲಿ ಸ್ವರೇಣ ಮಂತ್ರೇಣ ಎಂಬುದಕ್ಕೆ ವೇದಗಳ ಸ್ವರಗಳಿಂದಲೂ ಮಂತ್ರಗಳಿಂದಲೂ ಪ್ರತಿಪಾದ್ಯನಾದ ಎಂದರ್ಥ ಎಂಬ ವಿಶೇಷ ಅನ್ವಯಕ್ರಮ ವ್ಯಾಖ್ಯಾನದಲ್ಲಿದೆ.

೮೭. ಏಭಿರ್ವಯಮುರುಕ್ರಮಸ್ಯ ಚಿಹ್ನೈರಂಕಿತಾ ಲೋಕೇ ಸುಭಗಾ ಭವೇಮ ।
ತದ್ವಿಷ್ಣೋಃ ಪರಮಂ ಪದಂ ಯೇಽನು ಗಚ್ಛಂತಿ ಲಾಂಛಿತಾಃ ॥

ಅನು – ಉರುಕ್ರಮನಾದ ಶ್ರೀಹರಿಯ ಈ ಚಕ್ರಾದಿಚಿಹ್ನೆಗಳಿಂದ ಅಂಕಿತರಾದವರಾಗಿ ಲೋಕದಲ್ಲಿ ಸುಭಗರಾಗೋಣ; ಆ ಲಾಂಛನಗಳನ್ನು ಧರಿಸುವವರು ವಿಷ್ಣುವಿನ ಪರಮಪದವನ್ನೇ ಪಡೆಯುವರು.

ವಿ – ೧. ಇದು ಆಥರ್ವಣಶ್ರುತಿಯ ವಚನ.

೨. ಈ ವಚನದಲ್ಲಿ ಚಕ್ರಾದಿಲಾಂಛನಗಳ ಧಾರಣೆಯು ಸಲ್ಲಕ್ಷಣಕ್ಕೂ ಮೋಕ್ಷಪ್ರಾಪ್ತಿಗೂ ಸಾಧನ ಎಂಬ ವಿಶೇಷಾಂಶ ನಿರೂಪಿತವಾಗಿದೆ.

೮೮. ಪವಿತ್ರಮಿತ್ಯಗ್ನಿಃ, ಅಗ್ನಿರ್ವೈ ಸಹಸ್ರಾರಃ, ಸಹಸ್ರಾರೋ ನೇಮಿಃ, ನೇಮಿನಾ
ತಪ್ತತನೂರ್ಬ್ರಹ್ಮಣಃ ಸಾಯುಜ್ಯಂ ಸಲೋಕತಾಮಾಪ್ನೋತಿ ॥

ಅನು – ಪವಿತ್ರವೆಂದರೆ ಅಗ್ನಿ; ಅಗ್ನಿ ಎಂದರೆ ಚಕ್ರ; ಚಕ್ರವೆಂದರೆ ಸುದರ್ಶನ; ಆ ಸುದರ್ಶನದಿಂದ ತಪ್ತಮುದ್ರೆ ಧರಿಸುವವನು ಪರಬ್ರಹ್ಮನ ಸಾಯುಜ್ಯವನ್ನು ಸಾಲೋಕ್ಯ-ವನ್ನು ಹೊಂದುವನು.

ವಿ – ೧. ಇದು ಮೈತ್ರಾವರುಣಶಾಖೆಯ ವಾಕ್ಯ.

೨. ಇಲ್ಲಿ ಸಹಸ್ರಾರ, ನೇಮಿ ಎಂದರೆ ಸುದರ್ಶನ ಚಕ್ರ ಎಂದರ್ಥ :

ಪವಿತ್ರಂ ಚರಣಂ ನೇಮಿರಗ್ನಿಶ್ಚಕ್ರಂ ಸುದರ್ಶನಮ್ ।
ನಾಮಾನಿ ವಿಷ್ಣುಚಕ್ರಸ್ಯ ಪರ್ಯಾಯೇಣ ನಿಬೋಧ ಮೇ ॥

– ಪದ್ಮಪುರಾಣ ಉತ್ತರಖಂಡವಾಕ್ಯ

೮೯. ಆಜ್ಯಾಗ್ನಿನಾ ಮಹಾತ್ಮಾನೋ ವಿಷ್ಣುಚಕ್ರೇಣ ಲಾಂಛಿತಾಃ ।
ವಿಷ್ಣುಚಕ್ರವಿಹೀನಾಸ್ತು ಬ್ರಾಹ್ಮಣಾಃ ಪ್ರಾಕೃತಾಃ ಸ್ಮೃತಾಃ ॥

ಅನು – ಆಜ್ಯಾಹುತಿಯಿಂದ ಕೂಡಿದ ಅಗ್ನಿಯಲ್ಲಿ ತಪ್ತವಾದ ವಿಷ್ಣುಚಕ್ರದ ಲಾಂಛನವನ್ನು ಹೊಂದಿದವರು ಮಹಾತ್ಮರು; ಹೀಗೆ ತಪ್ತಮುದ್ರಾಧಾರಣೆ ಹೊಂದದ ಬ್ರಾಹ್ಮಣರು ಅಜ್ಞಾನಿಗಳು ಎನ್ನಿಸುವರು.

ವಿ – ೧. ಪದ್ಮಪುರಾಣ ಉತ್ತರಖಂಡವಾಕ್ಯದಲ್ಲಿ ಪಾರ್ವತಿಯನ್ನು ಕುರಿತು ಶಿವನ ವಾಕ್ಯ.

೨. ಇದರಲ್ಲಿ ವೈಷ್ಣವತ್ವಕ್ಕೆ ಮಾತ್ರವಲ್ಲದೆ ಬ್ರಾಹ್ಮಣ್ಯಕ್ಕೂ ತಪ್ತಮುದ್ರಾಧಾರಣೆ ಅತ್ಯಗತ್ಯ ಎಂಬ ವಿಶೇಷಾಂಶ ನಿರೂಪಿತವಾಗಿದೆ.

### ಸಕಲವರ್ಣಾಶ್ರಮದವರಿಗೂ ತಪ್ತಮುದ್ರಾಧಾರಣೆ ವಿಹಿತ

೯೦. ಸರ್ವಾಶ್ರಮೇಷು ಸರ್ವೈಶ್ಚ ಬ್ರಾಹ್ಮಣಾನಾಂ ವಿಶೇಷತಃ ।
ವಿಧಿನಾ ವೈಷ್ಣವಂ ಚಕ್ರಂ ಧಾರ್ಯಂ ತಚ್ಛ್ರುತಿಚೋದನಾತ್ ॥

ಅನು – ಸಕಲ ಆಶ್ರಮದವರಿಗೂ ಸಕಲವರ್ಣದವರಿಗೂ ವಿಶೇಷವಾಗಿ ಬ್ರಾಹ್ಮಣರಿಗೂ ಶ್ರುತಿಯ ಆದೇಶದಂತೆ ತಪ್ತಚಕ್ರಧಾರಣೆ ವಿಹಿತವಾಗಿದೆ.

ವಿ – ೧. ಇದು ಪದ್ಮಪುರಾಣ ಉತ್ತರಖಂಡವಾಕ್ಯ

೨. ತಪ್ತಮುದ್ರಾಧಾರಣೆಯು ಸರ್ವವರ್ಣದವರಿಗೂ ಸಕಲ ಆಶ್ರಮದವರಿಗೂ ಕಡ್ಡಾಯ ಎಂಬ ವಿಶೇಷಾಂಶ ಇದರಲ್ಲಿದೆ.

೯೧. **ಚರಣಂ ಪವಿತ್ರಂ ವಿತತಂ ಪುರಾಣಂ ವಾಙ್ಮಯಂ ಶುಭಮ್ ।**
**ತೇನ ಚಕ್ರೇಣ ಸಂತಪ್ತಾಸ್ತರೇಯುಃ ಪಾತಕಾಂಬುಧಿಮ್ ॥**

ಅನು – ಜ್ಞಾನಕ್ಕೆ ಸಾಧನವಾದ ಪಾವಿತ್ರ್ಯಹೇತುವಾದ ಜಗತ್ತ್ರಿಪಾದ್ಯವಾದ ಪುರಾಣಪ್ರತಿಪಾದ್ಯವಾದ ವೇದವಾಕ್ಯಪ್ರತಿಪಾದ್ಯವಾದ ಪುಣ್ಯಸಾಧನ ಚಕ್ರ; ಇದರಿಂದ ತಪ್ತ ಮುದ್ರಾಧಾರಣೆ ಮಾಡಿಸಿಕೊಳ್ಳುವವರು ಪಾಪಸಾಗರವನ್ನು ದಾಟಿಬಿಡುವರು.

ವಿ – ೧. ಇದು ಪದ್ಮಪುರಾಣೋದಾಹೃತಶ್ರುತಿವಾಕ್ಯ.

೯೨. **ಪವಿತ್ರಂ ಬ್ರಾಹ್ಮಣಸ್ತ್ವಂ ಜಗದ್ವ್ಯಾಪ್ತಂ ಹರೇಃ ಸದಾ ।**
**ತೇನಾತಪ್ತಾ ತನುರ್ಯೇಷಾಂ ತೇ ನ ಯಾಂತಿಂ ಪರಂ ಪದಮ್ ।**
**ಶುದ್ಧೇನ ತೇನ ತಪ್ತೇನ ಬ್ರಹ್ಮ ತೇನ ಪುನೀಹಿ ನಃ ॥**

ಅನು – ಎಲೈ ಪರಬ್ರಹ್ಮನೇ! ಚತುರ್ಮುಖನಿಗೆ ಒಡೆಯನಾದ ವಿಷ್ಣುವಿನ ಅನುಗ್ರಹಕ್ಕೆ ಕಾರಣವಾಗುವ ಸುದರ್ಶನವು ಜಗದ್ವಿಖ್ಯಾತವಾದುದು; ಆದರಿಂದ ತಪ್ತಮುದ್ರೆಯನ್ನು ಧರಿಸದ ದೇಹವುಳ್ಳವರು ಪರಗತಿಗೆ ತೆರಳಲಾರರು; ಅಂತಹ ಶುದ್ಧಿಕಾರಣವಾದ ಆ ಚಕ್ರದಿಂದ ನಮ್ಮನ್ನು ಪಾವನಗೊಳಿಸು.

ವಿ – ಇದು ಪದ್ಮಪುರಾಣೋದಾಹೃತಶ್ರುತಿವಾಕ್ಯ.

## ದೇವತೆಗಳಿಗೂ ತಪ್ತಮುದ್ರಾಧಾರಣೆ ವಿಹಿತ

೯೩. **ಯೇನ ದೇವಾ ಪವಿತ್ರೇಣಾತ್ಮಾನಂ ಪುನತೇ ಸದಾ ।**
**ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ ॥**

ಅನು – ದೇವತೆಗಳು ಯಾವ ಚಕ್ರದಿಂದ ತಮ್ಮನ್ನು ಪಾವನಗೊಳಿಸಿಕೊಳ್ಳುವರೋ, ಅಂತಹ ಚಕ್ರದಿಂದ ಪವಮಾನಸಂಬಂಧಿ ಋಕ್‌ಪ್ರತಿಪಾದ್ಯವಾದ ಭಗವಂತನ ಸ್ತ್ರೀರೂಪ-ವಿಶೇಷಗಳು ನನ್ನನ್ನು ಪವಿತ್ರವಾಗಿಸಲಿ.

ವಿ – ಇದು ಪದ್ಮಪುರಾಣೋದಾಹೃತಶ್ರುತಿವಾಕ್ಯ.

೯೪. ಪ್ರಾಜಾಪತ್ಯಂ ಪವಿತ್ರಂ ಯತ್ ಶತೋದ್ಯಾಮಮಂ ಹಿರಣ್ಮಯಮ್ ।
ತೇನ ಬ್ರಹ್ಮವಿದೋ ವಯಂ ಪೂತಂ ಬ್ರಹ್ಮ ಪುನೀಮಹೇ ॥

ಅನು – ಪವಿತ್ರವು ಪ್ರಜಾಪತಿಯಾದ ವಿಷ್ಣುವಿಗೆ ಸಂಬಂಧಿಸಿದ್ದು; ಬಹುಗುಣಗಳಿಂದ ಕೂಡಿದ್ದು; ಹಿತಕರವೂ ರಮಣೀಯವೂ ಬ್ರಹ್ಮದೇವರನ್ನು ಪಾವನಗೊಳಿಸುವುದೂ ಆಗಿದೆ; ಅಂತಹ ಸುದರ್ಶನದ ಧಾರಣೆಯಿಂದ ನಾವು ಪವಿತ್ರರಾಗಿ, ಬ್ರಹ್ಮಜ್ಞಾನಿಗಳಾಗಿ ಪಾವನರಾಗೋಣ.

ವಿ – ೧. ಇದು ಪದ್ಮಪುರಾಣೋದಾಹೃತಶ್ರುತಿವಾಕ್ಯ.

೨. ಅತ್ಯಂತ ಪವಿತ್ರರಾದ ಚತುರ್ಮುಖಬ್ರಹ್ಮದೇವರೂ ತಪ್ತಮುದ್ರೆ ಧರಿಸುವರು ಎಂಬ ವಿಶೇಷಾಂಶ ಇಲ್ಲಿದೆ.

೯೫. ಸನೇಮಿ ಚಕ್ರಮಜರಂ ಚಕ್ಷುರಸ್ಯ ಮಹಾತ್ಮನಃ ।
ತಸ್ಮಿನ್ನಿವ ವೃತೇ ದೇಹೇ ಮಹೋನ್ನತಿಪದಂ ಯಯುಃ ॥

ಅನು – ಧಾರಾಸಹಿತವಾದ ಮುಪ್ಪನ್ನು ತೊಲಗಿಸುವ ದಿವ್ಯನೇತ್ರದಂತಹ ಮಹಾತ್ಮನಾದ ಶ್ರೀವಿಷ್ಣುವಿನ ಚಕ್ರವನ್ನು ದೇಹದಲ್ಲಿ ಧರಿಸುವವರು ಅತ್ಯಂತ ಉನ್ನತಸ್ಥಾನವನ್ನು ಹೊಂದಿಯೇ ಹೊಂದುವರು.

ವಿ – ೧. ಇದು ಪದ್ಮಪುರಾಣೋದಾಹೃತಶ್ರುತಿವಾಕ್ಯ.

೨. ಇಲ್ಲಿ ಅಜರಂ ಎಂಬುದಕ್ಕೆ ಮುಪ್ಪನ್ನು ಪರಿಹರಿಸುವ ಎಂದೂ, ಮುಪ್ಪಿಲ್ಲದ ಮುಕ್ತಿಗೆ ಸಾಧನವಾಗುವ ಎಂದೂ ಅರ್ಥ.

## ಚಕ್ರಪ್ರಾರ್ಥನಾ ಮಂತ್ರ

೯೬. ಯತ್ತೇ ಪವಿತ್ರಮರ್ಚಿಷ್ಯಗ್ನೇ ವಿತತಮಂತರಾ ।
ಬ್ರಹ್ಮ ತೇನ ಪುನೀಹಿ ನಃ ॥

ಅನು – ಎಲೈ ಗುಣಪೂರ್ಣನಾದ ಅಗ್ನಿಯೇ! ನಿನ್ನ ಜ್ವಾಲೆಯಿಂದ ತಪ್ತವಾದ ಲೋಕಮಧ್ಯದಲ್ಲಿ ಪ್ರಸಿದ್ಧವಾದ ಚಕ್ರದಿಂದ ನಮ್ಮನ್ನು ಪುನೀತರನ್ನಾಗಿಸು.

ವಿ – ೧. ಇದು ಪದ್ಮಪುರಾಣೋದಾಹೃತಶ್ರುತಿವಾಕ್ಯ.

೨. ಇದು ಚಕ್ರವನ್ನು ಅಗ್ನಿಯಲ್ಲಿ ಕಾಯಿಸುವಾಗ ಅಗ್ನಿಯ ಪ್ರಾರ್ಥನೆಗೆ ವಿಹಿತವಾದ ಮಂತ್ರ.

## ಚಿನ್ನದ ಚಕ್ರಶಂಖಗಳು ಶ್ರೇಷ್ಠ

೯೭. ಸುದರ್ಶನಂ ಪಾಂಚಜನ್ಯಂ ಸೌವರ್ಣೇನ ಪ್ರ ಕಾರಯೇತ್ ॥

ಅನು – ಸುದರ್ಶನ ಚಕ್ರವನ್ನು ಮತ್ತು ಪಾಂಚಜನ್ಯವನ್ನು ಉತ್ತಮಚಿನ್ನದಿಂದ ಮಾಡಿಸುವುದು ವಿಹಿತ.

ವಿ – ೧. ಇದು ಪದ್ಮಪುರಾಣ ಉತ್ತರಖಂಡವಾಕ್ಯ

೨. ಇಲ್ಲಿ ಸೌವರ್ಣೇನ ಎಂಬುದಕ್ಕೆ ಸುವರ್ಣೇನ ಎಂದರ್ಥ. 'ಔ'ಕಾರದಿಂದ ಉತ್ತಮ ಸುವರ್ಣ ಎಂಬ ಅರ್ಥವು 'ಆಧಿಕ್ಯೇ ಅಧಿಕಮ್' ಎಂಬ ಸೂತ್ರದಿಂದ ಲಭಿಸುವುದು.

## ಹೋಮ ವಿಧಿ

೯೮. ತಸ್ಮಿನ್ನಗ್ನೌ ಕ್ಷಿಪೇಚ್ಚಕ್ರಂ ಶಂಖಂ ಚ ದ್ವಿಜಸತ್ತಮಃ ।
ಷಡಕ್ಷರೇಣ ಜುಹುಯಾದಾಜ್ಯಂ ವಿಂಶತಿಸಂಖ್ಯಯಾ ॥

ಅನು – ಆ ಅಗ್ನಿಯಲ್ಲಿ ಬ್ರಾಹ್ಮಣಶ್ರೇಷ್ಠನು, ಷಡಕ್ಷರಮಂತ್ರದಿಂದ ಇಪ್ಪತ್ತುಸಂಖ್ಯೆಯಲ್ಲಿ ಆಜ್ಯದ ಆಹುತಿಗಳನ್ನು ನೀಡಿ, ಚಕ್ರ ಮತ್ತು ಶಂಖಗಳನ್ನು ಇರಿಸಬೇಕು.

ವಿ – ೧. ಇದು ಪದ್ಮಪುರಾಣ ಉತ್ತರಖಂಡದ ವಾಕ್ಯ.

೨. ಇಲ್ಲಿ ಷಡಕ್ಷರ ಮಂತ್ರ ಎಂದರೆ ವಿಷ್ಣುಮಂತ್ರ ಅಥವಾ ಕೃಷ್ಣಮಂತ್ರ ಎಂದು ತಿಳಿಯಬೇಕು.

## ಮುದ್ರಾಧಾರಣ ವಿಧಿ

೯೯. ಪ್ರತಪ್ತಂ ಚಕ್ರಮಾದಾಯ ಮಂತ್ರೇಣೈವಾಂಕಯೇದ್ಗುರುಃ ।
ಶಂಖೇನೈವಾಂಕನಂ ಕುರ್ಯಾದ್ಬಾಹ್ವೋರ್ದಕ್ಷಿಣಸವ್ಯಯೋಃ ॥

ಅನು – ಚೆನ್ನಾಗಿ ಕಾದ ಚಕ್ರ ಮತ್ತು ಶಂಖಗಳನ್ನು ತೆಗೆದುಕೊಂಡು ಗುರುವಾದವನು ಶಿಷ್ಯನ ಬಲ ಮತ್ತು ಎಡ ಭುಜಗಳ ಮೇಲೆ ಅಂಕನಗೊಳಿಸಬೇಕು.

ವಿ – ೧. ಇದು ಪದ್ಮಪುರಾಣ ಉತ್ತರಖಂಡದ ವಾಕ್ಯ.

೨. ಇಲ್ಲಿ ಗುರುಃ ಎಂಬ ಮಾತಿನಿಂದ ತಪ್ತಮುದ್ರಾಧಾರಣೆಯನ್ನು ಗುರುಗಳೇ ಮಾಡಬೇಕು ಎಂಬ ವಿಶೇಷಾಂಶ ಸೂಚಿತ. ಗುರುವಲ್ಲದ ಇತರರು ಮಾಡಿಸುವ ತಪ್ತಮುದ್ರಾಧಾರಣೆ ಮಹಾ ಅನಿಷ್ಟಕರ ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ : ಗುರೋರನ್ಯೇನಾಂಕನೇ ಕೃತೇ ಮಹಾನಿಷ್ಟಂ ಭವತೀತಿ ಜ್ಞಾಪನಾಯ ಗುರುರೇವಾಂಕಯೇದಿತ್ಯವಧಾರಣಾರ್ಥಂ ದ್ವಿರುಕ್ತಿರಿತ್ಯಭ್ಯುಪಗಮಾತ್ ।

೧೦೦. ಏವಮುಕ್ತ್ವಾ ವಿಧಾತಾರಂ ದೇವದೇವೋ ಹರಿಃ ಪಿತಾ ।
ಸ ಚಕ್ರೇಣಾಂಕಯಿತ್ವಾ ತಂ ತಸ್ಯ ಮಂತ್ರಮದಾತ್ ಸ್ವಯಮ್ ॥

ಅನು – ಹೀಗೆ ದೇವದೇವನೂ ತಂದೆಯೂ ಆದ ಶ್ರೀಹರಿಯು ಬ್ರಹ್ಮದೇವರಿಗೆ ತಿಳಿಸಿ, ಚಕ್ರಸಹಿತವಾದ ಶಂಖದಿಂದ ಅಂಕನ ಮಾಡಿ ಸ್ವತಃ ಮಂತ್ರೋಪದೇಶವನ್ನು ಮಾಡಿದನು.

ವಿ – ಇದು ಪದ್ಮಪುರಾಣ ಉತ್ತರಖಂಡದ ವಾಕ್ಯ.

## ಉಪನಯನದಲ್ಲೂ ತಪ್ತಮುದ್ರಾಧಾರಣೆ ವಿಹಿತ

೧೦೧. ಸುದರ್ಶನಂ ಧಾರಯಿತ್ವಾ ವಹ್ನಿತಪ್ತಂ ದ್ವಿಜೋತ್ತಮಃ ।
ಉಪನೀಯ ವಿಧಾನೇನ ಪಶ್ಚಾತ್ ಕರ್ಮಸು ಯೋಜಯೇತ್ ॥

ಅನು – ದ್ವಿಜಶ್ರೇಷ್ಠನು ಬೆಂಕಿಯಲ್ಲಿ ಕಾಯಿಸಿದ ಸುದರ್ಶನವನ್ನು ಧಾರಣಮಾಡಿಸಿ ವಿಧ್ಯುಕ್ತವಾಗಿ ಉಪನಯನ ಮಾಡಿ ಬಳಿಕ ಸಂಧ್ಯಾವಂದನಾದಿಕರ್ಮಗಳಲ್ಲಿ ತೊಡಗಿ-ಸಬೇಕು.

ವಿ – ಪದ್ಮಪುರಾಣ ಉತ್ತರಖಂಡ ಇಪ್ಪತ್ತನೇ ಅಧ್ಯಾಯದ ವಾಕ್ಯ.

## ಚಕ್ರಾದಿಗಳ ಮಹತ್ತ್ವ

೧೦೨. ಚಕ್ರಾದಿಧಾರಣಂ ಪುಂಸಾಂ ಹರಿಸಂಬಂಧವೇದನಮ್ ।
ಪತಿವ್ರತಾನಿಮಿತ್ತಂ ಹಿ ವಲಯಾದಿವಿಭೂಷಣಮ್ ॥

ಅನು – ತಪ್ತಚಕ್ರಾದಿಗಳ ಧಾರಣ ಮನುಷ್ಯರಿಗೆ ಹರಿಯ ಸಂಬಂಧವನ್ನು ತಿಳಿಸಿಕೊಡುತ್ತದೆ; ಸ್ತ್ರೀಯರಿಗೆ ಬಳೆ ಮೊದಲಾದವುಗಳ ಅಲಂಕಾರ ಅವರ ಮುತ್ತೈದೆತನಕ್ಕೆ ಹೇಗೋ ಹಾಗೆ.

ವಿ – ೧. ಇದು ಮಾರ್ಕಂಡೇಯಪುರಾಣದ ವಾಕ್ಯ.

೨. ಸ್ತ್ರೀಯರಿಗೆ ಬಳೆ, ಮಾಂಗಲ್ಯ ಮೊದಲಾದವುಗಳ ಧಾರಣೆ ಅವಳು ಮುತ್ತೈದೆ ಎಂಬುದಕ್ಕೆ ಸೂಚಕವಾಗಿರುವಂತೆ ಚಕ್ರಶಂಖಾದಿಗಳ ಧಾರಣೆ ಮನುಷ್ಯರಿಗೆ ಅವರು ವೈಷ್ಣವರು ಎಂಬುದಕ್ಕೆ ಸೂಚಕ ಎಂದರ್ಥ.

## ಮುದ್ರಾಧಾರಣೆಯ ಮಹಿಮೆ

೧೦೩. ಶರೀರಂ ದೃಶ್ಯತೇ ಯಸ್ಯ ಕೃಷ್ಣಚಕ್ರೇಣ ಲಾಂಛಿತಮ್ ।
ಗಂಗಾಜಲಮಯಂ ಮನ್ಯೇ ದೇಹಂ ತತ್ ಪಾಪವರ್ಜಿತಮ್ ॥

ಅನು – ಯಾವನ ದೇಹವು ಶ್ರೀಕೃಷ್ಣನ ಸುದರ್ಶನ ಚಕ್ರದ ಲಾಂಛನದಿಂದ ಕೂಡಿದೆಯೋ ಅವನ ದೇಹವು ಪಾಪರಹಿತವಾದ ಗಂಗಾಜಲದಂತೆ ಪವಿತ್ರ ಎಂದು ಭಾವಿಸುವೆನು.

ವಿ – ೧. ಇದು ಬ್ರಹ್ಮಪುರಾಣದ ವಚನ.

೨. ಚಕ್ರಧಾರಣೆ ಮಾಡಿದವನ ದೇಹ ಗಂಗೆಯಂತೆ ಪವಿತ್ರ ಎಂದರ್ಥ; ಇಲ್ಲಿ ಗಂಗಾಜಲ ಶಬ್ದದಿಂದ ಗಂಗಾಜಲಕ್ಕೆ ಅಭಿಮಾನಿಯಾದ ಗಂಗಾದೇವಿಯೆಂಬ ಅರ್ಥವೇ ವಿಹಿತ.

೧೦೪. ವಿಷ್ಣುಚಕ್ರಾಂಕಿತಂ ದೇಹಂ ಪವಿತ್ರಮಿತಿ ವೈ ಶ್ರುತಿಃ ।
ಧಾರಯೇದ್ವಿಷ್ಣುಭಕ್ತಸ್ತು ಚಕ್ರಂ ಬಾಹೌ ತು ದಕ್ಷಿಣೇ ।
ವಾಮೇ ತು ಶಂಖರಾಜಾನಂ ವೈಷ್ಣವಂ ಪದಮಾಪ್ನುಯಾತ್ ॥

ಅನು – ವಿಷ್ಣುವಿನ ಚಕ್ರದಿಂದ ಲಾಂಛಿತವಾದ ದೇಹವು ಪಾವನ ಎಂದು ವೇದ ಹೇಳುತ್ತದೆ; ವಿಷ್ಣುಭಕ್ತನಾದವನು ಬಲಭುಜದಲ್ಲಿ ಚಕ್ರವನ್ನೂ ಎಡಭುಜದಲ್ಲಿ ಶಂಖವನ್ನೂ ಧರಿಸಬೇಕು; ಅದರಿಂದ ವಿಷ್ಣುಲೋಕವು ಲಭಿಸುವುದು.

ವಿ – ೧. ಇದು ಮತ್ಸ್ಯಪುರಾಣದ ವಚನ.

## ಶೂದ್ರರಿಗೂ ತಪ್ತಮುದ್ರಾಧಾರಣೆ ವಿಹಿತ

೧೦೫. ಯೇಷಾಂ ಚಕ್ರಾಂಕಿತಂ ಗಾತ್ರಂ ಶೂದ್ರೇಷ್ವಪಿ ಚ ದೃಶ್ಯತೇ ।
ತೇ ವೈ ಸ್ವರ್ಗಸ್ಯ ನೇತಾರೋ ಬ್ರಾಹ್ಮಣಾ ಭುವಿದೇವತಾಃ ॥

ಅನು – ದೇಹದಲ್ಲಿ ಚಕ್ರಶಂಖಗಳ ಚಿಹ್ನೆಯನ್ನು ಧರಿಸಿದ ಬ್ರಾಹ್ಮಣರು ಶೂದ್ರಸಂಸರ್ಗ-ವನ್ನು ಹೊಂದಿದರೂ ಸಹ ಅವರು ಸ್ವರ್ಗಕ್ಕೆ ತೆರಳುವರು.

ವಿ – ೧. ಇದು ಸ್ಕಾಂದಪುರಾಣದ ವಾಕ್ಯ.

೧೦೬. ಅಗ್ನಿನೈವ ತು ಸಂಯುಕ್ತಂ ಚಕ್ರಮಾದಾಯ ಮಾಮಕಮ್ ।
ದಕ್ಷಿಣಂ ಬಾಹುಮೂಲಂ ಸ್ವಂ ದಹೇದ್ವಿಗತಸಾಧ್ವಸಃ ॥

ಅನು – ಅಗ್ನಿಯಿಂದ ಕಾಯಿಸಲ್ಪಟ್ಟ ನನ್ನ ಚಕ್ರವನ್ನು ತೆಗೆದುಕೊಂಡು ನಿರ್ಭಯದಿಂದ ಬಲಭುಜದಲ್ಲಿ ಧರಿಸಬೇಕು.

ವಿ – ಇದು ಪಂಚರಾತ್ರಾಗಮದ ವಿಹಗೇಶ್ವರಸಂಹಿತೆಯ ವಾಕ್ಯ.

೧೦೭. ಅಥವಾಽನ್ಯೇನ ಕೇನಾಪಿ ವೈಷ್ಣವೇನ ಮಹಾತ್ಮನಾ ।
ಲಾಂಛಿತಂ ಬಿಭೃಯಾಚ್ಚಕ್ರಂ ಪಾಂಚಜನ್ಯಂ ತಥೈವ ಚ ॥

ಅನು – ಅಥವಾ ಬೇರೆ ಯಾರಾದರೂ ಮಹಾತ್ಮರಾದ ವೈಷ್ಣವರಿಂದ ಚಕ್ರ ಮತ್ತು ಶಂಖಗಳ ಅಂಕನವನ್ನು ಮಾಡಿಸಿಕೊಳ್ಳಬೇಕು.

ವಿ – ೧. ಇಲ್ಲಿ ಮಹಾತ್ಮರಾದ ವೈಷ್ಣವರು ಎಂದರೆ ವಾಯುಸನ್ನಿಧಾನದಿಂದ ಕೂಡಿದ ಮಾಧ್ವವೈಷ್ಣವರು ಎಂದರ್ಥ.

೨. ಯಾವುದೇ ಕಾರಣದಿಂದ ಇತರ ಯಾರಿಂದಲೇ ಆಗಲಿ, ಅಥವಾ ತಾನಾಗಿಯೇ ಆಗಲಿ ತಪ್ತಮುದ್ರಾಧಾರಣೆ ಹೊಂದುವುದು ನರಕಕ್ಕೆ ಕಾರಣ ಎಂಬ ವಿಶೇಷಾಂಶ ವಿಷ್ಣುರಹಸ್ಯದಲ್ಲಿದೆ :

ಲೋಭಾದ್ಯುಪಾಧಿನಾ ವಾಽಪಿ ಯಸ್ಮಾತ್ ಕಸ್ಮಾಚ್ಚ ಪೂರುಷಾತ್ ।
ಸ್ವಯಂ ವಾಽಪಿ ದಹೇದ್ಗಾತ್ರಂ ಚಕ್ರಶಂಖಾದಿಕೈರಪಿ ।
ಸೋಽಪಿ ವ್ರಜೇತ ನಿರಯಂ ಸಾಕಂ ಸ್ವಗುರುಣಾ ಚಿರಮ್ ॥

೩. ಆದ್ದರಿಂದ ಇಲ್ಲಿಯ 'ಕೇನ' ಎಂಬುದಕ್ಕೆ ವಾಯುಸನ್ನಿಧಾನದಿಂದ ಕೂಡಿದವನಿಂದ ಎಂದೇ ಅರ್ಥ. 'ಕ'ಶಬ್ದಕ್ಕೆ ವಾಯು ಎಂಬ ಅರ್ಥ ಕೋಶದಲ್ಲಿದೆ : ಕಃ ಪ್ರಜಾಪತಿರುದ್ದಿಷ್ಟಃ ಕೋ ವಾಯುರಿತಿ ಶಬ್ದಿತಃ ।

೪. ಇದಕ್ಕೆ ಸಂವಾದಿಯಾದ ಯುಕ್ತಿಮಲ್ಲಿಕೆಯ ವಾಕ್ಯಗಳು ಹೀಗಿವೆ :

ಸತಾಂ ಭುಜೇ ಧಾರಯತಿ ಮುನೀನಾಂ ಮಧ್ವರೂಪಧೃಕ್ ।
ಸ ಏವ ಧಾರಯೇದ್ವಾಯುರನ್ಯತ್ರ ಗುರುಷು ಸ್ಥಿತಃ ॥ – ಫಲ ಸೌರಭ ೬೧೬

ಅನ್ಯತ್ರ ಮಧ್ವರೂಪಾದನ್ಯತ್ರ ಗುರುಷು ಮುದ್ರಧಾರಣಕರ್ತೃಷು ಪರಮಹಂಸೇಷು ಸ್ಥಿತಃ ಅಂತರ್ಯಾಮೀ ಸ್ಥಿತಃ ॥ – ಶ್ರೀಸುರೋತ್ತಮ ತೀರ್ಥರ ವ್ಯಾಖ್ಯಾನ

ಅರ್ಥ್ಯಮಾನಂ ತು ಮುನಿನಾ ತಪ್ತಚಕ್ರಸ್ಯ ಲಾಂಛನಮ್ ।
ಗುರೂಣಾಂ ಕರಕಂಜೇನ ಧಾರ್ಯಂ ಚಕ್ರಂ ತದೇವ ಹಿ ॥ (ಫಲಸೌರಭ ೫೮೫)

ಗುರುಕರಪಂಕಜೇನ ಕ್ರಿಯಮಾಣತಪ್ತಸುದರ್ಶನಧಾರಣಸ್ಯೈವೋಚಿತಮ್ । – (ವ್ಯಾ)

## ಮುದ್ರಾಧಾರಣಕಾಲಕ್ಕೆ ಪಠಿಸಬೇಕಾದ ಮಂತ್ರಗಳು

೧೦೮. ಉಚ್ಚಾರಯನ್ನಿಮಂ ಮಂತ್ರಂ ಹೃದ್ದೇಶೇ ಮಾಂ ವಿಚಿಂತಯನ್ ।
ಸುದರ್ಶನ ಮಹಾಜ್ವಾಲ ಕೋಟಿಸೂರ್ಯಸಮಪ್ರಭ ॥
ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ।
ಇತಿ ಮಂತ್ರಂ ಸಮುಚ್ಚಾರ್ಯ ದಕ್ಷಿಣಂ ಬಾಹುಮಂಕಯೇತ್ ॥
ಪಾಂಚಜನ್ಯ ನಿಜಧ್ವಾನಧ್ವಸ್ತಪಾತಕಸಂಚಯ ।
ಪಾಹಿ ಮಾಂ ಪಾಪಿನಂ ಘೋರಂ ಸಂಸಾರಾರ್ಣವತಾರಣ ।
ಇತಿ ಮಂತ್ರಂ ಸಮುಚ್ಚಾರ್ಯ ದಹೇತ್ ಸವ್ಯಭುಜಂ ತಥಾ ॥

ಅನು – ಹೃದಯದಲ್ಲಿ ನನ್ನನ್ನು ಚಿಂತಿಸುತ್ತಾ 'ಎಲೈ ಸುದರ್ಶನ! ಮಹಾಜ್ವಾಲ! ಕೋಟಿಸೂರ್ಯರಿಗೆ ಸಮನಾದ ಕಾಂತಿಯಿಂದ ಕೂಡಿದವನೇ! ಅಜ್ಞಾನದಿಂದ ಕುರುಡಾಗಿರುವ ನನಗೆ ನೀನು ನಿತ್ಯ ವಿಷ್ಣುವಿನ ಮಾರ್ಗವನ್ನು ತೋರು' ಎಂಬ ಮಂತ್ರವನ್ನು ಉಚ್ಚರಿಸುತ್ತಾ, ಚಕ್ರವನ್ನು ಬಲಭುಜದಲ್ಲಿ ಧರಿಸಬೇಕು. 'ಎಲೈ ಪಾಂಚಜನ್ಯ! ನಿನ್ನ ನಾದದಿಂದ ಪಾತಕಗಳ ಗುಂಪನ್ನೇ ನಾಶಗೊಳಿಸುವವನೇ! ಸಂಸಾರವೆಂಬ ಸಮುದ್ರವನ್ನು ದಾಟಿಸುವವನೇ! ಘೋರಪಾಪಿಯಾದ ನನ್ನನ್ನು ಪಾಲಿಸು' ಈ ಮಂತ್ರವನ್ನು ಉಚ್ಚರಿಸುತ್ತಾ ಎಡಭುಜದಲ್ಲಿ ಶಂಖವನ್ನು ಧರಿಸಬೇಕು.

## ತಪ್ತಮುದ್ರೆ ಧರಿಸಿದವರನ್ನು ಅವಮಾನಿಸಕೂಡದು

೧೦೯. ತಪ್ತಂ ಚಕ್ರಂ ಭುಜೇ ಯಸ್ಯ ವಿಪ್ರಾದೇರ್ಯಸ್ಯ ಕಸ್ಯ ವಾ ।
ವಿಷ್ಣೋರೇವ ಹಿ ಸಾ ಮೂರ್ತಿರ್ನಾವಮನ್ಯೇತ ಕರ್ಹಿಚಿತ್ ॥

ಅನು – ತಪ್ತ ಚಕ್ರವು ಬ್ರಾಹ್ಮಣ ಮೊದಲಾದ ಯಾರ ಭುಜದ ಮೇಲೆ ಇರುವುದೋ ಅವರು ಸಾಕ್ಷಾತ್ ವಿಷ್ಣುವಿನ ಮೂರ್ತಿಯಿದ್ದಂತೆ. ಅಂತಹವರನ್ನು ಯಾವ ಕಾರಣಕ್ಕೂ ಅವಮಾನಿಸಕೂಡದು.

ವಿ – ೧. ಇದು ವಿಷ್ಣುರಹಸ್ಯದ ವಚನ.

೨. ತಪ್ತಮುದ್ರೆ ಧರಿಸಿದವನ ದೇಹದಲ್ಲಿ ಶ್ರೀಹರಿಯ ವಿಶೇಷಸನ್ನಿಧಾನ ಉಂಟಾಗುವುದರಿಂದ ಅಂತಹವರನ್ನು ಅವಮಾನಿಸಕೂಡದು ಎಂದರ್ಥ.

## ತಪ್ತಮುದ್ರೆ ನೀಡುವವರ ಹಿರಿಮೆ

೧೧೦. ದಾತಾ ಹಿ ಪರಮಂ ಮಿತ್ರಂ ಯತೋ ಜೀವಯತೇಽರ್ಥಿನಃ ।

ಅನು – ತಪ್ತಮುದ್ರೆ ನೀಡುವವರು ಪರಮಮಿತ್ರನೇ ಸರಿ; ಆತನು ಜೀವನಾರ್ಥಿಗಳಿಗೆ ಬದುಕು ನೀಡುವವನಲ್ಲವೆ!

ವಿ – ೧. ವಿಷ್ಣುರಹಸ್ಯದ ವಚನ.

೨. ತಪ್ತಮುದ್ರೆ ನೀಡುವವರನ್ನು ಅತ್ಯಂತ ಹಿತೈಷಿಗಳೆಂದು ಗೌರವದಿಂದ ಕಾಣಬೇಕು ಎಂದು ಭಾವ.

## ಪ್ರತಿನಿತ್ಯ ಗೋಪೀಚಂದನ ಮುದ್ರಾಧಾರಣೆಯ ಮಹತ್ವ

೧೧೧. ಪಾಪಾನಾಂ ನಾಶಕಂ ತತ್ ಸ್ಯಾತ್ ಪುಣ್ಯಾನಾಂ ಚ ವಿವರ್ಧಕಮ್ ।
ವಿಷ್ಣುಪ್ರೀತಿಕರಂ ಭೂಯಸ್ತತೋಽಪಿ ಪ್ರತ್ಯಹಂ ಲಿಖೇತ್ ॥

ಅನು – ಚಕ್ರಾದಿಗಳ ಧಾರಣೆಯು ಪಾಪಗಳನ್ನು ಅಳಿಸುವುದು ಪುಣ್ಯಗಳನ್ನು ಬೆಳೆಸುವುದು; ವಿಶೇಷವಾಗಿ ಶ್ರೀಹರಿಗೆ ಪ್ರೀತಿಯನ್ನುಂಟು ಮಾಡುವುದು; ಆದ್ದರಿಂದ ಅದನ್ನು ಪ್ರತಿನಿತ್ಯ ಧರಿಸಬೇಕು.

ವಿ – ವಿಷ್ಣುರಹಸ್ಯದ ವಾಕ್ಯ.

೨. ಇಲ್ಲಿ ಪ್ರತಿನಿತ್ಯ ಧರಿಸಬೇಕು ಎಂಬ ಮಾತಿನಿಂದ ಗೋಪೀಚಂದನದಿಂದ ಪ್ರತಿನಿತ್ಯ ಚಕ್ರಶಂಖಾದಿಗಳ ಧಾರಣೆ ವಿಹಿತವಾಗಿದೆ ಎಂದು ತಿಳಿಯಬೇಕು.

೩. ಶಿಖಾಯಜ್ಞೋಪವೀತಗಳಿಲ್ಲದವನು ಹೇಗೆ ಕರ್ಮಗಳಿಗೆ ಅನರ್ಹನೆನಿಸುವನೋ ಹಾಗೆಯೇ ತಪ್ತಚಕ್ರಾದಿಗಳನ್ನು ಧರಿಸದವನು ಸಹ ಕರ್ಮಗಳಿಗೆ ಅನಧಿಕಾರಿಯೇ ಸರಿ :

ಶಿಖಾಯಜ್ಞೋಪವೀತಾಭ್ಯಾಂ ಯಥಾ ಹೀನೋ ನ ಕರ್ಮಸು ।
ಅಧಿಕಾರೀ ತಥಾ ನ ಸ್ಯಾತ್ ತಪ್ತಚಕ್ರಾದಿವರ್ಜಿತಃ ॥

## ಗುರುಗಳಿಂದಲೇ ತಪ್ತಮುದ್ರೆ ವಿಹಿತ

೧೧೨. ತಸ್ಮಾತ್ ತು ವಿಧಿನಾ ಬ್ರಹ್ಮನ್ ಗೃಹ್ಣೀಯಾತ್ ಸದ್ಗುರೋರಪಿ ।
ಯತೀನಾಂ ಯತಯಃ ಪ್ರೋಕ್ತಾಃ ಗುರವೋಽನ್ಯೇ ನ ಹಿ ಕ್ವಚಿತ್ ॥

ಅನು – ಆದ್ದರಿಂದ ಸದ್ಗುರುವಿನ ಮೂಲಕ ತಪ್ತಮುದ್ರೆಯನ್ನು ವಿಧ್ಯುಕ್ತವಾಗಿ ಧರಿಸಲೇ ಬೇಕು. ಯತಿಗಳಿಗೆ ಮಾತ್ರ ಯತಿಗಳೇ ತಪ್ತಮುದ್ರಾಧಾರಣೆ ನೀಡುವ ಗುರುಗಳು; ಇತರರು ಸರ್ವಥಾ ಅಲ್ಲ.

ವಿ – ಇದು ವಿಷ್ಣುರಹಸ್ಯದ ವಚನ.

೧೧೩. ಪರಸ್ಪರಂ ನಿರೀಕ್ಷ್ಯಾಥ ಪ್ರೀತ್ಯಾ ಶಿಷ್ಯಂ ವಿಸರ್ಜಯೇತ್ ।

ಅನು – ತಪ್ತಮುದ್ರೆ ನೀಡಿದ ಬಳಿಕ ಪರಸ್ಪರ ಪ್ರೀತಿಯಿಂದ ಒಬ್ಬರನ್ನೊಬ್ಬರು ನೋಡಿ ಗುರುವು ಶಿಷ್ಯನನ್ನು ಬೀಳ್ಕೊಡಬೇಕು.

ವಿ – ಇದು ಸಹ ವಿಷ್ಣುರಹಸ್ಯದ ವಚನ.

## ಏಕಾದಶಿಯಂದು ಸುದರ್ಶನಹೋಮದ ವಿಶೇಷ

೧೧೪. ಏಕಾದಶ್ಯಾಂ ಯದಾ ಬ್ರಹ್ಮನ್ ಸುದರ್ಶನಮಖೋ ಭವೇತ್ ।
ಅನ್ವಾಧಾನಾದಿದೇವಾನಾಂ ಮಂತ್ರಾನುಚ್ಚಾರ್ಯ ಕೇವಲಮ್ ।
ತತ್ಸ್ಥಾನೇ ವಿಷ್ಣುಮುದ್ದಿಶ್ಯ ಮೂಲೇನೈವ ಹುನೇತ್ ಸುಧೀಃ ॥

ಅನು – ಎಲೈ ಬ್ರಹ್ಮನೇ! ಏಕಾದಶಿಯಂದು ಸುದರ್ಶನಯಾಗ ಮಾಡುವಾಗ ಕೇವಲ ಅನ್ವಾಧಾನಾದಿ ದೇವತೆಗಳನ್ನು ಕುರಿತು ಮಂತ್ರಗಳನ್ನು ಉಚ್ಚರಿಸಿ ಅವರ ಸ್ಥಾನದಲ್ಲಿ ವಿಷ್ಣುವನ್ನೇ ಉದ್ದೇಶಿಸಿ ಮೂಲಮಂತ್ರದಿಂದ ಆಹುತಿಗಳನ್ನು ಸಮರ್ಪಿಸಬೇಕು.

ವಿ – ೧. ಇದು ದತ್ತಾತ್ರೇಯಸಂಹಿತೆಯ ವಾಕ್ಯ.

೨. ಏಕಾದಶಿಯಂದು ತಪ್ತಮುದ್ರಾಧಾರಣೆ ವಿಶೇಷವಾದ್ದರಿಂದ ಅಂದು ಸುದರ್ಶನಯಾಗ ಮಾಡಲೇಬೇಕು; ಆದರೆ ಆ ದಿನದಂದು ನಡೆಯುವ ಯಾಗದಲ್ಲಿ ಮೇಲೆ ತಿಳಿಸಿದಂತೆ ಆಹುತಿ ದಾನದಲ್ಲಿ ವಿಶೇಷವನ್ನು ಗಮನಿಸಬೇಕು ಎಂದು ಭಾವ.

೩. ಏಕಾದಶಿಯಂದು ಸುದರ್ಶನಯಾಗದ ಉಲ್ಲೇಖದ ಮೂಲಕ ವಿಶೇಷವಾಗಿ ಇದು ಆಷಾಢಶುಕ್ಲ ಏಕಾದಶಿಯಂದೇ ವಾರ್ಷಿಕತಪ್ತಮುದ್ರಾಧಾರಣೆ ವಿಹಿತ ಎಂಬ ವಿಶೇಷಾಂಶ ಸೂಚಿತ ಎಂದು ತಿಳಿಯಬಹುದು.

## ಸರ್ವರಿಗೂ ಶಂಖಚಕ್ರಗಳ ಧಾರಣೆ ಶ್ರುತಿವಿಹಿತ

೧೧೫. ಶಂಖಂ ಚಕ್ರಂ ಸ್ಫುಟಂ ಕುರ್ಯಾತ್ ಪ್ರತಪ್ತಂ ಬಾಹುಮೂಲಯೋಃ ।
ಸರ್ವಾಶ್ರಮೇಷು ವಸತಾಂ ಸ್ತ್ರೀಣಾಂ ಚ ಶ್ರುತಿಚೋದನಾತ್ ॥

ಅನು – ಗುರುವಾದವನು ಶ್ರುತಿಯು ತಿಳಿಸಿರುವುದರಿಂದ ಸಕಲ ಆಶ್ರಮಗಳಲ್ಲಿ ಇರುವ ಪುರುಷರಿಗೂ ಹಾಗೂ ಸ್ತ್ರೀಯರಿಗೂ ಬಾಹುಮೂಲಗಳಲ್ಲಿ ಕಾಯಿಸಿದ ಚಕ್ರ,ಶಂಖಗಳನ್ನು ಅಂಕನ ಮಾಡಿಸಬೇಕು.

ವಿ – ಇದು ವಸಿಷ್ಠಸ್ಮೃತಿಯ ವಚನ.

## ಏಕಾದಶಿಯಂದು ಶ್ರಾದ್ಧ ನಿಷಿದ್ಧ

೧೧೬. ಏಕಾದಶ್ಯಾಂ ತ್ರಯೋದಶ್ಯಾಂ ಯಚ್ಛ್ರಾದ್ಧಂ ಪ್ರತಿವತ್ಸರಮ್ ।
ದ್ವಾದಶ್ಯಾಮೇವ ಕುರ್ವೀತ ಏಷ ಧರ್ಮಃ ಸನಾತನಃ ॥

ಅನು – ಏಕಾದಶಿ ಮತ್ತು ತ್ರಯೋದಶಿಗಳಂದು ಒದಗುವ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ದ್ವಾದಶಿಯಂದೇ ಆಚರಿಸಬೇಕು; ಇದು ಸನಾತನ ಧರ್ಮ.

ವಿ – ಇದು ಗರುಡಪುರಾಣದ ವಚನ.

೨. ಏಕಾದಶಿಯಂದು ಶ್ರಾದ್ಧ ಸರ್ವಥಾ ನಿಷಿದ್ಧವಾದ್ದರಿಂದ ಅಂದಿನ ಶ್ರಾದ್ಧವನ್ನು ದ್ವಾದಶಿಯಂದೇ ಮಾಡಬೇಕು. ಅದರಂತೆ ದ್ವಾದಶಿಶ್ರಾದ್ಧಕ್ಕೂ ದ್ವಾದಶಿಯೇ ವಿಹಿತ. ದ್ವಾದಶಿತಿಥಿಯು ಸ್ವಲ್ಪವೇ ಇದ್ದಲ್ಲಿ ಅಂದು ಒದಗುವ ತ್ರಯೋದಶಿ ಶ್ರಾದ್ಧವನ್ನೂ ದ್ವಾದಶಿಯಂದೇ ಸಾಧನೆಗೆ ವಿಹಿತವಾದ ಕಾಲದಲ್ಲೇ ಆಚರಿಸಬೇಕು ಎಂಬುದು ವಿಶೇಷ. (ವಿವರಗಳಿಗೆ ನಮ್ಮ ಪ್ರಕಾಶನದ ''ಏಕಾದಶೀವ್ರತ'' ಪುಸ್ತಕವನ್ನು ನೋಡಬಹುದು).

೩. ತ್ರಯೋದಶೀತಿಥಿಯು ತ್ರಯೋದಶಿಯಂದು ಒದಗುವ ಪ್ರಸಂಗದಲ್ಲಿ ಮಾತ್ರ ತ್ರಯೋದಶಿಶ್ರಾದ್ಧವನ್ನು ತ್ರಯೋದಶಿಯಲ್ಲಿಯೇ ಮಾಡಬೇಕು ಎಂಬ ವಿಶೇಷವನ್ನು ಗಮನಿಸಬೇಕು.

## ಏಕಾದಶಿಯಂದು ಶ್ರಾದ್ಧಭೋಜನ ಸರ್ವಥಾ ನಿಷಿದ್ಧ

೧೧೭. ಏಕಾದಶ್ಯಾಂ ವಿಮೂಢಾತ್ಮಾ ಜುಹುಯಾದ್ಯದಿ ಭೂಸುರಾನ್ ।
ನಿಷ್ಫಲಂ ತದ್ಭವೇದ್ಧೋಮಃ ಸ್ವಯಂ ಚ ನರಕಂ ವ್ರಜೇತ್ ॥

ಅನು – ಮೂರ್ಖತನದಿಂದ ಏಕಾದಶಿಯಂದೇ ಹೋಮ, ಬ್ರಾಹ್ಮಣಭೋಜನ ಮಾಡಿಸಿದಲ್ಲಿ ಅವು ನಿಷ್ಫಲವಾಗುವುದು. ಮಾಡಿದ ತಪ್ಪಿಗೆ ಮುಂದೆ ನರಕಕ್ಕೂ ಹೋಗ-ಬೇಕಾಗುವುದು.

ವಿ – ೧. ಭವಿಷ್ಯೋತ್ತರಪುರಾಣದ ವಚನ.

೨. ಏಕಾದಶಿಯಂದು ಸುದರ್ಶನ ಹೋಮದ ಹೊರತು ಬೇರೆ ಎಲ್ಲ ಬಗೆಯ ಹೋಮಗಳೂ ನಿಷಿದ್ಧ; ಅದರಂತೆ ಶ್ರಾದ್ಧಭೋಜನದಿಂದ ಹಿಡಿದು ಎಲ್ಲ ಬಗೆಯ ಭೋಜನಗಳೂ ನಿಷಿದ್ಧ ಎಂಬುದು ವಿಶೇಷ.

೩. ಏಕಾದಶಿಯಂದು ಶ್ರಾದ್ಧ ಒದಗಿದ ಪ್ರಸಂಗದಲ್ಲಿ ಉಪವಾಸವನ್ನು ತೊರೆದು ಶ್ರಾದ್ಧ, ಬ್ರಾಹ್ಮಣಭೋಜನಗಳನ್ನು ಕೆಲವರು ಮಾಡಿಸುವರು; ಅದು ಅಶಾಸ್ತ್ರೀಯ ಎಂಬುದು ಇದರಿಂದ ಸ್ಫುಟಪಡುವುದು.

## ಏಕಾದಶಿಯಂದು ಔರ್ಧ್ವದೈಹಿಕಕಾರ್ಯದ ಬಗ್ಗೆ ವಿಶೇಷ

೧೧೮. ಏಕಾದಶ್ಯಾಂ ಯದಾ ಬ್ರಹ್ಮನ್ ಬ್ರಾಹ್ಮಣೋ ಮ್ರಿಯತೇ ಯದಿ।
ಮಂತ್ರತಃ ಸಕಲಂ ಕಾರ್ಯಂ ಪುತ್ರೈಸ್ತಸ್ಯೌರ್ಧ್ವದೈಹಿಕಮ್ ॥

ಅನು – ಏಕಾದಶಿಯಂದು ಬ್ರಾಹ್ಮಣನು ಮೃತನಾದಲ್ಲಿ ಅವನ ಪುತ್ರರು ಔರ್ಧ್ವದೈಹಿಕ ಕಾರ್ಯಗಳನ್ನು ಕೇವಲ ಮಂತ್ರಗಳಿಂದಲೇ ಮಾಡಬೇಕು.

ವಿ – ೧. ಇದು ಭಾರದ್ವಾಜಸಂಹಿತೆಯ ವಚನ.

೨. ಏಕಾದಶಿಯಂದು ಮೃತರಾದವರಿಗೆ ದಹನಸಂಸ್ಕಾರದ ಹೊರತು ಇತರೆಲ್ಲ ಸಂಸ್ಕಾರಗಳನ್ನು ಕೇವಲ ಮಂತ್ರಗಳಿಂದಲೇ ಮಾಡಬೇಕು ಎಂಬುದು ವಿಶೇಷ.

## ಆಹಿತಾಗ್ನಿಯ ಬಗ್ಗೆ ವಿಶೇಷ

೧೧೯. ಯದ್ಯಾಹಿತಾಗ್ನಿರ್ವಿಪ್ರಃ ಸ್ಯಾನ್ನಾಗ್ನೌ ಹೋಮಂ ಸಮಾಚರೇತ್।
ವಿಷ್ಣೋರ್ದಿನೇ ಮುನಿಶ್ರೇಷ್ಠ ಯದಿ ತತ್ಪ್ರೀತಿಮಿಚ್ಛತಾ।
ನ ತತ್ರ ಕರ್ಮಲೋಪಃ ಸ್ಯಾದ್ವಿಧಿರೇಷಃ ಸನಾತನಃ ॥

ಅನು – ಆಹಿತಾಗ್ನಿಯಾದ ವಿಪ್ರನೂ ಸಹ ಏಕಾದಶಿಯಂದು ಅಗ್ನಿಯಲ್ಲಿ ಹೋಮ-ಗಳನ್ನು ಮಾಡಕೂಡದು; ಶ್ರೀಹರಿಪ್ರೀತಿಗಾಗಿ ಮೇಲೆ ಹೇಳಿದಂತೆಯೇ ನಡೆಸಬೇಕು; ಇದು ಕರ್ಮಲೋಪವೆನ್ನಿಸದು; ಇದು ಸನಾತನವಿಧಿ.

ವಿ – ೧. ಇದು ಸಹಭಾರದ್ವಾಜಸಂಹಿತೆಯ ವಚನ.

೨. ಆಹಿತಾಗ್ನಿವಿಪ್ರನೂ ಸಹ ಏಕಾದಶಿಯಂದು ಅಗ್ನಿಯಲ್ಲಿ ಹೋಮಿಸಕೂಡದು; ಅದು ವಿಧಿಲೋಪವೆನ್ನಿಸದು; ಇದರಂತೆ ವಟುವಿಗೆ ಅಗ್ನಿಕಾರ್ಯ, ಗೃಹಸ್ಥರಿಗೆ ವೈಶ್ವದೇವಗಳೂ ಸಹ ನಿಷಿದ್ಧ ಎಂದು ತಿಳಿಯಬೇಕು.

೩. ಈ ನಿಯಮ ಶ್ರೀಕೃಷ್ಣಜನ್ಮಾಷ್ಟಮಿ, ಶ್ರೀಕೃಷ್ಣಜಯಂತಿ ಉಪವಾಸಗಳಿಗೂ ಅನ್ವಯಿಸುತ್ತದೆ ಎಂಬುದನ್ನು ಗಮನಿಸಬೇಕು.

## ಏಕಾದಶಿಯಂದು ದೇವಕಾರ್ಯ, ಪಿತೃಕಾರ್ಯಾದಿಗಳು ನಿಷಿದ್ಧ

೧೨೦. ದೇವಾನಾಂ ಚ ಋಷೀಣಾಂ ಚ ಪಿತೃಣಾಂ ಚ ವಿಶೇಷತಃ।
ಅನ್ನಂ ನ ದದ್ಯಾತ್ ಕೃಷ್ಣಾಹ್ನೇ ಭಗವಂತಂ ಹರಿಂ ವಿನಾ ॥

ಅನು – ಭಗವಂತನಾದ ಶ್ರೀಹರಿಯ ಹೊರತು ಹರಿದಿನದಂದು ದೇವತೆಗಳಿಗೂ ಋಷಿಗಳಿಗೂ ಪಿತೃಗಳಿಗೂ ಅನ್ನವನ್ನು ಸರ್ವಥಾ ಸಮರ್ಪಿಸಕೂಡದು.

ವಿ – ೧. ಇದು ದತ್ತಾತ್ರೇಯಸಂಹಿತೆಯ ವಚನ.

೨. ವಿಷ್ಣುವಿನ ಹೊರತು ಇತರದೇವತೆಗಳನ್ನು ಋಷಿಗಳನ್ನು ಉದ್ದೇಶಿಸಿ ಮಾಡುವ ಸಕಲಕಾರ್ಯಗಳೂ ಏಕಾದಶಿಯಂದು ನಿಷಿದ್ಧ; ಅದರಂತೆ ಪಿತೃಗಳಿಗೂ ಸಹ ಇದರಿಂದ ಶ್ರಾದ್ಧ ಮಾತ್ರವಲ್ಲದೇ ದೇವತರ್ಪಣ, ಋಷಿತರ್ಪಣ, ಆಚಾರ್ಯತರ್ಪಣ ಹಾಗೂ ಪಿತೃ ತರ್ಪಣ-ಗಳನ್ನೂ ಸಹ ಏಕಾದಶಿಯಂದು ನೀಡುವಂತಿಲ್ಲ.

೩. ಇಲ್ಲಿ ಕೃಷ್ಣಾಹೇ ಎಂಬ ಪದದಿಂದ ಈ ನಿಯಮ ಕೃಷ್ಣಜನ್ಮಾಷ್ಟಮಿ ಜಯಂತೀ ದಿನಗಳಿಗೂ ಸಹ ಅನ್ವಯಿಸುವುದು ಎಂದು ತಿಳಿಯಬೇಕು.

### ಶ್ರುತಿಯಲ್ಲಿ ಏಕಾದಶೀ ಉಪವಾಸದ ಮಹತ್ವ

೧೨೧. ನಾರಾಯಣಾದ್ಬ್ರಹ್ಮಾ ಜಾಯತೇ ನಾರಾಯಣಾದ್ರುದ್ರೋ ಜಾಯತೇ ಇತಿ ।
ಸಂ ಬಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾಭೂಮೀ ಜನಯನ್ ದೇವ
ಏಕಃ । ಪುರುಷೋಂತರ್ಯಾಮೋऽಂತರ್ಯಾಮ ಆದಿತ್ಯಸ್ತೇಜೋ ಭವತಿ ।
ಸ ಆದಿತ್ಯಲೋಕೋ ಭವತಿ ಸ ವಿಷ್ಣುರೇವ ಭವತಿ । ತಪ್ತಂ ಚಕ್ರಂ ದ್ವಿಭುಜೇ
ಧಾರ್ಯಾಗ್ನಿಹೋತ್ರಮವಲೋಕೋ ಭವತಿ । ತಸ್ಮಾದ್ದ್ವಿರೇಖಂ ಭವತಿ ।
ಬ್ರಹ್ಮಣಃ ಸಾಯುಜ್ಯಂ ಸಲೋಕತಾಂ ಜಯತಿ । ಯ ಏವಂ ವೇದ ।
ಏಕಾದಶ್ಯಾಂ ಪಕ್ಷೇ ಪಕ್ಷೇ ಚೋಪವಸೇತ್ । ತಸ್ಮಿನ್ನ ಹೋತವ್ಯಮ್, ನ
ಭೋಕ್ತವ್ಯಮ್, ಪಿತ್ರ್ಯರ್ಥಮ್ । ನ ಚ ಸ್ವಾಹಾಕಾರೋ ನ ಸ್ವಧಾಕಾರ ಇತಿ ।
ನ ಸ್ವಪೇನ್ನ ವ್ರಜೇನ್ನ ಚ ಪಿಬೇತ್ ।

ಅನು – ನಾರಾಯಣನಿಂದ ಬ್ರಹ್ಮ ಜನಿಸಿದ; ನಾರಾಯಣನಿಂದ ರುದ್ರ ಜನಿಸಿದ; ದೇವನಾದ ವಿಷ್ಣುವೊಬ್ಬನೇ ಬಾಹುಗಳಿಂದ ಅಗ್ನ್ಯಾದಿಗಳನ್ನು ಪ್ರಜ್ವಲಿಸುವನು; ದ್ಯಾವಾ ಭೂಮಿಗಳನ್ನು ಹುಟ್ಟಿಸುವನು; ಅವನೊಬ್ಬನೇ ಕ್ರೀಡಾದಿಗುಣವಿಶಿಷ್ಟನಾದ ದೇವ; ಅವನೊಬ್ಬನೇ ಸಕಲರ ಅಂತರ್ಯಾಮಿ; ಅವನೇ ಆದಿತ್ಯಾದಿಗಳಿಗೆ ತೇಜೋನಿಯಾಮಕ; ತಪ್ತಚಕ್ರವನ್ನು ತೋಳಿನಲ್ಲಿ ಧರಿಸಿ ಹೋಮಾದಿಗಳನ್ನು ಮಾಡುವುದೇ ಶಾಸ್ತ್ರಸಮ್ಮತ; ಹಣೆಯ ಮೇಲಿನ ಊರ್ಧ್ವಪುಂಡ್ರವನ್ನು ದ್ವಿರೇಖೆಯನ್ನಾಗಿಯೇ ಧರಿಸಬೇಕು; ಅದರಿಂದ ಭಗವಂತನ ಸಾಯುಜ್ಯ, ಸಾಲೋಕ್ಯಗಳು ಲಭಿಸುವವು, ಹೀಗೆ ತಿಳಿಯಬೇಕು; ಏಕಾದಶಿಯಂದು ಪ್ರತಿಪಕ್ಷದಲ್ಲೂ ಉಪವಾಸ ಮಾಡಲೇಬೇಕು. ಅಂದು ಹೋಮಿಸ-

ಕೂಡದು; ಅಂದು ಭೋಜನ ಮಾಡಕೂಡದು. ಪಿತೃಕಾರ್ಯಗಳನ್ನೂ ಮಾಡಕೂಡದು; ಅಂದು ಸ್ವಾಹಾಕಾರವೂ ಇಲ್ಲ ಸ್ವಧಾಕಾರವೂ ಇಲ್ಲ; ಅಂದು ಮಲಗಕೂಡದು; ಬೇರೆ ಸ್ಥಳಗಳಿಗೆ ಹೋಗಕೂಡದು; ಏನನ್ನೂ ಕುಡಿಯಕೂಡದು.

ವಿ – ೧. ಇದು ಶತಪಥಬ್ರಾಹ್ಮಣದ ವಚನ(ಸ್ಮೃತ್ಯರ್ಥಸಾಗರಾದಿಗಳಲ್ಲೂ ಉದ್ಧೃತ).

೨. ಈ ಶ್ರುತಿವಾಕ್ಯದಲ್ಲಿ ವಿಷ್ಣುಸರ್ವೋತ್ತಮತ್ವ ತಪ್ತಮುದ್ರಾಧಾರಣೆ ಗೋಪೀಚಂದನ ಧಾರಣೆ ಏಕಾದಶ್ಯುಪವಾಸ ಏಕಾದಶಿಯಂದು ದೇವಕಾರ್ಯಪಿತೃಕಾರ್ಯಗಳ ನಿಷೇಧ, ನಿದ್ರಾ ಸಂಚಾರ ಮೊದಲಾದವುಗಳ ನಿಷೇಧ ಎಲ್ಲವೂ ಸಹ ಸ್ಫುಟವಾಗಿ ನಿರೂಪಿತವಾಗಿವೆ.

೩. ಶ್ರೀಪುರಂದರದಾಸರು 'ಹರಿದಿನದಲಿ ಉಂಡ ನರರಿಗೆ ಘೋರ ನರಕ ತಪ್ಪದು ಎಂದು ಶ್ರುತಿಯು ಸಾರುತಲಿದೆ' ಎಂದು ನುಡಿದಿರುವುದು ಈ ಶ್ರುತಿಯ ಹಿನ್ನೆಲೆಯಲ್ಲಿ ಎಂದು ಭಾವಿಸಬಹುದು.

## ಎರಡಕ್ಷರದಿಂದ ಮೃತ್ಯು ಮೂರಕ್ಷರದಿಂದ ಅಮೃತ

೧೨೨. ದ್ವ್ಯಕ್ಷರಸ್ತು ಭವೇನ್ಮೃತ್ಯುಸ್ತ್ರ್ಯಕ್ಷರಂ ಬ್ರಹ್ಮ ಶಾಶ್ವತಮ್ ।
ಮಮೇತಿ ಚ ಭವೇನ್ಮೃತ್ಯುರ್ನ ಮಮೇತಿ ಚ ಶಾಶ್ವತಮ್ ॥

ಅನು – ಎರಡಕ್ಷರದಲ್ಲಿ ಮರಣವಿದೆ; ಮೂರಕ್ಷರದಲ್ಲಿ ಬ್ರಹ್ಮಪ್ರಾಪ್ತಿಗೆ ಸಾಧನವಿದೆ; ''ಮಮ''(ನನ್ನದು) ಎಂದರೆ ಮರಣ; ''ನ ಮಮ''(ನನ್ನದಲ್ಲ) ಎಂದರೆ ಶಾಶ್ವತಸುಖ.

ವಿ – ೧. ಇದು ಮಹಾಭಾರತಶಾಂತಿಪರ್ವದ (೧೩/೪)ವಚನ.

೨. ''ಮಮ''ಕಾರ ಬಂಧಕ; ಮಮಕಾರದ ತ್ಯಾಗ ಮೋಚಕ ಎಂದು ಭಾವ.

## ಶ್ರೀಹರಿಯ ನಾಮ ಸಂಸಾರಪರಿಹಾರಕ

೧೨೩. ಪ್ರಾಣಕಾಂತಾರಪಾಥೇಯಂ ಸಂಸಾರಚ್ಛೇದಭೇಷಜಮ್ ।
ದುಃಖಶೋಕಪರಿತ್ರಾಣಂ ಹರಿರಿತ್ಯಕ್ಷರದ್ವಯಮ್ ॥

ಅನು – 'ಹರಿ'ಯೆಂಬ ಎರಡಕ್ಷರ ಜೀವನವೆಂಬ ಅಡವಿಯಲ್ಲಿನ ಬುತ್ತಿ; ಸಂಸಾರವನ್ನು ಪರಿಹರಿಸುವ ಔಷಧಿ; ದುಃಖಶೋಕಗಳ ಪರಿಹಾರದ ಸಾಧನ.

ವಿ – ೧. ಇದು ಮಹಾಭಾರತಶಾಂತಿಪರ್ವದ ಭೀಷ್ಮಸ್ತವರಾಜದ (೪೭/೯೫)ವಚನ.

೨. ಇಲ್ಲಿ ಹರಿನಾಮವನ್ನು ಬುತ್ತಿ, ಔಷಧಿ ಮತ್ತು ಪರಿತ್ರಾಣ ಎಂದು ಕರೆಯುವ ಮೂಲಕ ಅದರ ಮಹಿಮೆಯನ್ನು ಸ್ಫುಟವಾಗುವಂತೆ ನಿರೂಪಿಸಿರುವುದು ಗಮನಾರ್ಹ.

## ರಾಮತೀರ್ಥದ ಮಾಹಾತ್ಮ್ಯ

೧೨೪. ಜನ್ಮಾಂತರಶತಂ ಸಾಗ್ರಂ ಯನ್ಮಯಾ ದುಷ್ಕೃತಂ ಕೃತಮ್ ।
ತತ್ ಸರ್ವಂ ವಿಲಯಂ ಯಾತು ರಾಮತೀರ್ಥಾಭಿಷೇಚನಮ್ ॥

ಅನು – ಹಿಂದೂ ಹಾಗು ಮುಂದೆ ನಾನು ನೂರಾರು ಜನ್ಮಗಳಲ್ಲಿ ಮಾಡಿದ ಸಕಲ ಪಾಪವೂ ಶ್ರೀರಾಮತೀರ್ಥದಲ್ಲಿ ಸ್ನಾನಮಾಡುವುದರಿಂದ ಪರಿಹಾರವಾಗಲಿ.

ವಿ – ಇದು ಗಯಾಮಾಹಾತ್ಮ್ಯದ ವಚನ.

## ಶ್ರೀಹರಿಯೇ ಸಂಸಾರಸಾಗರಕ್ಕೆ ನೌಕೆ

೧೨೫. ಸಂಸಾರಸಾಗರೇ ಘೋರೇ ಮಜ್ಜತಾಂ ಮುನಿಪುಂಗವಾಃ ।
ಶ್ರೀಶಪಾದಪ್ಲವಾದನ್ಯತ್ ತಾರಕಂ ನ ಹಿ ಕುತ್ರಚಿತ್ ।
ಶ್ವಲಾಂಗೂಲಂ ಸಮಾಶ್ರಿತ್ಯ ಸಾಗರಂ ತರ್ತುಮಿಚ್ಛತಿ ॥

ಅನು – ಎಲೈ ಮುನಿಶ್ರೇಷ್ಠರೇ! ಭಯಂಕರವಾದ ಸಂಸಾರಸಮುದ್ರದಲ್ಲಿ ಮುಳುಗುತ್ತಿರುವವರಿಗೆ ಲಕ್ಷ್ಮೀಪತಿಯಾದ ಶ್ರೀಹರಿಯ ಪಾದದ ಹೊರತು ಮತ್ತೊಂದು ನೌಕೆ ಎಲ್ಲೂ ಇಲ್ಲ; ಇತರರನ್ನು ಆಶ್ರಯಿಸಿ ಸಂಸಾರವನ್ನು ದಾಟುವ ಪ್ರಯತ್ನವು ನಾಯಿಯ ಬಾಲವನ್ನು ಹಿಡಿದು ಸಮುದ್ರ ದಾಟಲು ಬಯಸಿದಂತೆ.

ವಿ – ೧. ಸಂಸಾರಸಮುದ್ರವನ್ನು ದಾಟಿಸಲು ಶ್ರೀಹರಿಯ ಪಾದಗಳೇ ನೌಕೆ. ಶ್ರೀಮದ್ಭಾಗವತ-ಪುರಾಣದಲ್ಲಿ ದಶಮಸ್ಕಂಧದ(೧೦/೩/೩೧) ಶ್ರೀಕೃಷ್ಣನ ಗರ್ಭಸ್ತುತಿಯಲ್ಲಿ ಬಂದಿರುವ ಶ್ಲೋಕ ಇದೇ ಭಾವವನ್ನು ತಿಳಿಸುವುದು ಗಮನಾರ್ಹ :

ತ್ವಯ್ಯಂಬುಜಾಕ್ಷಾಖಿಲಸತ್ವಧಾಮ್ನಿ ಸಮಾಧಿನಾಽಽವೇಶಿತಚೇತಸೋ ಯೇ ।
ತ್ವತ್ಪಾದಪೋತೇನ ಮಹತ್ಕೃತೇನ ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥

೨. ಶ್ರೀಹರಿಯ ಪಾದ ವಿಚಿತ್ರನೌಕೆ. ಗುರಿಯೂ ಅದೇ ನೌಕೆಯೂ ಅದೇ ಆಗಿರುವುದು ಇಲ್ಲಿನ ಮಹತ್ವ. ಆದ್ದರಿಂದ ಇದು ಬೇರೆ ಎಲ್ಲ ನೌಕೆಗಳಿಗಿಂತ ವಿಭಿನ್ನವಾದುದು ಎಂಬುದು ಸ್ವಾರಸ್ಯ :

ಭಗವತ್ಪಾದನೌಕಾ ಯಾ ನಾನ್ಯನೌಕಾಸಮಾ ಭವೇತ್ । (ಭಾ.ತಾ. )

೩. ತ್ರಿಜಗತ್ಪೋತ ಎಂಬ ದ್ವಾದಶಸ್ತೋತ್ರದ ಮಾತು ಇಲ್ಲಿ ಗಮನಾರ್ಹ.

೪. ಸರ್ವೋತ್ತಮತ್ವೇನ ಅನ್ಯದೇವತೆಗಳ ಪಾದದ ಆಶ್ರಯಣ ಮೊದಲಾದ ಇತರ ಎಲ್ಲ ಸಾಧನಗಳೂ ಸಹ ನಾಯಿಬಾಲವನ್ನು ಹಿಡಿದು ಸಮುದ್ರದಾಟುವ ಯತ್ನ ಎಂಬ ಮಾತಿನಿಂದ ಅವೆಲ್ಲವೂ ಅತ್ಯಂತ ನಿರರ್ಥಕ ಎಂಬ ಭಾವ ಅತ್ಯಂತ ಸಮರ್ಥವಾಗಿ ಸೂಚಿತವಾಗಿದೆ.

## ಶ್ರೀಹರಿಯೇ ಪರಗತಿ

೧೨೬. ನ ಹರೇಃ ಸದೃಶಃ ಕಶ್ಚಿತ್ ನ ಹರೇಃ ಸದೃಶೀ ಗತಿಃ ।
ನ ಹರೇಃ ಸದೃಶಂ ಜ್ಞಾನಂ ನ ಹರೇಃ ಸದೃಶಂ ತಪಃ ।
ನ ಹರೇಃ ಸದೃಶಂ ತೀರ್ಥಂ ನ ಶಾಸ್ತ್ರಂ ವೈಷ್ಣವಂ ಸಮಮ್ ॥

ಅನು – ಶ್ರೀಹರಿಗೆ ಸಮನಾದವನು ಬೇರಾವನೂ ಇಲ್ಲ; ಶ್ರೀಹರಿಯಂತಹ ಗತಿಯೂ ಮತ್ತೊಂದಿಲ್ಲ; ಹರಿಯ ಜ್ಞಾನವನ್ನು ಹೋಲುವ ಜ್ಞಾನವೂ ಇಲ್ಲ; ಹರಿಯನ್ನು ಕುರಿತ ತಪಸ್ಸಿನಂತಹ ಬೇರೆ ತಪಸ್ಸೂ ಇಲ್ಲ; ಹರಿಯಂತಹ ಮತ್ತೊಂದು ತೀರ್ಥವೂ ಇಲ್ಲ; ವೈಷ್ಣವ ಶಾಸ್ತ್ರಕ್ಕೆ ಸಮನಾದ ಮತ್ತೊಂದು ಶಾಸ್ತ್ರವೂ ಇಲ್ಲ.

ವಿ – ಇದು :

ನೇದೃಶಂ ಸ್ಥಲಮಲಂ ಶಮಲಘ್ನಂ ನಾಸ್ಯ ತೀರ್ಥಸಲಿಲಸ್ಯ ಸಮಂ ವಾ ।
ನಾಸ್ತಿವಿಷ್ಣುಸದೃಶಂ ನನು ದೈವಂ ನಾಸ್ಮದುಕ್ತಿ ಸದೃಶಂ ಹಿತರೂಪಮ್ ॥(ಮ.ವಿ.೬/೪೭)

– ಎಂಬ ಶ್ರೀಮಧ್ವಸಂದೇಶದಂತಿರುವುದು ಗಮನಾರ್ಹ.

## ತೀರ್ಥದಾನಾದಿಗಳಿಗೆಲ್ಲ ಕೃಷ್ಣಾರ್ಪಣವೇ ಸಾರ್ಥಕ್ಯ

೧೨೭. ಯಾನಿಯಾನಿ ಚ ತೀರ್ಥಾನಿ ದಾನವ್ರತತಪಾಂಸಿ ಚ ।
ತಾನಿ ಸರ್ವಾಣಿ ಸಿದ್ಧ್ಯಂತಿ ವಿಷ್ಣೋಃ ಪಾದಾರ್ಪಣೇನ ವೈ ॥

ಅನು – ಸಕಲ ತೀರ್ಥಗಳೂ, ದಾನಗಳೂ, ತಪಸ್ಸುಗಳೆಲ್ಲವೂ ಸಿದ್ಧಿಸುವುದು ಶ್ರೀಹರಿಯ ಪಾದಕ್ಕೆ ಸಮರ್ಪಿಸಿದಾಗ ಮಾತ್ರವೇ.

ವಿ – ೧. ಕೃಷ್ಣಾರ್ಪಣವಾಗದ ತೀರ್ಥದಾನಾದಿಗಳೆಲ್ಲ ನಿರರ್ಥಕ ಎಂದು ಭಾವ.

೨. ''ತಪಸ್ವಿನೋ ದಾನಪರಾ ಯಶಸ್ವಿನೋ ಮನಸ್ವಿನೋ ಮಂತ್ರವಿದಃ ಸುಮಂಗಲಾಃ ।
ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥''

ಎಂಬ ಭಾಗವತದವಾಕ್ಯ (೨/೪/೧೭) ವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

## ಶ್ರೀಹರಿಗೆ ಸಮರ್ಪಿತವಾಗದ್ದು ಕೇವಲ ಶ್ರಮಮಾತ್ರ

೧೨೮. ನಾರ್ಪಯಂತಿ ಹರೌ ಲೋಕೇ ಪುಣ್ಯಾನಿ ವಿವಿಧಾನಿ ಚ ।
ವಿಫಲಾನಿ ಭವಂತ್ಯೇವ ಶ್ರಮ ಏವ ಫಲಂ ಲಭೇತ್ ॥

ಅನು – ಲೋಕದಲ್ಲಿ ಬಗೆ ಬಗೆಯ ಪುಣ್ಯಕಾರ್ಯಗಳೆಲ್ಲ ಶ್ರೀಹರಿಗೆ ಅರ್ಪಿತವಾಗದಿದ್ದಾಗ ನಿಷ್ಫಲವೆನ್ನಿಸುವವು; ಶ್ರಮವಷ್ಟೇ ಅವುಗಳಿಗೆ ಫಲ.

ವಿ : ಇದು ಈ ಕೆಳಗಿನ ಭಾಗವತಶ್ಲೋಕಕ್ಕೆ ಸಂವಾದಿಯಾಗಿದೆ : (೧/೨/೮)

ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಸು ಯಃ ।
ನೋತ್ಪಾದಯೇದ್ಯದಿ ರತಿಂ ಶ್ರಮ ಏವ ಹಿ ಕೇವಲಮ್ ॥

## ಶಿವನ ಸ್ಥಾನ

೧೨೯. ಶಂಭುಃ ಸರ್ವಸುರಾಧ್ಯಕ್ಷಃ ಇಂದ್ರಚಂದ್ರಾದಿಕೇಷು ಚ ॥

ಅನು – ಇಂದ್ರಚಂದ್ರಮೊದಲಾದವರಲ್ಲಿ ಸಕಲಸುರರಿಗೆ ನಾಯಕನೆಂದರೆ ಶಿವನೇ ಆಗಿರುವನು.

ವಿ – ೧. ಶಂಭುವು ಸರ್ವ ಸುರರಲ್ಲೂ ಶ್ರೇಷ್ಠ ಎಂಬ ಕೆಲವು ಪುರಾಣಾದಿಗಳಲ್ಲಿನ ವಾಕ್ಯಗಳಿಗೆ ಇದು ವಿವರಣೆಯಂತಿದೆ.

೨. ಇದರಿಂದ ವಿಷ್ಣುವಿನ ಹೊರತು ಇತರ ಯಾವುದೇ ದೇವತೆಗಳಿಗೂ ಸರ್ವನಾಯಕತ್ವ-ವನ್ನು ಹೇಳಿದಾಗ ಆ ವಾಕ್ಯಗಳಿಗೆ ಈ ರೀತಿಯಲ್ಲಿ ಸಮ್ಮತ್ರಿಸಿದ ಗುಂಪಿನಲ್ಲಿ ಮಾತ್ರ ಎಂಬ ಅರ್ಥವನ್ನು ತಿಳಿಯಬೇಕು ಎಂದು ಇದರಿಂದ ಸೂಚಿತವಾಗುತ್ತದೆ.

## ಗಂಗಾ ನಾಮಸ್ಮರಣೆಯು ಸದ್ಗತಿದಾಯಕ

೧೩೦. ಯೋಜನಾನಾಂ ಸಹಸ್ರೇಷು ತಿಷ್ಠಂತೋಽಪಿ ಮಹೀಪತೇ ।
ಗಂಗಾಗಂಗೇತಿ ಜಲ್ಪಂತಸ್ತೇ ವೈ ಪುಣ್ಯಗತಿಂ ಗತಾಃ ॥

ಅನು – ಎಲೈ ರಾಜನೇ! ಸಾವಿರಾರು ಯೋಜನ ದೂರದಲ್ಲಿ ನೆಲೆಸಿದ್ದರೂ ಸಹ ಗಂಗಾ ಗಂಗಾ ಎಂದು ಉಚ್ಚರಿಸುವವರು ಪುಣ್ಯಗತಿಯನ್ನು ಹೊಂದುವರು.

ವಿ – ಇದು :

ಗಂಗಾ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ ।
ಮುಚ್ಯತೇ ಸರ್ವಪಾಪೇಭ್ಯಃ ವಿಷ್ಣುಲೋಕಂ ಸ ಗಚ್ಛತಿ ॥

– ಎಂಬ ಶ್ಲೋಕವನ್ನು ಹೋಲುವುದು ಗಮನಾರ್ಹ.

## ಗಂಗೆಯು ಇತರ ತೀರ್ಥಗಳಿಗಿಂತ ಮಿಗಿಲು

೧೩೧. ಅನ್ಯತೀರ್ಥೇಷು ಗಂಗಾಯಾಃ ಸ್ಮರಣಂ ಕ್ರಿಯತೇ ನೃಭಿಃ ।
ತಸ್ಮಾದ್ಗಂಗಾಸಮಂ ತೀರ್ಥಂ ನ ಹಿ ಬ್ರಹ್ಮಾಂಡಗೋಲಕೇ ॥

ಅನು – ಇತರ ತೀರ್ಥಗಳಲ್ಲಿ ಸ್ನಾನ ಮಾಡುವಾಗ ಜನರು ಗಂಗೆಯ ಸ್ಮರಣೆಯನ್ನು ಮಾಡುವರು. ಆದ್ದರಿಂದ ಬ್ರಹ್ಮಾಂಡಮಂಡಲದಲ್ಲಿ ಗಂಗೆಗೆ ಸಮನಾದ ಮತ್ತೊಂದು ತೀರ್ಥ ಸರ್ವಥಾ ಇಲ್ಲ.

ವಿ – ೧. ಕೃಷ್ಣಾ ಮೊದಲಾದ ಇತರ ಯಾವುದೇ ನದಿ ತೀರ್ಥ ಮೊದಲಾದವುಗಳಲ್ಲಿ ಸ್ನಾನ ಮಾಡುವಾಗ ಗಂಗಾಸ್ಮರಣೆ ವಿಹಿತವಾಗಿದೆ ಎಂದ ಮೇಲೆ ಗಂಗೆ ಅವೆಲ್ಲವುಗಳಿಗಿಂತಲೂ ಮಿಗಿಲು ಎಂಬುದು ಕೈಮುತ್ಯ ಸಿದ್ಧ ಎಂದು ಭಾವ.

೨. ಇದರಿಂದ ಇತರ ತೀರ್ಥಗಳಲ್ಲಿ ಗಂಗೆಯನ್ನು ಸ್ಮರಿಸಿಯೇ ಸ್ನಾನ ಮಾಡಬೇಕೆಂಬ ವಿಧಿಯೂ ಸಹ ಸೂಚಿತವಾಯಿತು ಎಂದು ತಿಳಿಯಬೇಕು.

### ಗಂಗಾಸನ್ನಿಧಾನದಿಂದಲೇ ಇತರ ತೀರ್ಥಗಳಿಗೆ ಮಹತ್ವ

೧೩೨. ಯತ್ರ ಕುತ್ರಾಪಿ ತೀರ್ಥೇಷು ಗಂಗಾಯಾಃ ಸನ್ನಿಧಾನತಃ ।
ತೀರ್ಥಾಧಿಕ್ಯಂ ಭವೇತ್ ತತ್ರ ತಸ್ಮಾದ್ಗಂಗಾऽತಿಪಾವನೀ ॥

ಅನು – ಇತರ ಯಾವುದೇ ತೀರ್ಥಗಳಲ್ಲಿ ಗಂಗೆಯ ಸನ್ನಿಧಾನದಿಂದಾಗಿ ಆ ತೀರ್ಥಗಳಿಗೆ ಮಹತ್ತ್ವ ಒದಗುವುದು. ಆದ್ದರಿಂದ ಗಂಗೆಯು ಅತ್ಯಂತ ಪವಿತ್ರ.

ವಿ – ೧. ಸಕಲ ತೀರ್ಥಗಳಲ್ಲಿಯೂ ಸಹ ಒಂದು ರೀತಿಯಲ್ಲಿ ಗಂಗಾಸನ್ನಿಧಾನ ಇದ್ದೇ ಇರುವುದು ಎಂದು ಭಾವ.

೨. ಇದರಿಂದ ಗಂಗೆಯಂತೆ ಇತರ ಸಕಲ ತೀರ್ಥಗಳೂ ಒಂದು ರೀತಿಯಲ್ಲಿ ಹರಿಪಾದೋದಕಗಳೇ ಆಗಿವೆ ಎಂಬ ತತ್ತ್ವವು ಸೂಚಿತ :

ನದ್ಯಃ ಶ್ರೀಹರಿಪಾದಪಂಕಜಭವಾಃ ಕುರ್ವಂತು ನೋ ಮಂಗಲಮ್ (ಮಂಗಲಾಷ್ಟಕ).

### ಗಂಗೆಗೆ ಸಮನಾದ ತೀರ್ಥವಿಲ್ಲ

೧೩೩. ಅನ್ಯತೀರ್ಥಸಮಾಂ ಗಂಗಾಮನ್ಯದೈವಸಮಂ ಹರಿಮ್ ।
ವದಂತಿ ಹ್ಯಾಸುರಾ ವರ್ಗಾಸ್ತೇ ತು ಯಾಂತ್ಯಧರಂ ತಮಃ ॥

ಅನು – ಗಂಗೆಯನ್ನು ಮತ್ತೊಂದು ತೀರ್ಥಕ್ಕೆ ಸಮ ಎಂದೂ, ಹರಿಯನ್ನು ಮತ್ತೊಬ್ಬ ದೇವತೆಗೆ ಸಮ ಎಂದೂ ನುಡಿಯುವವರು ಅಸುರರ ಗುಂಪಿಗೆ ಸೇರಿದವರು; ಅವರು ಅಂಧಂತಮಸ್ಸಿಗೆ ತೆರಳುವರು.

ವಿ – ಹರಿಸರ್ವೋತ್ತಮತ್ವವೇ ಸಕಲ ಶಾಸ್ತ್ರಾರ್ಥ; ಗಂಗೆಯ ಉತ್ತಮತ್ವಕ್ಕೂ ಆತನ ಪಾದದ ಸಂಬಂಧವೇ ಕಾರಣ; ಇದನ್ನು ಅರಿಯದವರಿಗೆ ಅಧೋಗತಿ ತಪ್ಪಿದ್ದಲ್ಲ ಎಂದರ್ಥ.

## ಗಂಗೆಯಲ್ಲಿ ಸಕಲತೀರ್ಥಗಳ ಸನ್ನಿಧಾನ

೧೩೪. ತೇ ಸರ್ವೇ ಸರ್ವದಾ ಯತ್ರ ಗಂಗಾಯಾ ಉದಕೇ ನೃಪ ।
ತಸ್ಮಾತ್ ಸರ್ವೋತ್ತಮಂ ತೀರ್ಥಂ ಗಂಗೇತ್ಯೇವ ಸುನಿಶ್ಚಿತಮ್ ॥

ಅನು – ಆ ಎಲ್ಲ ತೀರ್ಥಗಳೂ ಸದಾ ಗಂಗೆಯ ನೀರಿನಲ್ಲಿ ನೆಲೆಸಿರುವವು; ಆದ್ದರಿಂದ ಸರ್ವೋತ್ತಮತೀರ್ಥವೆಂದರೆ ಗಂಗೆಯೇ ಎಂಬುದು ಸುನಿಶ್ಚಿತ.

ವಿ : ವಿಷ್ಣುವು ಸರ್ವೋತ್ತಮನಾದ್ದರಿಂದ ಅವನ ಪಾದೋದಕವಾದ ಗಂಗೆ ಸರ್ವೋತ್ತಮ-ತೀರ್ಥ ಎಂದರ್ಥ.

## ತೀರ್ಥರಾಜ ಪ್ರಯಾಗ

೧೩೫. ಪ್ರಕೃಷ್ಟತ್ವಾತ್ ಪ್ರಯಾಗೋಽಸೌ ಪ್ರಾಧಾನ್ಯಾದ್ರಾಜಶಬ್ದವಾನ್ ।

ಅನು – ಅತ್ಯಂತ ಉತ್ಕೃಷ್ಟವಾದ್ದರಿಂದ ಇದು ಪ್ರಯಾಗವೆನ್ನಿಸಿತು; ಅತ್ಯಂತ ಪ್ರಧಾನ-ವಾದ್ದರಿಂದ ರಾಜ ಎಂಬ ಹೆಸರನ್ನೂ ಹೊಂದಿದೆ.

ವಿ – ೧. ಪ್ರಯಾಗ ಮತ್ತು ತೀರ್ಥರಾಜ ಎಂಬ ಶಬ್ದಗಳಿಗೆ ವಿವರಣೆ ಇಲ್ಲಿ ಬಂದಿದೆ.

೨. ಶ್ರೀವಾದಿರಾಜಸ್ವಾಮಿಗಳ ತೀರ್ಥಪ್ರಬಂಧದ ಶ್ಲೋಕ ಇಲ್ಲಿ ಗಮನಾರ್ಹ :

ಪ್ರಯಾಗಮಾಧವೋ ಭೂಯಾತ್ ದಯಾವಾರಿನಿಧಿರ್ಹೃದಿ ।
ಪ್ರಕೃಷ್ಟಯಾಗಸದೃಶೀ ಸಕೃದ್ಯಸ್ಯ ಹಿ ಸಂಸ್ಮೃತಿಃ ॥ (ಉ.ಪ್ರ. ೧೪)

ಇಲ್ಲಿ ಪ್ರಯಾಗದಲ್ಲಿನ ಪ್ರಯಾಗರೂಪೀ ಮಾಧವನ ರೂಪದ ಸ್ಮರಣೆಯನ್ನು ಪ್ರಕೃಷ್ಟವಾದ ಯಾಗಕ್ಕೆ ಸದೃಶವಾದುದು ಎಂದಿರುವುದು ಗಮನಾರ್ಹ.

## ವೈಷ್ಣವರಿಗೆ ನೀಡುವ ದಾನದ ಮಹತ್ತ್ವ

೧೩೬. ವೈಷ್ಣವಾಯ ಸುತತ್ತ್ವಾಯ ಗ್ರಾಸಮೇಕಂ ಪ್ರಯಚ್ಛತಿ ।
ಸ್ವಧರ್ಮೋಪಾರ್ಜಿತಂ ಚಾನ್ನಂ ಕೃತಕೃತ್ಯೋ ಹಿ ಸೋ ಭವೇತ್ ॥

ಅನು – ಸರಿಯಾಗಿ ತತ್ತ್ವವನ್ನು ತಿಳಿದ ವೈಷ್ಣವನಿಗೆ ತಾನು ಧರ್ಮಕ್ಕನುಗುಣವಾಗಿ ಸಂಪಾದಿಸಿದ ಅನ್ನದ ಒಂದು ತುತ್ತನ್ನು ನೀಡುವವನು ಕೃತಾರ್ಥನೆನ್ನಿಸುವನು.

ವಿ – ೧. ಇಲ್ಲಿ ದಾನಕ್ಕೆ ಅರ್ಹನಾದವನು ತತ್ತ್ವಜ್ಞಾನಿಯಾದ ವೈಷ್ಣವ; ದಾನಕ್ಕೆ ಯೋಗ್ಯವಾದದ್ದು ಸ್ವಧರ್ಮದಿಂದ ಸಂಪಾದಿಸಿದ ಅನ್ನ ಎಂಬ ಎರಡು ಮುಖ್ಯವಿಷಯಗಳು ನಿರೂಪಿತವಾಗಿವೆ.

೨. ದಾನ ನೀಡುವ ವಸ್ತು ಅಲ್ಪವಾಗಿದ್ದರೂ ಅದರ ಸಂಪಾದನೆಯ ರೀತಿ ವರ್ಣಾಶ್ರಮ-ಧರ್ಮಕ್ಕೆ ಅನುಗುಣವಾಗಿರಬೇಕು; ದಾನ ಸ್ವೀಕರಿಸುವವನು ತತ್ತ್ವಜ್ಞಾನಿಯಾದ ವೈಷ್ಣವನಾಗಿ-ರಬೇಕು ಎಂಬ ವಿಶೇಷ ಇಲ್ಲಿ ಸೂಚಿತವಾಗಿದೆ.

## ಪ್ರಯಾಗಮರಣದ ಹಿರಿಮೆ

೧೩೭. **ದುಷ್ಕೃತೋಽಪಿ ದುರಾಚಾರೋ ಬ್ರಹ್ಮಹತ್ಯಾದಿಪಾತಕೀ ।**
**ಹರಿಂ ಧ್ಯಾತ್ವಾ ತ್ಯಜೇದ್ದೇಹಂ ಪ್ರಯಾಗೇ ಮುಕ್ತಿಭಾಗ್ಭವೇತ್ ॥**

ಅನು – ದುಷ್ಕಾರ್ಯ ಮಾಡಿರಲಿ, ದುರಾಚಾರಿಯಾಗಿರಲಿ, ಬ್ರಹ್ಮಹತ್ಯೆ ಮೊದಲಾದ ಪಾತಕವನ್ನು ಎಸಗಿರಲಿ ಶ್ರೀಹರಿಯನ್ನು ಧ್ಯಾನಿಸಿ ಪ್ರಯಾಗದಲ್ಲಿ ದೇಹ ಬಿಡುವವನು ಮುಕ್ತಿಗೆ ಭಾಗಿಯಾಗುವನು.

ವಿ – ಇಲ್ಲಿ ದುಷ್ಕೃತ ಎಂದರೆ ನಿಷಿದ್ಧವಾದ ವೃಂತಾಕಾದಿಗಳನ್ನು ಭಕ್ಷಣೆ ಮಾಡಿದವನು ಎಂಬ ಅರ್ಥವಿಶೇಷ ವ್ಯಾಖ್ಯಾನದಲ್ಲಿದೆ : **ದುರಾಚಾರ ಇತ್ಯನೇನ ದುಷ್ಟಾನಾಂ ನಿಷಿದ್ಧಾನಾಂ ವೃಂತಾಕಾದೀನಾಂ ಆ ಸಮ್ಯಕ್ಚಾರೋ ಭಕ್ಷಣಂ ಯಸ್ಯ ಸಃ ದುರಾಚಾರಃ ।**

೨. ಪ್ರಾಯಶ್ಚಿತ್ತವಿಲ್ಲದ ಮಹಾಪಾತಕ ಮಾಡಿದವರು ಪ್ರಯಾಗದಲ್ಲಿ ಜ್ಞಾನಿಗಳ ಅನುಮತಿ ಪಡೆದು ದೇಹತ್ಯಾಗ ಮಾಡಿದಲ್ಲಿ ಆ ಪಾಪಗಳಿಂದ ಬಿಡುಗಡೆ ಹೊಂದುವರು ಎಂದು ಭಾವ.

೩. 'ಬ್ರಹ್ಮಜ್ಞಾನೇನ ವಾ ಮುಕ್ತಿಃ ಪ್ರಯಾಗಮರಣೇನ ವಾ'(ಗೀ.ಭಾ.) ಮಾತನ್ನು ಉಲ್ಲೇಖಿಸಿ ಶ್ರೀಮದಾಚಾರ್ಯರು ತಿಳಿಸಿರುವ ಅರ್ಥವನ್ನು ಇಲ್ಲಿ ಅನುಸಂಧಾನಕ್ಕೆ ತಂದುಕೊಳ್ಳಬೇಕು.

## ಸ್ನಾನೋದಕದಲ್ಲಿ ತಾರತಮ್ಯ

೧೩೮. **ಉಷ್ಣೋದಕಂ ವೃಥಾ ಸ್ನಾನಂ ಶಕ್ತಾನಾಮೇವ ನಾನ್ಯಥಾ ।**
**ತಸ್ಮಾದ್ಘಟೋದಕಸ್ನಾನಂ ದ್ವಿಗುಣಂ ತತ್ರ ಕೀರ್ತಿತಮ್ ॥**

ಅನು – ಶಕ್ತಿಯಿರುವವರು ಬಿಸಿ ನೀರಿನ ಸ್ನಾನ ಮಾಡುವುದು ಉಚಿತವಲ್ಲ. ಅದಕ್ಕಿಂತ ಕೊಡದಲ್ಲಿ ತುಂಬಿಸಿಟ್ಟ ತಣ್ಣೀರಿನ ಸ್ನಾನ ಎರಡುಪಟ್ಟು ಶ್ರೇಷ್ಠ.

ವಿ – ೧. ಸ್ನಾನಕ್ಕೆ ತಣ್ಣೀರೇ ವಿಹಿತ; ಅದು ಕೊಡದಲ್ಲಿ ತುಂಬಿಸಿಟ್ಟಿದ್ದ ನೀರೇ ಆದರೂ ಬಿಸಿನೀರಿಗಿಂತ ಶ್ರೇಷ್ಠ ಎಂದರ್ಥ.

೨. ಅಶಕ್ತರು ಬಿಸಿನೀರಿನ ಸ್ನಾನವನ್ನು ಮಾಡುವುದು ತಪ್ಪಲ್ಲ ಎಂಬ ಅರ್ಥವೂ ಇದರಿಂದ ಸೂಚಿತ.

೧೩೯. **ತಸ್ಮಾದ್ದಶ ಸಾರಸಂ ಸ್ನಾನಂ ತಸ್ಮಾತ್ ಪುಣ್ಯಂ ತಟಾಕಗಮ್ ।**

ತಸ್ಮಾತ್ ಪ್ರವಾಹಜಂ ಸ್ನಾನಂ ದ್ವಿಗುಣಂ ಚ ಗುಣಂ ಭವೇತ್ ||
ತಸ್ಮಾಚ್ಛತಗುಣಂ ಪುಣ್ಯಂ ಸಿಂಧುಗಾನಾಂ ವಿಶೇಷತಃ ||

ಅನು – ಘಟೋದಕದ ಸ್ನಾನಕ್ಕಿಂತ ಸರೋವರದ ಸ್ನಾನ, ಅದಕ್ಕಿಂತ ಕೆರೆಯಲ್ಲಿ ಸ್ನಾನ, ಅದಕ್ಕಿಂತ ಹರಿಯುವ ನೀರಿನಲ್ಲಿ ಸ್ನಾನ ಕ್ರಮವಾಗಿ ಎರಡು ಪಟ್ಟು ಮಿಗಿಲು ಎನ್ನಿಸುವುದು; ಅದಕ್ಕಿಂತಲೂ ಸಮುದ್ರದಲ್ಲಿ ಸೇರುವ ನದಿಗಳಲ್ಲಿ ಸ್ನಾನ ನೂರುಪಟ್ಟು ಮಿಗಿಲು.

ವಿ – ೧. ಇಲ್ಲಿ ಸಮುದ್ರ ಸೇರುವ ನದಿಗಳು ಎಂದರೆ ನೇರವಾಗಿ ಸಮುದ್ರ ಸೇರುವ ಮಹಾನದಿಗಳು, ಹಾಗೂ ಮಹಾನದಿಗಳ ಮೂಲಕ ಸಮುದ್ರ ಸೇರುವ ಉಪನದಿಗಳು ಎಂದರ್ಥ.

೨. 'ತ್ರಿರಾತ್ರಫಲದಾ ನದ್ಯೋ ಯಾಃ ಕಾಶ್ಚಿದಸಮುದ್ರಗಾಃ |
ಸಮುದ್ರಗಾಸ್ತು ಪಕ್ಷಸ್ಯ ಮಾಸಸ್ಯ ಸರಿತಾಂಪತಿಃ ||
ಷಣ್ಮಾಸಫಲದಾ ಗೋದಾ ವತ್ಸರಸ್ಯ ತು ಜಾಹ್ನವೀ |
ವಿಷ್ಣುಪಾದೋದಕಸ್ಯೈಕಾ ಕಲಾಂ ನಾರ್ಹಂತಿ ಷೋಡಶೀಮ್ ||

– ಎಂಬ ಕೃಷ್ಣಾಮೃತಮಹಾರ್ಣವದ ಮಾತುಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೩. ಉತ್ತಮತೀರ್ಥ ಲಭ್ಯವಿರುವಾಗ ಅದಕ್ಕಿಂತ ಕಡಿಮೆ ತೀರ್ಥದಲ್ಲಿ ಸ್ನಾನ ಮಾಡಕೂಡದು ಎಂಬ ವಿಶೇಷ ವಿಧಿಯನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು : 'ನ ಸ್ನಾಯಾದಲ್ಪವಾರಿಷು' |

## ಪ್ರಯಾಗದಲ್ಲಿ ಮಾಘಸ್ನಾನದ ಫಲ

೧೪೦. ವಿಷ್ಣುಭಕ್ತಿಪರೋ ಯಸ್ತು ಪಾಪದುಷ್ಟೋಽಪಿ ಮಾನವಃ |
ಮಾಘಸ್ನಾನಂ ಕರೋದ್ಯಸ್ತು ಪ್ರಯಾಗೇ ಸ ತು ಮುಕ್ತಿಭಾಗ್ ||

ಅನು – ವಿಷ್ಣುಭಕ್ತಿಪರನಾದವನು ಅತಿಶಯವಾದ ಪಾಪವನ್ನು ಹೊಂದಿದ್ದರೂ ಪ್ರಯಾಗದಲ್ಲಿ ಮಾಘಸ್ನಾನ ಮಾಡಿದಾಗ ಆ ಪಾಪದಿಂದ ಬಿಡುಗಡೆ ಹೊಂದುವನು.

ವಿ – ೧. ಇಲ್ಲಿ ವಿಷ್ಣುಭಕ್ತಿಪರ ಎಂದು ಹೇಳಿದ್ದರಿಂದ ಮಾಘಸ್ನಾನಾದಿಗಳ ಪೂರ್ಣಫಲ ಲಭಿಸುವುದು ವಿಷ್ಣುಭಕ್ತರಿಗೆ ಮಾತ್ರ ಎಂಬುದಕ್ಕೆ ಸೂಚಕ.

೨. ಇಲ್ಲಿ ಮುಕ್ತಿಭಾಕ್ ಎಂಬುದಕ್ಕೆ ಪಾಪದಿಂದ ಬಿಡುಗಡೆ ಹೊಂದಿದವನು ಎಂದೂ, ಅಂತಃಕರಣ ಶುದ್ಧಿ ಹೊಂದುವ ಮೂಲಕ ಮುಂದೆ ತತ್ತ್ವಜ್ಞಾನವನ್ನು ಪಡೆದು ಮುಕ್ತಿ ಹೊಂದುವವನು ಎಂದು ಭಾವ.

## ಬ್ರಾಹ್ಮಣಭೋಜನದ ಮಹತ್ತ್ವ

೧೪೧. ಮಾಘವಾರ್ಪಣಬುದ್ಧ್ಯಾ ಯೋ ದ್ವಿಜಾನ್ ಸಂಭೋಜಯೇನ್ನರಃ ।
ವಿಷ್ಣುಭಕ್ತಾನ್ ವಿಶೇಷಜ್ಞಾನ್ ವಿಷ್ಣುಪಾದೈಕಸನ್ಮತಾನ್ ।
ಕಬಲೇ ಕಬಲೇ ತತ್ರ ಭುಂಕ್ತೇ ಚ ಕಮಲಾಪತಿಃ ॥

ಅನು – ಮಾಧವನಿಗೆ ಅರ್ಪಿತ ಎಂಬ ಭಾವನೆಯಿಂದ ವಿಷ್ಣುಭಕ್ತರಾದ ವಿಶೇಷ ಜ್ಞಾನಿಗಳಾದ ವಿಷ್ಣುಪಾದವನ್ನೇ ಮುಖ್ಯವಾಗಿ ಅವಲಂಬಿಸಿದ ಶುದ್ಧಮನಸ್ಕರಾದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು; ಆಗ ಪ್ರತಿ ತುತ್ತು ತುತ್ತನ್ನೂ ಲಕ್ಷ್ಮೀಪತಿಯಾದ ಶ್ರೀಹರಿಯೇ ಸ್ವೀಕರಿಸುವನು.

ವಿ – ೧. ವಿಶೇಷ ವಿಷ್ಣುಭಕ್ತರಿಗೆ ಮಾಡಿಸುವ ಬ್ರಾಹ್ಮಣಭೋಜನ ವಿಷ್ಣುವಿಗೆ ಸಾಕ್ಷಾತ್ ನೈವೇದ್ಯ ಮಾಡಿಸಿದಷ್ಟು ಪುಣ್ಯಕರ ಎಂದರ್ಥ.

೨. ಇಲ್ಲಿಯ 'ಮಾಧವಾರ್ಪಣಬುದ್ಧ್ಯಾ' ಎಂಬ ಪದದಿಂದ ಇದು ವಿಶೇಷವಾಗಿ ಮಾಘ-ಮಾಸದಲ್ಲಿ ಪ್ರಯಾಗದಲ್ಲಿ ಮಾಡಿಸುವ ಬ್ರಾಹ್ಮಣಭೋಜನಕ್ಕೆ ಅನ್ವಯಿಸುತ್ತದೆ ಎಂದೂ ತಿಳಿಯಬಹುದು.

೧೪೨. ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತಥಾ ।
ವಿಷ್ಣುಪಾದಾಬ್ಜಭಕ್ತಶ್ಚೇತ್ ತಸ್ಯ ಭುಂಕ್ತೇ ಹರಿಃ ಸ್ವಯಮ್ ॥

ಅನು – ಬ್ರಹ್ಮಚಾರಿಯಾಗಿರಲೀ, ಗೃಹಸ್ಥನಾಗಿರಲೀ, ವಾನಪ್ರಸ್ಥನಾಗಿರಲೀ ಅಥವಾ ಯತಿಯಾಗಿರಲಿ ಅವನು ವಿಷ್ಣುವಿನ ಪಾದಕಮಲಗಳಲ್ಲಿ ಭಕ್ತನಾಗಿದ್ದರೆ ಅವನಿಗೆ ಮಾಡಿಸುವ ಭೋಜನವನ್ನು ಶ್ರೀಹರಿಯೇ ಸ್ವೀಕರಿಸುವನು.

ವಿ – ೧. ಭೋಜನ ಮಾಡುವವನು ಯಾವ ಆಶ್ರಮದವನು ಎಂಬುದಕ್ಕಿಂತ ವಿಷ್ಣುಭಕ್ತನಾಗಿರಬೇಕಾದದ್ದು ಅತ್ಯಂತ ಮುಖ್ಯ ಎಂದು ಭಾವ.

೨. ಬ್ರಹ್ಮಚಾರಿಗಿಂತ ಗೃಹಸ್ಥನಿಗೆ ಅವನಿಗಿಂತ ವಾನಪ್ರಸ್ಥನಿಗೂ, ಅವನಿಗಿಂತ ಯತಿಗೂ ನೀಡುವ ಅನ್ನದಾನ ಹೆಚ್ಚು ಶ್ರೇಷ್ಠ ಎಂಬುದು ಅನಂತರದ ಮಾತು ಎಂದರ್ಥ :

ವಟೌ ತು ಸಮದತ್ತಂ ಸ್ಯಾತ್ ಗೃಹಸ್ಥೇ ದ್ವಿಗುಣಂ ಭವೇತ್ ।
ವಾನಪ್ರಸ್ಥೇ ಶತಗುಣಂ ಯತೌ ದತ್ತಮನಂತಕಮ್ ॥

## ನಿಷಿದ್ಧಾನ್ನಕ್ಕೆ ಪ್ರಾಯಶ್ಚಿತ್ತವಿಹಿತ

೧೪೩. ಅತಸ್ತವೋತ್ಪನ್ನಮಿದಂ ಕಲೇಬರಂ ನ ಧಾರಯಿಷ್ಯೇ ಶಿತಿಕಂಠಗರ್ಹಿಣಃ।
ಜಗ್ಧಸ್ಯ ಮೋಹಾದ್ಧಿ ವಿಶುದ್ಧಿಮಂಧಸೋ ಜಿಗುಪ್ಸಿತಸ್ಯೋದ್ಧರಣಂ ಪ್ರಚಕ್ಷತೇ ॥

ಅನು – ಶಿವನನ್ನು ನಿಂದಿಸುವ ನಿನ್ನಿಂದ ಜನಿಸಿದ ಈ ದೇಹವನ್ನು ನಾನು ಇಟ್ಟುಕೊಳ್ಳಲಾರೆ. ತಿಳಿಯದೇ ತಿಂದ ನಿಷಿದ್ಧ ಅನ್ನವನ್ನು ವಮನ ಮಾಡಿಕೊಳ್ಳುವುದರಿಂದ ಪರಿಹರಿಸಿಕೊಳ್ಳುವುದು ಉಚಿತ ಎಂದು ಜ್ಞಾನಿಗಳು ಹೇಳುವರಲ್ಲವೆ!

೧. ಇದು ಸತೀದೇವಿಯು ಶಿವನನ್ನು ಅವಮಾನಿಸಿ ಯಜ್ಞದಲ್ಲಿ ತೊಡಗಿದ್ದ ದಕ್ಷಪ್ರಜಾಪತಿಯನ್ನು ಕುರಿತು ಹೇಳಿದ ಮಾತು; ಭಾಗವತ (೪/೪/೧೮).

೨. ತಿಂದ ಅನ್ನ ನಿಷಿದ್ಧವೆಂದು ತಿಳಿಯುತ್ತಲೇ ಅದನ್ನು ವಮನ ಮಾಡಿಕೊಳ್ಳುವ ಮೂಲಕ ಹೇಗೆ ಶುದ್ಧನಾಗಬೇಕು ಎಂಬ ಅಂಶ ಇಲ್ಲಿ ಸೂಚಿತವಾಗಿದೆ ಎಂಬುದು ವಿಶೇಷ.

೩. ತಿಂದದ್ದು ನಿಷಿದ್ಧಾನ್ನ ಎಂದು ತಿಳಿದಾಗ ಅದನ್ನು ಕೂಡಲೇ ವಾಂತಿ ಮಾಡಿಕೊಂಡು ಶುದ್ಧನಾಗಬೇಕು; ಜೀರ್ಣವಾದ ನಂತರ ತಿಳಿದಲ್ಲಿ ಅದಕ್ಕೆ ವಿಹಿತರೀತಿಯ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಶುದ್ಧನಾಗಬೇಕು ಎಂಬ ವಿಶೇಷಾಂಶವನ್ನು ಇಲ್ಲಿ ಗಮನಿಸಬೇಕು.

೪. ಭಕ್ಷಿಸಿದ್ದು ವಿಷ ಎಂದು ತಿಳಿಯುತ್ತಲೇ ಅದನ್ನು ವಾಂತಿ ಮಾಡುವುದು ಹೇಗೆ ವಿಹಿತವೋ ಹಾಗೆ ಎಂದು ತಿಳಿಯಬೇಕು.

## ಭಗವಂತನ ಸಮಾಸಮರೂಪಗಳು

೧೪೪. ಅಥಾತಃ ಸಮಾಶ್ಚಾಸಮಾಶ್ಚಾಭಿಧೀಯಂತೇ ಸಮಾಸಮಾಶ್ಚಾಥ। ಸಮಾ ಬ್ರಹ್ಮಣೋ ರೂಪಾಣಿ, ಯೈರುತ್ಪತ್ತಿಃ ಸ್ಥಿತಿರ್ಲಯೋ ನಿಯತಿರಾಯತಿಶ್ಚೈಕಂ ಹ್ಯೇವೈತದ್ಭವತಿ।

ಅನು – ಈಗ ಭಗವಂತನ ಸಮ, ಅಸಮ ಹಾಗೂ ಸಮಾಸಮರೂಪಗಳನ್ನು ತಿಳಿಸಲಾಗುವುದು; ಯಾವ ರೂಪಗಳಿಂದ ಉತ್ಪತ್ತಿ, ಸ್ಥಿತಿ, ಲಯ, ನಿಯಮನ, ವಿಸ್ತಾರ ಮೊದಲಾದ ಕಾರ್ಯಗಳು ನಡೆಯುವವೋ ಆ ರೂಪಗಳು ಸಮರೂಪಗಳು.

ವಿ – ಇದು ಮಾಧ್ಯಂದಿನಶ್ರುತಿಯ ವಾಕ್ಯ.

## ಮುಕ್ತಿಸ್ಥಾನಗಳು

೧೪೫. ಇಮಾಮಾರಭ್ಯ ಸರ್ವತ್ರ ಯಾವತ್ಸು ಕ್ಷೀರಸಾಗರೇ।
ಪುರುಷೋಽನಂತಶಯನಃ ಶ್ರೀಮನ್ನಾರಾಯಣಾಭಿಧಃ॥

ಅನು – ಈ ಭೂಮಿಯನ್ನು ಪ್ರಾರಂಭಿಸಿ ಎಷ್ಟು ಲೋಕಗಳಿವೆಯೋ ಅವುಗಳಲ್ಲೆಲ್ಲಾ ಹಾಗೂ ಕ್ಷೀರಸಾಗರದಲ್ಲೂ ಶ್ರೀಮನ್ನಾರಾಯಣ ಎಂಬ ಹೆಸರಿನ ಅನಂತಶಯನನಾದ ಪುರುಷನು ಇರುವನು.

ವಿ – ೧. ಇದು ಬ್ರಹ್ಮಸೂತ್ರಭಾಷ್ಯದಲ್ಲಿ ಉದ್ಧೃತವಾಗಿರುವ ಗರುಡಪುರಾಣದ ವಾಕ್ಯ.

'ಕೇಚಿದತ್ರೈವ ಮುಚ್ಯಂತೇ ನೋತ್ಕ್ರಾಮಂತಿ ಕದಾಚನ ।
ಅತ್ರೈವ ಚ ಸ್ಥಿತಿಸ್ತೇಷಾಮಂತರಿಕ್ಷೇ ತು ಕೇಚನ ॥
ಕೇಚಿತ್ ಸ್ವರ್ಗೇ ಮಹರ್ಲೋಕೇ ಜನೇ ತಪಸಿ ಚಾಪರೇ ।
ಕೇಚಿತ್ ಸತ್ಯೇ ಮಹಾಜ್ಞಾನಾಃ ಗಚ್ಛಂತಿ ಕ್ಷೀರಸಾಗರಮ್ ॥
ತತ್ರಾಪಿ ಕ್ರಮಯೋಗೇನ ಜ್ಞಾನಾಧಿಕ್ಯಾತ್ ಸಮೀಪಗಾಃ ।
ಸಾಲೋಕ್ಯಂ ಚ ಸರೂಪತ್ವಂ ಸಾಮೀಪ್ಯಂ ಯೋಗ ಏವ ಚ ॥
ಇಮಾಮಾರಭ್ಯ ಸರ್ವತ್ರ ಯಾವತ್ಕ್ಷೀರಸಾಗರೇ ।
ಪುರುಷೋಽನಂತಶಯನಃ ಶ್ರೀಮನ್ನಾರಾಯಣಾಭಿಧಃ ॥'

– ಬ್ರ.ಸೂ.ಭಾ.೪/೪/೧೯

೨. ಇದರಿಂದ ಕ್ಷೀರಸಾಗರದಂತೆ ಪೃಥ್ವಿ ಮೊದಲಾದವುಗಳಲ್ಲೂ ಮುಕ್ತಿಸ್ಥಾನವಿದೆ ಎಂದು ನಿರೂಪಿತವಾಗುವುದು.

## ಮುಕ್ತಿಯೋಗ್ಯರಲ್ಲಿ ತಾರತಮ್ಯಕಥನ

೧೪೬. ಮಾನುಷಾ ವರ್ಣಭೇದೇನ ತಥೈವಾಶ್ರಮಭೇದತಃ ।
ಕ್ಷಿತಿಪಾ ಮನುಷ್ಯಗಂಧರ್ವಾ ದೇವಾಶ್ಚ ಪಿತರಶ್ಚಿರಾಃ ॥
ಆಜಾನಜಾಃ ಕರ್ಮಜಾಶ್ಚ ತಾತ್ತ್ವಿಕಾಶ್ಚ ಶಚೀಪತಿಃ ।
ರುದ್ರೋ ಬ್ರಹ್ಮೇತಿ ಕ್ರಮಶಸ್ತೇಷು ಚೈವೋತ್ತಮೋತ್ತಮಾಃ ॥
ಸರ್ವೇ ಶತಗುಣೋದ್ರಿಕ್ತಾಃ ಪೂರ್ವಸ್ಮಾದುತ್ತರೋತ್ತರಮ್ ।

ಅನು – ವರ್ಣ ಹಾಗು ಆಶ್ರಮಗಳ ಭೇದಕ್ಕೆ ಅನುಗುಣವಾಗಿ ಮನುಷ್ಯರಲ್ಲಿ ತಾರತಮ್ಯವಿದೆ. ಮುಂದೆ ರಾಜರು, ಮನುಷ್ಯಗಂಧರ್ವರು, ದೇವಗಂಧರ್ವರು, ಚಿರಪಿತೃಗಳು, ಆಜಾನಜ ದೇವತೆಗಳು ಕರ್ಮಜ ದೇವತೆಗಳು ತಾತ್ತ್ವಿಕದೇವತೆಗಳು ಶಚಿಪತಿಯಾದ ಇಂದ್ರ, ರುದ್ರದೇವರು, ಬ್ರಹ್ಮದೇವರು ಕ್ರಮವಾಗಿ ಉತ್ತಮರು ಎನ್ನಿಸುವರು. ಅವರಲ್ಲಿ ಹಿಂದಿನವರಿಗಿಂತ ಮುಂದಿನವರೆಲ್ಲ ನೂರುಗುಣದಿಂದ ಮಿಗಿಲೆನ್ನಿಸುವರು.

ವಿ – ೧. ವರ್ಣದಲ್ಲಿ ತಾರತಮ್ಯ ಎಂದರೆ ಆರೋಹಣ ಕ್ರಮದಲ್ಲಿ ಶೂದ್ರ ವೈಶ್ಯ, ಕ್ಷತ್ರಿಯ ಮತ್ತು ಬ್ರಾಹ್ಮಣ ಎಂದು, ಆಶ್ರಮದಲ್ಲಿ ತಾರತಮ್ಯ ಎಂದರೆ ಇದೇ ಕ್ರಮದಲ್ಲಿ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ ಎಂದೂ ತಿಳಿಯಬೇಕು.

೨. ಇಲ್ಲಿ ಶತಗುಣ ಎಂಬುದಕ್ಕೆ ಯಥಾಯೋಗ್ಯವಾಗಿ ಅನೇಕ ಗುಣಗಳು ಎಂದು ತಿಳಿಯಬೇಕು.

## ಸುಖಸಂತೋಷಗಳ ರಹಸ್ಯ – ಆತ್ಮತ್ವೋಪಾಸನೆ

೧೪೭. ನಾಹಂ ವಿಷ್ಣುರ್ನ ಸ್ವತಂತ್ರೋ ನ ಚ ಪೂರ್ಣಗುಣೋऽಸ್ಮ್ಯಹಮ್ ।
ಮಮ ಸ್ವಾಮೀ ಹರಿರ್ನಿತ್ಯಂ ಸ್ವತಂತ್ರಃ ಪೂರ್ಣಷಡ್ಗುಣಃ ॥
ಏವಂ ದಾರ್ಢ್ಯಂ ಶಪಥವದ್ಯದಾ ಕುರ್ಯಾದಯಂ ಸದಾ ।
ಜೀವನ್ನೇವ ನ ತಾಪೀ ಸ್ಯಾದಂತರಾನಂದಭೋಗತಃ ॥

ಅನು – ನಾನು ವಿಷ್ಣುವಲ್ಲ, ನಾನು ಸ್ವತಂತ್ರನಲ್ಲ, ಗುಣಪೂರ್ಣನಲ್ಲ; ನನ್ನ ಸ್ವಾಮಿಯು ಸದಾ ಶ್ರೀಹರಿಯೇ ಆಗಿರುವನು; ಸ್ವತಂತ್ರನೂ ಪೂರ್ಣಷಡ್ಗುಣನೂ ಅವನೇ; ಹೀಗೆ ಶಪಥದಂತೆ ನಿಶ್ಚಯವನ್ನು ಯಾವನು ಸದಾ ಹೊಂದಿರುವನೋ ಅವನು ಈ ಬದುಕಿನಲ್ಲೇ ಎಂದೂ ದುಃಖ ಹೊಂದಲಾರ; ಸದಾ ಒಳಗೆ ಆನಂದಭೋಗದಿಂದ ತುಂಬಿರುವನು.

ವಿ – ಇದು ಬ್ರಹ್ಮಸೂತ್ರಗಳಲ್ಲಿ ಬಂದಿರುವ ಆತ್ಮತ್ವೋಪಾಸನೆಯನ್ನು ವಿವರಿಸುವ ಪ್ರಸಂಗ; ಶ್ರೀಹರಿಯನ್ನು ಸ್ವಾಮಿ ಎಂದು ಉಪಾಸನೆ ಮಾಡುವುದು ಅತ್ಯಂತ ಸುಖಹೇತು; ಆತ್ಮೈಕ್ಯಚಿಂತನೆ ಅತ್ಯಂತ ಅನರ್ಥಹೇತು ಎಂಬುದು ಇದರ ಸಂದೇಶ.

## ಯಥಾಯೋಗ್ಯವಾಗಿಯೇ ಮುಕ್ತಿ

೧೪೮. ವಿಜಾಯಾ ಏವ ಯೋಗೀಶಾಸ್ತೇಷಾಂ ಯಾ ಯೈವ ಯೋಗ್ಯತಾ ।
ತಥಾತಥೈವ ಮುಚ್ಯಂತೇ ನಾನ್ಯಥಾ ತು ಕಥಂಚನ ॥

ಅನು – ಬಾಲಸನ್ನ್ಯಾಸಿಗಳಾದ ಸನಕಾದಿಗಳು ಮುಕ್ತಿಯಲ್ಲೂ ಅದೇ ರೀತಿ ಯೋಗಿಗಳೇ ಆಗಿರುವರು; ಯಾರ ಯಾರ ಯೋಗ್ಯತೆ ಎಂತಹುದೋ ಅವರೆಲ್ಲರೂ ಅದಕ್ಕೆ ತಕ್ಕಂತೆಯೇ ಮುಕ್ತರಾಗುವರು; ಬೇರೆ ರೀತಿಯಲ್ಲಿ ಅಲ್ಲ.

ವಿ – ೧. ಮೇಲಿನ ೫ ಶ್ಲೋಕಗಳು ಗರುಡಪುರಾಣದ ವಚನಗಳು.

೨. ಬ್ರಹ್ಮಾದಿಗೃಹಸ್ಥಧರ್ಮದ ದೇವತೆಗಳು ಸಪತ್ನೀಕರಾಗಿಯೇ ಮುಕ್ತರಾದರೆ, ಸನಕಾದಿ ಸನ್ಯಾಸಧರ್ಮದ ಯೋಗಿಗಳು ಮೋಕ್ಷದಲ್ಲೂ ಆ ಧರ್ಮದಲ್ಲಿಯೇ ಇರುವರು ಎಂಬ ವಿಶೇಷಾಂಶ ಇಲ್ಲಿದೆ.

## ನೀರಾಜನದ ಮಾಹಾತ್ಮ್ಯ

೧೪೯. ನೀರಾಜನಪ್ರಭಾಜಾಲಂ ಯೇಷಾಂ ಗಾತ್ರಾಣಿ ಸಂಸ್ಪೃಶೇತ್ ।
ಯಜ್ಞಾವಭೃಥಜಸ್ನಾನಜನಿತಂ ತತ್ ಫಲಂ ಲಭೇತ್ ॥

ಅನು – ನೀರಾಜನ ಪ್ರಭೆಯ ರಾಶಿ ಯಾರ ದೇಹವನ್ನು ಮುಟ್ಟುವುದೋ ಅವರಿಗೆ ಯಜ್ಞದ ಅವಭೃತದಲ್ಲಿನ ಸ್ನಾನದಿಂದ ದೊರಕುವ ಪುಣ್ಯವು ಲಭಿಸುವುದು.

ವಿ – ಇದು ಸಾರೋದ್ಧಾರದ ವಚನ ಎಂದು ವ್ಯಾಖ್ಯಾನದಲ್ಲಿದೆ.

೨. ಶ್ರೀಹರಿಗೆ ಮಾಡಿದ ನೀರಾಜನಶೇಷವನ್ನು ತಮ್ಮ ಅವಯವಗಳಿಗೆ ಸ್ವೀಕರಿಸುವವರು ಯಜ್ಞದ ಅವಭೃಥಸ್ನಾನವನ್ನು ಮಾಡಿದ ಪುಣ್ಯಕ್ಕೆ ಪಾತ್ರರಾಗುವರು ಎಂದರ್ಥ.

೩. ಇದರಿಂದ ನೀರಾಜನ ಸ್ವೀಕಾರ ಅತ್ಯಂತ ವಿಹಿತ ಎಂಬ ತತ್ತ್ವವು ನಿರೂಪಿತ.

## ಮಾನಕ್ಕಿಂತ ಅಪಮಾನವು ಶ್ರೇಷ್ಠ

೧೫೦. ಅಮೃತಸ್ಯೇವ ಸಂತುಷ್ಯೇದವಮಾನಸ್ಯ ಪಂಡಿತಃ ।
ಸುಖಂ ಹ್ಯವಮತಃ ಶೇತೇ ಯೋಽವಮಂತಾ ಸ ನಶ್ಯತಿ ॥

ಅನು – ಪಂಡಿತನಾದವನು ಅವಮಾನವಾದಾಗ ಅಮೃತಲಭಿಸಿದಂತೆ ಸಂತೋಷ-ಪಡಬೇಕು; ಅವಮಾನಿತನಾದವನು ಸುಖವಾಗಿ ವೈಕುಂಠಾದಿಲೋಕಗಳನ್ನು ಹೊಂದು-ವನು; ಅವಮಾನಿಸಿದವನು ಮಾತ್ರ ನರಕಾದಿ ಅನರ್ಥಕ್ಕೆ ಗುರಿಯಾಗುವನು.

ವಿ – ೧. ಮಹಾಭಾರತಶಾಂತಿಪರ್ವದ ವಾಕ್ಯ (೨೯೯/೨೬)

೨. ಸಾಮಾನ್ಯವಾಗಿ ಸನ್ಮಾನದಿಂದ ಉಬ್ಬುವುದು ಅವಮಾನದಿಂದ ಕುಗ್ಗುವುದು ಜನರ ಸ್ವಭಾವ. ಆದರೆ ಸನ್ಮಾನ ಪುಣ್ಯನಾಶಕ. ಅಪಮಾನ ಪುಣ್ಯವರ್ಧಕ ಎಂಬ ತತ್ತ್ವ ಇಲ್ಲಿ ನಿರೂಪಿತವಾಗಿದೆ.

೩. **ಅಪಮಾನವಾದರೆ ಒಳಿತು, ಅಪರೂಪ ಹರಿನಾಮ ಜಪಿಸುವ ಮನುಜನಿಗೆ; ನಿಂದಕರಿರಬೇಕು ಹಂದಿಯಿಂದರೆ ಕೇರಿ ಹೆಂಗೆ ಶುದ್ಧವೋ ಹಾಂಗೆ** ಎಂಬ ಹರಿದಾಸರ ವಚನಗಳು ಇದರ ವಿವರಣೆಯಂತಿವೆ.

೪. ಇಲ್ಲಿ ಸುಖಂ ಶೇತೇ ಎಂಬುದಕ್ಕೆ ವೈಕುಂಠಾದಿ ಲೋಕಗಳಲ್ಲಿ ಸುಖವಾಗಿ ನೆಲೆಸುವವನು ಎಂದರ್ಥ.

೫. ಅಮೃತಸ್ಯೇವ ಸಂತೃಪ್ಯೇದವಮಾನಸ್ಯ ಪಂಡಿತಃ।
ವಿಷಸ್ಯೇವೋದ್ವಿಜೇನ್ನಿತ್ಯಂ ಸಮ್ಮಾನಸ್ಯ ವಿಚಕ್ಷಣಃ॥ (ಶಾಂತಿಪರ್ವ ೨೨೯/೨೧)

ಎಂಬ ಮಹಾಭಾರತದ ಮತ್ತೊಂದು ವಾಕ್ಯವನ್ನು ಇದು ಹೋಲುತ್ತದೆ. ಅಲ್ಲಿ ಅವಮಾನವು ಅಮೃತವಿದ್ದಂತೆ, ಸನ್ಮಾನವು ವಿಷವಿದ್ದಂತೆ ಎಂದು ವಿವೇಚಿಸಿರುವುದು ಗಮನಾರ್ಹ.

## ಬ್ರಾಹ್ಮಣನ ಹಾಗೂ ಮುನಿಯ ಲಕ್ಷಣ

೧೫೧. ವಾಚೋವೇಗಂ ಮನಸಃ ಕ್ರೋಧವೇಗಂ
ವಿವಿತ್ಸಾವೇಗಮುದರೋಪಸ್ಥವೇಗಮ್।
ಏತಾನ್ ವೇಗಾನ್ ಯೋ ವಿಷಹೇದುದೀರ್ಣಾನ್
ತಂ ಮನ್ಯೇಽಹಂ ಬ್ರಾಹ್ಮಣಂ ವೈ ಮುನಿಂ ಚ॥

ಅನು – ಮಾತಿನ ವೇಗ, ಮನಸ್ಸಿನ ವೇಗ, ಕ್ರೋಧದ ವೇಗ, ಕುತೂಹಲದ ವೇಗ, ಉದರದ ವೇಗ, ಉಪಸ್ಥದ ವೇಗ ಎಂಬ ಈ ವೇಗಗಳನ್ನು ಯಾವನು ಸಹಿಸಿಕೊಳ್ಳುವನೋ ಅಂತಹವನನ್ನೇ ನಾನು ಬ್ರಾಹ್ಮಣನೆಂಬುದಾಗಿ, ಮುನಿ ಎಂಬುದಾಗಿ ಭಾವಿಸುವೆ.

ವಿ – ೧. ಇದು ಮಹಾಭಾರತಶಾಂತಿಪರ್ವದ ವಾಕ್ಯ (೨೯೯/೧೪).

೨. ಇಲ್ಲಿ ವೇಗ ಎಂದರೆ ಒತ್ತಡ ಎಂದರ್ಥ. ವಾಚೋವೇಗ ಎಂದರೆ ದುಡುಕಿನ ಮಾತು, ಮನಸ್ಸಿನ ವೇಗ ಎಂದರೆ ತೋಚಿದ್ದನ್ನು ನುಡಿಯುವ ದೌರ್ಬಲ್ಯ, ಕ್ರೋಧದ ವೇಗ ಎಂದರೆ ಕೋಪದಿಂದಾಗಿ ಅವಾಚ್ಯ ವಚನಗಳನ್ನು ನುಡಿಯುವುದು, ವಿವಿತ್ಸಾ ವೇಗ ಎಂದರೆ ಕೆಟ್ಟ ಕುತೂಹಲ, ಉದರ ವೇಗ ಎಂದರೆ ಹಸಿವನ್ನು ಪರಿಹರಿಸಿಕೊಳ್ಳಲೆಂದು ಸಿಕ್ಕಿದ್ದನ್ನು ತಿನ್ನುವುದು, ಉಪಸ್ಥವೇಗ ಎಂದರೆ ಕಾಮೋದ್ವೇಗ ಎಂದು ತಿಳಿಯಬೇಕು.

೩. ಇವುಗಳನ್ನು ಜಯಿಸುವವನೇ ನಿಜವಾದ ಬ್ರಾಹ್ಮಣ ಮುನಿ ಎಂಬಲ್ಲಿ ಬ್ರಾಹ್ಮಣ ಹಾಗೂ ಮುನಿಯ ಲಕ್ಷಣಗಳು ನಿರೂಪಿತವಾಗಿವೆ.

## ಶ್ರೇಷ್ಠತೆಯ ಕಾರಣಗಳು

೧೫೨. ಅಕ್ರೋಧನಃ ಕ್ರುದ್ಧ್ಯತೋ ವೈ ವಿಶಿಷ್ಟಸ್ತಥಾ ತಿತಿಕ್ಷುರತಿತಿಕ್ಷೋರ್ವಿಶಿಷ್ಟಃ।
ಅಮಾನುಷಾನ್ಮಾನುಷೋ ವೈ ವಿಶಿಷ್ಟಸ್ತಥಾಽಜ್ಞಾನಾಜ್ಜ್ಞಾನವಿದ್ವೈ ವಿಶಿಷ್ಟಃ॥

ಅನು – ಕೋಪಗೊಳ್ಳುವವನಿಗಿಂತ ಕೋಪಗೊಳ್ಳದವನು ಶ್ರೇಷ್ಠ; ಸಹನೆ

ಇರದವನಿಗಿಂತ ಸಹನೆ ಇರುವವನು ಮೇಲು; ಮನುಷ್ಯತ್ವವಿಲ್ಲದವನಿಗಿಂತ ಮನುಷ್ಯತ್ವ-ವಿರುವವನು ಮೇಲು; ಅಜ್ಞಾನಿಗಿಂತ ಜ್ಞಾನವಂತ ಮಿಗಿಲು.

ವಿ – ಇದು ಮಹಾಭಾರತಶಾಂತಿಪರ್ವದ ವಾಕ್ಯ (೨೯೯/೧೫).

## ದೇವತೆಗಳಿಗೆ ಮೆಚ್ಚುಗೆಯಾಗುವ ವ್ಯಕ್ತಿ

೧೫೩. ಯೋ ನಾತ್ಯುಕ್ತಃ ಪ್ರಾಹ ರೂಕ್ಷಂ ಪ್ರಿಯಂ ವಾ
ಯೋ ವೈ ಹತೋ ನ ಪ್ರತಿ ಹಂತಿ ಧೈರ್ಯಾತ್ ।
ಪಾಪಂ ಚ ಯೋ ನೇಚ್ಛತಿ ತಸ್ಯ ಹಂತುಃ
ತಸ್ಯೇಹ ದೇವಾಃ ಸ್ಪೃಹಯಂತಿ ನಿತ್ಯಮ್ ॥

ಅನು – ಕಟುವಾಗಿ ನುಡಿದವನ ಮೇಲೂ ಕಟುಮಾತನ್ನಾಗಲೀ ಪ್ರಿಯವಚನವನ್ನಾಗಲೀ ನೀಡದವನು ನೋಯಿಸಿದವನನ್ನು ಪ್ರತಿಯಾಗಿ ನೋಯಿಸದವನು, ಪಾಪಿಯ ಬಗ್ಗೆಯೂ ಕೆಡುಕನ್ನು ಬಯಸದವನು ಆದವನ ಮೇಲೆ ದೇವತೆಗಳು ಶುಭವನ್ನು ಸದಾ ಹಾರೈಸುವರು.

ವಿ – ಇದು ಮಹಾಭಾರತಶಾಂತಿಪರ್ವದ ವಾಕ್ಯ (೨೯೯/೧೭)

## ಕ್ಷಮೆಯು ಸಿದ್ಧಿಗೆ ಸಾಧಕ

೧೫೪. ಪಾಪೀಯಸಃ ಕ್ಷಮೇತೈವ ಶ್ರೇಯಸಃ ಸದೃಶಸ್ಯ ಚ ।
ವಿಮಾನಿತೋ ಹತಃ ಕೃಷ್ಟ ಏವಂ ಸಿದ್ಧಿಂ ಗಮಿಷ್ಯತಿ ॥

ಅನು – ಪಾಪಿಯೇ ಇರಲಿ ತನಗಿಂತ ಉತ್ತಮನಾದವನೇ ಆಗಿರಲಿ ಸಮಾನನೇ ಆಗಿರಲಿ ಅವನು ತನ್ನನ್ನು ಅವಮಾನಿಸಿದಾಗ ನೋಯಿಸಿದಾಗ ಯಾವನು ಕ್ಷಮಿಸುವನೋ ಅವನು ಸಿದ್ಧಿಯನ್ನು ಹೊಂದುವನು.

ವಿ – ೧. ಇದು ಮಹಾಭಾರತಶಾಂತಿಪರ್ವದ ವಾಕ್ಯ (೨೯೯/೧೮)

೨. ಕ್ಷಮಾಗುಣದ ಹಿರಿಮೆಯನ್ನು ಇದರಲ್ಲಿ ವರ್ಣಿಸಲಾಗಿದೆ; ಉತ್ತಮರು ಮಧ್ಯಮರು ಹಾಗು ಅಧಮರು ಮೊದಲಾದ ಯಾರೇ ಆಗಲಿ ತನಗೆ ಕೆಡಕನ್ನು ಬಯಸಿದಾಗ ಅದನ್ನು ಕ್ಷಮಿಸುವುದು ಸಿದ್ಧಿಗೆ ಕಾರಣ ಎಂದು ಭಾವ.

## ಕಲಿಯುಗದಲ್ಲಿ ಧರ್ಮದ ಸ್ಥಿತಿ

೧೫೫. ತತಸ್ತಿಷ್ಯೇಽಥ ಸಂಪ್ರಾಪ್ತೇ ಯುಗೇ ಕಲಿಪುರಸ್ಕೃತೇ ।
ಏಕಪಾದಸ್ಥಿತೋ ಧರ್ಮೋ ಯತ್ರ ತತ್ರ ಭವಿಷ್ಯತಿ ॥

ಅನು – ಕಲಿಯೇ ಮುಂದಾಳುವಾದಂತಹ ಕಲಿಯುಗವು ಬಂದಾಗ ಧರ್ಮ ನೆಲೆಸುವುದು ಒಂದು ಪಾದದಿಂದ ಮಾತ್ರ.

ವಿ– ಇದು ಮಹಾಭಾರತಶಾಂತಿಪರ್ವದ ವಾಕ್ಯ (೨೯೯/೩೪೦/೮೬).

೨. ಕಲಿಯುಗದಲ್ಲಿ ಅಧರ್ಮವೇ ಹೆಚ್ಚು. ಧರ್ಮ ಅತ್ಯಂತ ವಿರಳ; ಆ ವಿರಳ ಧರ್ಮವೂ ಸಹ ಒಂದು ಪಾದದ ಮೇಲೆ ಇರುವುದೇ ಹೊರತು ನಾಲ್ಕು ಪಾದಗಳ ಮೇಲಲ್ಲ ಎಂಬ ವಿಶೇಷಾಂಶ ಇಲ್ಲಿದೆ.

೩. ತಪಸ್ಸು, ಶೌಚ, ದಯೆ ಮತ್ತು ಸತ್ಯ ಈ ನಾಲ್ಕು ಧರ್ಮದ ನಾಲ್ಕು ಕಾಲುಗಳು ಎಂಬ ವಿವರ ಶ್ರೀಮದ್ಭಾಗವತದಲ್ಲಿದೆ (೧/೧೭/೨೩): ತಪಃ ಶೌಚಂ ದಯಾ ಸತ್ಯಂ ಇತಿ ಪಾದಾಃ ಕೃತೇ ಕೃತಾಃ ।

## ಗುರುಪೂಜೆಯ ಹಿರಿಮೆ

೧೫೬. ಗುರವೋ ಯತ್ರ ಪೂಜ್ಯಂತೇ ಸಾಧುವೃತ್ತಸಮನ್ವಿತಾಃ ।
ವಸ್ತವ್ಯಂ ತತ್ರ ಯುಷ್ಮಾಭಿರ್ಯತ್ರ ಧರ್ಮೋ ನ ಹೀಯತೇ ॥

ಅನು – ಸದಾಚಾರದಿಂದ ಕೂಡಿದ ಗುರುಗಳು ಎಲ್ಲಿ ಆದರಿಸಲ್ಪಡುವರೋ ಅಂತಹ ಸ್ಥಳದಲ್ಲಿ ವಾಸಿಸಬೇಕು; ಅಲ್ಲಿ ಧರ್ಮಕ್ಕೆ ಚ್ಯುತಿ ಇರುವುದಿಲ್ಲ.

ವಿ – ೧. ಗುರುಹಿರಿಯರು ನೆಲೆಸಿರುವ ಸ್ಥಳದಲ್ಲಿ ಧರ್ಮಾಚರಣೆಗೆ ಅನುಕೂಲತೆ ಇರುವುದರಿಂದ ಅಂತಹ ಸ್ಥಳದಲ್ಲಿ ವಾಸಿಸಿ, ಧರ್ಮವನ್ನು ಸಂರಕ್ಷಿಸಿಕೊಳ್ಳಬೇಕು ಎಂದು ಭಾವ.

೨. ಸದಾಚಾರದಲ್ಲಿ ನೆಲೆಸಿ ಧರ್ಮ ಸಂರಕ್ಷಿಸಿಕೊಂಡಲ್ಲಿ ಮಾತ್ರ ಗುರುತ್ವವು ಸಾರ್ಥಕ ಎಂಬ ತತ್ತ್ವವು ಇಲ್ಲಿ ಸೂಚಿತ. – ನ ತೇ ವೃದ್ಧಾಃ ಯೇ ನ ವದಂತೀಹ ಧರ್ಮಂ (ಮಹಾಭಾರತ) । ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾಃ ಪ್ರಕೀರ್ತಿತಾಃ । (ಮ.ಭಾ.ತಾ.ನಿ)

## ಯದುಕುಲಸಂಹಾರಕ್ಕೆ ಕಾರಣ

೧೫೭. ಭೂಭಾರರಾಜಪೃತನಾ ಯದುಭಿರ್ನಿರಸ್ಯ
ಗುಪ್ತೈಃ ಸ್ವಬಾಹುಭಿರಚಿಂತಯದಪ್ರಮೇಯಃ ।

ಮನ್ಯೇಽವನೇರ್ನನು ಗತೋಽಪ್ಯಗತೋ ಹಿ ಭಾರೋ
ಯದ್ಯಾದವಂ ಕುಲಮಹೋ ಅವಿಷಹ್ಯಮಾಸ್ತೇ ॥

ಅನು – ಅಪ್ರಮೇಯನಾದ ಶ್ರೀಕೃಷ್ಣನು ತನ್ನ ಬಾಹುಗಳಿಂದ ರಕ್ಷಿತರಾದ ಯದುಗಳ ಮೂಲಕ ಭೂಮಿಗೆ ಭಾರಭೂತರಾದ ರಾಜರುಗಳ ಸೇನೆಯನ್ನು ಸಂಹರಿಸಲು ಯೋಚಿಸಿದ; ಈ ಯಾದವರ ಕುಲವು ಸಹಿಸಲಾಗದುದಾಗಿ ಇರುತ್ತಿರುವಾಗ ಭೂಮಿಯ ಭಾರ ಇನ್ನೂ ಪೂರ್ಣವಾಗಿ ಪರಿಹಾರವಾಗಿಲ್ಲವೆಂದೇ ಭಾವಿಸುವೆ.

ವಿ – ೧. ಇದು ಭಾಗವತದ ವಚನ (೧೧/೧/೩)

೨. ಯದುಕುಲದ ಸಂಹಾರಕ್ಕೆ ಶ್ರೀಕೃಷ್ಣನು ಯೋಚಿಸಿದ ಕಾರಣವನ್ನು ಇಲ್ಲಿ ತಿಳಿಸಲಾಗಿದೆ.

೩. ಕೌರವಾದಿಗಳ ಸಂಹಾರ ಯದುಗಳು ಮೊದಲಾದವರ ಮೂಲಕ ನಡೆದು ಭೂಭಾರದ ಪ್ರಧಾನ ಹಂತ ಮುಗಿದಿದ್ದರೂ ಯಾದವರು ಇನ್ನೂ ದೇಹ ತೊರೆಯದ್ದರಿಂದ ಅದಿನ್ನೂ ಪೂರ್ಣಗೊಂಡಿಲ್ಲ ಎಂದರ್ಥ.

೪. ಇಲ್ಲಿ ಯದುಭಿಃ ಎಂಬುದು ಉಪಲಕ್ಷಣ; ಭೀಮಸೇನಾದಿ ಪಾಂಡವರಿಂದ ಪ್ರಧಾನವಾಗಿ ಭೂಭಾರಹರಣಕಾರ್ಯ ನಡೆದಿದೆ ಎಂಬುದನ್ನು ಗಮನಿಸಬೇಕು.

೫. ಮುಖ್ಯವಾಗಿ ಭೂಭಾರಹರಣಕಾರ್ಯ ನಡೆದದ್ದು ಭಗವಂತನಾದ ಶ್ರೀಕೃಷ್ಣನಿಂದಲೇ.

೬. ಇಲ್ಲಿ ಅವಿಷಹ್ಯ ಎಂಬುದಕ್ಕೆ ಕಲಿಬಾಧೆಗೆ ಒಳಗಾಗದ ಎಂಬ ಅರ್ಥ ವಿವಕ್ಷಿತ.

೭. ಯದುಕುಲಸಂಹಾರಕ್ಕೆ ಇಲ್ಲಿ ನೀಡಿರುವ ಕಾರಣದ ವಿಶ್ಲೇಷಣೆಯನ್ನು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು ನೀಡಿರುವ ರೀತಿ ಹೀಗಿದೆ :

ಅವ್ಯುಚ್ಛಿನ್ನೇ ಸಕಲಾನಾಂ ಸುರಾಣಾಂ ತಂತೌ ಕಲಿರ್ನೋ ಭವಿತಾ ಕಥಂಚಿತ್ ।
ತಸ್ಮಾದುತ್ಪಾದ್ಯಾಃ ಸರ್ವ ಏತೇ ಸುರಾಂಶಾಃ .........॥'(೧೫/೧೫)

ಪ್ರಾಚುರ್ಯೇ ಸಜ್ಜನಸ್ಯ ಸ್ಯಾನ್ನ ಕಲೇ ವೃದ್ಧಿರಂಜಸಾ ।
ಇತಿ ಸ್ವಕುಲಸಂಹೃತ್ಯೈ ಪ್ರಭಾಸಮನಯತ್ ಪ್ರಭುಃ ॥ (೩೨/೧೪)

ದೇವತೆಗಳ ಸಂತತಿಯು ಸಂಪೂರ್ಣವಾಗಿ ವಿಚ್ಛೇದಗೊಳ್ಳದಿದ್ದಲ್ಲಿ ಕಲಿಯು ಯಾವರೀತಿಯಲ್ಲೂ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಆದರೆ ಕಲಿಯುಗದಲ್ಲಿ ಅದಕ್ಕೆ ಅವಕಾಶ ನೀಡಲೇ ಬೇಕು. ಆದ್ದರಿಂದ ದೇವಾಂಶರಾದ ಯಾದವರೂ ಸಹ ಸಂಪೂರ್ಣವಾಗಿ ಭೂಲೋಕದಿಂದ ತೆರಳಲೇ ಬೇಕು ಎಂದು ಭಾವ.

೭. ಸತಾಮಪಿ ಕಲೌ ಪ್ರಾಪ್ತೇ ವಿಕಾರೋ ಮನಸೋ ಭವೇತ್ ।
ತಸ್ಮಾದ್ಯದೂಂಶ್ಚ ಸಂಜಹ್ರೇ ನೈತೇ ಸ್ಯುಃ ಪಾಪಿನಸ್ತ್ವಿತಿ ॥

ಪುನರ್ಲೋಕವಿವೃದ್ಧ್ಯರ್ಥಮೌತ್ತರೇಯಾದಿಕಾನ್ ಹರಿಃ ।
ಆವಿಶ್ಯ ರಕ್ಷಾಮಕರೋಜ್ಜಗತಃ ಪುರುಷೋತ್ತಮಃ ॥
ಸ್ವಾತ್ಮನಃ ಸಹ ಯಾನೇನ ಪುರುಷಾರ್ಥೋಽಧಿಕೋ ಭವೇತ್ ।
ಇತ್ಯನುಗ್ರಹಬುದ್ಧ್ಯಾ ಚ ಸಂಜಹ್ರೇ ಸ್ವಕುಲಂ ವಿಭುಃ ॥ —ಭಾ.ತಾ. ೧೧/೬/೩೧

ಕಲಿ ಬಂದಾಗ ಸಜ್ಜನರ ಮನಸ್ಸು ವಿಕಾರಗೊಳ್ಳುವುದುಂಟು. ಆದ್ದರಿಂದ ಇವರು ಇನ್ನೂ ಇದ್ದು ಪಾಪಕಾರ್ಯವನ್ನೆಸಗದಿರಲಿ ಎಂದು ಯದುಕುಲವನ್ನು ಶ್ರೀಕೃಷ್ಣ ಉಪಸಂಹರಿಸಿದ.

೯. ಅದರಂತೆ ತನ್ನೊಂದಿಗೆ ಅವರು ಭೂಲೋಕ ತೊರೆದಲ್ಲಿ ವಿಶೇಷವಾದ ಪುಣ್ಯಲಭಿಸುವುದು ಎಂಬ ಕಾರಣದಿಂದ ತಾನು ಪರಂಧಾಮಕ್ಕೆ ತೆರಳುವ ವೇಳೆಯಲ್ಲೇ ಅವರೆಲ್ಲ ದೇಹ ತೊರೆಯುವಂತೆ ಮಾಡಿದ ಎಂಬುದು ಮತ್ತೊಂದು ವಿಶೇಷ.

೧೦. ಮೇಲ್ನೋಟಕ್ಕೆ ಈ ಎರಡು ಕಾರಣಗಳಲ್ಲಿ ಪರಸ್ಪರವಿರೋಧವಿರುವಂತೆ ಕಾಣುತ್ತದೆ. ಯಾದವರು ಇದ್ದಲ್ಲಿ ಕಲಿಯು ಪ್ರವೇಶಿಸಲಾರ; ಕಲಿ ಪ್ರವೇಶಿಸಿದಾಗ ಯಾದವರು ಪಾಪಿಗಳಾದಾರು ಎಂಬ ಮಾತುಗಳಲ್ಲಿ ಹೊಂದಾಣಿಕೆ ಇದ್ದಂತೆ ಕಾಣುವುದಿಲ್ಲ; ವಸ್ತುಸ್ಥಿತಿ ಹಾಗಲ್ಲ; ಯಾದವರಲ್ಲಿ ಎರಡು ವಿಧ; ಬಲರಾಮ ಪ್ರದ್ಯುಮ್ನಾದಿ ಮಹಾಸಮರ್ಥರು ಒಂದೆಡೆಯಾದರೆ, ಮತ್ತೊಂದೆಡೆ ತಾರತಮ್ಯದಲ್ಲಿ ಅವರರಾದ ದೇವತೆಗಳ ಅವತಾರರಾದ ಇತರರು; ಬಲರಾಮಾದಿಗಳಂತಹ ಮಹಾಸಮರ್ಥರು ಇದ್ದಾಗ ಕಲಿಯು ಬರಲಾರನು; ಉಳಿದವರು ಕಲಿ ಬಂದಾಗ ಧರ್ಮ ರಕ್ಷಿಸಿ ಕೊಳ್ಳಲಾರರು; ಆದ್ದರಿಂದ ಇಬ್ಬರೂ ತೆರಳುವುದು ಉಚಿತ ಎಂದರ್ಥಮಾಡಿಕೊಂಡಲ್ಲಿ ಯಾವ ಶಂಕೆಗೂ ಅವಕಾಶವಿರದು.

## ಜೀವೇಶ್ವರೈಕ್ಯಕಥನವು ಮೋಹಕ

೧೫೮. ಅಪಾರ್ಥಂ ಶ್ರುತಿವಾಕ್ಯಾನಾಂ ದರ್ಶಯನ್ ಲೋಕಗರ್ಹಿತಮ್ ।
ಐಕ್ಯಂ ಚ ಜೀವಪರಯೋರ್ಮಯಾಽತ್ರ ಪ್ರತಿಪಾದ್ಯತೇ ॥

ಅನು – ಶ್ರುತಿಗಳಿಗೆ ಸಮ್ಮತವಲ್ಲದ, ಲೋಕದಲ್ಲೂ ನಿಂದಿತವಾದ ಜೀವಪರಮಾತ್ಮರ ಐಕ್ಯವನ್ನು ನಾನು ಅಸುರಮೋಹನಕ್ಕೆಂದು ಅಲ್ಲಲ್ಲಿ ಹೇಳುವೆ.

ವಿ – ಪದ್ಮಪುರಾಣದ ಈ ಮಾತಿನಲ್ಲಿ ಸ್ಫುಟವಾಗಿ ಜೀವೇಶ್ವರೈಕ್ಯ ಶ್ರುತಿಗಳ ಅಪಾರ್ಥ ಎಂಬ ವಿಷಯ ಬಂದಿರುವುದು ಗಮನಾರ್ಹ.

## ತೀರ್ಥಯಾತ್ರೆಯ ಸಂಕಲ್ಪದ ವಿಧಾನ

೧೫೯. ಪ್ರೇರಿತಸ್ತೀರ್ಥಯಾತ್ರಾಯಾಂ ಕೇಶವಾಹಂ ತ್ವಯಾ ಪ್ರಭೋ ।
ತತ್ರ ಕರ್ತಾ ತ್ವಮೇವಾಸಿ ನಾಹಂ ಕರ್ತಾಽಸ್ಮಿ ತತ್ರ ವೈ ॥

ಅನು – ಪ್ರಭುವಾದ ಕೇಶವನೇ! ನಾನು ತೀರ್ಥಯಾತ್ರೆಗೆಂದು ನಿನ್ನಿಂದ ಪ್ರೇರಿತನಾಗಿರುವೆ. ಇದಕ್ಕೆ ಕರ್ತೃ ನೀನೇ ಆಗಿರುವೆ. ನಾನು ಕರ್ತೃ ಸರ್ವಥಾ ಆಗಿಲ್ಲ.

ವಿ – ೧. ಇದು ಕುಸುಮಾಚಲಮಾಹಾತ್ಮ್ಯದ ವಾಕ್ಯ.

೨. ಶ್ರೀವಿಷ್ಣುವಿನಿಂದ ಪ್ರೇರಿತನಾಗಿ ತೀರ್ಥಯಾತ್ರೆ ಕೈಗೊಂಡಿರುವೆ ಎಂಬ ತಾತ್ವಿಕ ಹಿನ್ನೆಲೆಯಲ್ಲಿ ತೀರ್ಥಯಾತ್ರೆಯನ್ನು ಕೈಗೊಳ್ಳಬೇಕು ಎಂದು ಭಾವ.

೩. 'ನಾಹಂ ಕರ್ತಾ ಹರಿಃ ಕರ್ತಾ' ಎಂಬ ಭಾವ ತೀರ್ಥಯಾತ್ರೆಯ ಕಾಲದಲ್ಲೂ ಜಾಗೃತ-ವಾಗಿರಬೇಕು ಎಂದು ತಾತ್ಪರ್ಯ.

## ಕುಸುಮಾಚಲದ ಮಾಹಾತ್ಮ್ಯ

೧೬೦. ಸರ್ವದಾನೇಷು ಯತ್ಪುಣ್ಯಂ ಸರ್ವತೀರ್ಥೇಷು ಯತ್ಫಲಮ್ ।
ತತ್ಫಲಂ ಸಮವಾಪ್ನೋತಿ ಕುಸುಮಾಚಲದರ್ಶನೇ ॥

ಅನು – ಸಕಲದಾನಗಳನ್ನು ಮಾಡಿದಾಗ ಬರುವ ಪುಣ್ಯವೂ, ಸರ್ವತೀರ್ಥಗಳಲ್ಲೂ ಸ್ನಾನ ಮಾಡಿದಾಗ ಬರುವ ಪುಣ್ಯವೂ ಕುಸುಮಾಚಲವನ್ನು ಕಂಡಕೂಡಲೇ ಲಭಿಸಿ ಬಿಡುವವು.

ವಿ – ಇದು ಸಹ ಕುಸುಮಾಚಲಮಾಹಾತ್ಮ್ಯದ ವಚನ.

೨. ಕುಸುಮಾಚಲದಂತಹ ದಿವ್ಯಕ್ಷೇತ್ರದ ದರ್ಶನಕ್ಕೆ ದಾನ, ತೀರ್ಥಸ್ನಾನಾದಿಗಳ ಪುಣ್ಯ ನೆರವಾಗುವುದು ಎಂಬ ಭಾವವೂ ಇಲ್ಲಿ ಸೂಚಿತ.

## ಗಣವಿಪ್ರನ ಲಕ್ಷಣ

೧೬೧. ಚೌರ್ಯಕರ್ಮರತೋ ಯಸ್ತು ಗೋಭೂಸ್ವರ್ಣಾಪಹಾರಕಃ ।
ತತ್ರೈವ ರಮತೇ ಯಸ್ತು ಸ ವಿಪ್ರೋ ಗಣ ಉಚ್ಯತೇ ॥

ಅನು – ಕಳ್ಳತನದಲ್ಲಿ ತೊಡಗಿದವನು, ಗೋ, ಭೂಮಿ, ಚಿನ್ನವನ್ನು ಅಪಹರಿಸುವವನು ಆ ಕಾರ್ಯದಲ್ಲಿ ಸಂತೋಷಪಡುವವನು ಆದ ವಿಪ್ರನನ್ನು ಗಣ ಎನ್ನುವರು.

ವಿ – ೧. ಇದು ಮದನಪಾರಿಜಾತ ಹಾಗೂ ಸ್ಮೃತಿದರ್ಪಣಗಳಲ್ಲಿನ ವಚನ.

೨. ವಿಪ್ರರನ್ನು ಗಣ, ಯತಿ, ಯಾಚಕ ಎಂಬುದಾಗಿ ವಿಂಗಡಿಸಿ ಅವರ ಲಕ್ಷಣವನ್ನು ಇಲ್ಲಿಯ ಮೂರುಶ್ಲೋಕಗಳಲ್ಲಿ ತಿಳಿಸಿರುವರು.

## ಯತಿವಿಪ್ರನ ಲಕ್ಷಣ

೧೬೨. ವೈಶ್ವದೇವವಿಹೀನಸ್ತು ಬಲಿದಾನವಿವರ್ಜಿತಃ।
ಇತಶ್ಚೇತಶ್ಚ ಯೋ ಭುಂಕ್ತೇ ಸ ವಿಪ್ರೋ ಯತಿರುಚ್ಯತೇ ॥

ಅನು – ವೈಶ್ವದೇವ ಮಾಡದವನು ಬಲಿಹರಣ ತೊರೆದವನು, ಸಿಕ್ಕಲ್ಲಿ ತಿನ್ನುವವನು ಆದ ಬ್ರಾಹ್ಮಣ ಯತಿ ಎನ್ನಿಸುವವನು.

ವಿ – ೧. ಇದೂ ಸಹ ಮದನಪಾರಿಜಾತ ಹಾಗೂ ಸ್ಮೃತಿದರ್ಪಣಗಳಲ್ಲಿನ ವಚನ.

೨. ಇದು ಒಂದರ್ಥದಲ್ಲಿ ಯತಿಗಳಿಗೆ ವೈಶ್ವದೇವ ಬಲಿಹರಣಾದಿ ಗೃಹಸ್ಥಕರ್ಮಗಳ ಬಂಧನವಿಲ್ಲ, ಭಿಕ್ಷಾಟನೆಯಿಂದಲೇ ಅವರು ಬದುಕಬೇಕು ಎಂಬುದನ್ನು ಸೂಚಿಸುತ್ತದೆ.

೩. ಇನ್ನೊಂದರ್ಥದಲ್ಲಿ ಗೃಹಸ್ಥನಾಗಿದ್ದು ವೈಶ್ವದೇವ ಬಲಿಹರಣಗಳನ್ನು ಮಾಡದೇ ಕಂಡಕಂಡಲ್ಲಿ ತಿನ್ನುವವನು ಯತಿವಿಪ್ರ ಎಂಬ ನಿಂದ್ಯವರ್ಗಕ್ಕೆ ಸೇರುವನು ಎಂದಾಗುವುದು.

## ಬಹುಯಾಚಕವಿಪ್ರನ ಲಕ್ಷಣ

೧೬೩. ಚತುರ್ವರ್ಣಪ್ರತಿಗ್ರಾಹೀ ಅಂತ್ಯಜಾನಾಂ ತಥೈವ ಚ।
ಶ್ಮಶಾನೇ ಚ ಪ್ರತಿಗ್ರಾಹೀ ಸ ವಿಪ್ರೋ ಬಹುಯಾಚಕಃ ॥

ಅನು – ನಾಲ್ಕುವರ್ಣಗಳಿಂದಲೂ ಅಂತ್ಯಜರಿಂದಲೂ ದಾನ ಸ್ವೀಕರಿಸುವವನು, ಶ್ಮಶಾನದಲ್ಲೂ ಕೈಯೊಡ್ಡುವವನು ಆದ ಬ್ರಾಹ್ಮಣ ಬಹು ಯಾಚಕ ಎನ್ನಿಸುವವನು.

ವಿ – ೧. ಇದೂ ಸಹ ಮದನಪಾರಿಜಾತ ಹಾಗೂ ಸ್ಮೃತಿದರ್ಪಣಗಳಲ್ಲಿನ ವಚನ.

೨. ಪಾತ್ರಾಪಾತ್ರವಿವೇಕವಿಲ್ಲದೆ ದಾನಸ್ವೀಕಾರ ನಿಷಿದ್ಧಸ್ಥಳಗಳಲ್ಲಿ ದಾನಸ್ವೀಕಾರ ಬಹುಯಾಚಕ ವಿಪ್ರರ ಲಕ್ಷಣ ಎಂದರ್ಥ. ಇದು ನಿಷಿದ್ಧ ಎಂದು ತಾತ್ಪರ್ಯ.

೩. ವಿಪ್ರನಿಗೆ ಪ್ರತಿಗ್ರಹವು ಷಟ್ಕರ್ಮಗಳಲ್ಲಿ ಒಂದಾಗಿ ವಿಹಿತವಾಗಿದ್ದರೂ ಅದು ಧರ್ಮದ ಚೌಕಟ್ಟನ್ನು ಮೀರಬಾರದು ಎಂಬ ಎಚ್ಚರವನ್ನು ಇಲ್ಲಿ ನೀಡಲಾಗಿದೆ.

## ಶೇಷಾಚಲದ ಮಾಹಾತ್ಮ್ಯ

೧೬೪. ನಿದ್ರಾ ಸಮಾಧಿಸಂಪತ್ತಿರ್ನಿವಾಸಃ ಕೇವಲಂ ತಪಃ।
ಕೃತಕೃತ್ಯಮಭೂಜ್ಜನ್ಮ ಶೇಷಾಚಲನಿವಾಸಿನಾಮ್ ॥

ಅನು – ಶೇಷಾಚಲದಲ್ಲಿ ನಿದ್ರೆಮಾಡುವುದು ಅಸಂಪ್ರಜ್ಞಾತಸಮಾಧಿಸ್ಥಿತಿಯನ್ನು, ವಾಸಿಸುವುದು ತಪಸ್ಸಿದ್ಧಿಯನ್ನು ಜನ್ಮಕ್ಕೆ ಸಾರ್ಥಕ್ಯವನ್ನು ಉಂಟು ಮಾಡುವುದು.

ವಿ – ಅನುಸಂಧಾನ ಇರುವವರಿಗೆ ತಿರುಪತಿಯಲ್ಲಿ ನಿದ್ರೆಯು ಸಮಾಧಿಸ್ಥಿತಿಗೂ, ವಾಸವು ತಪಃಸಿದ್ಧಿಗೂ ಕಾರಣವಾಗುವುದು ಎಂದು ಭಾವ. ಹಾಗಿಲ್ಲದವರಿಗೆ ಅದು ಈ ರೀತಿ ಶುಭದಾಯಕವಾಗದು ಎಂದು ತಿಳಿಯಬೇಕು.

## ಬ್ರಹ್ಮಶಿಲೆಯ ಮಾಹಾತ್ಮ್ಯ

೧೬೫. ಯತ್ರ ಬ್ರಹ್ಮಶಿಲಾ ನಾಮ ಸರಿನ್ಮಧ್ಯೇ ಚ ವರ್ತತೇ ।
ಅಗಸ್ತ್ಯತಪಸಾ ಪಶ್ಚಾದ್ಗಯಾಸಾನ್ನಿಧ್ಯಮತ್ರ ವೈ ।
ಪಾದಾ ಈಶಾನವಿಷ್ಣ್ವಾದಿದೇವಾನಾಂ ತತ್ರ ಸಂತಿ ಹಿ ॥

ಅನು – ಸುವರ್ಣಮುಖೀ ನದಿಯ ಮಧ್ಯದಲ್ಲಿ ಬ್ರಹ್ಮಶಿಲೆ ಎಂಬ ಸ್ಥಳವಿದೆ. ಅಗಸ್ತ್ಯರ ತಪಸ್ಸಿನಿಂದಾಗಿ ಶಿವ ವಿಷ್ಣು ಮೊದಲಾದ ದೇವತೆಗಳ ಪಾದ ಚಿಹ್ನೆಗಳೂ ಅಲ್ಲಿ ಮೂಡಿವೆ. ಆದರಿಂದಾಗಿ ಗಯಾಕ್ಷೇತ್ರದ ಸನ್ನಿಧಾನ ಅಲ್ಲಿ ಉಂಟಾಗಿದೆ.

ವಿ – ೧. ಇದು ಬ್ರಹ್ಮಪುರಾಣವೇಂಕಟೇಶಮಾಹಾತ್ಮ್ಯದ ವಾಕ್ಯ(೩/೩೦,೩೧)

೨. ತಿರುಪತಿಯ ಬಳಿಯ ಸುವರ್ಣಮುಖೀ ನದಿಯ ತೀರದಲ್ಲಿನ ಬ್ರಹ್ಮಶಿಲೆ ಎಂಬ ಸ್ಥಳವಿಶೇಷದ ಮಹಿಮೆ ಇಲ್ಲಿ ಉಕ್ತವಾಗಿದೆ; ಅದು ಅಗಸ್ತ್ಯರು ತಪಸ್ಸು ಮಾಡಿದ ಸ್ಥಳ. ಆದರಿಂದಾಗಿ ವಿಷ್ಣು ಮೊದಲಾದ ದೇವತೆಗಳ ಪಾದದ ಗುರುತುಗಳು ಅಲ್ಲಿ ಮೂಡಿ ಗಯಾ ಸನ್ನಿಧಾನವನ್ನು ಹೊಂದಿದೆ ಎಂದು ಅರ್ಥ.

೩. ಈ ವಾಕ್ಯಗಳನ್ನು ಶ್ರೀವಿಜಯೀಂದ್ರಸ್ವಾಮಿಗಳು ತಮ್ಮ ಮಧ್ವಾಧ್ವಕಂಟಕೋದ್ಧಾರದಲ್ಲಿ 'ಬ್ರಹ್ಮಪುರಾಣ ಕ್ಷೇತ್ರಕಾಂಡ ವೇಂಕಟಗಿರಿಮಾಹಾತ್ಮ್ಯದ ಮೂರನೆಯ ಅಧ್ಯಾಯದಲ್ಲಿ ಶಂಖಲಿಖಿತಸಂವಾದ'ದಲ್ಲಿ ಬಂದಿರುವ ವಚನಗಳು ಎಂಬುದಾಗಿ ಉದಾಹರಿಸಿರುವರು.

## ಅಲ್ಲಿ ಶ್ರೀಮದಾಚಾರ್ಯರ ಚಾತುರ್ಮಾಸ್ಯವ್ರತ

೧೬೬. ಯತಿರೂಪೀ ಮಾತರಿಶ್ವಾ ಹ್ಯಷ್ಟಾವಿಂಶತಿಮೇ ಕಲೌ ।
ಯತ್ರ ವಾಯುಂ ವದಂತ್ಯದ್ಧಾ ಮಧ್ವನಾಮ್ನಾ ಪರಂ ವಿಭುಮ್ ॥
ತವೈವ ತಪಸಾ ತುಷ್ಟಃ ಪ್ರೀತ್ಯಾ ಚಾಗಸ್ತ್ಯಯೋಗಿನಃ ।
ತ್ವತ್ಸ್ಥಾಪಿತಾಲಯೇ ಪುಣ್ಯೇ ಚಾತುರ್ಮಾಸ್ಯಂ ಕರಿಷ್ಯತಿ ॥

ಅನು – ಯತಿರೂಪದ ವಾಯುದೇವರು ಇಪ್ಪತ್ತೆಂಟನೆಯ ಕಲಿಯುಗದಲ್ಲಿ ಶ್ರೀಮಧ್ವಾ-ಚಾರ್ಯರು ಎಂಬ ಹೆಸರಿನಿಂದ ಅಗಸ್ತ್ಯರ ಮೇಲಿನ ಪ್ರೀತಿಯಿಂದಾಗಿ ಅವರಿಂದ ನಿರ್ಮಿತವಾದ ಆ ಪುಣ್ಯಕರ ಸ್ಥಳದಲ್ಲಿ ಚಾತುರ್ಮಾಸ್ಯವನ್ನು ಆಚರಿಸುವರು.

ವಿ – ೧. ಈ ಶ್ಲೋಕಗಳೂ ಸಹ ಶ್ರೀವಿಜಯೀಂದ್ರಸ್ವಾಮಿಗಳಿಂದ ಮೇಲೆ ಹೇಳಿದಂತೆ ಮಧ್ವಾಧ್ವಕಂಟಕೋದ್ಧಾರದಲ್ಲಿ ಉದಾಹರಿಸಲ್ಪಟ್ಟಿವೆ.

೨. ಇವು ಶ್ರೀಮಧ್ವಾಚಾರ್ಯರು ವಾಯುದೇವರ ಅವತಾರ ಎಂಬುದಕ್ಕೆ ಪ್ರಮಾಣ-ವಚನಗಳೂ ಆಗಿ ಉಪಯುಕ್ತವೆನ್ನಿಸುತ್ತವೆ.

### ಶಾಸ್ತ್ರೋಪದೇಶಕ್ಕಿಂತ ಮಿಗಿಲಾದ ತಪಸ್ಸಿಲ್ಲ

೧೬೭. ನಾನ್ಯತ್ ತಪೋ ದ್ವಿಜಾತೀನಾಂ ಋತೇ ಶಾಸ್ತ್ರೋಪದೇಶತಃ।
ಕಿಂ ಕಾಯಕ್ಲೇಶಧರ್ಮೇಣ ಕಾ ಸಿದ್ಧಿರ್ಭವಿತಾ ದ್ವಿಜ ॥

ಅನು – ದ್ವಿಜರಿಗೆ ಶಾಸ್ತ್ರೋಪದೇಶಕ್ಕಿಂತ ಮಿಗಿಲಾದ ಬೇರೊಂದು ತಪಸ್ಸು ಇಲ್ಲ. ದೇಹಕ್ಕೆ ಶ್ರಮನೀಡುವ ಇತರ ಧರ್ಮಗಳಿಂದ ಯಾವ ಸಿದ್ಧಿಯು ತಾನೆ ಬಂದೀತು.

ವಿ – ೧. ಇದು ಶ್ರೀಮುಷ್ಣಮಾಹಾತ್ಮ್ಯದ ವಚನ (ಬ್ರಹ್ಮಪುರಾಣ ೩/೧೭).

೨. ಬ್ರಾಹ್ಮಣರ ಮುಖ್ಯಧರ್ಮ ಶಾಸ್ತ್ರೋಪದೇಶ ಎಂಬ ಅಪೂರ್ವ ತತ್ತ್ವ ಇಲ್ಲಿದೆ. ಇತರ ಕಾರ್ಯಗಳೂ ವಿಹಿತವೇ ಆಗಿದ್ದರೂ ಪಾಠಪ್ರವಚನಗಳು ಬ್ರಾಹ್ಮಣರಿಗೆ ಪ್ರಧಾನಕರ್ತವ್ಯ ಎಂದು ಭಾವ; ಜ್ಞಾನಕಾರ್ಯವನ್ನು ತೊರೆದು ಕೇವಲ ಇತರ ಕರ್ಮಾಚರಣೆಯನ್ನಷ್ಟೇ ಮಾಡುವುದು ವಿಶೇಷಪುಣ್ಯಕ್ಕೆ ಸಾಧನವಲ್ಲ ಎಂದು ತಿಳಿಯಬೇಕು.

೩. 'ಸ್ವಾಧ್ಯಾಯಪ್ರವಚನ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿ ತಪಃ ತದ್ಧಿ ತಪಃ' ತೈತ್ತಿರೀಯೋಪನಿಷತ್; 'ತತ್ತ್ವವಿಜ್ಞಾಪನಂ ಧರ್ಮೋ ವಿಪ್ರಸ್ಯ ತು ವಿಶೇಷತಃ' ಮ.ಭಾ.ತಾ.ನಿ. (೨೯/೨೪). ಇತ್ಯಾದಿ ವಾಕ್ಯಗಳ ಪರ್ಯಾಲೋಚನೆಯಿಂದ ಈ ವಿಷಯ ದೃಢಪಡುವುದು.

### ಪ್ರತಿಮೆಯಲ್ಲಿ ಸನ್ನಿಹಿತನಾದ ಭಗವಂತನ ಪೂಜೆ

೧೬೮. ಭಾನುಮಾನ್ ಭಾನುಭಿರ್ಯದ್ವದ್ರಸಗ್ರಾಹೀ ಯಥಾ ಭುವಃ।
ಸಾಕ್ಷಾತ್ ಪೂಜಾಶ್ರಯೋ ನಿತ್ಯಂ ಶಿಲಾಬಿಂಬಾಂತರೇಣ ಚ ॥

ಅನು – ಸೂರ್ಯನು ಹೇಗೆ ತನ್ನ ಕಿರಣಗಳಿಂದ ಭೂಮಿಯ ನೀರನ್ನು ಹೀರುವನೋ ಹಾಗೆ ನಾನು ಶಿಲಾಪ್ರತಿಮೆಯೊಳಗೆ ಸನ್ನಿಹಿತನಾಗಿದ್ದು ಭಕ್ತರ ಪೂಜೆಯನ್ನು ಸದಾ ಸ್ವೀಕರಿಸುವೆನು.

ವಿ – ೧. ಇದು ಶ್ರೀಮುಷ್ಣಮಾಹಾತ್ಮ್ಯದ ವಚನ.

೨. ಶ್ರೀಹರಿಯು ಪ್ರತಿಮಾದಿಗಳಲ್ಲಿದ್ದು ಪೂಜೆಯನ್ನು ಸ್ವೀಕರಿಸುವ ಬಗೆಯನ್ನು ಇಲ್ಲಿ ಅಪೂರ್ವ ನಿದರ್ಶನದೊಂದಿಗೆ ತಿಳಿಸಿರುವರು.

## ಆಕಾಶಗಂಗೆಯ ಸೇವೆಗೆ ಮೊದಲು ಸ್ವಾಮಿಪುಷ್ಕರಣಿಸೇವೆಯು ವಿಹಿತ

೧೬೯. ಸ್ವಾಮಿಪುಷ್ಕರಿಣೀ ಚೈವ ವಿಯದ್ಗಂಗಾ ತತಃ ಪರಮ್ ।

ಅನು – ಸ್ವಾಮಿಪುಷ್ಕರಿಣಿಯನ್ನು ಮೊದಲು ಸೇವಿಸಿ ಬಳಿಕ ಆಕಾಶಗಂಗೆಯನ್ನು ಸೇವಿಸಬೇಕು.

ವಿ – ೧. ಶ್ರೀವೇಂಕಟಪರ್ವತದಲ್ಲಿ ಅಸಂಖ್ಯತೀರ್ಥಗಳಿದ್ದು ಅದರಲ್ಲಿ ಸ್ವಾಮಿಪುಷ್ಕರಿಣಿಯು ಅತ್ಯಂತ ಪ್ರಧಾನವಾದುದು; ಆದರಲ್ಲಿ ಮೊದಲು ಮಿಂದೇ ಆಕಾಶಗಂಗೆ ಮೊದಲಾದ ಇತರ ತೀರ್ಥಗಳಲ್ಲಿ ಮೀಯಬೇಕು ಎಂಬ ವಿಶೇಷವಿಧಿಯನ್ನು ಇಲ್ಲಿ ತಿಳಿಸಲಾಗಿದೆ.

೨. ಸ್ವಾಮಿ ಪುಷ್ಕರಿಣಿಗೆ ಸರಸ್ವತೀ ದೇವಿಯು ಅಭಿಮಾನಿ ದೇವತೆಯಾದ್ದರಿಂದ ಅದು ಸಕಲ ಸರೋವರಗಳಲ್ಲಿಯೂ ಅತ್ಯಂತ ಶ್ರೇಷ್ಠವಾದದ್ದು ಎಂಬುದು ವಿಶೇಷ.

## ನವತೀರ್ಥಗಳ ಸ್ನಾನದ ಬಳಿಕ ಶ್ರೀನಿವಾಸದರ್ಶನದ ಫಲ

೧೭೦. ಯ ಏಷು ನವತೀರ್ಥೇಷು ಸ್ನಾನಮೇಕದಿನೇ ಯದಿ ।
ಕೃತ್ವಾ ಪಶ್ಯೇಚ್ಛ್ರೀನಿವಾಸಂ ನ ಪುನರ್ಜಾಯತೇ ಭುವಿ ॥

ಅನು – ಯಾವನು ಈ ಒಂಭತ್ತು ತೀರ್ಥಗಳಲ್ಲಿ ಒಂದೇ ದಿನದಲ್ಲಿ ಸ್ನಾನ ಮಾಡಿ ಬಳಿಕ ಶ್ರೀನಿವಾಸನನ್ನು ದರ್ಶನ ಮಾಡುವನೋ ಅವನು ಮತ್ತೊಮ್ಮೆ ಭೂಮಿಯಲ್ಲಿ ಹುಟ್ಟನು.

ವಿ – ೧. ಮೇಲಿನ ಎರಡು ವೇಂಕಟೇಶಮಾಹಾತ್ಮ್ಯದ ವಚನಗಳು. ಬ್ರಹ್ಮಪು.(೮/೩೮)

೨. ಬ್ರಹ್ಮಪುರಾಣದಲ್ಲಿ (ಅ.೮)ಬಂದಿರುವಂತೆ ಇಲ್ಲಿ ಪ್ರಸಕ್ತವಾಗಿರುವ ನವತೀರ್ಥಗಳು ಹೀಗಿವೆ : ವಿಮಾನತೀರ್ಥ, ಧನದತೀರ್ಥ, ಗಾಲವತೀರ್ಥ, ಮಾರ್ಕಂಡೇಯತೀರ್ಥ, ಆಗ್ನೇಯತೀರ್ಥ, ಯಮತೀರ್ಥ, ನಿರ್ಋತಿತೀರ್ಥ, ವಾಯುತೀರ್ಥ, ಸರಸ್ವತೀತೀರ್ಥ.

೨. ಇದು ಪಾಜಕದಲ್ಲಿ ಒಂದೇ ದಿನದಲ್ಲಿ ಪರಶುರಾಮನಿರ್ಮಿತ ಪರಶುತೀರ್ಥ ಗದಾತೀರ್ಥ ಧನುಸ್ ತೀರ್ಥ ಮತ್ತು ಶ್ರೀಬಾಣತೀರ್ಥ ಎಂಬ ನಾಲ್ಕು ತೀರ್ಥಗಳಲ್ಲಿ ಹಾಗು ಶ್ರೀಮಧ್ವಾಚಾರ್ಯರು ಬಾಲ್ಯದಲ್ಲಿ ನಿರ್ಮಿಸಿದ ವಾಸುದೇವ ತೀರ್ಥದಲ್ಲಿ ಸ್ನಾನ ಮಾಡಿ, ಬಳಿಕ ದುರ್ಗಾದೇವಿಯನ್ನು ಸಂದರ್ಶಿಸಿ, ಪಾಜಕದ ಮಠದಲ್ಲಿ ಮೂಡಿರುವ ಬಾಲ ಮಧ್ವರ ದಿವ್ಯಪಾದಗಳನ್ನು ಸಂದರ್ಶಿಸುವವನು ಕೃತಕೃತ್ಯನಾಗುವನು ಎಂಬ ಸಂಪ್ರದಾಯಪದ್ಧತಿಯ ಶ್ಲೋಕದಂತಿದೆ ಎಂಬುದು ಗಮನಾರ್ಹ :

ತೀರ್ಥಾನಾಂ ಪಂಚಕೇ ಸ್ನಾತ್ವಾ ಕೃತ್ವಾ ದುರ್ಗಾವಲೋಕನಂ ।
ಉಪಾಸ್ಯ ಚರಣೌ ವಾಯೋಃ ಕೃತಕೃತ್ಯೋ ಭವೇನ್ನರಃ ॥

### ತೀರ್ಥಯಾತ್ರೆಯೂ ಕೂಡ ಜ್ಞಾನಯಜ್ಞವೇ

೧೭೧. ಕೃತವಿದ್ಯಾಧಿಕಾರಶ್ಚ ಸತ್ಸಂಗತ್ಯಾ ಚ ಸಂಯುತಃ।
ಯಃ ಶೃಣ್ವನ್ ಶ್ರಾವಯಂಶ್ಚಾಪಿ ಸತಾಂ ಸಂಘೇನ ಸಂಯುತಃ।
ತೀರ್ಥವೈಭವಮಾಶ್ರುತ್ಯ ಸಮ್ಯಕ್ ತೇನೈವ ನಿರ್ವೃತಃ।
ತೇನ ನಿರ್ಧೂತಪಾಪಃ ಸನ್ ಸ ಯಾತಿ ಪರಮಾಂ ಗತಿಮ್ ॥

ಅನು – ಯಾವನು ವಿದ್ಯಾಧಿಕಾರಿಯೂ, ಸತ್ಸಂಗದಿಂದ ಕೂಡಿದವನೂ ಆಗಿ ಶಾಸ್ತ್ರವಿದ್ಯೆಯನ್ನು ಕೇಳುವವನೂ ಹೇಳುವವನೂ ಆಗಿ, ನಂತರ ಸಜ್ಜನರೊಂದಿಗೆ ಕೂಡಿ ತೀರ್ಥಕ್ಷೇತ್ರದಲ್ಲಿನ ಭಗವದ್ವೈಭವವನ್ನು ಕೇಳಿ, ಅದರಿಂದಲೇ ಸಂತುಷ್ಟನಾಗುವನೋ ಅವನು ಪಾಪಗಳಿಂದ ಮುಕ್ತನಾಗಿ ಸದ್ಗತಿಯನ್ನು ಹೊಂದುವನು.

ವಿ – ೧. ಇದು ವೇಂಕಟೇಶಮಾಹಾತ್ಮ್ಯದ ವಚನ.

೨. ಪಾಠಪ್ರವಚನಗಳೊಂದಿಗೆ ಮಾಡುವ ತೀರ್ಥಯಾತ್ರೆಯು ಜ್ಞಾನಯಜ್ಞವೆನ್ನಿಸುವುದು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

### ಭಕ್ತಿಗಾಗಿಯೇ ತೀರ್ಥಯಾತ್ರೆ

೧೭೨. ಯತ್ರ ಯತ್ರ ತ್ವಯಾ ಕಾರ್ಯಾ ತೀರ್ಥಯಾತ್ರಾ ಕ್ಷಿತೀಶ್ವರ।
ತತ್ರಾನೇನ ವಿಧಾನೇನ ಪ್ರೀಣಯಸ್ವ ಜನಾರ್ದನಮ್ ॥

ಅನು – ಎಲೈ ರಾಜನೇ! ಯಾವ ಯಾವ ದೇಶದಲ್ಲಿ ನೀನು ತೀರ್ಥಯಾತ್ರೆ ಮಾಡುವೆಯೋ ಅಲ್ಲೆಲ್ಲಾ ಇದೇ ವಿಧಿಯಿಂದ ಭಗವಂತನನ್ನು ಸಂತೋಷಪಡಿಸು.

ವಿ : ಈ ವಿಧಿಯು ತಿರುಪತಿಯಾತ್ರೆಗೆ ಮಾತ್ರವಲ್ಲದೇ ಸಕಲ ತೀರ್ಥಯಾತ್ರೆಗಳಿಗೂ ಅನ್ವಯಿಸುವ ವಿಶೇಷವಿಧಿ ಎಂದು ತಿಳಿಯಬೇಕು.

### ಕಪಿಲಾಗೋದಾನದ ಫಲ

೧೭೩. ಯಃ ಕುರ್ಯಾತ್ ಕಪಿಲಾದಾನಂ ಪ್ರೀತಯೇ ಶ್ರೀಪತೇರ್ನೃಪ।
ರೋಮಸಂಖ್ಯಾಪ್ರಮಾಣೇನ ವಿಷ್ಣುಲೋಕೇ ಮಹೀಯತೇ ॥

ಅನು – ಯಾರು ಲಕ್ಷ್ಮೀಪತಿಯ ಪ್ರೀತಿಗಾಗಿ ಕಪಿಲಾಗೋದಾನವನ್ನು ಮಾಡುವನೋ, ಅವನು ಆ ಗೋವಿನ ರೋಮದ ಸಂಖ್ಯೆಯ ವರ್ಷಗಳಷ್ಟು ಕಾಲ ಸ್ವರ್ಗದಲ್ಲಿ ಪೂಜಿಸಲ್ಪಡುವನು.

ವಿ : ಗೋದಾನವು ಷೋಡಶಮಹಾದಾನಗಳಲ್ಲಿ ಒಂದು ಎಂಬುದಾಗಿ ವಿಖ್ಯಾತವಾಗಿದೆ.

ಅದರಲ್ಲೂ ಕಪಿಲಾಗೋದಾನವು ಇನ್ನೂ ಶ್ರೇಷ್ಠವಾದುದು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

## ವಿಷ್ಣುಪೂಜೆಯ ಫಲ

೧೭೪. ಬಹುಭಿರ್ಭೂಷಣೈರ್ಯಸ್ತು ಪೂಜಾಂ ಕುರ್ಯಾಜ್ಜಗತ್ಪತೇಃ।
ಲಿಂಗಭಂಗಮವಾಪ್ನೋತಿ ಸ್ವಾನುಭೂತಂ ಚ ವಿಂದತಿ ॥

ಅನು – ಅನೇಕ ಅಲಂಕಾರಗಳಿಂದ ಜಗದೊಡೆಯನಾದ ಶ್ರೀಹರಿಯ ಪೂಜೆ ಮಾಡುವವನು ಲಿಂಗಭಂಗವನ್ನು ಹೊಂದಿ ಸ್ವರೂಪಾನಂದವನ್ನು ಅನುಭವಿಸುವನು.

ವಿ : ಪ್ರತಿನಿತ್ಯದಲ್ಲಿ ಮಾಡುವ ಶಾಸ್ತ್ರೋಕ್ತಪೂಜೆಯು ಅಪರೋಕ್ಷಜ್ಞಾನಕ್ಕೆ ಸಾಧನವಾಗಿ ಮುಕ್ತಿಗೆ ಕಾರಣವಾಗುವುದು ಎಂದರ್ಥ.

## ವೇಂಕಟಗಿರಿಯಲ್ಲಿ ಅನ್ಯತೀರ್ಥಗಳು

೧೭೫. ತಸ್ಯೋಪರಿ ಕ್ರಮೋಕ್ತಾನಿ ಸಂತಿ ತೀರ್ಥಾನಿ ತದ್ಗಿರೌ ॥

ಅನು – ವೇಂಕಟಗಿರಿಯ ಆ ಕಪಿಲಾ ತೀರ್ಥದ ಮುಂದೆ ಇತರ ಪುರಾಣಗಳಲ್ಲಿ ಹೇಳಿದ ಕ್ರಮದಲ್ಲಿ ಉಳಿದ ತೀರ್ಥಗಳಿವೆ.

ವಿ – ಮೇಲಿನ ೭ಶ್ಲೋಕಗಳು ವೇಂಕಟೇಶಮಾಹಾತ್ಮ್ಯದ ವಚನಗಳು.

## ಭೀಮರಥೀ ಮಾಹಾತ್ಮ್ಯ

೧೭೬. ಭೀಮಸ್ವೇದಸಮುದ್ಭೂತಾ ತದ್ರಥೋತ್ಸಂಗಗಾಮಿನೀ।
ಭೀಮರಥೀತಿ ವಿಖ್ಯಾತಾ ಗಂಗಾ ಮಾಂ ಪಾತು ದುಷ್ಕೃತಾತ್ ॥

ಅನು – ಭೀಮಸೇನನ ಬೆವರಿನಿಂದ ಹುಟ್ಟಿದ್ದೂ, ರುದ್ರನ ರಥವನ್ನು ಮುಟ್ಟಿದ್ದೂ ಆದ್ದರಿಂದ ಭೀಮರಥಿ ಎಂದು ಖ್ಯಾತವಾದ ನದಿಯು ನನ್ನ ಪಾಪಗಳನ್ನು ಪರಿಹರಿಸಲಿ.

ವಿ : ೧. ಭೀಮಸೇನನ ಬೆವರಿನಿಂದ ಹುಟ್ಟಿದ್ದರಿಂದಾಗಿ ಭೀಮಾನದಿಗೆ ಆ ಹೆಸರು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

೨. ಇದು ಶ್ರೀವರಾಹದೇವರ ಬೆವರಿನಿಂದ ಎಳ್ಳು ಉತ್ಪತ್ತಿಯಾದ ಪ್ರಸಂಗದಂತಿದೆ.

೧೭೭. ದೇವಾಃ ಸರ್ವೇಽಪಿ ವಾಂಛಂತಿ ಮಾನುಷಂ ಜನ್ಮ ಭೂತಲೇ।
ಸಕೃದ್ಭೀಮರಥೀಸ್ನಾನಾದ್ಗಚ್ಛಾಮೋಽಕ್ಷಯಲೋಕತಾಮ್ ॥

ಅನು – 'ಒಮ್ಮೆಯಾದರೂ ಭೀಮರಥಿಯ ಸ್ನಾನದಿಂದ ನಾಶವಿಲ್ಲದ ಲೋಕವನ್ನು ಪಡೆಯುವೆವು' ಎಂದು ಎಲ್ಲಾ ದೇವತೆಗಳೂ ಭೂಲೋಕದಲ್ಲಿ ಮನುಷ್ಯಜನ್ಮವನ್ನು ಬಯಸುವರು.

೧೭೮. ಯಸ್ಯಾಃ ಸ್ಮರಣಮಾತ್ರೇಣ ಕ್ಷೀಯತೇ ಪಾಪಪಂಜರಃ।
ಯತ್ರ ಶ್ರೀಪರ್ವತಂ ಭಿತ್ವಾ ಪೂರ್ವಸಾಗರಸಂಗತಾ।
ಭೈಮೀ ಮೋಕ್ಷಪ್ರದಾ ನೃಣಾಂ ಕಾಶ್ಯಾಂ ಭಾಗೀರಥೀ ಯಥಾ॥

ಅನು – ಯಾವುದರ ಸ್ಮರಣಮಾತ್ರದಿಂದಲೇ ಪಾಪಪಂಜರವು ನಶಿಸುವುದೋ ಅಂತಹ ಭೀಮರಥಿಯು ಶ್ರೀಶೈಲದಿಂದ ಪೂರ್ವಸಮುದ್ರವನ್ನು ತಲುಪುವ ಸ್ಥಳದವರೆಗೆ ಕಾಶಿಯಲ್ಲಿನ ಗಂಗೆಯಂತೆ ಮೋಕ್ಷಪ್ರದವಾಗಿದೆ.

## ಉಷ್ಣೋದಕಸ್ನಾನದಲ್ಲಿ ವಿಧಿವಿಶೇಷ

೧೭೯. ಶೀತಾಸ್ವಪ್ಸು ನಿಷಿಚ್ಯೋಷ್ಣಂ ವಾರಿ ಪಶ್ಚಾಚ್ಚ ಶೀತಲಮ್।
ತುಲಸೀಮೃತ್ತಿಕಾಯುಕ್ತಂ ಗಾಯತ್ರ್ಯಾ ಚಾಭಿಮಂತ್ರಿತಮ್।
ಏವಂ ವಿಧಾಯ ಕುರ್ವೀತ ಯೋ ಹ್ಯಶಕ್ತೋ ಭವೇದ್ದ್ವಿಜಃ॥

ಅನು – ಶೀತೋದಕಸ್ನಾನದಲ್ಲಿ ಅಶಕ್ತನಾದವನು ಮೊದಲು ಪಾತ್ರೆಯಲ್ಲಿ ಶೀತೋದಕವನ್ನು ತುಂಬಿ ನಂತರ ಉಷ್ಣೋದಕವನ್ನು ಬೆರೆಸಿ ಕೊನೆಯಲ್ಲಿ ಮತ್ತೆ ಶೀತೋದಕವನ್ನು ಸೇರಿಸಿ ತುಲಸಿಯ ಮೃತ್ತಿಕೆಯಿಂದ ಬೆರೆತ ಆ ನೀರನ್ನು ಗಾಯತ್ರಿಯಿಂದ ಅಭಿಮಂತ್ರಿಸಿ ಸ್ನಾನ ಮಾಡುವುದು ವಿಹಿತ.

ವಿ – ೧. ಮೇಲಿನ ನಾಲ್ಕು ಶ್ಲೋಕಗಳು ಭೀಮರಥೀಮಾಹಾತ್ಮ್ಯದ ವಚನಗಳು.

೨. ಅನಿವಾರ್ಯಕಾರಣಗಳಿಂದ ಬಿಸಿನೀರಿನ ಸ್ನಾನಮಾಡುವ ಪ್ರಸಂಗ ಒದಗಿದಾಗ ಆಗಿನ ಸ್ನಾನಕ್ರಮದ ವಿಧಿವಿಧಾನಗಳನ್ನು ಇಲ್ಲಿ ನಿರೂಪಿಸಿರುವರು.

## ವ್ಯಾಸಕೃತಪುರಾಣಶ್ರವಣದ ಫಲ

೧೮೦. ವೇದವ್ಯಾಸಸ್ತು ಧರ್ಮಾತ್ಮಾ ವೇದಶಾಸ್ತ್ರವಿಭಾಗಕೃತ್।
ಪುರಾಽರ್ಜಿತಾನಿ ಪಾಪಾನಿ ನಾಶಮಾಯಂತಿ ತಸ್ಯ ವೈ।
ಪುರಾಣಶ್ರವಣೇ ಬುದ್ಧಿರ್ಯಸ್ಯ ಪುಂಸಃ ಪ್ರಜಾಯತೇ॥

ಅನು – ಧರ್ಮಪ್ರವರ್ತಕರಾದ, ವೇದವನ್ನು ವಿಭಜಿಸಿದ ವೇದವ್ಯಾಸರು ರಚಿಸಿದ

ಪುರಾಣಗಳ ಶ್ರವಣದಲ್ಲಿ ಮನಸ್ಸು ಮಾಡುವ ಮನುಜನಿಗೆ ಹಿಂದೆ ಗಳಿಸಿದ ಪಾಪಗಳೆಲ್ಲ ನಶಿಸುವವು.

ವಿ : ಇಲ್ಲಿ ಶ್ರೀವೇದವ್ಯಾಸರಿಂದ ರಚಿತವಾದ ಮಹಾಪುರಾಣಗಳ ಶ್ರವಣದ ಫಲ ನಿರೂಪಿತವಾಗಿದೆ; ಪುರಾಣಶ್ರವಣಮಾಡುವುದಿರಲಿ ಹಾಗೆ ಶ್ರವಣಮಾಡಬೇಕೆಂಬ ಸಂಕಲ್ಪವೂ ಪಾಪನಾಶಕ ಎಂದರ್ಥ.

## ಪುರಾಣಗಳ ಅರ್ಥವಾದತ್ವದ ನಿರಾಕರಣೆ

೧೮೧. ಅರ್ಥವಾದಮಿದಂ ಸರ್ವಂ ಪುರಾಣಮಿತಿ ಯೋ ವದೇತ್ ।
ಪಚ್ಯತೇ ನರಕೇ ಘೋರೇ ಯುಗಾನಾಮೇಕಸಪ್ತತಿಮ್ ॥

ಅನು – ಸಮಗ್ರಪುರಾಣವನ್ನು ಅರ್ಥವಾದವೆಂದು ಹೇಳುವವನು ಎಪ್ಪತ್ತೊಂದು ಯುಗಗಳ ಕಾಲ ಘೋರನರಕದಲ್ಲಿ ಬೇಯುವನು.

ವಿ – ೧. ಇದು ಸ್ಕಾಂದಪುರಾಣದ ವಚನ.

೨. ಅರ್ಥವಾದ ಎಂಬುದು ತಾತ್ಪರ್ಯನಿರ್ಣಾಯಕಲಿಂಗಗಳೆಂದು ಪ್ರಸಿದ್ಧವಾದ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ ಮತ್ತು ಅರ್ಥವಾದ ಎಂಬ ಆರರಲ್ಲಿ ಒಂದು.

೩. ಈ ಅರ್ಥವಾದವು ನಿಂದಾ, ಸ್ತುತಿ, ಪರಕೃತಿ ಮತ್ತು ಪುರಾಕಲ್ಪ ಎಂಬುದಾಗಿ ನಾಲ್ಕು ವಿಧ. ಬಾಧಕವಿದ್ದಾಗ ವಾಕ್ಯದ ತಾತ್ಪರ್ಯವನ್ನು ತಿಳಿಸುವುದರಲ್ಲಿ ಮಾತ್ರ ಅರ್ಥವಾದವನ್ನು ಬಳಸಲಾಗುವುದೇ ಹೊರತು ವಾಚ್ಯಾರ್ಥದಲ್ಲಲ್ಲ. ಇದೇ ರೀತಿಯಲ್ಲಿ ಪುರಾಣಗಳೆಲ್ಲವನ್ನೂ ಬೇರೊಂದು ತಾತ್ಪರ್ಯದೆಡೆಗೆ ಒಯ್ಯದಂತೆ ನಿಷೇಧಿಸುವುದು ಇಲ್ಲಿನ ಭಾವ.

## ದಾಮೋದರದಶಾವತಾರ ಸ್ತೋತ್ರ, ದಾಮೋದರಾಷ್ಟಕ ಶತನಾಮಗಳ ಮಾಹಾತ್ಮ್ಯ

೧೮೨. ಜಯ ವಿಶ್ರವಸಃಸುತವಿಧ್ವಂಸಿನ್ ಜಯ ಕಂಸಾರೇ ಯದುಕುಲತಿಲಕ ।
ಜಯ ವೃಂದಾವನಚರ ದೇವೇಶ ದೇವಕಿನಂದನ ಜಯ ಕಂಸಾರೇ ॥

ಅನು – ಹೇ ರಾವಣಾರಿಯೆ! ನಿನಗೆ ಜಯವಾಗಲಿ; ಕಂಸನನ್ನು ಕೊಂದ ಶ್ರೀಕೃಷ್ಣನೇ ನಿನಗೆ ಜಯ; ವೃಂದಾವನದಲ್ಲಿ ನಡೆದಾಡಿದ ದೇವೇಶನಾದ ದೇವಕಿಯ ಕಂದನೇ ನಿನಗೆ ಜಯ.

ವಿ – ೧. ಪಂಚರಾತ್ರಾಗಮದಲ್ಲಿ ಹಂಸಬ್ರಹ್ಮಸಂವಾದರೂಪವಾಗಿ ಉಕ್ತವಾದ ದಾಮೋದರಸ್ತೋತ್ರ; ಇದರ ಪೂರ್ಣಪಾಠವನ್ನು ಸ್ತೋತ್ರಮಾಲಿಕಾ ಭಾಗ-೧ರಲ್ಲಿ ಕಾಣಬಹುದು.

೨. ಈ ಸ್ತೋತ್ರವನ್ನು ಕಾರ್ತಿಕಮಾಸದಲ್ಲಿ ನೀರಾಜನಕಲಾದಲ್ಲಿ ಪಠಿಸುವ ಸಂಪ್ರದಾಯವಿದೆ.

೩. ಕಂಸಾರಿ ಶಬ್ದದ ಪುನರುಕ್ತಿಪರಿಹಾರಕ್ಕಾಗಿ ಮೊದಲ ಕಂಸಶಬ್ದವನ್ನು ದುಷ್ಟ ಕಂಸಪರವಾಗಿಯೂ, ಎರಡನೆಯ ಕಂಸಶಬ್ದವನ್ನು ಭಕ್ತಕಂಸ ಪರವಾಗಿಯೂ ಶ್ರೀಸತ್ಯಾಭಿನವತೀರ್ಥರು ತಮ್ಮ ವ್ಯಾಖ್ಯಾನದಲ್ಲಿ ಅನ್ವಯಿಸಿದ್ದಾರೆ.

೪. ಕಂಸನಲ್ಲಿ ಭಕ್ತರಾದ ಭೃಗುಮುನಿಗಳ ಆವೇಶವಿದ್ದ ವಿವರವನ್ನು ಶ್ರೀಮದಾಚಾರ್ಯರು ನಿರೂಪಿಸಿರುವರು : **ಕಂಸಾವಿಷ್ಟಃ ಸ್ವಯಂ ಭೃಗುಃ (ಭಾ.ತಾ.)**

೧೮೩. **ಶುಭಗುಣಪೂರಿತ ಜಯ ವಿಶ್ವೇಶ ಜಯ ಪುರುಷೋತ್ತಮ ನಿತ್ಯವಿಬೋಧ।**
**ಭೂಮಿಭರಾಂತಕ ಕಾರಣರೂಪ ಜಯ ಖರಭಂಜನ ದೇವವರೇಣ್ಯ॥**

ಅನು – ಕಲ್ಯಾಣಗುಣಗಳಿಂದ ಕೂಡಿದ ಜಗದೊಡೆಯನೆ ನಿನಗೆ ಜಯ. ನಿತ್ಯಜ್ಞಾನ ಸ್ವರೂಪನೇ! ಪುರುಷೋತ್ತಮನೇ! ಭೂಭಾರಹಾರಕನೇ! ಜಗತ್ಕಾರಣನೇ! ಖರನಾಶಕನೇ! ದೇವತೆಗಳಿಂದಲೂ ಭಜನೀಯನೇ! ನಿನಗೆ ಜಯ.

೧೮೪. **ವಿಧಿಭವಸುರವರಸತತಸುವಂದ್ಯವರಚರಣಾಂಬುಜ ಕಂಜ ಸುನೇತ್ರ।**
**ಸಕಲಸುರಾಸುರನಿಗ್ರಹಕಾರಿನ್ ಜಯ ಪೂತನಿಕಾಮಾರಣ ಜಯ ದೇವೇಶ॥**

ಅನು – ಬ್ರಹ್ಮ, ರುದ್ರ ಮೊದಲಾದ ದೇವತಾಶ್ರೇಷ್ಠರಿಂದ ನಿತ್ಯವೂ ಭಕ್ತಿಯಿಂದ ವಂದಿಸಲ್ಪಟ್ಟ ಶ್ರೇಷ್ಠ ಪಾದಕಮಲಗಳ ಭಗವಂತನೇ! ಸುಖಜನಕನೇ! ದಿವ್ಯನೇತ್ರದವನೇ! ಸಮಸ್ತದೇವಾಸುರರ ಲಯಕಾರನೇ! ಪೂತನಿ ಮಾರಕನೇ! ದೇವೇಶನೆ! ನಿನಗೆ ಜಯ.

೧೮೫. **ಜಯ ರಾಸೋತ್ಸವರತ ಲಕ್ಷ್ಮೀಶ ಸತತಸುಖಾರ್ಣವ ಜಯ ಕಂಜಾಕ್ಷ।**
**ಜಯ ಜನನೀಕರಪಾಶಸುಬದ್ಧ ಹರಣಾನ್ನವನೀತಸ್ಯ ಸುರೇಶ॥**

ಅನು – ರಾಸಕ್ರೀಡೆಯಲ್ಲಿ ಆಸಕ್ತನೇ! ರಮಾಪತಿಯೇ! ನಿನಗೆ ಜಯ; ನಿತ್ಯ ಸುಖದ ಸಾಗರನೇ! ಪುಂಡರೀಕಾಕ್ಷನೇ! ನಿನಗೆ ಜಯ. ಬೆಣ್ಣೆಕದ್ದು, ತಾಯಿಯಾದ ಯಶೋದೆಯ ಭಕ್ತಿಪಾಶದಿಂದ ಕಟ್ಟಲ್ಪಟ್ಟವನೇ! ದೇವೇಶನೇ ನಿನಗೆ ಜಯ.

ವಿ – ಶ್ರೀಕೃಷ್ಣನನ್ನು ಪರಿಪರಿಯಿಂದ ಸ್ತುತಿಸುವ ಈ ಮೇಲಿನ ಶ್ಲೋಕಗಳಲ್ಲಿ ಹಲವೆಡೆ ಸುರೇಶ, ದೇವೇಶ ಎಂಬುದಾಗಿ ಸಂಬೋಧಿಸುತ್ತಾ, ಕೃಷ್ಣಾವತಾರದ ಆ ಕಾರ್ಯಗಳೆಲ್ಲಾ ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಲು ಭಗವಂತ ನಡೆಸಿದ ವಿಶೇಷವ್ಯಾಪಾರ ಎಂದು ಸೂಚಿಸಲಾಗಿದೆ.

೧೮೬. **ದಾಮೋದರಾಷ್ಟಕಶತಂ ಯಃ ಪಠೇದಪಿ ಕಾರ್ತಿಕೇ।**
**ತಾವತ್ಯೈವ ವಿಮುಕ್ತಾಘೋ ವಿಷ್ಣುಸಾಯುಜ್ಯಮಾಪ್ನುಯಾತ್॥**

ಅನು – ಯಾರು ದಾಮೋದರಾಷ್ಟಕಶತಸ್ತೋತ್ರವನ್ನು ಕಾರ್ತಿಕಮಾಸದಲ್ಲಿ ಪಠಿಸುವನೋ, ಅವನು ಅದರಿಂದಲೇ ಪಾಪಗಳಿಂದ ಮುಕ್ತನಾಗಿ ಭಗವಂತನ ಸಾಯುಜ್ಯವನ್ನು ಪಡೆಯುವನು.

ವಿ – ೧. ಇದು ಪಂಚರಾತ್ರಾಗಮದ ಕಾರ್ತಿಕಮಾಹಾತ್ಮ್ಯೆಯಲ್ಲಿ ಉಕ್ತವಾದ ಹಂಸಬ್ರಹ್ಮಸಂವಾದರೂಪವಾದ ದಾಮೋದರಾಷ್ಟಕಶತನಾಮಸ್ತೋತ್ರದ ಫಲಶ್ರುತಿಯ ವಚನಗಳು.

೨. ಈ ಸ್ತೋತ್ರದ ಪೂರ್ಣಪಾಠ ನಮ್ಮ ಪ್ರಕಾಶನದ ಸ್ತೋತ್ರಮಾಲಿಕಾ ಭಾಗ -೧ರಲ್ಲಿದೆ.

೧೮೭. **ದಾಮೋದರಸ್ಯ ನಾಮ್ನಾಂ ತು ದೇವೋ ದಾಮೋದರಃ ಸ್ಮೃತಃ।**
**ಅಹಮೇವ ಋಷಿಃ ಪ್ರೋಕ್ತ ಅನುಷ್ಟುಪ್ ಛಂದ ಈರಿತಮ್ ॥**

ಅನು – ಈ ದಾಮೋದರ ನಾಮಗಳಿಗೆ ದಾಮೋದರನೇ ದೇವತೆ, ನಾನೇ ಋಷಿ, ಅನುಷ್ಟುಪ್ ಛಂದಸ್ಸು ಎಂದು ಹೇಳಲ್ಪಟ್ಟಿದೆ.

ವಿ – ಇದು ಹಂಸರೂಪೀ ಭಗವಂತನ ವಚನವಾದ್ದರಿಂದ ನಾನೇ ಋಷಿ ಎಂದರೆ ಹಂಸನಾಮಕ ಭಗವಂತನೇ ಋಷಿ ಎಂದರ್ಥ.

೧೮೮. **ರುಗ್ಮಿಣೀಪ್ರಾಣನಾಥಶ್ಚ ದೇವೇಂದ್ರಮದನಾಶನಃ।**
**ಗೋವರ್ಧನಾಚಲಧರೋ ಗೋಪಗೋಪೀಸುಖಪ್ರದಃ॥**

ಅನು – ಶ್ರೀಹರಿಯು ರುಗ್ಮಿಣಿದೇವಿಗೆ ಪ್ರಾಣನಾಥನು; ಇಂದ್ರನ ಸೊಕ್ಕನ್ನಡಗಿಸಿದವನು; ಗೋವರ್ಧನ ಪರ್ವತವನ್ನು ಧರಿಸಿದವನು; ಗೋಪಗೋಪಿಯರಿಗೆ ಸುಖವಿತ್ತವನು,

೧೮೯. **ಶ್ರೀಪತಿಃ ಶ್ರೀರತಿಃ ಶ್ರೀದಃ ಶ್ರೀವಿಷ್ಣುಃ ಶ್ರೀವಿವರ್ಧನಃ।**
**ಅನಂತರೂಪೋऽನಂತಾಕ್ಷೋऽನಂತಬಾಹುರನಂತಪಾತ್ ॥**

ಅನು – ಲಕ್ಷ್ಮೀಪತಿಯು, ಮಹಾಲಕ್ಷ್ಮಿಗೂ ಆನಂದ ಕೊಡುವವನು, ಸಂಪತ್ತನ್ನೀಯುವವನು, ಲಕ್ಷ್ಮೀದೇವಿಯ ಅಂತರ್ನಿಯಾಮಕನು, ಸಂಪತ್ತನ್ನು ಬೆಳೆಸುವವನು, ಅನಂತರೂಪನು, ಅನಂತನಯನನು, ಅನಂತಬಾಹುವು, ಅನಂತಪಾದನು ಆದವನು.

೧೯೦. **ಅತೀಂದ್ರಿಯೋ ವಿಶುದ್ಧಾತ್ಮಾ ನಿರ್ಮನೋ ನಿರಹಂಕೃತಿಃ।**
**ನಿರ್ಮಮೋ ನಿಖಿಲಃ ಶಾಂತೋ ನಿರ್ವಿಕಾರೋ ಮಹಾಭುಜಃ॥**

ಅನು – ಇಂದ್ರಿಯಗಳಿಗೆ ಅತೀತನಾದವನು, ಅಪ್ರಾಕೃತಶರೀರನು, ಪ್ರಾಕೃತಮನೋಹಂಕಾರ ರಹಿತನು, ಮಮಕಾರರಹಿತನು, ಎಲ್ಲದರ ಸ್ವಾಮಿಯು, ಶಾಂತನು, ವಿಕಾರರಹಿತನು, ಮಹಾಸಮರ್ಥನು,

೧೯೧. ಯಜ್ಞಭೃದ್ಯಕೃದ್ಯಜ್ಞಃ ಯಜ್ಞಭುಗ್ಯಜ್ಞಸಾಧನಃ।
ಯಜ್ಞಾಂತಕೃದ್ಯಜ್ಞವಾಹೋ ಯಜ್ಞಿಯಃ ಪುರುಷೋತ್ತಮಃ॥

ಅನು – ಯಜ್ಞವನ್ನು ಧರಿಸಿದವನು, ಯಜ್ಞದ ಮುಖ್ಯಕರ್ತನು, ಯಜ್ಞದ ಸ್ವಾಮಿಯು, ಯಜ್ಞದ ಸಾರಭೋಕ್ತನು, ಯಜ್ಞಸಾಧಕನು, ಯಜ್ಞದ ನಿರ್ವಿಘ್ನಸಮಾಪ್ತಿಗೆ ಕಾರಣನು, ಯಜ್ಞಫಲವಾಹಕನು, ಯಜ್ಞಕ್ಕೆ ಅರ್ಹನು ಪುರುಷೋತ್ತಮನು.

ವಿ – ಇಲ್ಲಿಯ ಅನೇಕ ನಾಮಗಳು ವಿಷ್ಣುಸಹಸ್ರನಾಮದಲ್ಲೂ ಬಂದಿವೆ :

ಯಜ್ಞಭೃತ್ ಯಜ್ಞಕೃದ್ಯಜ್ಞೀ ಯಜ್ಞಭುಗ್ಯಜ್ಞಸಾಧನಃ।
ಯಜ್ಞಾಂತಕೃದ್ಯಜ್ಞಗುಹ್ಯಮನ್ನಮನ್ನಾದ ಏವ ಚ॥

೧೯೨. ವಿದ್ಯಾರ್ಥೀ ಲಭತೇ ವಿದ್ಯಾಂ ಕಾಮಾರ್ಥೀ ಕಾಮಮಾಪ್ನುಯಾತ್।
ಕನ್ಯಾರ್ಥೀ ಲಭತೇ ಕನ್ಯಾಂ ಯಶೋರ್ಥೀ ಯಶ ಆಪ್ನುಯಾತ್॥

ಅನು – ವಿದ್ಯೆಯನ್ನು ಬಯಸುವವನು ವಿದ್ಯೆಯನ್ನೂ, ಕಾಮನೆಗಳನ್ನು ಬಯಸುವವನು ಕಾಮನೆಗಳನ್ನೂ, ಕನ್ಯೆಯನ್ನು ಬಯಸುವವನು ಕನ್ಯೆಯನ್ನೂ, ಯಶಸ್ಸನ್ನು ಬಯಸುವವನು ಯಶಸ್ಸನ್ನೂ ಹೊಂದುವನು.

೧೯೩. ಕಿಮತ್ರ ಬಹುನೋಕ್ತೇನ ಮೋಕ್ಷಾರ್ಥೀ ಮೋಕ್ಷಮಾಪ್ನುಯಾತ್।
ನಾಭಕ್ತಾಯೇದಮಾಖ್ಯೇಯಂ ನ ಚ ಪಂಡಿತಮಾನಿನಃ॥

ಅನು – ಈ ವಿಷಯದಲ್ಲಿ ಹೆಚ್ಚು ಹೇಳಿ ಏನು ಪ್ರಯೋಜನ? ಮೋಕ್ಷ ಬಯಸುವವನು ಮೋಕ್ಷವನ್ನು ಪಡೆಯುವನು; ಈ ಸ್ತೋತ್ರವನ್ನು ಭಕ್ತನಲ್ಲದವನಿಗೆ, ಪಂಡಿತನೆಂದು ಬೀಗುವವನಿಗೆ ಹೇಳಕೂಡದು.

ವಿ – ೧. ಈ ಸ್ತೋತ್ರವು ಫಲಿಸುವುದು ಭಕ್ತರಿಗೆ ಮತ್ತು ವಿನೀತರಿಗೆ ಮಾತ್ರ ಎಂಬ ಸೂಚನೆಯು ಇಲ್ಲಿದೆ.

೨. ಇಲ್ಲಿ ಮೋಕ್ಷಾರ್ಥಿ ಮೋಕ್ಷ ಹೊಂದುವನು ಎಂದರೆ ಕ್ರಮವಾಗಿ ಜ್ಞಾನಸಂಪಾದಿಸಿ ಆ ಮೂಲಕ ಮೋಕ್ಷವನ್ನು ಹೊಂದುವನು ಎಂದರ್ಥ.

೧೯೪. ವಕ್ತೃನಿಗ್ರಹಕರ್ತ್ರೇ ಚ ವ್ಯಗ್ರಚಿತ್ತಾಯ ನೋ ವದೇತ್।
ಲೋಭಿನೋ ಶಠಚಿತ್ತಾಯ ದತ್ವಾ ಕೀರ್ತಯತೇಽಪಿ ಚ॥

ಅನು – ಪ್ರವಚನ ಹೇಳುವವರನ್ನು ಖಂಡಿಸಿ ಅಪಮಾನ ಮಾಡುವವನಿಗೆ,

ವ್ಯಗ್ರಮನಸ್ಕನಿಗೆ ದುರಾಶೆಯವನಿಗೆ, ವಂಚಕಬುದ್ಧಿಯವನಿಗೆ, ದಾನಮಾಡಿದ್ದನ್ನು ಹೇಳಿ-ಕೊಳ್ಳುವವನಿಗೆ ಇದನ್ನು ಹೇಳಕೂಡದು.

ವಿ – ಸಭೆಯಲ್ಲಿ ಪ್ರವಚನ ಮಾಡುವವರಿಗೆ ಅವಮಾನಿಸುವುದು, ಅನ್ಯಮನಸ್ಕನಾಗಿರುವುದು, ದುರಾಸೆ ಮೊದಲಾದವುಗಳನ್ನು ಹೊಂದಿರುವುದು ಸ್ತೋತ್ರಪಠನೆಗೆ ಅನರ್ಹತೆಯನ್ನುಂಟು ಮಾಡುವುದು ಎಂದರ್ಥ.

೧೯೫. ದಾಕ್ಷಿಣ್ಯಾದರ್ಥಲೋಭಾದ್ವಾ ಭಯಾದ್ವಾ ಮೋಹತೋಽಪಿ ವಾ ।
ಯದಿ ಬ್ರೂಯಾದ್ವಿಮೂಢಾತ್ಮಾ ವಕ್ತಾ ಶ್ರೋತಾ ಚ ಪಾಪಧೀಃ ।
ರೌರವಂ ನರಕಂ ಪ್ರಾಪ್ಯ ಯಾವದಾಭೂತಸಂಪ್ಲವಮ್ ॥

ಅನು – ಸಂಕೋಚದಿಂದಲೋ, ಸಂಪತ್ತಿನ ಆಸೆಯಿಂದಲೋ, ಭಯದಿಂದಲೋ, ಅಜ್ಞಾನದಿಂದಲೋ ಮೂಢನಾಗಿ ಈ ಸ್ತೋತ್ರವನ್ನು ಹೇಳುವ ಅಥವಾ ಕೇಳುವ ಪಾಪಿಯು ಪ್ರಳಯಕಾಲದವರೆಗೂ ರೌರವ ನರಕವನ್ನು ಹೊಂದಿ ಮತ್ತೆ ಹುಟ್ಟುವನು.

ವಿ – ಯಾವುದೇ ಕಾರಣದಿಂದ ಅಯೋಗ್ಯರಿಗೆ ಉಪದೇಶ ಮಾಡುವುದು ಅನರ್ಥಕರ ಎಂದರ್ಥ.

೧೯೬. ಶಿಶ್ರೂಷವೇ ವಿನೀತಾಯ ಪ್ರಾಣೈರರ್ಥೈರ್ಧನೈರಪಿ ।
ಹಿತಾಯ ಹಿತಕಾಮಾಯ ವಕ್ತವ್ಯಂ ಸ್ತೋತ್ರಮುತ್ತಮಮ್ ॥

ಅನು – ಕೇಳಲು ಇಚ್ಛಿಸುವವನಿಗೆ ವಿನಯವಂತನಿಗೆ ತನ್ನ ಇಂದ್ರಿಯ, ಅರ್ಥ, ಧನಗಳಿಂದ ಹಿತವನ್ನು ಹೊಂದಿ ಹಿತವನ್ನೇ ಬಯಸುವವನಿಗೆ ಈ ಉತ್ತಮ ಸ್ತೋತ್ರವನ್ನು ಹೇಳತಕ್ಕದ್ದು.

ವಿ – ಅನರ್ಹನಿಗೆ ಉಪದೇಶವು ನಿಷಿದ್ಧವಾಗಿರುವಂತೆ ಅರ್ಹನಿಗೆ ಉಪದೇಶವು ವಿಹಿತವೂ ಆಗಿದೆ ಎಂಬುದು ಇಲ್ಲಿಯ ಮುಖ್ಯ ಆಶಯ.

## ಘಟಿಕಾಚಲದ ಮಾಹಾತ್ಮ್ಯ

೧೯೭. ಘಟಿಕಾಚಲಭೂಭಾಗೇ ಘಟಿಕಾಮಪಿ ಯೋ ವಸೇತ್ ।
ಸಪ್ತಜನ್ಮಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥

ಅನು – ಘಟಿಕಾಚಲಕ್ಷೇತ್ರದ ಸುತ್ತಮುತ್ತಲ ಸ್ಥಳದಲ್ಲಿ ಒಂದು ಘಳಿಗೆಯಾದರೂ ವಾಸಿಸುವವನ ಏಳು ಜನ್ಮಗಳ ಪಾಪವು ತತ್ಕ್ಷಣವೇ ನಶಿಸುವುದು.

ವಿ – ಒಂದರ್ಥದಲ್ಲಿ ಇದು ಘಟಿಕಾಚಲಶಬ್ದದ ಅರ್ಥವನ್ನು ವಿವರಿಸುವ ಶ್ಲೋಕವೂ ಆಗಿದೆ.

## ಘಟಿಕಾಚಲದಲ್ಲಿರುವ ನರಸಿಂಹದೇವರ ಸ್ತೋತ್ರ

೧೯೮. ಯಸ್ಮಾದೇತಜ್ಜಗದುದಯತೇ ರಕ್ಷ್ಯತೇ ಯೇನ ಭೂಯೋ
ಯಸ್ಮಿನ್ನೇತಿ ಪ್ರಲಯಮಖಿಲಂ ಯನ್ಮಯಂ ಯಚ್ಛರೀರಮ್ ।
ಯಃ ಸರ್ವಾತ್ಮಾ ಮಹತಿ ಘಟಿಕಾಭೂಧರೇ ಯೋಗಭಾಜಾಂ
ಸಪ್ತರ್ಷೀಣಾಂ ನರಹರಿವಪುಃ ಸನ್ನ್ಯಧಾತ್ ಯೋಽವತಾನ್ನಃ ॥

ಅನು – ಯಾರಿಂದ ಈ ಪ್ರಪಂಚವು ಹುಟ್ಟುವುದೋ, ನಂತರ ರಕ್ಷಿಸಲ್ಪಡುವುದೋ, ಯಾರಲ್ಲಿ ಲಯ ಹೊಂದುವುದೋ, ಯಾರ ಅಧೀನವೋ, ಯಾರ ಪ್ರತಿಮೆಯೋ ಅಂತಹ ಸರ್ವಸ್ವಾಮಿಯಾದ ನರಸಿಂಹರೂಪದ ಹರಿಯು ಯೋಗಿಗಳಾದ ಸಪ್ತರ್ಷಿಗಳಿಗಾಗಿ ಘಟಿಕಾಚಲದಲ್ಲಿ ಬಂದು ನಿಂತನೋ ಆ ಭಗವಂತನು ನಮ್ಮನ್ನು ರಕ್ಷಿಸಲಿ.

ವಿ – ೧. ಮೇಲಿನ ೧೫ ಶ್ಲೋಕಗಳು ಪಂಚರಾತ್ರಾಗಮದ ವಚನಗಳು.

೨. ಘಟಿಕಾಚಲದಲ್ಲಿನ ಎರಡು ಬೆಟ್ಟಗಳಲ್ಲಿ ಒಂದು ಬೆಟ್ಟ ಶ್ರೀನರಸಿಂಹದೇವರದಾದರೆ, ಮತ್ತೊಂದು ಬೆಟ್ಟ ಶ್ರೀಪ್ರಾಣದೇವರದು; ನರಸಿಂಹದೇವರ ಬೆಟ್ಟದಲ್ಲಿ ಶ್ರೀನರಸಿಂಹದೇವರ ಮೂರ್ತಿಯು ಪ್ರಾಣದೇವರ ಬೆಟ್ಟದಲ್ಲಿ ಚತುರ್ಭುಜ ಪ್ರಾಣದೇವರ ಮೂರ್ತಿಯು ಇವೆ.

೩. ಇದರಲ್ಲಿ ಘಟಿಕಾಚಲದ ನರಸಿಂಹದೇವರ ಅಪೂರ್ವವಾದ ಸ್ತೋತ್ರ ಇದೆ.

## ವೇಂಕಟೇಶಸ್ತೋತ್ರ

೧೯೯. ಭಾಸ್ವಚ್ಚಂದ್ರಮಸೌ ಯದೀಯನಯನೇ ಭಾರ್ಯಾ ಯದೀಯಾ ರಮಾ
ಯಸ್ಮಾದ್ವಿಶ್ವಸೃಡಪ್ಯಭೂದ್ಯದಖಿಲಂ ಯದ್ಧ್ಯಾನಯುಕ್ತಂ ಸದಾ ।
ನಾಥೋ ಯೋ ಜಗತಾಂ ನಗೇಂದ್ರದುಹಿತುರ್ನಾಥೋಽಪಿ ಯದ್ಭಕ್ತಿಮಾನ್
ತಾತೋ ಯೋ ಮದನಸ್ಯ ಯೋ ದುರಿತಹಾ ತಂ ವೇಂಕಟೇಶಂ ಭಜೇ ॥

ಅನು – ಯಾರ ಕಣ್ಣುಗಳಲ್ಲಿ ಸೂರ್ಯಚಂದ್ರರು ಇರುವರೋ, ರಮಾದೇವಿ ಯಾರ ಪತ್ನಿಯೋ, ಯಾರಿಂದ ಜಗತ್ಸೃಷ್ಟಿಕರ್ತನಾದ ಚತುರ್ಮುಖನು ಹುಟ್ಟಿದನೋ, ಯಾರ ಅಧೀನವಾಗಿ ಎಲ್ಲವೂ ಇದೆಯೋ, ಸಕಲರೂ ಸದಾ ಯಾರ ಧ್ಯಾನದಲ್ಲಿ ತೊಡಗಿರುವರೋ, ಯಾರು ಜಗತ್ತಿಗೆ ಒಡೆಯನೋ, ಹಿಮಾಲಯಪುತ್ರಿಯಾದ ಪಾರ್ವತಿಯ ಪತಿಯಾದ ಶಿವನೂ ಸಹ ಯಾರಲ್ಲಿ ಭಕ್ತಿಯುಳ್ಳವನಾಗಿರುವನೋ, ಯಾವನು ಮನ್ಮಥನಿಗೆ ಜನಕನೋ, ಯಾವನು ಪಾಪಗಳ ಪರಿಹಾರಕನೋ ಅಂತಹ ವೇಂಕಟೇಶನನ್ನು ಭಜಿಸುವೆನು.

ವಿ – ೧. ಇಲ್ಲಿಂದ ಮುಂದಿನ ೭ಶ್ಲೋಕಗಳು ತಿರುಪತಿಯ ಶ್ರೀವೇಂಕಟೇಶದೇವರ ಸ್ತೋತ್ರವಾಗಿವೆ; ಇದು ಮಾರ್ಕಂಡೇಯಪುರಾಣ ತೀರ್ಥಖಂಡದ ವಚನ (೨/೧೬)

೨೦೦. ಜಯ ದೇವ ಜಗನ್ನಾಥ ಸರ್ವಲೋಕೈಕಮಂಗಲ ।
ಜಯ ವೇಂಕಟಶೈಲೇಶ ಕರುಣಾಕರ ಪಾಹಿ ನಃ ॥

ಅನು – ಹೇ ಜಗನ್ನಾಥನೇ! ಭಗವದ್ ಜ್ಞಾನಿಗಳಿಗೆಲ್ಲ ಮಂಗಲವನ್ನೀಯುವವನೇ! ನಿನಗೆ ಜಯ. ವೇಂಕಟಾದ್ರಿಯ ಒಡೆಯನೇ! ನಿನಗೆ ಜಯ. ಹೇ ಕರುಣಾಕರನೇ! ನಮ್ಮನ್ನು ರಕ್ಷಿಸು.

ವಿ : ಇದು ಮಾರ್ಕಂಡೇಯಪುರಾಣ ತೀರ್ಥಖಂಡದ ವಚನ (೨/೭೮)

೨೦೧. ವಂದಯಾಮೋ ವಯಂ ಸರ್ವೇ ವೇಂಕಟಾಚಲಪಾಲಕ ।
ಅಸ್ಮಾಕಂ ವಾಂಛಿತಾನ್ ದತ್ವಾ ಪಾಹಿ ಪಾಹಿ ಜಗದ್ಗುರೋ ॥

ಅನು – ವೇಂಕಟಾದ್ರಿಯ ರಕ್ಷಕನೇ! ನಾವೆಲ್ಲರೂ ನಿನ್ನನ್ನು ವಂದಿಸುವೆವು. ನಮ್ಮ ಅಭೀಷ್ಟಗಳನ್ನು ನೀಡಿ, ಜಗದ್ಗುರುವೇ! ರಕ್ಷಿಸು ರಕ್ಷಿಸು.

ವಿ : ಇದು ಮಾರ್ಕಂಡೇಯಪುರಾಣ ತೀರ್ಥಖಂಡದ ವಚನ (೨/೭೯)

೨೦೨. ಜಯ ದೇವ ಜಗನ್ನಾಥ ಜಯ ಲಕ್ಷ್ಮೀಪತೇ ಜಯ ।
ಜಯ ಭಕ್ತಕೃತಾಶೇಷದೋಷಾಪಹ ನಮೋಽಸ್ತು ತೇ ॥

ಅನು – ಹೇ ದೇವನೇ! ನಿನಗೆ ಜಯ. ಹೇ ಜಗನ್ನಾಥನೇ! ನಿನಗೆ ಜಯ. ಎಲೈ ಲಕ್ಷ್ಮೀಪತಿಯೇ! ನಿನಗೆ ಜಯ. ಭಕ್ತರು ಮಾಡಿದ ಎಲ್ಲ ದೋಷಗಳನ್ನು ಪರಿಹರಿಸುವ ನಿನಗೆ ನಮನವಿರಲಿ.

ವಿ : ಇದು ಮಾರ್ಕಂಡೇಯಪುರಾಣ ತೀರ್ಥಖಂಡದ ವಚನ (೪/೩೩)

೨೦೩. ಜಯ ಜಯ ದಿವಿಷ್ಠ ತಪೋಧನಾನಾಂ ಪರಮಧನಪ್ರಕಟೀಕೃತಾನುಭಾವ ।

ಅನು – ಕಂಗೊಳಿಸುವ ಲೋಕಗಳಲ್ಲಿರುವವನೇ! ನಿನಗೆ ಜಯ. ತಪಸ್ವಿಗಳ ಉತ್ತಮ ಸಂಪತ್ತಿಗೆ ತನ್ನ ಸ್ವರೂಪವನ್ನು ಪ್ರಕಟಿಸುವವನೇ! ನಿನಗೆ ಜಯ.

ವಿ – ಜ್ಞಾನವನ್ನು ತಪಸ್ವಿಗಳ ಉತ್ತಮ ಸಂಪತ್ತು ಎಂದು ಇಲ್ಲಿ ಬಣ್ಣಿಸಲಾಗಿದೆ.

೨೦೪. ನಮಾಮ್ಯಹಂ ವೇಂಕಟನಾಥ ವಿಷ್ಣೋ ನಾರಾಯಣಾಶೇಷಜಗನ್ನಿವಾಸ ।
ಭಕ್ತಾರ್ತಿಹಂತರ್ಭಗವನ್ ಮುರಾರೇ ರಮಾನಿವಾಸಾಖಿಲಲೋಕಪೂಜ್ಯ ॥

ಅನು – ಹೇ ವೇಂಕಟೇಶನೆ! ಹೇ ವಿಷ್ಣೋ! ನಾರಾಯಣ! ಸಮಸ್ತ ಲೋಕಗಳಲ್ಲಿ ನೆಲೆಸಿರುವವನೇ! ಭಕ್ತರ ದುಃಖವನ್ನು ಪರಿಹರಿಸುವವನೇ! ಭಗವನ್! ಮುರಾರೇ! ಲಕ್ಷ್ಮೀಪತಿಯೇ! ಸಮಸ್ತ ಜನರಿಂದ ಪೂಜ್ಯನೇ! ನಾನು ನಿನ್ನನ್ನು ನಮಸ್ಕರಿಸುವೆ.

ವಿ – ೧. ಇದು ಮಾರ್ಕಂಡೇಯಪುರಾಣ ತೀರ್ಥಖಂಡದ ವಚನ (೪/೪೩)

೨. ನಮಾಮಿ = ನಮಸ್ಕರಿಸುವೆ ಎಂಬ ಉತ್ತಮಪುರುಷ ಪ್ರಯೋಗದಿಂದಲೇ ನಾನು ನಮಸ್ಕರಿಸುವೆ ಎಂಬುದು ತಿಳಿಯುವಾಗ ಅಹಂ ಶಬ್ದದ ಔಚಿತ್ಯವೇನು? ಎಂಬ ಪ್ರಶ್ನೆಗೆ ಶ್ರೀಸತ್ಯಾಭಿನವರು ಉತ್ತರವಾಗಿ ವ್ಯಾಖ್ಯಾನಿಸಿರುವರು. ''ನಾನು ನಿನ್ನನ್ನು ನಮಸ್ಕರಿಸಲು ಅರ್ಹ-ನಲ್ಲದವನಾದರೂ ನಿನ್ನ ಕೃಪೆಯಿಂದಲೇ ಈ ನಮಸ್ಕಾರಕ್ಕೆ ಯೋಗ್ಯತೆ'' ಎಂಬ ಅಪೂರ್ವ ಆತ್ಮನಿವೇದನದ ವಿವರಣೆಯನ್ನು ಶ್ರೀಜಯತೀರ್ಥರ ಋಗ್ಭಾಷ್ಯಟೀಕೆಯ ಆಧಾರದಿಂದ ನೀಡಿರುವರು.

೨೦೫. ವಿಶೇಷಿತಾಯೋದ್ಯತ ವೇಂಕಟೇಶ
ಲಕ್ಷ್ಮೀಭೂಭ್ಯಾಂ ಪಾರ್ಶ್ವಯುಗ್ಮಸ್ಥಿತಾಭ್ಯಾಮ್ ।
ದ್ವಾಭ್ಯಾಂ ನಿತ್ಯಂ ಸೇವಿತಭಕ್ತಬಂಧೋ
ಅಹೋ ಭಾಗ್ಯಂ ಭಾಗ್ಯಮಹೋ ಮಹಾತ್ಮನ್ ॥

ಅನು – ಅನಂತವಿಶೇಷವಿಶಿಷ್ಟನೇ! ಭಕ್ತರಕ್ಷಣೆಗೆ ಉದ್ಯುಕ್ತನೇ! ಹೇ ವೇಂಕಟೇಶನೇ! ಇಕ್ಕೆಲಗಳಲ್ಲಿ ಶ್ರೀ, ಭೂರೂಪಗಳಿಂದ ಎಂದೂ ಸೇವಿಸಲ್ಪಡುವ ಭಕ್ತರ ಬಂಧುವೇ! ನಿನ್ನ ಭಕ್ತರದು ಭಾಗ್ಯವೇ ಭಾಗ್ಯ.

ವಿ – ೧. ಇದು ಮಾರ್ಕಂಡೇಯಪುರಾಣ ತೀರ್ಥಖಂಡದ ವಚನ (೪/೪೬)

೨. ಲಕ್ಷ್ಮೀದೇವಿಯ ಶ್ರೀಭೂರೂಪಗಳಿಂದ ಸೇವಿತನಾಗಿದ್ದರೂ ಅನಂತಗುಣಗಣ ವಿಶಿಷ್ಟನಾಗಿದ್ದರೂ ಭಕ್ತರಿಗೆ ಎಂದೂ ಬಂಧುವೇ ಎಂಬ ಭಗವಂತನ ವಿಶೇಷಗುಣವು ಅವನ ಭಕ್ತರ ಭಾಗ್ಯ ಎಂದು ಭಾವ.

### ಬ್ರಾಹ್ಮಣಭೋಜನವು ರಾಜಸೂಯಾದಿಯಾಗಗಳಿಗಿಂತ ವಿಶಿಷ್ಟ

೨೦೬. ಆಕ್ರಮ್ಯ ಯದ್ದ್ವಿಜೈರ್ಭುಕ್ತಂ ಪರಿಕ್ಷೀಣೈಶ್ಚ ಬಂಧುಭಿಃ ।
ಗೋಭಿಶ್ಚ ನೃಪಶಾರ್ದೂಲ ರಾಜಸೂಯಾದ್ವಿಶಿಷ್ಯತೇ ॥

ಅನು – ಹೇ ರಾಜಶ್ರೇಷ್ಠನೇ! ಬ್ರಾಹ್ಮಣರು, ಸಂಕಷ್ಟಕ್ಕೆ ತುತ್ತಾದ ಬಂಧುಗಳು, ಹಾಗೂ ಗೋವುಗಳು ಬಲಾತ್ಕಾರದಿಂದ ತಾವಾಗಿ ಭುಂಜಿಸಿದರೂ ರಾಜಸೂಯಕ್ಕಿಂತ ಮಿಗಿಲಾದ ಪುಣ್ಯಲಭಿಸುವುದು.

ವಿ – ಇದು ಮಹಾಭಾರತದ ವಚನ.

## ಗುರುಸ್ಮರಣೆಯ ಫಲ

೨೦೭. ಸಮಾಶ್ರಯೇದ್ಗುರುಂ ಭಕ್ತ್ಯಾ ಮಹಾವಿಶ್ವಾಸಪೂರ್ವಕಮ್ ।
ನಿಕ್ಷಿಪೇತ್ ಸರ್ವಭಾರಾಂಶ್ಚ ಗುರೋಃ ಶ್ರೀಪಾದಪಂಕಜೇ ॥

ಅನು – ತುಂಬುವಿಶ್ವಾಸದೊಂದಿಗೆ ಗುರುವನ್ನು ಭಕ್ತಿಯಿಂದ ಮೊರೆ ಹೋಗಬೇಕು. ತನ್ನೆಲ್ಲಾ ಭಾರಗಳನ್ನು ಗುರುಗಳ ಮಂಗಳಕರ ಪಾದಕಮಲಗಳಲ್ಲಿ ಅರ್ಪಿಸಬೇಕು.

ವಿ – ೧. ಗುರುವನ್ನಾಶ್ರಯಿಸುವುದು ಎಂದರೆ ಎಲ್ಲ ಕಾಲಗಳಲ್ಲೂ ಅವರನ್ನು ಸ್ಮರಿಸುವುದು, ಅವರಿಗೆ ಯಾವುದೇ ವಿಧದಲ್ಲಿ ದ್ರೋಹ ಬಗೆಯದಿರುವುದು ಎಂದು ಭಾವ.

೨. ಇದು ಸ್ಕಾಂದಪುರಾಣದಲ್ಲಿನ ಗುರುಸ್ತೋತ್ರದ ವಚನ[೧].

## ಹರಿಯೇ ಗುರುವು

೨೦೮. ಗುರುರೇವ ಪರೋ ಧರ್ಮೋ ಗುರುರೇವ ಪರಾಗತಿಃ ।
ಪಾಪಂ ಕ್ಷಪಯತಿ ಕ್ಷಿಪ್ರಂ ಗುರುರೇವಾತ್ಮಭಾವತಃ ॥

ಅನು – ಗುರುವೇ ಪರಮ ಧರ್ಮ. ಗುರುವೇ ಪರಗತಿ. ಗುರುವು ತನ್ನ ಸಾಮರ್ಥ್ಯದಿಂದ ಪಾಪಗಳನ್ನು ಬೇಗನೇ ಪರಿಹರಿಸುವನು.

ವಿ – ೧. ಈ ಶ್ಲೋಕದಲ್ಲಿನ "ಗುರು" ಎಂಬ ಶಬ್ದಕ್ಕೆ 'ಗುರುಗಳ ಅಂತರ್ಯಾಮಿಯಾದ ಭಗವಂತ' ಎಂದೇ ಅರ್ಥೈಸಬೇಕು :

ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ।....
ಅಗಮ್ಯತ್ವಾತ್ ಹರಿಸ್ತಸ್ಮಿನ್ನಾವಿಷ್ಟೋ ಮುಕ್ತಿದೋ ಭವೇತ್ ॥(ಮ.ಭಾ.ತಾ.ನಿ.)

೨. ಇದೂ ಸಹ ಮೇಲೆ ಹೇಳಿದ ಗುರುಸ್ತೋತ್ರದ ವಚನ.

## ಪ್ರಯಾಣಕಾಲದಲ್ಲಿ ನೀಡಬೇಕಾದ ಸಂದೇಶ

೨೦೯. ಗಮ್ಯತಾಮರ್ಥಲಾಭಾಯ ಕ್ಷೇಮಾಯ ವಿಜಯಾಯ ಚ ।
ಶತ್ರೂಣಾಂ ಬುದ್ಧಿನಾಶಾಯ ಪುನರಾಗಮನಾಯ ಚ ॥

ಅನು – ಸಂಪತ್ತನ್ನು ಪಡೆಯಲು, ಉಳಿಸಲು, ಗೆಲ್ಲಲು, ಎದುರಾಳಿಯ ಬುದ್ಧಿ ನಾಶಪಡಿಸಲು, ಮತ್ತೆ ಸುರಕ್ಷಿತ ಹಿಂದಿರುಗಲು ಹೊರಡು.

---

೧. ಇದು ಸಮಗ್ರವಾಗಿ ನಮ್ಮ ಪ್ರಕಾಶನದ ಸ್ತೋತ್ರಮಾಲಿಕಾ ಭಾಗ -೧ ರಲ್ಲಿ ಪ್ರಕಾಶಿತವಾಗಿದೆ.

ವಿ – ೧. ಭಗವಂತನನ್ನು ಸ್ಮರಿಸಿ ನಡೆದರೆ ಇವೆಲ್ಲವು ಸಾಧ್ಯ ಎಂಬುದು ದುರ್ಘಟಾರ್ಥ-ದೀಪಿಕೆಯಲ್ಲಿ ಬಂದಿರುವ ಭಾವ.

೨. ಇದು ಪ್ರಯಾಣಕಾಲದಲ್ಲಿ ನೀಡಬೇಕಾದ ಶುಭಸಂದೇಶ.

೩. ಗಮನದ ಗುರಿ ಅರ್ಥಲಾಭ, ಕ್ಷೇಮ, ವಿಜಯ, ಶತ್ರುಜಯ ಹಾಗು ಯಶಸ್ವಿಯಾದ ಪುನರಾಗಮನ ಆಗಿರಬೇಕು ಎಂಬ ಸೂಚನೆಯು ಇಲ್ಲಿದೆ; ಇವಿಲ್ಲದ ಪ್ರಯಾಣ ನಿರರ್ಥಕ ಎಂದರ್ಥ.

೨೧೦. ಯತ್ರ ಯೋಗೀಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥

ಅನು – ಯೋಗಿಗಳ ಒಡೆಯನಾದ ಶ್ರೀಕೃಷ್ಣನು ಮತ್ತು ಧನುರ್ಧಾರಿಯಾದ ಅರ್ಜುನನು ಎಲ್ಲಿರುವರೋ ಅಲ್ಲಿ ಕಾಂತಿ, ಗೆಲುವು, ಭಾಗ್ಯ ಮತ್ತು ನೀತಿ ನೆಲೆಸುವವು ಎಂದು ನನ್ನ ಅಭಿಪ್ರಾಯ.

ವಿ – ೧. ಭಗವದ್ಗೀತೆಯ ಕೊನೆಯ ಈ ಶ್ಲೋಕ (೧೮/೭೮) ಸಂಜಯನ ಮಾತು.

೨. 'ಯತ್ರ ಯೋಗೇಶ್ವರಃ' ಎಂಬುದು ಶ್ರೀವಿದ್ಯಾಧಿರಾಜತೀರ್ಥರ ಗೀತಾವಿವೃತಿಯ ಪಾಠ.

೩. ಭಗವಂತನ ಜೊತೆಗೆ ಮುಖ್ಯಪ್ರಾಣನ ಅನುಗ್ರಹವೂ ಎಲ್ಲೆಡೆ ಆವಶ್ಯಕ ಎಂಬುದು ಎಲ್ಲ ಶಾಸ್ತ್ರಗಳಲ್ಲಿ ಅವಿವಾದಿತವಾಗಿ ತಿಳಿಯಲ್ಪಟ್ಟಿದ್ದರೂ ಈ ಗೀತಾವಾಕ್ಯ ಭಗವಂತ ಮತ್ತು ಅರ್ಜುನನ ಮಾಹಾತ್ಮ್ಯವನ್ನು ಮಾತ್ರ ತಿಳಿಸುವುದರಿಂದ ವಾಯುಜೀವೋತ್ತಮತ್ವಕ್ಕೆ ಭಂಗವುಂಟಾದೀತೇ? ಎಂಬ ಆಧ್ಯಾತ್ಮಿಕ ಸಮಸ್ಯೆಯನ್ನು ವ್ಯಾಖ್ಯಾನದಲ್ಲಿ ಪರಿಹರಿಸಲಾಗಿದೆ.

೪. ವಾಯುದೇವರ ಉಪಾಸನೆಯ ರಹಸ್ಯವನ್ನು ಕಾಪಾಡಲು ಇಲ್ಲಿ ಕೃಷ್ಣ ಶಬ್ದವು ಕೃಷ್ಣಭಕ್ತನಾದ ಭೀಮಪರವಾಗಿಯೂ ಪ್ರಯೋಗಿಸಲ್ಪಟ್ಟಿದೆ. ಮುಂದೆಯೂ 'ಯ ಇದಂ ಪಠತೇ'(೨೨೩) ಎಂಬ ಶ್ಲೋಕದ ವ್ಯಾಖ್ಯಾನದಲ್ಲೂ ಈ ವಿವರಣೆಯನ್ನು ಕಾಣಬಹುದು.

## ನಂಬಿ ಕೆಟ್ಟವರಿಲ್ಲವೋ

೨೧೧. ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

ಅನು – ಯಾರು ಇತರಚಿಂತನೆಯನ್ನು ತೊರೆದು ನನ್ನನ್ನು ಭಕ್ತಿಯಿಂದ ಆರಾಧಿಸುವರೋ ಅಂತಹ ಸದಾ ನನ್ನ ಧ್ಯಾನನಿರತರಾದ ಜನರ ಯೋಗಕ್ಷೇಮಗಳನ್ನು ನಾನು ವಹಿಸುವೆನು.

ವಿ – ೧. ಇದು ಗೀತಾ(೯/೨೨) ವಚನ.

೨. ಇಲ್ಲಿ ''ಯೇ'' ಎಂಬುದಕ್ಕೆ ಪ್ರಕಾಶರೂಪನಾದ ಮುಖ್ಯಪ್ರಾಣನಲ್ಲಿ ನೆಲೆಸಿರುವ ಎಂದರ್ಥ. ಇದರಿಂದ ವಾಯ್ವಂತರ್ಗತ ಶ್ರೀಹರಿಯನ್ನು ಆಶ್ರಯಿಸಿರುವವರಿಗೆ ಯೋಗ-ಕ್ಷೇಮಗಳು ಖಚಿತ ಎಂದಾಗುವುದು.

## ಪ್ರಯಾಣಕಾಲದಲ್ಲಿ ಪಠಿಸಬೇಕಾದ ಮಂತ್ರ

೨೧೨. ಪ್ರಯಾಣೇ ಗರುಡಾರೂಢಂ ಪಾರಿಜಾತಹರಂ ಹರಿಮ್ ।
ಸತ್ಯಯಾ ಸಹಿತಂ ಧ್ಯಾಯೇತ್ ಸರ್ವಕಾರ್ಯಾರ್ಥಸಿದ್ಧಯೇ ॥

ಅನು – ಪ್ರಯಾಣಕಾಲದಲ್ಲಿ ಎಲ್ಲ ಕಾರ್ಯಾರ್ಥಗಳ ಸಿದ್ಧಿಗಾಗಿ ಗರುಡವಾಹನನಾದ ಪಾರಿಜಾತಹಾರಕನಾದ ಸತ್ಯಭಾಮಾಸಹಿತನಾದ ಶ್ರೀಹರಿಯನ್ನು ಧ್ಯಾನಿಸಬೇಕು.

ವಿ – ಸತ್ಯಭಾಮಾಸಮೇತನಾಗಿ ಶ್ರೀಕೃಷ್ಣ ಇಂದ್ರಾದಿದೇವತೆಗಳನ್ನು ಪರಾಭವಗೊಳಿಸಿ ಪಾರಿಜಾತ ವೃಕ್ಷವನ್ನು ಭೂಮಿಗೆ ತಂದ ಘಟನೆಯ ಸ್ಮರಣೆ ಸಕಲಕಾರ್ಯಗಳ ಸಿದ್ಧಿಗೂ ಸಾಧನ ಎಂಬ ಭಾವವು ಇಲ್ಲಿದೆ.

## ಪ್ರಯಾಣಕಾಲದಲ್ಲಿ ಮತ್ತೊಂದು ಬಗೆಯ ಚಿಂತನೆ

೨೧೩. ಯಃ ಸ್ಮರೇತ್ ತುಲಸೀಂ ಸೀತಾಂ ರಾಮಂ ಸೌಮಿತ್ರಿಣಾ ಸಹ ।
ಸ ನಿರ್ಜಿತ್ಯ ರಿಪೂನ್ ಸರ್ವಾನ್ ಪುನರಾಯಾತಿ ಕಾರ್ಯಕೃತ್ ॥

ಅನು – ತುಲಸಿಯನ್ನು, ಸೀತಾದೇವಿಯನ್ನು, ಲಕ್ಷ್ಮಣನ ಸಹಿತನಾಗಿ ರಾಮನನ್ನು ಸ್ಮರಿಸುವವನು ಎಲ್ಲ ಶತ್ರುಗಳನ್ನು ಗೆದ್ದು ತನ್ನ ಕಾರ್ಯವನ್ನು ಪೂರೈಸಿ ಹಿಂದಿರುಗುವನು.

ವಿ – ಪ್ರಯಾಣಕಾಲದಲ್ಲಿ ತುಳಸಿ ಸೀತೆ, ರಾಮ ಹಾಗು ಲಕ್ಷ್ಮಣರ ಸ್ಮರಣೆ ಶತ್ರುಜಯಾದಿಗಳಿಗೆ ಸಾಧನ ಎಂದರ್ಥ.

## ನಿತ್ಯಮಂಗಲದ ಪರಮೋಪಾಯ

೨೧೪. ಸರ್ವದಾ ಸರ್ವಕಾರ್ಯೇಷು ನಾಸ್ತಿ ತೇಷಾಮಮಂಗಲಮ್ ।
ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನಂ ಹರಿಃ ॥

ಅನು – ಯಾರ ಹೃದಯದಲ್ಲಿ ಮಂಗಲರೂಪನಾದ ಶ್ರೀಹರಿಯು ನೆಲೆಸಿರುವನೋ ಅವರಿಗೆ ಎಂದೂ ಯಾವ ಕಾರ್ಯದಲ್ಲೂ ಅಮಂಗಲವು ಉಂಟಾಗದು.

ವಿ – ಹೃದಯದಲ್ಲಿ ನೆಲೆಸಿರುವ ಭಗವಂತನ ಚಿಂತನೆ ಸರ್ವಕಾರ್ಯಗಳ ಮಂಗಲಕ್ಕೆ ಸಾಧನ ಎಂದರ್ಥ.

## ಚಾತುರ್ಮಾಸ್ಯವ್ರತಕಾಲದ ಕೆಲವು ಮಂತ್ರಗಳು

### ಶಾಕವ್ರತಸಂಕಲ್ಪಮಂತ್ರ

೨೧೫. ವಾಸುದೇವ ಶುಚೌ ಮಾಸೇ ಶಾಕವ್ರತಮನುತ್ತಮಮ್ ।
ತ್ವತ್ಪ್ರೀತ್ಯರ್ಥಂ ಕರಿಷ್ಯೇऽಹಂ ನಿರ್ವಿಘ್ನಂ ಕುರು ಮಾಧವ ॥

ಅನು – ಹೇ ವಾಸುದೇವನೇ! ಈ ಶುದ್ಧವಾದ ಮಾಸದಲ್ಲಿ ಉತ್ತಮವಾದ ಶಾಕವ್ರತವನ್ನು ನಿನ್ನ ಪ್ರೀತಿಗಾಗಿ ಆಚರಿಸುವೆನು; ಹೇ ಮಾಧವನೇ! ಇದು ನಿರ್ವಿಘ್ನವಾಗಿ ಮುಗಿಯುವಂತೆ ಅನುಗ್ರಹಿಸು.

ವಿ – ಪ್ರಚಲಿತವಾದ ಶಾಕವ್ರತಸಂಕಲ್ಪಮಂತ್ರ ಹೀಗಿದೆ :

ಶಾಕವ್ರತಂ ಮಯಾ ದೇವ ಗೃಹೀತಂ ಪುರತಸ್ತವ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತೇ ರಮಾಪತೇ ॥
ವಾಸುದೇವ ಶುಭೇ ಮಾಸೇ ಶಾಕವ್ರತಮನುತ್ತಮಮ್ ।
ತ್ವತ್ಪ್ರೀತ್ಯರ್ಥಂ ಕರಿಷ್ಯೇऽಹಂ ನಿರ್ವಿಘ್ನಂ ಕುರು ಮಾಧವ ॥

### ಶಾಕವ್ರತಸಮಾಪ್ತಿಮಂತ್ರ

೨೧೬. ವಾಸುದೇವ ನಮಸ್ತುಭ್ಯಂ ಪ್ರಥಮೇ ಮಾಸಿ ಯತ್ಕೃತಮ್ ।
ಶಾಕವ್ರತಸಮಾಪ್ತ್ಯಾ ತ್ವಂ ಸಂತುಷ್ಟೋ ಭವ ಮಾಧವ ॥

ಅನು – ಹೇ ವಾಸುದೇವ! ನಿನಗೆ ನಮಸ್ಕಾರ; ಮೊದಲ ಮಾಸದಲ್ಲಿ ಆಚರಿಸಿದ ಶಾಕವ್ರತದ ಸಮಾಪ್ತಿಯಿಂದ ಹೇ ಮಾಧವನೇ! ನೀನು ಸಂತುಷ್ಟನಾಗು.

ವಿ – ಪ್ರಚಲಿತ ಶಾಕವ್ರತಸಮಾಪ್ತಿಮಂತ್ರ ಹೀಗಿದೆ :

ವಾಸುದೇವ ನಮಸ್ತುಭ್ಯಂ ಪ್ರಥಮೇ ಮಾಸಿ ಮತ್ಕೃತಮ್ ।
ಶಾಕವ್ರತಂ ಮಯಾ ತೇನ ಸಂತುಷ್ಟೋ ಭವ ಮಾಧವ ॥

### ಕ್ಷೀರವ್ರತಸಂಕಲ್ಪಮಂತ್ರ

೨೧೭. ಪ್ರದ್ಯುಮ್ನ ತವ ತುಷ್ಟ್ಯರ್ಥಂ ಪ್ರೋಷ್ಟಪದ್ಯಾಂ ತೃತೀಯಕೇ ।
ನಿರ್ವಿಘ್ನಂ ಕುರು ದೇವೇಶ ಕರಿಷ್ಯೇऽಹಂ ಪಯೋವ್ರತಮ್ ॥

ಅನು – ಎಲೈ ಪ್ರದ್ಯುಮ್ನನೇ! ಮೂರನೆ ಪ್ರೋಷ್ಟಪದಿಯಲ್ಲಿ ನಿನ್ನ ಪ್ರೀತಿಗಾಗಿ ಕ್ಷೀರವ್ರತವನ್ನು ಆಚರಿಸುವೆನು; ಹೇ ದೇವೇಶನೇ! ಇದನ್ನು ನಿರ್ವಿಘ್ನಗೊಳಿಸು.

ವಿ – ೧. ಮೇಲಿನ ೧೧ ಶ್ಲೋಕಗಳು ವಾರಾಹಪುರಾಣವಚನಗಳು.

೨. ಪ್ರಚಲಿತ ಕ್ಷೀರವ್ರತಸಂಕಲ್ಪಮಂತ್ರ ಹೀಗಿದೆ :

ಕ್ಷೀರವ್ರತಮಿದಂ ದೇವ ಗೃಹೀತಂ ಪುರತಸ್ತವ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತೇ ರಮಾಪತೇ ॥
ಪ್ರದ್ಯುಮ್ನ ತವ ತುಷ್ಟ್ಯರ್ಥಂ ಪ್ರೋಷ್ಠಪದ್ಯಾಂ ತೃತೀಯಕೇ ।
ನಿರ್ವಿಘ್ನಂ ಕುರು ದೇವೇಶ ಕರಿಷ್ಯೇಽಹಂ ಪಯೋವ್ರತಮ್ ॥

೩. ಇಲ್ಲಿ ಪ್ರೋಷ್ಠಪದಿ ಎಂದರೆ ಭಾದ್ರಪದಮಾಸ ಎಂದರ್ಥ.

೪. ಇಲ್ಲಿ ಪಯೋವ್ರತ ಎಂದರೆ ಚಾತುರ್ಮಾಸ್ಯದ ಮೂರನೆಯ ತಿಂಗಳಿನಲ್ಲಿ ಆಚರಿಸಬೇಕಾದ ಹಾಲು ಹಾಗೂ ಅದರಿಂದ ಮಾಡಿದ ಪದಾರ್ಥಗಳನ್ನು ತೊರೆಯುವ ಕ್ಷೀರವ್ರತ ಎಂದರ್ಥ.

೫. ಕ್ಷೀರವನ್ನು ಮಾತ್ರ ಸ್ವೀಕರಿಸಿ ಫಾಲ್ಗುಣಮಾಸದ ಶುಕ್ಲಪಕ್ಷದ ಪಾಡ್ಯದಿಂದ ದ್ವಾದಶಿಯವರೆಗೆ ಆಚರಿಸುವ ಪಯೋವ್ರತ ಇದಕ್ಕಿಂತ ಭಿನ್ನವಾದುದು; ಅದರ ಬಗ್ಗೆ ವಿಶೇಷವಿವರಗಳು ಶ್ರೀಮದ್ಭಾಗವತ ಅಷ್ಟಮಸ್ಕಂಧದ ಶ್ರೀವಾಮನಾವತಾರಪ್ರಸಂಗದಲ್ಲಿ ಬಂದಿವೆ.

## ಬ್ರಾಹ್ಮಣಭೋಜನದ ಮಹಿಮೆ

೨೧೮. ನ ರೀಯತೇ ನ ವ್ಯಥತೇ ನ ಚೋರ್ಧ್ವಂ ಸರ್ಪತೇ ರಜಃ ।
ವರಿಷ್ಠಮಗ್ನಿಹೋತ್ರಾಚ್ಚ ಬ್ರಾಹ್ಮಣಸ್ಯ ಮುಖೇ ಹುತಮ್ ॥

ಅನು – ಬ್ರಾಹ್ಮಣಭೋಜನಮಾಡಿಸಿದ ಯಜಮಾನನ ಪುಣ್ಯವು ನಶಿಸುವುದಿಲ್ಲ. ಹೋಮಕರ್ತೃವಿಗೆ ಪಾಪ ಅಂಟುವುದಿಲ್ಲ. ದುಃಖದ ವ್ಯಥೆ ಎಂದೂ ಇರುವುದಿಲ್ಲ. ಇದು ಅಗ್ನಿಹೋತ್ರಕ್ಕಿಂತಲೂ ಮಿಗಿಲು.

ವಿ – ೧. ಇದು ಭಾರತದ ಅನುಶಾಸನಿಕಪರ್ವದ ವಚನ.

೨. ವಿಕಲಾಂಗವಾದ ಅಗ್ನಿಹೋತ್ರಕ್ಕಿಂತಲೂ ಬ್ರಾಹ್ಮಣಭೋಜನವೇ ಹಿರಿದು ಎಂದು ಭಾವ.

೩. ಬ್ರಾಹ್ಮಣಭೋಜನ ಮಾಡಿಸಿದವನು ಎಲ್ಲ ಪಾಪಗಳಿಂದ ಮುಕ್ತನಾಗಿ ನಿತ್ಯಸುಖದ ನೆಲೆಯಾದ ಮೋಕ್ಷವನ್ನು ಹೊಂದುವುದರ ಮೂಲಕ ಎಲ್ಲ ವ್ಯಥೆಗಳಿಂದ ದೂರನಾಗುವನು ಎಂದು ತಾತ್ಪರ್ಯ.

೨೧೯. ಯಥಾಽಹಂ ತತ್ರ ನಾಶ್ನಾಮಿ ಯತ್ರ ನಾಶ್ನಂತಿ ವೈ ದ್ವಿಜಾಃ ।
ಏತೇನ ಸತ್ಯವಾಕ್ಯೇನ ಪಾದಃ ಕುಂಭಸ್ಯ ಪೂರ್ಯತಾಮ್ ॥

ಅನು – ಬ್ರಾಹ್ಮಣಭೋಜನ ಮಾಡಿದ ಯಜ್ಞದಲ್ಲಿ ಹೇಗೆ ನಾನು ಹವಿಸ್ಸನ್ನು ಸ್ವೀಕರಿಸುವೆನೋ ಹಾಗೆ ಬ್ರಾಹ್ಮಣಭೋಜನ ಮಾಡದ ಯಜ್ಞದಲ್ಲಿ ನಾನು ಹವಿಸ್ಸನ್ನು ಸ್ವೀಕರಿಸಲಾರೆ. ಈ ಸತ್ಯವಾಕ್ಯದಿಂದ ಕುಂಭದ ಉಳಿದ ಕಾಲುಭಾಗ ತುಂಬಿಕೊಳ್ಳಲಿ.

## ಮೃತ್ಯುವಿನ ಜಯಕ್ಕೆ ಉಪಾಯ

೨೨೦. ಶ್ರುತಾತ್ಮಾನಂ ಮಹಾತ್ಮಾನಂ ಯಜ್ಞಯೋನಿಮಯೋನಿಜಮ್ ।
ವಿಶ್ವರೂಪಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥

ಅನು – ವೇದಗಳು ಕೊಂಡಾಡುವ ಸ್ವರೂಪವುಳ್ಳ ಮಹಾತ್ಮನಾದ ಯಜ್ಞಕ್ಕೆ ನೆಲೆಯಾದ ಪ್ರಾಕೃತದೇಹರಹಿತನಾದ, ವಿಶ್ವರೂಪನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆ. ನನಗೆ ಮೃತ್ಯುವೇನು ಮಾಡೀತು?

ವಿ – ೧. ಇದು ಮಾರ್ಕಂಡೇಯ ಪುರಾಣದಲ್ಲಿ ಮೃತ್ಯಷ್ಟಕ ಎಂದು ಪ್ರಸಿದ್ಧವಾದ ಸ್ತೋತ್ರ[೧].

೨. ಯಾರು ಶ್ರೀಹರಿಯನ್ನು ಹೀಗೆ ಶರಣು ಹೊಂದುವರೋ ಅವರಿಗೆ ಮೃತ್ಯುವಿನ ಭಯವಿರುವುದಿಲ್ಲ ಎಂದರ್ಥ.

೩. ಇಲ್ಲಿ ಮೃತ್ಯುಭಯವಿರುವುದಿಲ್ಲ ಎಂದರೆ ಅಪಮೃತ್ಯುವಿನ ಭಯ ಸರ್ವಥಾ ಇರುವುದಿಲ್ಲ. ಕಾಲಮೃತ್ಯುವಾದರೆ ಹರಿಸ್ಮರಣೆಗೆ ಸಾಧನವಾದ ಹಿತಕರಮೃತ್ಯುವೇ ಒದಗುವುದೇ ಹೊರತು ಮರಣಸಂಕಟವಾಗದು ಎಂದರ್ಥ.

## ಮೃತ್ಯಷ್ಟಕಪಠನೆಯ ಫಲಶ್ರುತಿ

೨೨೧. ಇತಿ ತೇನ ಜಿತೋ ಮೃತ್ಯುರ್ವಿಷ್ಣುದೂತೈಶ್ಚ ಪೀಡಿತಃ ।
ಪ್ರಸನ್ನೇ ಪುಂಡರೀಕಾಕ್ಷೇ ನೃಸಿಂಹೇ ನಾಸ್ತಿ ದುರ್ಲಭಮ್ ॥
ಇತ್ಯುದೀರಿತಮಾಕರ್ಣ್ಯ ಸ್ತೋತ್ರಂ ತಸ್ಯ ಮಹಾತ್ಮನಃ ।
ಅಪಯಾತಿ ತತೋ ಮೃತ್ಯುಃ ಮಾರ್ಕಂಡೇಯೇನ ಧೀಮತಾ ॥

ಅನು – ಹೀಗೆ ಮಾರ್ಕಂಡೇಯ ಮಾಡಿದ ಸ್ತೋತ್ರದಿಂದ ಮೃತ್ಯುವು ಪರಾಭವಗೊಂಡು ವಿಷ್ಣುದೂತರಿಂದ ಪೀಡಿತವಾಯಿತು. ಪುಂಡರೀಕಾಕ್ಷನಾದ ಶ್ರೀನರಸಿಂಹನು ಪ್ರೀತನಾದಾಗ ಯಾವುದೂ ದುರ್ಲಭವಲ್ಲ. ಹೀಗೆ ಮಾರ್ಕಂಡೇಯನು ಮಾಡಿದ ಆ ಮಹಾತ್ಮನಾದ ನರಸಿಂಹನ ಸ್ತೋತ್ರವನ್ನು ಶ್ರವಣಮಾಡುವವನ ಮೃತ್ಯುವು ಪರಿಹಾರವಾಗುವುದು.

---

೧. ಇದನ್ನು ಸ್ತೋತ್ರಮಾಲಿಕಾ ಭಾಗ : ೪ರಲ್ಲಿ ಪುಟ ೧೪೮/೧೪೯ ಪೂರ್ಣವಾಗಿ ಕೊಡಲಾಗಿದೆ.

## ಮೃತ್ಯಷ್ಟಕಸ್ತೋತ್ರದ ಮಾಹಾತ್ಮ್ಯ

೨೨೨. ಮೃತ್ಯಷ್ಟಕಮಿದಂ ಪುಣ್ಯಂ ಮೃತ್ಯುಪ್ರಶಮನಂ ಶುಭಮ್ ।
ಮಾರ್ಕಂಡೇಯಹಿತಾರ್ಥಾಯ ಸ್ವಯಂ ವಿಷ್ಣುರುವಾಚ ಹ ॥

ಅನು – ಇದು ಮೃತ್ಯುವನ್ನು ಪರಿಹರಿಸುವಂತಹ, ಪುಣ್ಯಕರವೂ ಶುಭಕರವೂ ಆದ ಮೃತ್ಯಷ್ಟಕಸ್ತೋತ್ರ. ಮಾರ್ಕಂಡೇಯರ ಹಿತಕ್ಕೋಸ್ಕರ ಸ್ವಯಂ ವಿಷ್ಣುವೇ ಇದನ್ನು ತಿಳಿಸಿದನು.

೨೨೩. ಯ ಇದಂ ಪಠತೇ ಭಕ್ತ್ಯಾ ತ್ರಿಕಾಲೇ ನಿಯತಃ ಶುಚಿಃ ।
ನಾಕಾಲೇ ತಸ್ಯ ಮೃತ್ಯುಃ ಸ್ಯಾನ್ನರಸ್ಯಾಚ್ಯುತಚೇತಸಃ ॥

ಅನು – ಯಾರು ಇದನ್ನು ಭಕ್ತಿಯಿಂದ ಜಿತೇಂದ್ರಿಯನಾಗಿ ಶುಚಿಯಾಗಿ ಮೂರು ಕಾಲಗಳಲ್ಲೂ ಪಠಿಸುವನೋ, ಅಚ್ಯುತನಾದ ಶ್ರೀಹರಿಯಲ್ಲಿ ಮನವಿಟ್ಟ ಅವನಿಗೆ ಅಕಾಲ ಮೃತ್ಯುವು ಸರ್ವಥಾ ಒದಗದು.

ವಿ – ಮೇಲಿನ ೬ ಶ್ಲೋಕಗಳು ಮಹಾಭಾರತ ಅನುಶಾಸನಿಕಪರ್ವ ವಚನಗಳು.

## ಸುದರ್ಶನಾದಿ ಪಂಚಾಯುಧಗಳ ಸ್ತೋತ್ರ
### ಸುದರ್ಶನ ಸ್ತೋತ್ರ

೨೨೪. ಸ್ಫುರತ್ಸಹಸ್ರಾರಶಿಖಾತಿತೀವ್ರಂ ಸುದರ್ಶನಂ ಭಾಸ್ಕರಕೋಟಿತುಲ್ಯಮ್ ।
ಸುರದ್ವಿಷಾಂ ಪ್ರಾಣವಿನಾಶಕಂ ಹರೇಶ್ಚಕ್ರಂ ಸದಾಽಹಂ ಶರಣಂ ಪ್ರಪದ್ಯೇ ॥

ಅನು – ಹೊಳೆಯುವ ಸಾವಿರ ಅಲಗುಗಳ ತುದಿಗಳಿಂದ ಉಗ್ರವಾದಂತಹ, ನೂರು ಕೋಟಿ ಸೂರ್ಯರಿಗೆ ಸದೃಶವಾದಂತಹ, ಸುರವೈರಿಗಳಾದ ದೈತ್ಯರಿಗೆ ಪ್ರಾಣನಾಶಕವಾದಂತಹ, ಶ್ರೀಹರಿಯ ಸುದರ್ಶನಚಕ್ರವನ್ನು ನಾನು ಸದಾ ಶರಣು ಹೊಂದುವೆನು.

ವಿ – ೧. ಶ್ಲೋಕ ೨೨೪-೨೨೮ ರವರೆಗೆ ಗರುಡಪುರಾಣ ಬ್ರಹ್ಮನಾರದಸಂವಾದದಲ್ಲಿನ ವಚನಗಳು ಎಂಬುದಾಗಿ ವ್ಯಾಖ್ಯಾನದಲ್ಲಿದೆ.

೨. ಸುದರ್ಶನಕ್ಕೆ ಮುಖ್ಯ ಅಭಿಮಾನಿ ದೇವತೆ ಸಾಕ್ಷಾತ್ ದುರ್ಗಾರೂಪದ ಮಹಾಲಕ್ಷ್ಮಿ: **ಪೂರ್ವಂ ಹರೇಶ್ಚಕ್ರಮಭೂದ್ಧಿ ದುರ್ಗಾ ।** (ಮ.ಭಾ.ತಾ.ನಿ.), **ದುರ್ಗಾ ಚಕ್ರಾಧಿದೇವೀ ಸ್ಯಾತ್** (ಪದ್ಯಮಾಲಾ); ಕಾಮನು ಚಕ್ರಕ್ಕೆ ಅವಾಂತರಾಭಿಮಾನಿದೇವತೆ. ಇವರಿಬ್ಬರೂ ಸೂರ್ಯನಿಗಿಂತ ಮಿಗಿಲಾದವರು. ಆದ್ದರಿಂದ ಭಾಸ್ಕರಕೋಟಿತುಲ್ಯ ಎಂಬ ವಿಶೇಷಣ ಅನ್ವರ್ಥವಾಗಿದೆ.

ಮಹಾಲಕ್ಷ್ಮೀ ಪಕ್ಷದಲ್ಲಂತೂ ಕೋಟಿಶಬ್ದಕ್ಕೆ ಅಸಂಖ್ಯಕೋಟಿಗಳು ಎಂದೇ ಅರ್ಥ. ಕಾಮಪರವಾದಾಗ ಬಹು ಎಂದರ್ಥ.

## ಗದಾ ಸ್ತೋತ್ರ

೨೨೫. ಹಿರಣ್ಮಯೀಂ ಮೇರುಸಮಾನಸಾರಾಂ ಕೌಮೋದಕೀಂ ದೈತ್ಯಕುಲೈಕಹಂತ್ರೀಮ್।
ವೈಕುಂಠವಾಮಾಂಗಕರಾಗ್ರಸಂಸ್ಥಾಂ ಗದಾಂ ಸದಾಽಹಂ ಶರಣಂ ಪ್ರಪದ್ಯೇ ॥

ಅನು – ಚಿನ್ನದಿಂದ ಮಾಡಿದ, ಮೇರುವಿಗೆ ಸಮಾನವಾದ ಸಾಮರ್ಥ್ಯವುಳ್ಳ, ದೈತ್ಯಕುಲಕ್ಕೆ ಮುಖ್ಯ ನಾಶಕರವಾದಂತಹ, ವೈಕುಂಠನಾದ ಶ್ರೀಹರಿಯ ಎಡಭಾಗದ ಕೈಯ್ಯ ತುದಿಯಲ್ಲಿ ನೆಲೆಸಿರುವ, ಕೌಮೋದಕೀ ಗದೆಯನ್ನು ನಾನು ಸದಾ ಶರಣು ಹೊಂದುವೆನು.

ವಿ –೧. ಕೌಮೋದಕೀ ಗದೆಗೆ ವಾಯುದೇವರು ಅಭಿಮಾನಿದೇವತೆ – ಯಸ್ಯ ಗದಾ ಪವಮಾನಃ । (ಯಮಕಭಾರತ); ಗದಾ ತು ವಾಯುರ್ಬಲಸಂವಿದಾತ್ಮಾ (ಮ.ಭಾ.ತಾ.ನಿ. ೩/೭೫)

೨. ವೈಕುಂಠ ಎಂದರೆ ಶ್ರೀಹರಿ. ವೈಕುಂಠಃ ಪ್ರಾಣದಃ ಪ್ರಾಣಃ (ವಿ.ಸ.)

## ಖಡ್ಗ ಸ್ತೋತ್ರ

೨೨೬. ರಕ್ಷೋಽಸುರಾಣಾಂ ಕಠಿಣೋಗ್ರಕಂಠಶಿರಶ್ಛಿದಂ ಛೇದಿತತಿಗ್ಮಧಾರಮ್ ।
ತಂ ನಂದಕಂ ನಾಮ ಹರೇಃ ಪ್ರದೀಪ್ತಂ ಖಡ್ಗಂ ಸದಾಽಹಂ ಶರಣಂ ಪ್ರಪದ್ಯೇ॥

ಅನು – ರಾಕ್ಷಸರ ಅಸುರರ ಕಠಿಣವಾದ ಭಯಂಕರ ಕಂಠಗಳನ್ನು ಶಿರಸ್ಸುಗಳನ್ನು ತುಂಡರಿಸುವಂತಹ, ಅತ್ಯಂತ ಹರಿತವಾದ ಅಲಗನ್ನು ಹೊಂದಿರುವ, ಬಹಳವಾಗಿ ಪ್ರಕಾಶಿಸುವಂತಹ ಶ್ರೀಹರಿಯ ನಂದಕ ಎಂಬ ಖಡ್ಗವನ್ನು ನಾನು ಸದಾ ಶರಣು ಹೊಂದುವೆನು.

ವಿ – ಶ್ರೀಹರಿಯ ನಂದಕಖಡ್ಗಕ್ಕೆ ರಮಾದೇವಿ ಅಭಿಮಾನಿ : ರಮೈವ ಖಡ್ಗಃ (ಮ.ಭಾ.ತಾ.ನಿ. ೩/೭೫).

## ಧನುಸ್ಸಿನ ಸ್ತೋತ್ರ

೨೨೭. ಯಜ್ಜ್ಯಾನಿನಾದಶ್ರವಣಾತ್ ಸುರಾಣಾಂ ಚೇತಾಂಸಿ ನಿರ್ಮುಕ್ತಭಯಾನಿ ಸದ್ಯಃ ।
ಭವಂತಿ ದೈತ್ಯಾಶನಿಬಾಣವರ್ಷಂ ಶಾರ್ಙ್ಗಂ ಸದಾಽಹಂ ಶರಣಂ ಪ್ರಪದ್ಯೇ ॥

ಅನು – ಯಾವ ಧನುಸ್ಸಿನ ಹಗ್ಗದ ಧ್ವನಿಯ ಶ್ರವಣದಿಂದಲೇ ದೇವತೆಗಳ ಮನಸ್ಸು ಭಯನೀಗಿ ಹರ್ಷಿಸುವುದೋ, ಅಂತಹ ದೈತ್ಯರಿಗೆ ವಜ್ರಸದೃಶವಾದ ಬಾಣಗಳ ಮಳೆಗರೆಯುವಂತಹ ಶಾರ್ಙ್ಗಧನುಸ್ಸನ್ನು ನಾನು ಶರಣು ಹೊಂದುವೆನು.

ವಿ – ೧. ಈ ಪಂಚಾಯುಧಸ್ತೋತ್ರವು ಪೂರ್ಣವಾಗಿ ಸ್ತೋತ್ರಮಾಲಿಕಾ -ೞರಲ್ಲಿದೆ.

೨. ಶಾರ್ಙ್ಗಧನುಸ್ಸಿನ ಅಭಿಮಾನಿದೇವತೆ ವಿದ್ಯಾಭಿಮಾನಿನಿಯಾದ ಸರಸ್ವತೀ : **ಶಾರ್ಙ್ಗಂ ಚ** ವಿದ್ಯೇತಿ (ಮ.ಭಾ.ತಾ.ನಿ. ೩/೭೬)

## ಪಂಚಾಯುಧಸ್ತೋತ್ರದ ಫಲಶ್ರುತಿ

೨೨೮. ಇಮಂ ಹರೇಃ ಪಂಚಮಹಾಯುಧಾನಾಂ
ಸ್ತವಂ ಪಠೇದ್ಯೋऽನುದಿನಂ ಪ್ರಭಾತೇ ।
ಸಮಸ್ತದುಃಖಾನಿ ಭಯಾನಿ ಸದ್ಯಃ
ಪಾಪಾನಿ ನಶ್ಯಂತಿ ಸುಖಾನಿ ಸಂತಿ ॥

ಅನು – ಈ ಶ್ರೀಹರಿಯ ಪಂಚಮಹಾಯುಧಗಳ ಸ್ತೋತ್ರವನ್ನು ಪ್ರತಿದಿನ ಯಾರು ಉದಯಕಾಲದಲ್ಲಿ ಪಠಿಸುವರೋ ಅವರ ಸಮಸ್ತದುಃಖಗಳೂ ಭಯಗಳೂ ಕೂಡಲೇ ನಾಶ ಹೊಂದುವವು; ಸುಖವು ಲಭಿಸುವುದು.

## ದಶಾವತಾರ ಸ್ತೋತ್ರಮ್
### ಮತ್ಸ್ಯ ಸ್ತುತಿ

೨೨೯. ಯೇನೇದಂ ಜಗದಖಿಲಂ ಧೃತಂ ವಿಧಾತ್ರಾ
ವಿಶ್ವಂ ಯಜ್ಜಠರಗತಂ ಯುಗಾಂತಲೋಕೇ ।
ಯೋ ವೇದಾನವತಿ ಸಮೇತ್ಯ ಮತ್ಸ್ಯರೂಪಂ
ತಂ ದೇವಂ ಶರಣಮಹಂ ಗತೋऽಸ್ಮ್ಯನಂತಮ್ ॥

ಅನು – ಜಗತ್ಪೋಷಕನಾದ ಯಾರಿಂದ ಈ ಸಕಲ ಜಗತ್ತು ಧರಿಸಲ್ಪಟ್ಟಿದೆಯೋ, ಪ್ರಳಯಕಾಲದಲ್ಲಿ ಯಾರ ಉದರದೊಳಗೆ ನೆಲೆಸುವುದೋ, ಯಾವನು ವೇದಗಳನ್ನು ಪಾಲಿಸುವನೋ, ಅಂತಹ ಮತ್ಸ್ಯರೂಪದ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

ವಿ – ೧. ಇಲ್ಲಿಂದ ೨೩೮ವರೆಗಿನವು ಕಾಂಚೀಮಾಹಾತ್ಮ್ಯದಲ್ಲಿ ಬಂದಿರುವ ಅಪೂರ್ವ ದಶಾವತಾರಸ್ತೋತ್ರದ ಶ್ಲೋಕಗಳು.

## ಕೂರ್ಮ ಸ್ತುತಿ

೨೩೦. ಯೋ ದೇವಾನಸೃಜದನಾದ್ಯನಂತರೂಪೋ
ವಿಶ್ವಾತ್ಮಾ ವಿಗತತಮೋರಜೋಭಿರೀಡ್ಯಃ।
ಧತ್ತೇಽಮೂಂ ಕಮಠವಪುರ್ಮಹೀಮಜಸ್ರಂ
ತಂ ದೇವಂ ಶರಣಮಹಂ ಗತೋಽಸ್ಮ್ಯನಂತಮ್ ॥

ಅನು – ದೇವತೆಗಳನ್ನು ಸೃಷ್ಟಿಸಿದವನೂ, ಅನಾದಿ ಅನಂತರೂಪನೂ, ವಿಶ್ವವನ್ನೆಲ್ಲಾ ವ್ಯಾಪಿಸಿರುವವನೂ, ಪೂರ್ಣನೂ, ರಜೋಗುಣ ತಮೋಗುಣಗಳಿಂದ ರಹಿತರಾದ ಸಾತ್ತ್ವಿಕಜನರಿಂದ ಸ್ತುತನಾದವನೂ, ಆದ ಯಾವ ಶ್ರೀಹರಿಯು ಅಪರಿಮಿತವಾದ ಭೂಮಿಯನ್ನು ಕೂರ್ಮರೂಪದಿಂದ ಸದಾ ಧರಿಸಿರುವನೋ ಅಂತಹ ದೇವನಾದ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

## ವರಾಹ ಸ್ತುತಿ

೨೩೧. ಯಃ ಪೃಥಿವೀಮಸುರಭಯಾದ್ರಸಾತಲಸ್ಥಾ-
ಮುದ್ಧರ್ತುಂ ಖುರನಿಹತಕ್ಷತಾಸುರೌಘಃ।
ವಾರಾಹೀಂ ತನುಮಭಜತ್ ತ್ರಯೀನಿವಾಸಃ
ತಂ ದೇವಂ ಶರಣಮಹಂ ಗತೋಽಸ್ಮ್ಯನಂತಮ್ ॥

ಅನು – ಅಸುರನ ಭಯದಿಂದ ರಸಾತಲಕ್ಕೆ ಸೇರಿದ್ದ ಭೂಮಿಯನ್ನು ಮೇಲೆತ್ತಲೆಂದು ಯಾರು ತನ್ನ ಕಾಲ್ಗೊರಸುಗಳಿಂದ ಅಸುರರನ್ನು ನಾಶಮಾಡುವವನಾಗಿ ವರಾಹರೂಪವನ್ನು ತಳೆದನೋ, ಅಂತಹ ವೇದಗಳಿಗೆ ನೆಲೆಯಾದ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

## ನರಸಿಂಹ ಸ್ತುತಿ

೨೩೨. ಹೈರಣ್ಯಂ ಕುಲಿಶದೃಢಂ ಪುರಾ ನಖಾಗ್ರೈ-
ರ್ವಕ್ಷೋ ಯಃ ಸಪದಿ ವಿದಾರಯಾಂಚಕಾರ।
ಪ್ರಹ್ಲಾದಪ್ರಿಯಹಿತಕೃನ್ನೃಸಿಂಹರೂಪ-
ಸ್ತಂ ದೇವಂ ಶರಣಮಹಂ ಗತೋಽಸ್ಮ್ಯನಂತಮ್ ॥

ಅನು – ಯಾವನು ವಜ್ರದಂತೆ ದೃಢವಾದ ತನ್ನ ಉಗುರುಗಳ ತುದಿಯಿಂದ ಹಿರಣ್ಯಕಶಿಪುವಿನ ವಕ್ಷಸ್ಥಲವನ್ನು ಕೂಡಲೇ ಸೀಳಿಹಾಕಿದನೋ ಅಂತಹ ಪ್ರಹ್ಲಾದನಿಗೆ

ಪ್ರಿಯಕರನೂ ಹಿತಕರನೂ, ಆದ ನೃಸಿಂಹರೂಪದ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

### ಪರಶುರಾಮ ಸ್ತುತಿ

೨೩೩. ಯಃ ಕ್ಷತ್ರಂ ನಿಶಿತಪರಶ್ವಧೇನ ಸರ್ವಂ
ಛಿತ್ವಾ ತತ್ಕ್ಷತಜಜಲೇನ ಕರ್ಮ ಪಿತ್ರ್ಯಮ್ ।
ಚಕ್ರೇ ವಿಕ್ರಮವಿಭವೈಕಸಂಪದೀಶ-
ಸ್ತಂ ದೇವಂ ಶರಣಮಹಂ ಗತೋಽಸ್ಮ್ಯನಂತಮ್ ॥

ಅನು – ಯಾರು ಹರಿತವಾದ ಕೊಡಲಿಯಿಂದ ಸಕಲ ಕ್ಷತ್ರಿಯರನ್ನು ಸಂಹರಿಸಿ ಆವರ ರಕ್ತಜಲದಿಂದ ಪಿತೃಕಾರ್ಯವನ್ನು ಮಾಡಿದನೋ, ಅಂತಹ ಪರಾಕ್ರಮ ಐಶ್ವರ್ಯಗಳ ಮುಖ್ಯನಿಧಿಯಾದ ಪರಶುರಾಮರೂಪದ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

### ರಾಮ ಸ್ತುತಿ

೨೩೪. ಯೋ ಲೋಕತ್ರಯವನವಹ್ನಿಮೀಶ್ವರಾಣಾ-
ಮೀಶಾನೋ ದಶವದನಂ ರಣೇ ನಿಹಂತುಮ್ ।
ರಾಮೋ ದಾಶರಥೀರಭೂದುದಾರವೀರ್ಯ-
ಸ್ತಂ ದೇವಂ ಶರಣಮಹಂ ಗತೋಽಸ್ಮ್ಯನಂತಮ್ ॥

ಅನು – ಮೂರುಲೋಕಗಳಿಗೆ ಕಾಡ್ಗಿಚ್ಚಿನಂತಿದ್ದ ರಾವಣನನ್ನು ರಣದಲ್ಲಿ ಸಂಹರಿಸಲೆಂದು ಈಶರಿಗೂ ಈಶನಾದ ಯಾವ ಶ್ರೀಹರಿಯು ದಶರಥಪುತ್ರ ರಾಮನೆನಿಸಿದನೋ, ಅಂತಹ ಶ್ರೇಷ್ಠ ಸಾಮರ್ಥ್ಯವುಳ್ಳ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

### ಬಲರಾಮ ಸ್ತುತಿ

೨೩೫. ಯಃ ಪೃಥಿವೀಮಸುರಭಯಾಚ್ಚ ಭಂಗುರಾರ್ತಾ-
ಮುದ್ಧರ್ತುಂ ಮುಸಲಹಲಾಯುಧೋ ಬಭೂವ ।

ಅನು – ಅಸುರರ ಭಯದಿಂದಾಗಿ ಮರಣಾವಸ್ಥೆಯನ್ನು ಹೊಂದಿ ಆರ್ತಳಾಗಿದ್ದ ಭೂಮಿಯನ್ನು ಉದ್ಧರಿಸಲೆಂದು ಯಾವನು ಮುಸಲ ಹಲಗಳನ್ನು ಆಯುಧವನ್ನಾಗಿ ಉಳ್ಳ

ಬಲರಾಮರೂಪವನ್ನು ತಳೆದನೋ ಅಂತಹ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

ವಿ – ೧. ಇದು ಬಲರಾಮನ ಸ್ತೋತ್ರ.

೨. ಬಲರಾಮನು ವಾಸ್ತವವಾಗಿ ಸಾಕ್ಷಾತ್ ಶ್ರೀಹರಿ ರೂಪವಲ್ಲ. ಆತನು ಶೇಷಾವತಾರ. ಆದರೆ ಶ್ರೀಹರಿಯ ಶುಕ್ಲಕೇಶ ಎಂಬ ರೂಪವಿಶೇಷದ ವಿಶೇಷಾವೇಶದಿಂದಾಗಿ ಕೆಲವು ಕಡೆ ಆತನನ್ನು ಸಾಕ್ಷಾತ್ ಶ್ರೀಹರಿ ಎಂಬುದಾಗಿಯೇ ವ್ಯವಹರಿಸಲಾಗಿದೆ; ಈ ಹಿನ್ನೆಲೆಯಲ್ಲಿ ಕೆಲವರು ಬಲರಾಮನನ್ನು ದಶಾವತಾರದಲ್ಲಿ ಸೇರಿಸುವುದುಂಟು.

೩. ಆದರೆ ಮುಖ್ಯವಾಗಿ ದಶಾವತಾರಗಳು ಎಂದರೆ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಹತ್ತು ಮಾತ್ರ. ಬಲರಾಮರೂಪವು ಇವುಗಳಲ್ಲಿ ಸೇರುವುದಿಲ್ಲ.

## ಕೃಷ್ಣ ಸ್ತುತಿ

೨೩೬. ಕಂಸಾದೀಂಸ್ತ್ರಿದಶರಿಪೂನಪಾಚಿಕೀರ್ಷು-
ರ್ಯಃ ಪೃಥ್ವ್ಯಾಮಿಹ ಯದುನಂದನೋ ಬಭೂವ ।
ಬಾಲಾರ್ಕದ್ಯುತಿವಿಲಸತ್ಸರೋಜವಕ್ತ್ರ-
ಸ್ತಂ ದೇವಂ ಶರಣಮಹಂ ಗತೋಽಸ್ಮ್ಯನಂತಮ್ ॥

ಅನು – ಕಂಸ ಮೊದಲಾದ ಸುರವೈರಿಗಳನ್ನು ನಾಶಪಡಿಸಲೆಂದು ಯಾರು ಭೂಮಿಯ ಮೇಲೆ ಯದುನಂದನನಾದ ಶ್ರೀಕೃಷ್ಣನಾಗಿ ಅವತರಿಸಿದನೋ ಅಂತಹ ಬಾಲಸೂರ್ಯನ ಕಾಂತಿಯಂತೆ ಹೊಳೆಯುವ ಕಮಲಮುಖನಾದ ದೇವನಾದ ಅನಂತನಾದ ಶ್ರೀಹರಿಯನ್ನು ನಾನು ಶರಣು ಹೊಂದಿರುವೆನು.

## ಕಲ್ಕಿ ಸ್ತುತಿ

೨೩೭. ಪಾಷಂಡಾನ್ ಕಲಿಕಲುಷೀಕೃತಸ್ವಧರ್ಮಾನ್
ನಿಃಶೇಷಂ ಸಪದಿ ನಿರಾಕರಿಷ್ಣುರೀಶಃ ॥

ಅನು – ಕಲಿದೋಷದಿಂದಾಗಿ ಧರ್ಮವನ್ನು ತೊರೆದ ಪಾಖಂಡಿಜನಗಳನ್ನು ನಿಃಶೇಷ ಸಂಹರಿಸಲೆಂದು ಕೂಡಲೇ ಕಲ್ಕಿರೂಪವನ್ನು ಧರಿಸಿದ ಶ್ರೀಹರಿಯನ್ನು ಶರಣು ಹೊಂದಿರುವೆನು.

### ಫಲಶ್ರುತಿ

೨೩೮. ತ್ವಾಂ ಸ್ತೋತುಂ ವರದ ನ ಚಾಸ್ಮ್ಯಹಂ ಸಮರ್ಥೋ
ವಿಶ್ವೇಶಂ ವಿಧುತಜಗತ್ತ್ರಯಂ ಮಹಾಂತಮ್ ।
ಕಾರುಣ್ಯಾದಿಹ ಪರಿರಕ್ಷ ಕೇವಲಂ ಮೇ
ವಿಶ್ವಾತ್ಮನ್ ಕ್ರತುವರಮೇನಮಬ್ಜನಾಭ ॥

ಅನು – ಎಲೈ ವರನೀಡುವ ಶ್ರೀಹರಿಯೇ! ವಿಶ್ವೇಶನಾದ, ಮೂರುಲೋಕಗಳನ್ನು ಮೆಟ್ಟಿದ, ಅತ್ಯಂತ ಹಿರಿಯನಾದ ನಿನ್ನನ್ನು ಸ್ತುತಿಸಲು ನಾನು ಸಮರ್ಥನಲ್ಲ. ವಿಶ್ವಸ್ವಾಮಿಯಾದ ಪದ್ಮನಾಭನಾದ ನೀನು ಕೇವಲ ಕಾರುಣ್ಯದಿಂದಲೇ ನನ್ನ ಈ ಶ್ರೇಷ್ಠಯಜ್ಞವನ್ನು ಪರಿಪಾಲಿಸು.

### ಸಂಕ್ಷೇಪವಿಸ್ತಾರಗಳ ಮಹತ್ವ

೨೩೯. ಸಂಕ್ಷೇಪವಿಸ್ತರಾಭ್ಯಾಂ ತು ಪ್ರವದಂತಿ ಮನೀಷಿಣಃ ।
ಬಹುವಾರಸ್ಮೃತೇಸ್ತಸ್ಯ ಫಲಬಾಹುಲ್ಯಕಾರಣಾತ್ ॥

ಅನು – ಜ್ಞಾನಿಗಳು ಭಗವನ್ಮಾಹಾತ್ಮ್ಯಾದಿ ವಿಷಯಗಳನ್ನು ಸಂಕ್ಷಿಪ್ತವಾಗಿಯೂ ವಿಸ್ತಾರವಾಗಿಯೂ ತಿಳಿಸುವರು; ಬಹುಬಾರಿ ಸ್ಮರಣೆ ಮಾಡುವುದರಿಂದ ಹೆಚ್ಚು ಫಲ ಬರಲಿ ಎಂಬುದೇ ಅದಕ್ಕೆ ಕಾರಣ.

ವಿ – ೧. ಇದು ಶ್ರೀಮದ್ಭಾಗವತತಾತ್ಪರ್ಯದಲ್ಲಿ ಉದಾಹೃತವಾಗಿರುವ ವಚನ

೨. ಶಾಸ್ತ್ರಗಳಲ್ಲಿ ಭಗವನ್ಮಹಿಮೆಯನ್ನು ಕೆಲವೊಮ್ಮೆ ಸಂಕ್ಷೇಪವಾಗಿಯೂ ಮತ್ತೆ ಕೆಲವೊಮ್ಮೆ ಬಹಳ ವಿಸ್ತಾರವಾಗಿಯೂ ಹೇಳುವುದುಂಟು. ಅದಕ್ಕೆ ಕಾರಣವನ್ನು ಇಲ್ಲಿ ತಿಳಿಸಿರುವರು. ಸಂಕ್ಷೇಪವಾಗಿ ಹೇಳಿದಾಗ ವಿಷಯಗಳನ್ನು ಸಂಗ್ರಹರೂಪದಲ್ಲಿ ತಿಳಿಯಲು ಸಾಧ್ಯವಾದರೆ ವಿಸ್ತಾರವಾಗಿ ಹೇಳಿದಾಗ ಅವುಗಳ ವಿಶೇಷಾಂಶಗಳನ್ನೆಲ್ಲಾ ಅರಿಯಲು ಸಾಧ್ಯವಾಗುತ್ತದೆ. ಹೀಗೆ ಎರಡು ರೀತಿಯಲ್ಲೂ ಹರಿ ಮಹಿಮೆಯ ಚಿಂತನೆಗೆ ಅವಕಾಶ ದೊರೆಯುವುದರಿಂದ ಪುಣ್ಯಾಧಿಕ್ಯಲಭಿಸಿ ವಿಶೇಷ ಸಾಧನ ನಡೆಯುವುದು ಎಂಬುದೇ ಅದಕ್ಕೆ ಕಾರಣ ಎಂದು ಇದರ ತಾತ್ಪರ್ಯ.

೩. ಇದಕ್ಕೆ ನಿದರ್ಶನವಾಗಿ ಶ್ರೀಮದ್ಭಾಗವತದ ಗಜೇಂದ್ರಮೋಕ್ಷಪ್ರಸಂಗವನ್ನು ಗಮನಿಸಬಹುದು. ದ್ವಿತೀಯಸ್ಕಂಧದಲ್ಲಿ ಕೇವಲ ಎರಡೇ ಶ್ಲೋಕಗಳಲ್ಲಿ ನಿರೂಪಿಸಿದ ಆ ಕಥೆಯನ್ನು ಅಷ್ಟಮಸ್ಕಂಧದಲ್ಲಿ ತೊಂಭತ್ತೆರಡು ಶ್ಲೋಕಗಳಷ್ಟು ವಿಸ್ತಾರವಾಗಿ ನಿರೂಪಿಸಿರುವರು. ಇದರಿಂದ ಸಮಗ್ರ ಪ್ರಸಂಗವನ್ನು ಅಡಕವಾಗಿಯೂ, ವಿವರವಾಗಿಯೂ ತಿಳಿಯುವ ಅವಕಾಶ ಲಭಿಸಿ ಇಡೀ ಪ್ರಸಂಗದ ಮನನ ಅತ್ಯಂತ ಸಮಗ್ರವಾಗಿ ನಡೆಯಲು ಸಾಧ್ಯ.

## ಹನ್ನೆರಡು ಬಗೆಯ ಪುತ್ರರು

೨೪೦. ಔರಸಃ ಪುತ್ರಿಕಾಪುತ್ರಃ ಕ್ಷೇತ್ರಜ್ಞೋ ಗೂಢಜಸ್ತಥಾ ।
ಕಾನೀನಶ್ಚ ಪುನರ್ಭೂಜೋ ದತ್ತಂ ಕ್ರೀತಶ್ಚ ಕೃತ್ರಿಮಃ ॥
ದತ್ತಾತ್ಮಾ ಚ ಸಹೋಢಶ್ಚ ಅಪವಿದ್ಧಸುತಸ್ತಥಾ ।
ಏತೇ ದ್ವಾದಶಪುತ್ರಾಶ್ಚ ಸಂಸ್ಕಾರ್ಯಾಃ ಸ್ಯುರ್ದ್ವಿಜಾತಯಃ ॥

ಅನು – ಔರಸ, ಪುತ್ರಿಕಾಪುತ್ರ, ಕ್ಷೇತ್ರೋತ್ಪನ್ನ ಪುತ್ರ, ಗೂಢಜ ಪುತ್ರ, ಕಾನೀನ, ಪುನರ್ಭೂಜ, ದತ್ತ, ಕ್ರೀತ, ಕೃತ್ರಿಮ, ದತ್ತಾತ್ಮ, ಸಹೋಢ ಮತ್ತು ಅಪವಿದ್ಧ ಎಂಬುದಾಗಿ ಪುತ್ರರು ಬ್ರಾಹ್ಮಣರಿಗೆ ವಿಹಿತವಾಗಿದ್ದು ಅವರೆಲ್ಲರೂ ಸಂಸ್ಕಾರಕ್ಕೆ ಅರ್ಹರಾದವರು.

ವಿ – ೧. ಒಟ್ಟು ಪುತ್ರರು ಹನ್ನೆರಡು ಬಗೆ ಎಂಬ ವಿಶೇಷಾಂಶವನ್ನು ಇಲ್ಲಿ ನಿರೂಪಿಸಿರುವರು.

೩. ಅಪವಿದ್ಧಸುತಸ್ತಥಾ ಎಂಬುದಕ್ಕೆ ವ್ಯಾಖ್ಯಾನದಲ್ಲಿ ಅಪವಿದ್ಧಃ ಸುತಸ್ತಥಾ ಎಂದು ಪಾಠಾಂತರವನ್ನು ಉಲ್ಲೇಖಿಸಿ, ಅಪವಿದ್ಧಃ ಸುತಸ್ತಥಾ ಎಂಬುದು ಲೇಖಕಪ್ರಮಾದದಿಂದ ಉಂಟಾದ ಅಪಪಾಠ ಎಂದು ತಿಳಿಸಿ ಅಪವಿದ್ಧಸುತಸ್ತಥಾ ಎಂಬ ಪಾಠವೇ ಶುದ್ಧಪಾಠ ಎಂದು ತಿಳಿಸಿರುವರು : ಅಪವಿದ್ಧಃ ಸುತ ಇತಿ ಸವಿಸರ್ಗಪಾಠಃ ಲೇಖಕದೋಷಾತ್ ಪತಿತಃ ।(ವ್ಯಾ)

೪. ಈ ಹನ್ನೆರಡು ಬಗೆಯ ಪುತ್ರರ ಲಕ್ಷಣಗಳನ್ನು ಮುಂದಿನ ಶ್ಲೋಕಗಳಲ್ಲಿ ಕ್ರಮವಾಗಿ ವಿವರಿಸಿರುವರು.

## ಮನುಸ್ಮೃತಿಯಲ್ಲಿರುವ ದ್ವಾದಶ ಪುತ್ರರ ಲಕ್ಷಣ

### ಔರಸ ಪುತ್ರ

೨೪೧. ಸ್ವೇ ಕ್ಷೇತ್ರೇ ಸಂಸ್ಕೃತೋ ಯಸ್ತು ಸ್ವಯಮುತ್ಪಾದಯೇದ್ಧಿ ಯಮ್ ।
ತಮೌರಸಂ ವಿಜಾನೀಯಾತ್ ಪುತ್ರಂ ಪ್ರಾಥಮಕಲ್ಪಿಕಮ್ ॥

ಅನು – ತನ್ನ ಪತ್ನಿಯಲ್ಲಿ ಗರ್ಭಾಧಾನಾದಿ ಸಂಸ್ಕಾರಪೂರ್ವಕವಾಗಿ ತನ್ನಿಂದಲೇ ಜನಿಸುವ ಪುತ್ರನನ್ನು ಔರಸಪುತ್ರ ಎಂದು ತಿಳಿಯಬೇಕು; ಇವನು ಇತರ ಹನ್ನೊಂದು ಪುತ್ರರಿಗಿಂತ ಶ್ರೇಷ್ಠನಾದವನು.

ವಿ – ಈ ಶ್ಲೋಕದಿಂದ ೨೫೧ನೇ ಶ್ಲೋಕದ ವರೆಗೆ ಮನುಸ್ಮೃತಿಯ ವಚನಗಳು. (೯/೧೬೬-೧೭೬)

## ಕ್ಷೇತ್ರಜ ಪುತ್ರ

೨೪೨. ಯಸ್ತ್ವಪ್ರಜಃ ಪ್ರಮೀತಸ್ಯ ಕ್ಲೀಬಸ್ಯ ಪತಿತಸ್ಯ ವಾ ।
ಸ್ವಧರ್ಮೇಣ ನಿಯುಕ್ತಾಯಾಃ ಸ ಪುತ್ರಃ ಕ್ಷೇತ್ರಜಃ ಸ್ಮೃತಃ ॥

ಅನು – ಸಂತಾನವಿಲ್ಲದೇ ಸತ್ತವನ, ನಪುಂಸಕನಾದವನ, ಸ್ವಧರ್ಮದಿಂದ ಪತಿತನಾದವನ ಪತ್ನಿಯಲ್ಲಿ ನಿಯೋಗಪದ್ಧತಿಯಿಂದ ಜನಿಸುವ ಪುತ್ರ ಕ್ಷೇತ್ರಜಪುತ್ರ ಎನ್ನಿಸುವನು.

ವಿ – ಪಾಂಡವರು ಮೊದಲಾದವರು ಇಂತಹ ಕ್ಷೇತ್ರಜ ಪುತ್ರರು.

## ದತ್ತ ಪುತ್ರ

೨೪೩. ಮಾತಾ ಪಿತಾ ಚ ದದ್ಯಾತಾಂ ಯಮದ್ಭಿಃ ಪುತ್ರಮಾಪದಿ ।
ಸದೃಶಂ ಪ್ರೀತಿಸಂಯುಕ್ತಂ ಸ ಜ್ಞೇಯೋ ದತ್ತಿಮಃ ಸುತಃ ॥

ಅನು – ತಂದೆತಾಯಿಯರು ತಮ್ಮ ಪ್ರೀತಿಯುಕ್ತನಾದ ಸದೃಶ ಔರಸಪುತ್ರನನ್ನು ಆಪತ್ಕಾಲದಲ್ಲಿ ಜಲಸಹಿತವಾಗಿ ನೀಡಿದರೆ ಅವನನ್ನು ದತ್ತಸುತ ಎನ್ನಲಾಗುವುದು.

ವಿ – ಇದು ಇಂದಿನ ಸಮಾಜದಲ್ಲೂ ಸಹ ಪ್ರಚಲಿತವಿರುವ ಕ್ರಮ.

## ಕೃತ್ರಿಮ ಪುತ್ರ

೨೪೪. ಸದೃಶಂ ತು ಪ್ರಕುರ್ಯಾದ್ಯಂ ಗುಣದೋಷವಿಚಕ್ಷಣಮ್ ।
ಪುತ್ರಂ ಪುತ್ರಗುಣೈರ್ಮುಕ್ತಂ ಸ ಜ್ಞೇಯಃ ಕೃತ್ರಿಮಃ ಸುತಃ ॥

ಅನು – ಗುಣದೋಷವಿವೇಕಯುಕ್ತನಾದ, ಪುತ್ರಗುಣರಹಿತನಾದ ಸದೃಶಪುತ್ರನನ್ನು ಕೃತ್ರಿಮಪುತ್ರ ಎಂದು ತಿಳಿಯಬೇಕು.

ವಿ – ೧. ಪುತ್ರಗುಣೈರ್ಮುಕ್ತಂ ಎಂಬುದರ ಬದಲಾಗಿ ಪುತ್ರಗುಣೈರ್ಯುಕ್ತಂ ಎಂಬ ಕೆಲವೆಡೆಯ ಪಾಠ ಪ್ರಾಮಾದಿಕ ಎಂದು ವ್ಯಾಖ್ಯಾನದಲ್ಲಿದೆ.

೨. ಪುತ್ರಗುಣರಹಿತ ಎಂದರೆ ಉಳಿದ ಹನ್ನೊಂದು ಪುತ್ರತ್ವಾಪಾದಕಧರ್ಮರಹಿತ ಎಂದರ್ಥ.

## ಗೂಢತಲ್ಪಜ ಪುತ್ರ

೨೪೫. ಉತ್ಪದ್ಯೇತ ಗೃಹೇ ಯಸ್ಯ ನ ಚ ಜ್ಞಾಯೇತ ಕಸ್ಯ ಸಃ ।
ಸ ಗೃಹೇ ಗೂಢಮುತ್ಪನ್ನೋ ಯಸ್ಯ ಸ್ಯಾತ್ ತಸ್ಯ ತಲ್ಪಜಃ ॥

ಅನು – ತನ್ನ ಹೆಂಡತಿಯಲ್ಲಿ ತನ್ನ ಮನೆಯಲ್ಲಿ ತಿಳಿಯದೆ ಇನ್ನೊಬ್ಬನಿಂದ ಜನಿಸಿದ ಪುತ್ರನನ್ನು ಗೂಢತಲ್ಪಜ ಎನ್ನಲಾಗುವುದು.

### ಅಪವಿದ್ಧ ಪುತ್ರ

೨೪೬. ಮಾತಾಪಿತೃಭ್ಯಾಮುತ್ಸೃಷ್ಟಂ ತಯೋರನ್ಯತರೇಣ ವಾ ।
ಯಂ ಪುತ್ರಂ ಪರಿಗೃಹ್ಣೀಯಾದಪವಿದ್ಧಸ್ತು ಸ ಸ್ಮೃತಃ ॥

ಅನು – ತಂದೆತಾಯಿಯರಿಂದ ಅಥವಾ ಅವರಲ್ಲೊಬ್ಬರಿಂದ ತ್ಯಜಿಸಲ್ಪಟ್ಟ ಇನ್ನೊಬ್ಬರಿಂದ ಗೃಹೀತನಾದ ಪುತ್ರನನ್ನು ಅಪವಿದ್ಧಪುತ್ರ ಎನ್ನುವರು.

### ಕಾನೀನ ಪುತ್ರ

೨೪೭. ಪಿತೃವೇಶ್ಮನಿ ಕನ್ಯಾ ತು ಯಂ ಪುತ್ರಂ ಜನಯೇದ್ರಹಃ ।
ತಂ ಕಾನೀನಂ ವದೇನ್ನಾಮ್ನಾ ವೋಢುಃ ಕನ್ಯಾಸಮುದ್ಭವಮ್ ॥

ಅನು – ತಂದೆಯ ಮನೆಯಲ್ಲಿ ಏಕಾಂತದಲ್ಲಿ ಕನ್ಯೆಯು ಪಡೆದ ಪುತ್ರನನ್ನು ಕಾನೀನ ಎಂಬ ಹೆಸರಿನಿಂದ ಕರೆಯುವರು.

ವಿ – ಕರ್ಣ ಇಂತಹ ಕಾನೀನ ಪುತ್ರ ಎಂಬದು ಮಹಾಭಾರತದಿಂದ ವೇದ್ಯ.

### ಸಹೋಢ ಪುತ್ರ

೨೪೮. ಯಾ ಗರ್ಭಿಣೀ ಸಂಸ್ಕ್ರಿಯತೇ ಜ್ಞಾತಾಽಜ್ಞಾತಾಽಪಿ ವಾ ಸತೀ ।
ವೋಢುಃ ಸ ಗರ್ಭೋ ಭವತಿ ಸಹೋಢ ಇತಿ ಚೋಚ್ಯತೇ ॥

ಅನು – ಗರ್ಭಿಣಿಯಾದ ಕನ್ಯೆಯು ಗರ್ಭಿಣಿ ಎಂದು ತಿಳಿದೋ ತಿಳಿಯದೆಯೋ ವಿವಾಹಿತಳಾದರೆ ಆ ಗರ್ಭದಿಂದ ಜನಿಸಿದ ಪುತ್ರನನ್ನು 'ಸಹೋಢಪುತ್ರ' ಎನ್ನುವರು.

### ಕ್ರೀತಕ ಪುತ್ರ

೨೪೯. ಕ್ರೀಣೀಯಾದ್ಯಸ್ತ್ವಪತ್ಯಾರ್ಥಂ ಮಾತಾಪಿತ್ರೋರ್ಯಮಂತಿಕಾತ್ ।
ಸ ಕ್ರೀತಕಃ ಸುತಸ್ತಸ್ಯ ಸದೃಶೋಽಸದೃಶೋಽಪಿ ವಾ ॥

ಅನು – ತಂದೆತಾಯಿಯರ ಬಳಿಯಲ್ಲಿ ಸಗೋತ್ರ, ಅಥವಾ ಸಗೋತ್ರನಲ್ಲದ ಮಗನನ್ನು ಸಂತತಿಗಾಗಿ ಕೊಂಡರೆ ಅವನನ್ನು ಕ್ರೀತಕಪುತ್ರ ಎನ್ನುವರು.

ವಿ – ಶ್ರೀಮದ್ಭಾಗವತ ನವಮಸ್ಕಂಧದಲ್ಲಿ ಬರುವ ಶುನಃಶೇಪ ಇಂತಹ ಕ್ರೀತಪುತ್ರ.

### ಪೌನರ್ಭವ ಪುತ್ರ

೨೫೦. ಯಾ ಪತ್ಯಾ ವಾ ಪರಿತ್ಯಕ್ತಾ ವಿಧವಾ ವೇಚ್ಛಯಾಽಽತ್ಮನಃ ।
ಉತ್ಪಾದಯೇತ್ ಪುನರ್ಭೂರ್ತ್ವಾ ಸ ಪೌನರ್ಭವ ಉಚ್ಯತೇ ॥

ಅನು – ಪತಿಯಿಂದ ತ್ಯಜಿಸಲ್ಪಟ್ಟವಳೋ ಅಥವಾ ವಿಧವೆಯೋ ತನ್ನ ಇಚ್ಛೆಯಿಂದಲೇ ಮತ್ತೊಬ್ಬನ ಪತ್ನಿಯಾಗಿ ಪುತ್ರನನ್ನು ಪಡೆದರೆ ಅವನನ್ನು ಪೌನರ್ಭವಪುತ್ರ ಎನ್ನುವರು.

### ಸ್ವಯಂದತ್ತ ಪುತ್ರ

೨೫೧. ಮಾತಾಪಿತೃವಿಹೀನೋ ಯಸ್ತ್ಯಕ್ತೋ ವಾ ಸ್ಯಾದಕಾರಣಾತ್ ।
ಆತ್ಮಾನಂ ಸಂಸ್ಪೃಶೇದ್ಯಸ್ಮೈ ಸ್ವಯಂ ದತ್ತಸ್ತು ಸ ಸ್ಮೃತಃ ॥

ಅನು – ತಂದೆತಾಯಿಯರಿಲ್ಲದವನೋ, ಅಥವಾ ಅಕಾರಣದಿಂದ ತಂದೆತಾಯಿಯರಿಂದ ತ್ಯಜಿಸಲ್ಪಟ್ಟವನೋ ಆದ ಪುತ್ರನು ತನ್ನನ್ನು ತಾನೇ ಮತ್ತೊಬ್ಬರಿಗೆ ಮಗನಾಗಿ ಒಪ್ಪಿಸಿಕೊಂಡರೆ ಅವನನ್ನು ಸ್ವಯಂದತ್ತಪುತ್ರ ಎನ್ನುವರು.

### ಯಾಜ್ಞವಲ್ಕ್ಯಸ್ಮೃತ್ಯನುಸಾರ ದ್ವಾದಶ ಪುತ್ರರ ಲಕ್ಷಣ ;

#### ಔರಸ, ಪುತ್ರಿಕಾ ಪುತ್ರ ಹಾಗೂ ಕ್ಷೇತ್ರಜಪುತ್ರರ ಲಕ್ಷಣ

೨೫೨. ಔರಸೋ ಧರ್ಮಪತ್ನೀಜಸ್ತತ್ಸಮಃ ಪುತ್ರಿಕಾಸುತಃ ।
ಕ್ಷೇತ್ರಜ್ಞಃ ಕ್ಷೇತ್ರಜಾತಸ್ತು ಸ್ವಗೋತ್ರೇಣೇತರೇಣ ವಾ ॥

ಅನು – ಧರ್ಮಪತ್ನಿಯಲ್ಲಿ ಹುಟ್ಟಿದವನು ಔರಸಪುತ್ರ, ಪುತ್ರಿಕಾಪುತ್ರನು ಅವನಿಗೆ ಸಮ. ತನ್ನ ಪತ್ನಿಯಲ್ಲಿ ಸ್ವಗೋತ್ರದ ಅಥವಾ ಇತರಗೋತ್ರದ ಮತ್ತೊಬ್ಬನಿಂದ ಹುಟ್ಟಿದವನು ಕ್ಷೇತ್ರಜಪುತ್ರ.

ವಿ – ೧. ಈ ಶ್ಲೋಕದಿಂದ ೨೫೬ರವರೆಗೆ ಯಾಜ್ಞ್ಯವಲ್ಕ್ಯಸ್ಮೃತಿಯ ವಚನಗಳು. (೨/೧೩೧-೧೩೫)

೨. ಮನುಸ್ಮೃತಿಯಲ್ಲಿ ವಿವರಿಸಿದ ಪುತ್ರರ ಲಕ್ಷಣಗಳನ್ನೇ ಯಾಜ್ಞ್ಯವಲ್ಕ್ಯಸ್ಮೃತಿಯೂ ಸಂಕ್ಷಿಪ್ತವಾಗಿ ತಿಳಿಸುತ್ತಿದೆ. ಮನುಸ್ಮೃತಿಗೆ ಹೊಂದುವಂತೆ ಇಲ್ಲಿನ ವಿವರಗಳನ್ನು ಅರ್ಥೈಸಬೇಕು. ಈ ಎರಡು ಸ್ಮೃತಿಗಳಿಗೆ ವಿರೋಧವಿರದಂತೆ ಎಲ್ಲ ಪುತ್ರರ ಲಕ್ಷಣಗಳ ಸಮನ್ವಯವನ್ನು ದುರ್ಘಟಾರ್ಥದೀಪಿಕೆಯಲ್ಲಿ ಕಾಣಬಹುದು.

## ಗೂಢಜ, ಕಾನೀನ ಪುತ್ರರ ಲಕ್ಷಣ

೨೫೩. ಗೃಹೇ ಪ್ರಚ್ಛನ್ನ ಉತ್ಪನ್ನೋ ಗೂಢಜಸ್ತು ಸುತಃ ಸ್ಮೃತಃ।
ಕಾನೀನಃ ಕನ್ಯಕಾಜಾತೋ ಮಾತಾಮಹಸುತೋ ಮತಃ॥

ಅನು – ತನ್ನ ಮನೆಯಲ್ಲಿ ತನ್ನ ಪತ್ನಿಯಲ್ಲಿ (ಬೇರೊಬ್ಬನಿಂದ) ತಿಳಿಯದೆ ಜನಿಸಿದ ಮಗನನ್ನು ಗೂಢಜ ಪುತ್ರ ಎನ್ನುವರು. ಕನ್ಯೆಯಲ್ಲಿ ಹುಟ್ಟಿದವನು ಕಾನೀನ.

## ಪೌನರ್ಭವ, ದತ್ತ ಪುತ್ರರ ಲಕ್ಷಣ

೨೫೪. ಅಕ್ಷತಾಯಾಂ ಕ್ಷತಾಯಾಂ ವಾ ಜಾತಃ ಪೌನರ್ಭವಃ ಸ್ಮೃತಃ।
ದದ್ಯಾನ್ಮಾತಾ ಪಿತಾ ವಾ ಯಂ ಸ ಪುತ್ರೋ ದತ್ತಕೋ ಭವೇತ್॥

ಅನು – ಅಕ್ಷತಳಾದ ಅಥವಾ ಕ್ಷತಳಾದ ಸ್ತ್ರೀಯಿಂದ ಹುಟ್ಟಿದವನು ಪೌನರ್ಭವ; ತಂದೆ ಅಥವಾ ತಾಯಿ ಅವನನ್ನು ನೀಡಿದರೆ ಅವನು ದತ್ತಪುತ್ರ.

## ಕ್ರೀತ, ಕೃತ್ರಿಮ, ಸ್ವಯಂದತ್ತ ಪುತ್ರರ ಲಕ್ಷಣ

೨೫೫. ಕ್ರೀತಶ್ಚ ತಾಭ್ಯಾಂ ವಿಕ್ರೀತಃ ಕೃತ್ರಿಮಃ ಸ್ಯಾತ್ ಸ್ವಯಂಕೃತಃ।
ದತ್ತಾತ್ಮಾ ತು ಸ್ವಯಂ ದತ್ತಃ ಗರ್ಭೇ ವಿನ್ನಃ ಸಹೋಢಜಃ॥

ಅನು – ತಂದೆತಾಯಿಯರಿಂದ ಅಥವಾ ತಾನೇ ಸ್ವತಃ ಮಾರಲ್ಪಟ್ಟ ಪುತ್ರನನ್ನು ಕೃತ್ರಿಮ ಪುತ್ರ ಎನ್ನುವರು. ತಾನೇ ಸ್ವತಃ ಒಪ್ಪಿಸಲ್ಪಟ್ಟರೆ ದತ್ತಾತ್ಮ ಎನಿಸುವನು; ಕನ್ಯಾಗರ್ಭದಲ್ಲೇ ಇದ್ದು ವಿವಾಹಾನಂತರ ಹುಟ್ಟಿದವನು ಸಹೋಢಪುತ್ರ ಎನಿಸುವನು.

## ಅಪವಿದ್ಧ ಪುತ್ರನ ಲಕ್ಷಣ

೨೫೬. ಉತ್ಸೃಷ್ಟೋ ಗೃಹ್ಯತೇ ಯಸ್ತು ಸೋಽಪವಿದ್ಧೋ ಭವೇತ್ ಸುತಃ।

ಅನು – ತಂದೆ ತಾಯಿಯರಿಂದ ತ್ಯಕ್ತನಾದವನು ಮತ್ತೊಬ್ಬನಿಂದ ಸ್ವೀಕೃತನಾದರೆ ಅವನು ಅಪವಿದ್ಧಸುತ.

## ಇತರ ಪುತ್ರರು ಔರಸಪುತ್ರನ ಪ್ರತಿನಿಧಿಗಳು

೨೫೭. ಕ್ಷೇತ್ರಜಾದಿಸುತಾನೇತಾನೇಕಾದಶ ಯಥೋದಿತಾನ್।
ಪುತ್ರಪ್ರತಿನಿಧೀನಾಹುಃ ಕ್ರಿಯಾಲೋಪಾನ್ಮನೀಷಿಣಃ॥

ಅನು – ಹೀಗೆ ಹೇಳಲ್ಪಟ್ಟ, ಪುತ್ರರನ್ನು ಪಡೆಯುವ ಕ್ರಿಯೆ ಇಲ್ಲದ, ಕ್ಷೇತ್ರಜ ಮೊದಲಾದ ಹನ್ನೊಂದು ಪುತ್ರರನ್ನು ಔರಸಪುತ್ರನ ಪ್ರತಿನಿಧಿ ಎಂದು ಬಲ್ಲವರು ಹೇಳುವರು.

ವಿ – ಇದು ಮನುಸ್ಮೃತಿಯ ವಚನ (೯/೧೮೦).

## ಕಲಿಯುಗದಲ್ಲಿ ವಿಶೇಷ

೨೫೮. ವಿಧವಾಯಾಂ ಪ್ರಜೋತ್ಪತ್ತೌ ದೇವರಸ್ಯ ನಿಯೋಜನಮ್ ।
ಕನ್ಯಾನಾಮಸವರ್ಣಾನಾಂ ವಿವಾಹಶ್ಚ ದ್ವಿಜಾತಿಭಿಃ ॥
ಸೌತ್ರಾಮಣ್ಯಾಂ ಸುರಾಗ್ರಾಹಶ್ಚಮಸೋಚ್ಛಿಷ್ಟಭಕ್ಷಣಮ್ ।
ಅಗ್ನಿಹೋತ್ರಹವಣ್ಯಾಶ್ಚ ಲೇಹೋ ಲೀಢಾಪರಿಗ್ರಹಃ ॥
ದತ್ತೌರಸೇತರೇಷಾಂ ಚ ಪುತ್ರತ್ವೇನ ಪರಿಗ್ರಹಃ ।
ಏತಾನಿ ಲೋಕಗುಪ್ತ್ಯರ್ಥಂ ಕಲೇರಾದೌ ಮಹಾತ್ಮಭಿಃ ।
ನಿರ್ವರ್ತಿತಾನಿ ಕರ್ಮಾಣಿ ವ್ಯವಸ್ಥಾಪೂರ್ವಕಂ ಬುಧೈಃ ॥

ಅನು – ವಿಧವೆಯಲ್ಲಿ ಸಂತತಿಗಾಗಿ ಮೈದುನನನ್ನು ನಿಯೋಜಿಸುವುದು, ಅಸವರ್ಣರಾದ ಕನ್ಯೆಯರೊಂದಿಗೆ ಬ್ರಾಹ್ಮಣ ಕ್ಷತ್ರಿಯ ಅಥವಾ ವೈಶ್ಯರ ವಿವಾಹ, ಸೌತ್ರಾಮಣಿ ಯಾಗದಲ್ಲಿ ಸುರಾಗ್ರಹಣ, ಚಮಸಪಾತ್ರೆಯಲ್ಲಿ ಎಂಜಲುಣ್ಣುವುದು, ದತ್ತ ಮತ್ತು ಔರಸಪುತ್ರರನ್ನು ಹೊರತು ಪಡಿಸಿ ಇತರರನ್ನು ಪುತ್ರರೆಂದು ಪಡೆಯುವುದು – ಇವೆಲ್ಲ ಕರ್ಮಗಳು ಲೋಕರಕ್ಷಣೆಗಾಗಿ ಜ್ಞಾನಿಗಳಾದ ಮಹಾತ್ಮರಿಂದ ಕಲಿಯುಗದ ಆದಿಯಲ್ಲೇ ವ್ಯವಸ್ಥಾಪೂರ್ವಕವಾಗಿ ನಿಷೇಧಿಸಲ್ಪಟ್ಟಿವೆ.

ವಿ – ೧. ಈ ಶ್ಲೋಕಗಳು ಭಾರತ ಆದಿಪರ್ವದ ವಚನಗಳು.

೨. ಮನುಸ್ಮೃತಿ ಮತ್ತು ಯಾಜ್ಞವಲ್ಕ್ಯಸ್ಮೃತಿಗಳ ಆಧಾರದಿಂದ ಹನ್ನೆರಡು ಪುತ್ರರ ಲಕ್ಷಣಗಳನ್ನು ತಿಳಿಸಿದರೂ ಕಲಿಯುಗದಲ್ಲಿ ದತ್ತ ಮತ್ತು ಔರಸಪುತ್ರರು ಮಾತ್ರ ಪುತ್ರತ್ವೇನ ವಿಹಿತ ಎಂಬ ವಿಶೇಷವನ್ನು ಮಹಾಭಾರತದ ಈ ವಚನ ತಿಳಿಸುತ್ತದೆ.

೩. ಇದರಲ್ಲಿ ಜಾತ್ಯಂತರವಿವಾಹ, ಸುರಾಗ್ರಹಣ ಮೊದಲಾದ ಇತರ ಕಾರ್ಯಗಳೂ ಸಹ ಕಲಿಯುಗದಲ್ಲಿ ನಿಷಿದ್ಧ ಎಂದು ಸ್ಪಷ್ಟವಾಗಿ ಉಕ್ತವಾಗಿರುವುದು ವಿಶೇಷ.

## ನದಿಗಳಲ್ಲಿನ ಭಗವದ್ರೂಪಗಳ ವಿವರ

೨೫೯. ನದೀಷು ಮೇ ವದ ಬ್ರಹ್ಮನ್ ಸರ್ವಾಸು ಮೂರ್ತಯೋ ಹರೇಃ ।
ಕಾ ಧ್ಯೇಯಾ ವಿಸ್ತರೇಣೈವ ಕೃಪಯಾ ವದ ಭೋ ಗುರೋ ॥

ಅನು – ಹೇ ಜ್ಞಾನಪೂರ್ಣನೇ! ಹೇ ಗುರುವೇ! ಎಲ್ಲಾ ನದಿಗಳಲ್ಲೂ ಧ್ಯಾನಿಸಲ್ಪಡಬೇಕಾದ ಭಗವಂತನ ಮೂರ್ತಿಗಳನ್ನು ಕೃಪೆಯಿಂದ ವಿಸ್ತಾರವಾಗಿ ನನಗೆ ತಿಳಿಸು.

### ಗಂಗಾನದಿ – ಮಾಧವ

೨೬೦. ಗಂಗಾಯಾಂ ಮಾಧವೋ ದೇವಃ ಶಂಖಚಕ್ರಗದಾಧರಃ ।
ಲಸತ್ಪದ್ಮಕರೋ ಧ್ಯೇಯಸ್ತತ್ರ ಸ್ನಾಯೀ ನರೇಶ್ವರ ॥

ಅನು – ಹೇ ರಾಜನೇ ! ಗಂಗೆಯಲ್ಲಿ ಮೀಯುವವನು ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಧರಿಸಿದ ಮಾಧವ ದೇವನನ್ನು ಧ್ಯಾನಿಸಬೇಕು.

### ಕೃಷ್ಣವೇಣೀ – ಜನಾರ್ದನ

೨೬೧. ಕೃಷ್ಣವೇಣ್ಯಾಂ ನೃಪಶ್ರೇಷ್ಠ ಕೃಷ್ಣಃ ಸಾಕ್ಷಾಜ್ಜನಾರ್ದನಃ ।
ಚತುರ್ಬಾಹುರ್ಮಹಾತೇಜಾಃ ಶಂಖಚಕ್ರಾಸಿಶಾರ್ಙ್ಗಧೃಕ್ ॥

ಅನು – ಹೇ ರಾಜಶ್ರೇಷ್ಠನೇ! ಕೃಷ್ಣವೇಣಿಯಲ್ಲಿ ಶಂಖ, ಚಕ್ರ, ಖಡ್ಗ ಮತ್ತು ಶಾರ್ಙ್ಗ ಧನುಸ್ಸುಗಳನ್ನು ಧರಿಸಿದ ನಾಲ್ಕುಬಾಹುಗಳ ಉತ್ತಮ ತೇಜಸ್ಸಿನ ಜನಾರ್ದನನಾದ ಸಾಕ್ಷಾತ್ ಶ್ರೀಕೃಷ್ಣನನ್ನು ಧ್ಯಾನಿಸಬೇಕು.

ವಿ – 'ಕೃಷ್ಣಾ ವಿಷ್ಣುತನುಃ ಸಾಕ್ಷಾದ್ವೇಣ್ಯಾ ದೇವೋ ಮಹೇಶ್ವರಃ' ಎಂಬ ವಚನದಂತೆ ಕೃಷ್ಣವೇಣೀ ನದಿಯಲ್ಲಿ ಶ್ರೀಕೃಷ್ಣ ಮತ್ತು ರುದ್ರದೇವರಿಬ್ಬರೂ ಧ್ಯೇಯರು; ಆದರೆ ರುದ್ರದೇವನು ಅಮುಖ್ಯತಃ ಮತ್ತು ಶ್ರೀಕೃಷ್ಣನು ಮುಖ್ಯತಃ ಎಂಬ ವಿವೇಕಕ್ಕಾಗಿಯೇ ಸಾಕ್ಷಾತ್ ಎಂಬ ಪದವನ್ನು ಬ್ರಹ್ಮಾಂಡಪುರಾಣದಲ್ಲಿ ಬಳಸಲಾಗಿದೆ.

### ಸರಸ್ವತೀ – ಪದ್ಮನಾಭ; ಕಾವೇರೀ – ರಂಗನಾಥ; ಸರಯೂ – ರಾಮ

೨೬೨. ಸರಸ್ವತ್ಯಾಂ ಮಹಾಭಾಗ ಪದ್ಮನಾಭಂ ಸ್ಮರೇನ್ನೃಪ ।
ಕಾವೇರ್ಯಾಂ ರಂಗನಾಥಂ ತು ಸರಯ್ವಾಂ ರಾಮಮೇವ ಚ ॥

ಅನು – ಹೇ ಮಹಾನುಭಾವ! ರಾಜನೇ! ಸರಸ್ವತಿಯಲ್ಲಿ ಪದ್ಮನಾಭನನ್ನು, ಕಾವೇರಿಯಲ್ಲಿ ರಂಗನಾಥನನ್ನು. ಸರಯೂವಿನಲ್ಲಿ ರಾಮನನ್ನು ಸ್ಮರಿಸಬೇಕು.

### ಭವನಾಶಿನೀ – ನೃಸಿಂಹ; ಕುಮುದ್ವತೀ – ತ್ರಿವಿಕ್ರಮ; ವಂಜರಾ – ಹಯಗ್ರೀವ ಭೀಮರಥೀ – ಶ್ರೀಧರ

೨೬೩. ನೃಸಿಂಹಂ ಭವನಾಶಿನ್ಯಾಂ ಕುಮುದ್ವತ್ಯಾಂ ತ್ರಿವಿಕ್ರಮಮ್ ।
ವಂಜರಾಯಾಂ ಹಯಗ್ರೀವಂ ಭೀಮರಥ್ಯಾಂ ತು ಶ್ರೀಧರಮ್ ॥

ಅನು – ಅಘನಾಶಿನಿಯಲ್ಲಿ ನರಸಿಂಹನನ್ನು. ಕುಮುದ್ವತಿಯಲ್ಲಿ ತ್ರಿವಿಕ್ರಮನನ್ನು. ವಂಜರಾನದಿಯಲ್ಲಿ ಹಯಗ್ರೀವನನ್ನು. ಭೀಮರಥಿಯಲ್ಲಿ ಶ್ರೀಧರನನ್ನು ಧ್ಯಾನಿಸಬೇಕು.

ವಿ – 'ಭೀಮರಥ್ಯಾಂ ತು ಶ್ರೀಧರಂ' ಎಂಬಲ್ಲಿನ ತುಶಬ್ದದಿಂದ ಶ್ರೀಧರಪತ್ನಿಯನ್ನೂ ಧ್ಯಾನಿಸಬೇಕು. ಎಂದು ಸೂಚಿತ. ಕೇಶವಾದಿ ಚತುರ್ವಿಂಶತಿ ಮೂರ್ತಿಯರ ಪತ್ನಿಯರನ್ನು ತಿಳಿಸುವ 'ಶ್ರೀರ್ಲಕ್ಷ್ಮೀ ಕಮಲಾ ಪದ್ಮಾ' ಎಂಬ ವಚನವು ಶ್ರೀಧರಪತ್ನಿಯಾಗಿ 'ಧನ್ಯಾ'ರೂಪವನ್ನು ವಿಧಿಸಿದೆ ಎಂಬುದನ್ನು ಗಮನಿಸಬೇಕು. ಇದರಂತೆ ಮುಂದೆಯೂ ಶ್ರೀಹರಿರೂಪದೊಂದಿಗೆ ಮಹಾಲಕ್ಷ್ಮಿಯ ಅದರ ಪತ್ನಿರೂಪವನ್ನು ಸಹ ಚಿಂತಿಸಬೇಕು ಎಂದು ತಿಳಿಯಬೇಕು.

### ತಾಮ್ರಪರ್ಣೀ – ಅನಂತ; ಮಲಹಾರಿ – ಜನಾರ್ದನ, ಪಿನಾಕಿನಿ – ಕೇಶವ

೨೬೪. ಅನಂತಂ ತಾಮ್ರಪರ್ಣ್ಯಾಂ ವೈ ಮಲಹಾರ್ಯಾಂ ಜನಾರ್ದನಮ್ ।
ಪಿನಾಕಿನ್ಯಾಂ ಮಹಾಭಾಗ ಕೇಶವಂ ಕ್ಲೇಶನಾಶನಮ್ ॥

ಅನು – ಹೇ ಮಹಾನುಭಾವನೇ! ತಾಮ್ರಪರ್ಣಿಯಲ್ಲಿ ಅನಂತನನ್ನು, ಮಲಹಾರಿಯಲ್ಲಿ ಜನಾರ್ದನನನ್ನು, ಪಿನಾಕಿನಿಯಲ್ಲಿ ಪಾಪಪರಿಹಾರಕನಾದ ಕೇಶವನನ್ನು ಧ್ಯಾನಿಸಬೇಕು.

೨೬೫. ಪೃಥಕ್ಸಾಗರಗಾಮಿನ್ಯೋ ಯಾ ನದ್ಯಃ ಸಂತಿ ಭೂತಲೇ ।
ತಾಸು ಸರ್ವಾಸು ರಾಜೇಂದ್ರ ಕೇಶವಾದೀಂಶ್ಚ ಸಂಸ್ಮರೇತ್ ॥

ಅನು – ಹೇ ರಾಜಶ್ರೇಷ್ಠನೇ! ಪ್ರತ್ಯೇಕವಾಗಿ ಸಾಗರವನ್ನು ಸೇರುವ ಉಳಿದ ಭೂಮಂಡಲದ ನದಿಗಳೆಲ್ಲವುದರಲ್ಲೂ ಕೇಶವಾದಿ ರೂಪಗಳನ್ನು ಸ್ಮರಿಸಬೇಕು.

ವಿ – ೧. ಹಿಂದೆ ಹೇಳಿದ ಗಂಗಾದಿ ತೀರ್ಥಗಳಲ್ಲಿ ಮಾಧವ ಮೊದಲಾದ ರೂಪಗಳ ಜೊತೆಗೆ ಕೇಶವಾದಿ ರೂಪಗಳ ಸ್ಮರಣೆ ಸಹ ವಿಹಿತ ಎಂದು ಭಾವ. ಉಳಿದೆಡೆ ಕೇಶವಾದಿರೂಪಗಳನ್ನೇ ಸ್ಮರಿಸಬೇಕು.

೨. ಸಾಗರ ಸೇರುವ ನದಿಗಳು ಎಂದರೆ ಮಹಾನದಿಗಳು ಎಂದರ್ಥ; ಇತರ ನದಿಗಳನ್ನು ಉಪನದಿಗಳು ಎನ್ನುವರು.

### ಸ್ವಾಮಿಪುಷ್ಕರಣಿಯ ನಿಯಾಮಕ ಭಗವದ್ರೂಪ

೨೬೬. ಸ್ವಾಮಿಪುಷ್ಕರಣೀತೀರ್ಥೇ ಶ್ರೀಭೂಮಿಸಹಿತಂ ವಿಭುಮ್ ।
ಕಟಿನ್ಯಸ್ತೋದ್ವಾಮಬಾಹುಂ ವರದೇನ ಕರೇಣ ಚ ॥

ಅನು – ಸ್ವಾಮಿಪುಷ್ಕರಿಣೀ ತೀರ್ಥದಲ್ಲಿ ಶ್ರೀಭೂಮಿಸಹಿತನಾದ ವ್ಯಾಪ್ತನಾದ ಸೊಂಟದ ಮೇಲೆ ಎಡಗೈಯನ್ನಿಟ್ಟ ವರದಮುದ್ರೆಯುಳ್ಳ ಭಗವಂತನನ್ನು ಧ್ಯಾನಿಸಬೇಕು.

ವಿ – ೧. ಸ್ವಾಮಿಪುಷ್ಕರಿಣಿಯ ಅಭಿಮಾನಿ ದೇವತೆ ಸಾಕ್ಷಾತ್ ಸರಸ್ವತೀ ದೇವಿ ಎಂಬ ವಿವರ ಬ್ರಹ್ಮಪುರಾಣದಲ್ಲಿದೆ.

೨. ಇಲ್ಲಿ ಬಂದಿರುವುದು ಆದರ ನಿಯಾಮಕ ರೂಪ ಎಂಬದು ವಿಶೇಷ.

## ನದಿಗಳಲ್ಲಿ ಭಗವದ್ರೂಪಗಳ ಸ್ಮರಣೆ ವಿಹಿತ

೨೬೭. ಏವಮಾದ್ಯಾ ಹರೇರ್ಮೂರ್ತೀಃ ಪೂರ್ಣಧರ್ಮಫಲೋತ್ಸುಕೈಃ ।
ಸ್ಮರ್ತವ್ಯಾಃ ಸತತಂ ಭೂಪ ನಾತ್ರ ಕಾರ್ಯಾ ವಿಚಾರಣಾ ॥

ಅನು – ಹೇ ರಾಜ! ಧರ್ಮಾಚರಣೆಯ ಪೂರ್ಣಫಲವನ್ನು ಪಡೆಯಲು ಉತ್ಸುಕರಾದವರು ಈ ಮೊದಲಾದ ಭಗವನ್ಮೂರ್ತಿಗಳನ್ನು ಸ್ಮರಿಸಬೇಕು. ಇದರಲ್ಲಿ ವಿಮರ್ಶೆ ಬೇಡ.

ವಿ – ೧. ಮೇಲಿನ ೯ ಶ್ಲೋಕಗಳು ಬ್ರಹ್ಮಾಂಡಪುರಾಣದಲ್ಲಿ ವಸಿಷ್ಠನಿಮಿಸಂವಾದರೂಪವಾಗಿರುವ ನದಿಗಳ ನಿಯಾಮಕ ಭಗವದ್ರೂಪಗಳ ವಿವರವನ್ನು ನೀಡುವ ಅಪೂರ್ವಸ್ತೋತ್ರ.

೨. ಸಮಗ್ರಸ್ತೋತ್ರವನ್ನು ನಮ್ಮ ಪ್ರಕಾಶನದ ಸ್ತೋತ್ರಮಾಲಿಕಾ ಭಾಗ ೧ರಲ್ಲಿ ಕೊಡಲಾಗಿದೆ.

## ಶೋಕದ ದುಷ್ಪರಿಣಾಮ

೨೬೮. ಅತೀವ ಮನಸಾ ಶೋಕಃ ಕ್ರಿಯಮಾಣೋ ಜನಾಧಿಪ ।
ಸಂತಾಪಯತಿ ವೈ ತಸ್ಯ ಪೂರ್ವಪ್ರೇತಾನ್ ಪಿತಾಮಹಾನ್ ॥

ಅನು – ಹೇ ರಾಜನೇ! ಮನಸ್ಸಿನಿಂದ ಅತಿಯಾಗಿ ಶೋಕಿಸಿದರೆ ಆ ಶೋಕವು ತನ್ನ ಹಿಂದಿನ ಪಿತಾಮಹಾದಿಗಳನ್ನೂ ಸಂತಾಪಿಸುವುದು.

ವಿ – ೧. ಮಹಾಭಾರತ ಆಶ್ವಮೇಧಿಕಪರ್ವವಚನ(ಸಂವರ್ತಮರುತ್ತೀಯ)(೨/೨)

೨. ಪಿತಾಮಹಾದಿಗಳ ಸಂತಾಪಕ್ಕೆ ಕಾರಣವಾಗುವ ಶೋಕ ತನ್ನ ಪಿತನ ಸಂತಾಪಕ್ಕೆ ಕಾರಣವಾಗುವುದು ಕೈಮುತ್ಯಸಿದ್ಧ ಎಂದು ಭಾವ.

೩. ಅವರ ಸಂತತಿಯವರ ಶೋಕ ಅವರ ಪೂರ್ವಜರ ಸಂತಾಪಕ್ಕೆ ಕಾರಣ ಎಂಬದು ಇಲ್ಲಿಯ ವಿಶೇಷಾಂಶ.

## ಮಕರಸಂಕ್ರಾಂತಿ ನಿರ್ಣಯ

೨೬೯. ಯದಾಽಸ್ತಮಯವೇಲಾಯಾಂ ಮಕರಂ ಯಾತಿ ಭಾಸ್ಕರಃ ।
ಪ್ರದೋಷೇ ವಾಽರ್ಧರಾತ್ರೇ ವಾ ಸ್ನಾನಂ ದಾನಂ ಪರೇಽಹನಿ ॥

ಅನು – ಯಾವ ದಿನದಲ್ಲಿ ಸೂರ್ಯನು ಮುಳುಗುವ ವೇಳೆಯಲ್ಲೋ, ಪ್ರದೋಷ-ಕಾಲದಲ್ಲೋ, ಪ್ರದೋಷ ಮತ್ತು ಅರ್ಧರಾತ್ರಿಯ ಮಧ್ಯಕಾಲದಲ್ಲೋ, ಅರ್ಧರಾತ್ರಿ-ಯಲ್ಲೋ, ಅರ್ಧರಾತ್ರಿಯ ನಂತರದಲ್ಲೋ ಮಕರರಾಶಿಯನ್ನು ಪ್ರವೇಶಿಸುತ್ತಾನೋ ಅಂದು ಸ್ನಾನ ದಾನಗಳನ್ನು ಮರುದಿನವೇ ಮಾಡಬೇಕು.

ವಿ – ೧. ಇದು ವೃದ್ಧಗಾರ್ಗ್ಯ ಸ್ಮೃತಿಯ ವಚನ.

೨. ಮಕರಸಂಕ್ರಮಣವು ಸೂರ್ಯಾಸ್ತಕಾಲವನ್ನಾರಂಭಿಸಿ ನಂತರದಲ್ಲಾದರೆ ಸ್ನಾನ, ದಾನಗಳಿಗೆ ಮರುದಿನವೇ ವಿಹಿತ ಎಂದು ತಾತ್ಪರ್ಯ.

## ಕರ್ಕಸಂಕ್ರಾಂತಿ ನಿರ್ಣಯ

೨೭೦. ಮಿಥುನಾತ್ ಕರ್ಕಸಂಕ್ರಾಂತಿರ್ಯದಾ ಸ್ಯಾದಂಶುಮಾಲಿನಃ।
ಪ್ರಭಾತೇ ವಾ ನಿಶೀಥೇ ವಾ ಕುರ್ಯಾದಹನಿ ಪೂರ್ವತಃ॥

ಅನು – ಮಿಥುನರಾಶಿಯಲ್ಲಿದ್ದ ಸೂರ್ಯನು ಯಾವ ದಿನದ ರಾತ್ರಿ, ಪ್ರಭಾತ ಮತ್ತು ಮಧ್ಯರಾತ್ರಿಯ ಮಧ್ಯಕಾಲ, ಮಧ್ಯರಾತ್ರಿ ಅಥವಾ ಮಧ್ಯರಾತ್ರಿಯ ಹಿಂದಿನ ಕಾಲದಲ್ಲಿ ಕರ್ಕರಾಶಿಯನ್ನು ಪ್ರವೇಶಿಸುತ್ತಾನೋ ಅದರ ಹಿಂದಿನ ದಿನವೇ ಸ್ನಾನ ದಾನಗಳನ್ನು ನಡೆಸಬೇಕು.

ವಿ – ೧. ಇದು ಭವಿಷ್ಯೋತ್ತರಪುರಾಣವಚನ.

೨. ಇದು ಕರ್ಕಸಂಕ್ರಾಂತಿನಿರ್ಣಯದ ಬಗ್ಗೆ ಹೊಸಬೆಳಕು ಚೆಲ್ಲುವ ಶ್ಲೋಕ.

## ಗಂಗಾನದಿಯ ಸ್ನಾನದ ಫಲವಿಶೇಷ

೨೭೧. ಸ್ಪೃಷ್ಟಾನಿ ಯೇಷಾಂ ಗಾಂಗೇಯೈಸ್ತೋಯೈರ್ಗಾತ್ರಾಣಿ ದೇಹಿನಾಮ್।
ನ್ಯಸ್ತಾನಿ ನ ಪುನಸ್ತೇಷಾಂ ತ್ಯಾಗಃ ಸ್ವರ್ಗಾದ್ವಿಧೀಯತೇ॥

ಅನು – ಯಾರ ಶರೀರವು ಗಂಗಾನದಿಯ ಜಲದಿಂದ ಸ್ಪೃಷ್ಟವಾಗಿರುವುದೋ ಅಂತಹವರ ದೇಹತ್ಯಾಗ ಎಲ್ಲೇ ಆದರೂ ಅವರು ಸ್ವರ್ಗದಿಂದ ಬೇರೆಡೆ ಹೋಗರು.

ವಿ – ೧. ಭಾರತದಾನಧರ್ಮಪರ್ವದ ವಚನ(ಭಾರತ ಅನು ೨೬/೨೮); ಈ ಶ್ಲೋಕವನ್ನು ಆರಂಭಿಸಿ ಮುಂದಿನ ಮೂವತ್ತೈದು ಶ್ಲೋಕಗಳು 'ವಿಶ್ವಲೋಕೇಷು ಪುಣ್ಯತ್ವಾತ್' ಎಂಬಲ್ಲಿನವರೆಗೆ ಮಹಾಭಾರತದ ವಚನಗಳು.

೨. ಸ್ವರ್ಗಲೋಕವು ಅನಿತ್ಯವಾದುದರಿಂದ ಸ್ವರ್ಗದಿಂದ ಬೇರೆಡೆ ಹೋಗರು ಎಂಬುದು ಹೇಗೆ ಸಮಂಜಸ? ಎಂಬ ಪ್ರಶ್ನೆಗೆ ಪರಿಹಾರವನ್ನು ವ್ಯಾಖ್ಯಾನದಲ್ಲಿ ನೀಡಲಾಗಿದೆ.

ಯನ್ನ ದುಃಖೇನ ಸಂಭಿನ್ನಂ ನ ಚ ಗ್ರಸ್ತಮನಂತರಮ್ ।
ಅಭಿಲಾಷೋಪನೀತಂ ಚ ತತ್ಸುಖಂ ಸ್ವಃಪದಾಸ್ಪದಮ್ ॥

ಎಂಬ ವಚನದಂತೆ ಸ್ವಶಬ್ದವು ಸ್ವರೂಪಸುಖವನ್ನೂ, ಸ್ವರ್ಗಶಬ್ದವು ವೈಕುಂಠಾದಿ-ಲೋಕಗಳನ್ನೂ ತಿಳಿಸುವುದು.

## ಗಂಗಾ ಮಾಹಾತ್ಮ್ಯ

### ಗಂಗೆಯು ಸಕಲಪಾಪಹರ

೨೮೨. ಪೂರ್ವೇ ವಯಸಿ ಕರ್ಮಾಣಿ ಕೃತ್ವಾ ಪಾಪಾನಿ ಯೇ ನರಾಃ ।
ಪಶ್ಚಾದ್ಗಂಗಾಂ ನಿಷೇವಂತೇ ತೇಽಪಿ ಯಾಂತ್ಯುತ್ತಮಾಂ ಗತಿಮ್ ॥

ಅನು – ಚಿಕ್ಕವಯಸ್ಸಿನಲ್ಲಿ ಪಾಪಕರ್ಮಗಳನ್ನು ಮಾಡಿದ ನರರು ನಂತರ ಗಂಗೆಯನ್ನು ಚೆನ್ನಾಗಿ ಸೇವಿಸಿದರೂ ಉತ್ತಮ ಗತಿಯನ್ನೇ ಹೊಂದುವರು.

ವಿ – ಇದು ಭಾರತ ಆನುಶಾಸನಿಕಪರ್ವದ ವಚನ ೨೬/೩೦.

### ಪ್ರಯಾಗದಲ್ಲಿ ಮರಣದಿಂದ ಮುಕ್ತಿ

೨೮೩. ಯುಕ್ತಾಶ್ಚ ಪಾತಕೈಸ್ತ್ಯಕ್ತ್ವಾ ದೇಹಂ ಶುದ್ಧಾ ಭವಂತಿ ತೇ ।
ಮುಚ್ಯಂತೇ ದೇಹಸಂತ್ಯಾಗಾತ್ ಗಂಗಾಯಮುನಸಂಗಮೇ ॥

ಅನು – ಪಾಪಗಳಿಂದ ಕೂಡಿದವರೂ ಗಂಗಾ-ಯಮುನಾ ಸಂಗಮದಲ್ಲಿ ದೇಹತ್ಯಾಗ ಮಾಡಿದರೆ ಪಾಪಗಳಿಂದ ಶುದ್ಧರಾಗಿ ಮುಕ್ತರಾಗುತ್ತಾರೆ.

ವಿ : ೧. ಪ್ರಾಯಶ್ಚಿತ್ತವಿಲ್ಲದ ಮಹಾಪಾತಕಗಳನ್ನೆಸಗಿದವರೂ ಸಹ ತ್ರಿವೇಣಿ ಸಂಗಮದಲ್ಲಿ ದೇಹ ತೊರೆಯುವುದರಿಂದ ಶುದ್ಧರಾಗಿ ಸದ್ಗತಿ ಪಡೆಯುವರು ಎಂದರ್ಥ.

೨. ಹೀಗೆ ದೇಹ ತೊರೆಯುವುದು ಆತ್ಮಹತ್ಯೆ ಎನ್ನಿಸದೆ ಪುಣ್ಯಕರವೆನ್ನಿಸುವುದು ಮತ್ತೊಂದು ವಿಶೇಷ.

೩. ಮಹಾಪಾತಕ ಮಾಡಿದವರು ಮಾತ್ರವಲ್ಲದೆ ಅತ್ಯಂತ ಅಶಕ್ತಿ, ಉಗ್ರರೋಗಗಳ ತಾಪ ಮೊದಲಾದವುಗಳಿಂದ ನೊಂದವರೂ ಸಹ ಹೀಗೆ ಗಂಗೆಯಲ್ಲಿ ಪ್ರಾಣತ್ಯಾಗ ಮಾಡಬಹುದು ಎಂಬ ವಿಶೇಷಾಂಶವು ಇದರಿಂದ ಸೂಚಿತ.

## ಗಂಗಾಪಾನದ ಮಾಹಾತ್ಮ್ಯ

೨೭೪. ಚಂದ್ರವ್ರತಸಹಸ್ರಂ ತು ಯಶ್ಚರೇತ್ ಕಾಯಶೋಧನಮ್ ।
ಪಿಬೇದ್ಯಶ್ಚಾಪಿ ಗಂಗಾಂಭಃ ಸಮೌ ಸ್ಯಾತಾಂ ನ ವಾऽಸಮೌ ॥

ಅನು – ದೇಹಶುದ್ಧಿಗೆ ಕಾರಣವಾದ ಸಾವಿರಾರು ಚಾಂದ್ರಾಯಣವ್ರತಗಳನ್ನು ಮಾಡುವವನು ಮತ್ತು ಗಂಗಾಜಲ ಪಾನ ಮಾಡುವವನು ಸಮರಾಗುವರೇ? ಇಲ್ಲ. ಗಂಗಾಜಲಪಾನ ಮಾಡುವವನೇ ಮಿಗಿಲು.

ವಿ – ೧. ಭಾರತ ಆನುಶಾಸನಿಕಪರ್ವ ೨೬/೩೯.

೨. ಗಂಗಾಸ್ನಾನದಂತೆ ಗಂಗಾಪಾನವೂ ಸಹ ತಾರಕ; ಗಂಗೆಯು ವಿಷ್ಣುಪಾದೋದಕವಾದ್ದರಿಂದ ತೀರ್ಥದಂತೆ ಅದರ ಪಾನವೂ ಸಹ ಪಾವನ ಎಂದರ್ಥ.

## ಗಂಗೆಯಿಂದ ಪ್ರತಿಷ್ಠಾಲಾಭ

೨೭೫. ಅಪ್ರತಿಷ್ಠಾಶ್ಚ ಯೇ ಕೇಚಿದಧರ್ಮಶರಣಾಶ್ಚ ಯೇ ।
ತೇಷಾಂ ಪ್ರತಿಷ್ಠಾ ಗಂಗೇಹ ಶರಣಂ ಶರ್ಮವರ್ಮ ಚ ॥

ಅನು – ಗತಿಯಿಲ್ಲದವರಿಗೂ ಅಧರ್ಮದಲ್ಲಿ ನಿರತರಾದವರಿಗೂ ಸಹ ಗಂಗೆಯೇ ಆಸರೆ; ರಕ್ಷಣೆ ಮತ್ತು ಸುಖ ಎರಡಕ್ಕೂ ಕಾರಣವಾಗುವ ಪುಣ್ಯಕವಚ.

ವಿ – ಭಾರತ ಆನುಶಾಸನಿಕಪರ್ವ ೨೬/೪೫.

೨. ಗಂಗಾಸ್ನಾನದಿಂದ ಲೋಕದಲ್ಲಿ ಪ್ರತಿಷ್ಠೆ ಹಾಗೂ ಸುಖ ಎರಡೂ ಲಭಿಸುವವು ಎಂದರ್ಥ. ಗಂಗಾಸ್ನಾನವು ಪ್ರತಿಷ್ಠೆಯ ವಿಷಯ ಎಂಬುದು ಲೋಕವಿಖ್ಯಾತವೇ ಆಗಿದೆ.

## ಗಂಗೆಯು ನರಕಪರಿಹಾರಕ

೨೭೬. ಪ್ರಕೃಷ್ಟೈರಶುಭೈರ್ಗ್ರಸ್ತಾನನೇಕೈಃ ಪುರುಷಾಧಮಾನ್ ।
ಪತತೋ ನರಕೇ ಗಂಗಾ ಸಂಶ್ರಿತಾನ್ ಪ್ರೇತ್ಯ ತಾರಯೇತ್ ॥

ಅನು – ಅನೇಕ ಮಹಾಪಾತಕಗಳಿಗೆ ಗುರಿಯಾಗಿ ನರಕಕ್ಕೆ ಬೀಳಲು ಸಿದ್ಧರಾದ ಅಧಮಜನರನ್ನು ಸಹ ಗಂಗೆಯು ತನ್ನನ್ನು ಆಶ್ರಯಿಸಿದರೆ ಪಾರುಮಾಡುವಳು.

ವಿ – ೧. ಭಾರತ ಆನುಶಾಸನಿಕಪರ್ವ ೨೬/೪೬.

೨. ಗಂಗೆಯು ವಿಷ್ಣುಪಾದೋದ್ಭವೆಯಾದ್ದರಿಂದ ಅವಳಿಗೆ ಅಂತಹ ಸಕಲಪಾಪಪರಿಹಾರಕತ್ವ-ರೂಪಸಾಮರ್ಥ್ಯವು ಉಚಿತ ಎಂದು ಭಾವ.

## ಗಂಗೆಯಿಂದ ದೇವಾದಿಗಳ ಅನುಗ್ರಹ

೨೭೭. ತೇ ಸಂವಿಭಕ್ತಾ ಮುನಿಭಿರ್ನೂನಂ ದೇವೈಃ ಸವಾಸವೈಃ।
ಯೇಽಭಿಗಚ್ಛಂತಿ ಸತತಂ ಗಂಗಾಂ ಮತಿಮತಾಂ ವರೈಃ॥

ಅನು – ಯಾರು ನಿತ್ಯವೂ ಮನಸ್ಸಿನಿಂದ ಗಂಗೆಯನ್ನು ಸ್ಮರಿಸುವರೋ ಅವರು ಜ್ಞಾನಿಶ್ರೇಷ್ಠರಾದ ಇಂದ್ರಾದಿ ದೇವತೆಗಳಿಂದಲೂ ಮುನಿಗಳಿಂದಲೂ ಪ್ರತ್ಯೇಕವಾಗಿಯೇ ಕಾಣಲ್ಪಡುವರು.

ವಿ – ೧. ಗಂಗಾಸ್ಮರಣೆ ಮಾಡುವವರನ್ನು ಇಂದ್ರಾದಿ ದೇವತೆಗಳು ಮುನಿಗಳು ವಿಶೇಷ ಆದರದಿಂದ ಕಾಣುವರು ಎಂದರ್ಥ.

೨. ಭಾರತ ಅನುಶಾಸನಿಕಪರ್ವ ೨೬/೪೭.

## ಗಂಗೆಯು ಮಂಗಳಕರ

೨೭೮. ವಿನಯಾಚಾರಹೀನಾಶ್ಚ ಅಶಿವಾಶ್ಚ ನರಾಧಮಾಃ।
ತೇ ಭವಂತಿ ಶಿವಾ ವಿಪ್ರಾಃ ಯೇ ವೈ ಗಂಗಾಮುಪಾಶ್ರಿತಾಃ॥

ಅನು – ವಿನಯ, ಆಚಾರ ತೊರೆದವರೂ, ಅಮಂಗಲರೂ ಮನುಜಾಧಮರೂ ಆದ ಬ್ರಾಹ್ಮಣರು ಗಂಗೆಯನ್ನು ಆಶ್ರಯಿಸಿದರೆ ಪವಿತ್ರರಾಗುವರು.

ವಿ – ಭಾರತ ಅನುಶಾಸನಿಕಪರ್ವ ೨೬/೪೮.

೨. ಗಂಗಾಸ್ನಾನದಿಂದ ದುರಾಚಾರಾದಿಗಳು ಪರಿಹಾರವಾಗಿ ಸದಾಚಾರ ಲಭಿಸುವುದು ಎಂದರ್ಥ.

## ಗಂಗೆಯು ತಾಯಿಯಂತೆ ಹಿತಕರಳು

೨೭೯. ಉಪಾಸತೇ ಯಥಾ ಬಾಲಾ ಮಾತರಂ ಕ್ಷುಧಯಾಽರ್ದಿತಾಃ।
ಶ್ರೇಯಸ್ಕಾಮಾಸ್ತಥಾ ಗಂಗಾಮುಪಾಸಂತೀಹ ದೇಹಿನಃ॥

ಅನು – ಹಸಿವಿನಿಂದ ಬೆಂದ ಮಕ್ಕಳು ತಾಯಿಯನ್ನು ಆಶ್ರಯಿಸುವಂತೆ, ಈ ಜನ್ಮದಲ್ಲಿ ಶ್ರೇಯಸ್ಸನ್ನು ಬಯಸುವ ಪುರುಷರು ಗಂಗೆಯನ್ನು ಆಶ್ರಯಿಸುವರು.

ವಿ – ೧. ಇಲ್ಲಿಂದ ಶ್ಲೋಕ ೨೮೪ರವರೆಗೆ ಭಾರತ ಅನುಶಾಸನಿಕಪರ್ವದ ವಚನಗಳು (೨೬/೫೦-೫೫).

೨. ಇಲ್ಲಿ ಗಂಗೆಯನ್ನು ತಾಯಿಗೆ ಹೋಲಿಸಿರುವುದು ಗಮನಾರ್ಹ; ಗಂಗಾಮಾತೆ ಎಂಬ ಮಾತು ಇದಕ್ಕೆ ಸಂವಾದಿಯಾಗಿದೆ.

## ಗಂಗೆಯು ಸರ್ವಶ್ರೇಷ್ಠವಾದ ನದಿ

೨೮೦. ಸ್ವಾಯಂಭುವಂ ಯಥಾ ಸ್ಥಾನಂ ಸರ್ವೇಷಾಂ ಶ್ರೇಷ್ಠಮುಚ್ಯತೇ ।
ಸ್ನಾತಾನಾಂ ಸರಿತಾಂ ಶ್ರೇಷ್ಠಾ ಗಂಗಾ ತದ್ವದಿಹೋಚ್ಯತೇ ॥

ಅನು – ಹೇಗೆ ಬ್ರಹ್ಮಪದವಿಯು ಎಲ್ಲ ಪದವಿಗಳಲ್ಲಿ ಶ್ರೇಷ್ಠವೋ, ಹಾಗೆ ಮೀಯುವ ನದಿಗಳಲ್ಲೆಲ್ಲಾ ಗಂಗೆಯು ಶ್ರೇಷ್ಠ ಎನಿಸುವುದು.

ವಿ – ಇಲ್ಲಿ ಬ್ರಹ್ಮಪದವಿಯು ಇತರ ಎಲ್ಲ ಪದವಿಗಳಿಗಿಂತ ಮಿಗಿಲು ಎನ್ನುವ ಮೂಲಕ ವಾಯು ಜೀವೋತ್ತಮತ್ವಪ್ರಮೇಯವು ಸೂಚಿತವಾಗಿದೆ ಎಂದೂ ತಿಳಿಯಬಹುದು.

## ಗಂಗೆಯು ಕಾಮಧೇನು

೨೮೧. ಯಥೋಪಜೀವಿನಾಂ ಧೇನುರ್ದೇವಾದೀನಾಂ ಧರಾ ಸ್ಮೃತಾ ।
ತಥೋಪಜೀವಿನಾಂ ಗಂಗಾ ಸರ್ವಪ್ರಾಣಭೃತಾಮಿಹ ॥

ಅನು – ಹೇಗೆ ಕಾಮಧೇನುವು, ಉಪಜೀವಿಸಿರುವ ದೇವತೆಗಳಿಗೆಲ್ಲಾ ಬಯಸಿದ್ದನ್ನು ಕೊಡುವುದೋ, ಹಾಗೆ ಎಲ್ಲ ಪ್ರಾಣಿಗಳಿಗೂ ಗಂಗೆಯು ಇಲ್ಲೇ ಬಯಸಿದ್ದನ್ನು ಕೊಡುವುದು.

ವಿ – ಇಲ್ಲಿ ಗಂಗೆಯನ್ನು ಕಾಮಧೇನು ಎಂದು ಕರೆದಿರುವುದು ಗಮನಾರ್ಹ. ಇದರಿಂದ ಅನಿಷ್ಟನಿವೃತ್ತಿಮಾತ್ರವಲ್ಲದೆ ಇಷ್ಟಪ್ರಾಪ್ತಿಯೂ ಸಹ ಗಂಗೆಯಿಂದ ಲಭಿಸುವುದು ಎಂದು ಸೂಚಿತವಾಗುವುದು.

## ಗಂಗೆಯು ಉಪಜೀವ್ಯ

೨೮೨. ದೇವಾಃ ಸೋಮಾರ್ಕಸಂಸ್ಥಾನಿ ಯಥಾ ಸತ್ರಾದಿಭಿರ್ಮುಖೈಃ ।
ಅಮೃತಾನ್ಯುಪಜೀವಂತಿ ತಥಾ ಗಂಗಾಜಲಂ ನರಾಃ ॥

ಅನು – ಹೇಗೆ ದೇವತೆಗಳು ಯಜ್ಞಯಾಗಗಳ ಫಲವಾಗಿ ಸೂರ್ಯಚಂದ್ರರಲ್ಲಿ ನೆಲೆಸಿರುವ ಅಮೃತವನ್ನು ಉಪಜೀವಿಸಿರುವರೋ ಹಾಗೆ ಮನುಜರು ಗಂಗಾಜಲವನ್ನು ಉಪಜೀವಿಸಿರುವರು.

ವಿ – ಇಲ್ಲಿ ಗಂಗೆಯನ್ನು ಅಮೃತ ಎಂದು ಕರೆಯುವ ಮೂಲಕ ಅದು ಉಪಜೀವ್ಯ ಎಂಬ ಅರ್ಥವು ಸೂಚಿತ.

### ಗಂಗೆಯ ಮರಳೂ ಪಾವನ

೨೮೩. ಜಾಹ್ನವೀಪುಲಿನೋತ್ಥಾಭಿಃ ಸಿಕತಾಭಿಃ ಸಮುಕ್ಷಿತಮ್ ।
ಆತ್ಮಾನಂ ಮನ್ಯತೇ ಲೋಕೋ ದಿವಿಷ್ಠಮಿವ ಶೋಭಿತಮ್ ॥

ಅನು – ಜಾಹ್ನವೀ ತೀರದ ಮರಳಿನ ಕಣಗಳಿಂದ ಮೆತ್ತಿದ ತನ್ನ ದೇಹವನ್ನು ನೋಡಿ ಜ್ಞಾನಿಜನರು ತಮ್ಮನ್ನು ಸ್ವರ್ಗಸ್ಥರೆಂದೇ ಭಾವಿಸುವರು.

### ಗಂಗೆಯ ಮೃತ್ತಿಕೆಯೂ ಪವಿತ್ರ

೨೮೪. ಜಾಹ್ನವೀತೀರಸಂಭೂತಾಂ ಮೃದಂ ಮೂರ್ಧ್ನಾ ಬಿಭರ್ತಿ ಯಃ ।
ಬಿಭರ್ತಿ ರೂಪಂ ಸೋಽರ್ಕಸ್ಯ ತಮೋನಾಶಾಯ ನಿರ್ಮಲಮ್ ॥

ಅನು – ಗಂಗಾತೀರದಲ್ಲಿನ ಮಣ್ಣನ್ನು ತನ್ನ ತಲೆಯ ಮೇಲೆ ಧರಿಸುವವನು ಕತ್ತಲನ್ನು ಕಳೆಯುವ ನಿರ್ಮಲವಾದ ಸೂರ್ಯನ ರೂಪವನ್ನು ಧರಿಸಿದಂತಾಗುವನು.

ವಿ – ತಮಸ್ಸಿನ ನಾಶಕ್ಕೆ ಸೂರ್ಯನಂತೆ ಅಜ್ಞಾನದ ನಾಶಕ್ಕೆ ಅವಶ್ಯಕವಾದ ತತ್ತ್ವಜ್ಞಾನಕ್ಕೆ ಗಂಗಾ ಮೃತ್ತಿಕೆಯ ಧಾರಣೆ ಕಾರಣವಾಗುವುದು ಎಂದು ಭಾವ.

### ಗಂಗೆಯ ಮೇಲಿನ ಗಾಳಿಯೂ ಪಾವನ

೨೮೫. ಗಂಗೋರ್ಮಿಭಿರಥೋ ದಿಗ್ಧಃ ಪುರುಷಂ ಪವನೋ ಯದಾ ।
ಸ್ಪೃಶತೇ ಸೋಽಸ್ಯ ಪಾಪ್ಮಾನಂ ಸದ್ಯ ಏವಾಪಕರ್ಷತಿ ॥

ಅನು – ಗಂಗೆಯ ಅಲೆಗಳು ಮೇಲೆ ಬೀಸಿ ಬರುವ ಗಾಳಿಯು ಯಾವಾಗ ವ್ಯಕ್ತಿಯನ್ನು ಸೋಕುವುದೋ, ಅವನ ಪಾಪಗಳನ್ನು ಕೂಡಲೇ ಪರಿಹರಿಸುವುದು.

ವಿ – ೧. ಇದು ಭಾರತ ಆನುಶಾಸನಿಕಪರ್ವದ ವಚನ ೨೬/೫೯.

೨. ಗಂಗೆಯ ಅಲೆಗಳ ಮೇಲೆ ಬೀಸಿಬರುವ ಗಾಳಿಯೂ ಸಹ ಪಾವನ ಎಂದರ್ಥ.

### ಗಂಗೆಯ ದರ್ಶನವೂ ತಾರಕ

೨೮೬. ವ್ಯಸನೈರಭಿತಪ್ತಸ್ಯ ನರಸ್ಯ ವಿನಶಿಷ್ಯತಃ ।
ಗಂಗಾದರ್ಶನಜಾ ಪ್ರೀತಿರ್ವ್ಯಸನಾನ್ಯಪಕರ್ಷತಿ ॥

ಅನು – ಅನೇಕ ವ್ಯಸನಗಳಿಂದ ನೊಂದು ವಿನಾಶದ ಅಂಚಿನಲ್ಲಿರುವ ಮನುಜನಿಗೆ ಗಂಗಾದರ್ಶನದಿಂದ ಹುಟ್ಟಿದ ಪ್ರಸನ್ನತೆಯು ಆ ವ್ಯಸನಗಳನ್ನು ಕಳೆಯುವುದು.

ವಿ – ಇದು ಭಾರತ ಅನುಶಾಸನಿಕಪರ್ವದ ವಚನ ೨೬/೫೭.

೨. ಗಂಗೆಯ ಸ್ನಾನಾದಿಗಳಂತೆ ಗಂಗೆಯ ದರ್ಶನವೂ ಪಾವನ ಎಂದರ್ಥ.

## ಗಂಗೆಯ ತೀರವೂ ಪವಿತ್ರ

೨೮೭. ನ ಸಾ ಪ್ರೀತಿರ್ದಿವಿಷ್ಠಸ್ಯ ಸರ್ವಾನ್ ಕಾಮಾನುಪಾಶ್ನುತಃ।
ಸಂಭವೇದ್ಯಾ ಪರಾ ಪ್ರೀತಿರ್ಗಂಗಾಯಾಃ ಪುಲಿನೇ ನೃಣಾಮ್॥

ಅನು – ಸ್ವರ್ಗದಲ್ಲಿದ್ದು ಎಲ್ಲ ಭೋಗಗಳನ್ನು ಅನುಭವಿಸುವವನ ಸಂತೋಷವೂ ಗಂಗೆಯ ತೀರದಲ್ಲಿ ನಿಂತ ಜನರ ಸಂತೋಷಕ್ಕೆ ಸಮವಾಗದು.

ವಿ – ಇಲ್ಲಿಂದ ಶ್ಲೋಕ ೩೦೬ ರವರೆಗೆ ಭಾರತ ಅನುಶಾಸನಿಕಪರ್ವದ ವಚನಗಳು (೨೬/೬೦-೮೦).

೨. ಗಂಗಾತೀರದ ವಾಸವೂ ಸಹ ಅತ್ಯಂತ ಆನಂದಕರ ಎಂದರ್ಥ.

## ಗಂಗೆಯ ದರ್ಶನವೂ ತಾರಕ

೨೮೮. ವಾಙ್ಮನಃಕರ್ಮಜೈರ್ಗ್ರಸ್ತಃ ಪಾಪೈರಪಿ ಪುಮಾನಿಹ।
ವೀಕ್ಷ್ಯ ಗಂಗಾಂ ಭವೇತ್ ಪೂತಃ ಅತ್ರ ಮೇ ನಾಸ್ತಿ ಸಂಶಯಃ॥

ಅನು – ಮಾತು, ಮನಸ್ಸು ಮತ್ತು ಕರ್ಮಗಳಿಂದ ಹುಟ್ಟಿದ ಪಾಪಗಳಿಂದ ಗ್ರಸ್ತನಾದ ವ್ಯಕ್ತಿಯೂ ಗಂಗೆಯನ್ನು ನೋಡಿದೊಡನೆಯೇ ಪವಿತ್ರನಾಗುವನು; ಈ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ.

ವಿ – ಇದೂ ಸಹ ಗಂಗೆಯ ದರ್ಶನದ ಮಹತ್ತ್ವವನ್ನು ವಿವರಿಸುವ ಶ್ಲೋಕ.

## ಗಂಗೆಯು ಪಿತೃಗಳಿಗೂ ತಾರಕ

೨೮೯. ಸಪ್ತಾವರಾನ್ ಸಪ್ತಪರಾನ್ ಪಿತೄಂಸ್ತೇಭ್ಯಶ್ಚ ಯೇ ಪರೇ।
ಪುಮಾಂಸ್ತಾರಯತೇ ಗಂಗಾಂ ವೀಕ್ಷ್ಯ ಸ್ಪೃಷ್ಟ್ವಾವಗಾಹ್ಯ ಚ॥

ಅನು – ಗಂಗೆಯನ್ನು ನೋಡುವ, ಮುಟ್ಟುವ, ಅದರಲ್ಲಿ ಮೀಯುವ ವ್ಯಕ್ತಿಯು ಏಳು ಹಿಂದಿನ ಹಾಗೂ ಏಳು ಮುಂದಿನ ಪಿತೃಗಳನ್ನೂ ಅವರ ಮೇಲಿನವರನ್ನೂ ಉದ್ಧರಿಸು-ವನು.

ವಿ – ಗಂಗಾಸ್ನಾನಾದಿಗಳು ಹಿಂದಿನ ಹಾಗೂ ಮುಂದಿನ ಪಿತೃಗಳ ಉದ್ಧಾರಕ್ಕೂ ಸಾಧನ ಎಂದರ್ಥ.

## ಗಂಗೆಯು ಉಭಯವಂಶತಾರಕ

೨೯೦. ಗಂಗಾ ತಾರಯತೇ ನೄಣಾಮುಭೌ ವಂಶೌ ವಿಶೇಷತಃ ॥

ಅನು – ಮನುಜರ ಎರಡು ಕುಲಗಳನ್ನೂ ಗಂಗೆಯು ವಿಶೇಷವಾಗಿ ಉದ್ಧರಿಸುವುದು.

ವಿ – ಇಲ್ಲಿ ಎರಡು ಕುಲಗಳು ಎಂದರೆ ತಂದೆ ಹಾಗೂ ತಾಯಿಯ ವಂಶಗಳು ಎಂದರ್ಥ. ಇಲ್ಲಿ ವಿಶುದ್ಧದ್ವಿಕುಲಮ್ (೧೫/೯೬)ಎಂಬ ಸುಮಧ್ವವಿಜಯದ ಉಕ್ತಿಯನ್ನು ಸ್ಮರಿಸ-ಬಹುದು.

## ಗಂಗೆಯ ಶಕ್ತಿಯು ಅಪರಿಮಿತ

೨೯೧. ಪುನಾತ್ಯಪುಣ್ಯಾನ್ ಪುರುಷಾನ್ ಶತಶೋಽಥ ಸಹಸ್ರಶಃ ॥

ಅನು – ಗಂಗೆಯು ನೂರಾರು ಸಹಸ್ರಾರು ಪಾಪಿಗಳನ್ನು ಪವಿತ್ರಗೊಳಿಸುವುದು.

ವಿ – ಗಂಗೆಯು ಉದ್ಧರಿಸುವ ಮನುಜರ ಸಂಖ್ಯೆಗೆ ಮಿತಿಯಿಲ್ಲ ಎಂದರ್ಥ.

## ಗಂಗೆಯಲ್ಲಿ ತರ್ಪಣವು ತಾರಕ

೨೯೨. ಯ ಇಚ್ಛೇತ್ ಸಫಲಂ ಜನ್ಮ ಜೀವಿತಂ ಶ್ರುತಮೇವ ಚ ।
ಸ ಪಿತೄಂಸ್ತರ್ಪಯೇದ್ಗಂಗಾಮಭಿಗತ್ಯ ಸುರಾಂಸ್ತಥಾ ॥

ಅನು – ಯಾವನು ತನ್ನ ಜನ್ಮವನ್ನು, ತನ್ನ ಬಾಳನ್ನು, ಶಾಸ್ತ್ರಾಧ್ಯಯನವನ್ನು ಸಫಲಗೊಳಿಸಬಯಸುವನೋ ಅವನು ಗಂಗೆಯಲ್ಲಿ ದೇವತರ್ಪಣ ಪಿತೃತರ್ಪಣಗಳನ್ನು ನೀಡಬೇಕು.

ವಿ – ಗಂಗೆಯಲ್ಲಿ ದೇವತರ್ಪಣಾದಿಗಳನ್ನು ನೀಡುವುದು ಹುಟ್ಟಿದ್ದಕ್ಕೂ ಬದುಕಿದ್ದಕ್ಕೂ ಓದಿದ್ದಕ್ಕೂ ಸಾರ್ಥಕ ಎಂದರ್ಥ.

## ಗಂಗೆಯು ಪುತ್ರಾದಿಗಳಿಗಿಂತ ಮಿಗಿಲು

೨೯೩. ನ ಸುತೈರ್ನ ಚ ವಿತ್ತೇನ ಕರ್ಮಣಾ ನ ಚ ತತ್ಫಲಮ್ ।
ಆಪ್ನುಯಾತ್ ಪುರುಷೋಽತ್ಯಂತಂ ಗಂಗಾಂ ಪ್ರಾಪ್ಯ ಯದಾಪ್ನುಯಾತ್ ॥

ಅನು – ಪುರುಷನು ಗಂಗೆಯಿಂದ ಪಡೆಯುವ ಪುಣ್ಯವನ್ನು ಪುತ್ರರಿಂದಾಗಲೀ, ಹಣದಿಂದಾಗಲೀ, ಕರ್ಮಗಳಿಂದಾಲೀ ಪಡೆಯಲಾರ.

ವಿ – ಪುತ್ರಾದಿಗಳಿಂದ ಲಭಿಸುವ ಪುಣ್ಯಕ್ಕಿಂತ ಗಂಗಾಸೇವನೆಯಿಂದ ಲಭಿಸುವ ಪುಣ್ಯ ಶ್ರೇಷ್ಠ ಎಂದರ್ಥ.

## ಗಂಗೆಯನ್ನು ತೊರೆದವರು ನಿಂದ್ಯರು

೨೯೪. ಜಾತ್ಯಂಧೈರಿಹ ತುಲ್ಯಾಸ್ತೇ ಮೃತೈಃ ಪಂಗುಭಿರೇವ ಚ ।
ಸಮರ್ಥಾ ಯೇ ನ ಪಶ್ಯಂತಿ ಗಂಗಾಂ ಪುಣ್ಯಜಲಾಂ ಶಿವಾಮ್ ॥

ಅನು – ಸಾಮರ್ಥ್ಯವಿದ್ದೂ ಗಂಗೆಯ ಮಂಗಲಕರವಾದ ಪುಣ್ಯಜಲವನ್ನು ನೋಡದವರು ಹುಟ್ಟುಕುರುಡರಿಗೆ, ಕುಂಟರಿಗೆ, ಮೃತರಿಗೆ ಸಮ.

ವಿ – ಗಂಗೆಯು ವಿಷ್ಣುಪಾದೋದಕ ಎಂಬ ಕಾರಣದಿಂದ ಜರಾಸಂಧನಂತಹ ಶೈವರು ಅದರ ದರ್ಶನಾದಿಗಳನ್ನು ಸರ್ವಥಾ ಮಾಡರು; ಅಂತಹವರ ನಿಂದೆ ಇಲ್ಲಿದೆ; ಅವರ ಆರಾಧ್ಯದೈವ-ನಾದ ಶಿವನೇ ಗಂಗಾಧರನಾಗಿರುವಾಗ ಇವರು ಅದನ್ನು ತೊರೆಯುವುದು ಮೂರ್ಖತನವಲ್ಲದೆ ಮತ್ತೇನು ಎಂದರ್ಥ.

## ಗಂಗೆಯು ಇಂದ್ರಾದಿಗಳಿಂದಲೂ ಸೇವ್ಯ

೨೯೫. ಭೂತಭವ್ಯಭವಿಷ್ಯಜ್ಞೈಃ ಮಹರ್ಷಿಭಿರುಪಸ್ಥಿತಾಮ್ ।
ದೇವೈಃ ಸೇಂದ್ರೈಶ್ಚ ಕೋ ಗಂಗಾಂ ನೋಪಸೇವೇತ ಮಾನವಃ ॥

ಅನು – ತ್ರಿಕಾಲಜ್ಞರಾದ ಮಹರ್ಷಿಗಳಿಂದಲೂ ಇಂದ್ರಾದಿದೇವತೆಗಳಿಂದಲೂ ಸೇವಿತವಾದ ಗಂಗೆಯನ್ನು ಯಾವ ಮಾನವನು ತಾನೇ ಸೇವಿಸಲಾರ!!

ವಿ – ಗಂಗೆಯು ಇಂದ್ರಾದಿದೇವತೆಗಳಿಗೂ, ಮಹರ್ಷಿಗಳಿಗೂ, ದಿವ್ಯಜ್ಞಾನಿಗಳಿಗೂ ಸಹ ಮಾನ್ಯ ಎಂದರ್ಥ.

## ಗಂಗೆಯು ಸಕಲ ಆಶ್ರಮಿಗಳಿಗೂ ತಾರಕ

೨೯೬. ವಾನಪ್ರಸ್ಥೈರ್ಗೃಹಸ್ಥೈಶ್ಚ ಯತಿಭಿರ್ಬ್ರಹ್ಮಚಾರಿಭಿಃ ।
ವಿದ್ಯಾವದ್ಭಿಃ ಶ್ರಿತಾಂ ಗಂಗಾಂ ಸ ಗತಿಂ ಪರಮಾಂ ಲಭೇತ್ ॥

ಅನು – ವಿದ್ಯಾವಂತರಿಂದಲೂ, ಬ್ರಹ್ಮಚಾರಿಗಳಿಂದಲೂ, ಗೃಹಸ್ಥರಿಂದಲೂ, ವಾನಪ್ರಸ್ಥರಿಂದಲೂ, ಯತಿಗಳಿಂದಲೂ ಆಶ್ರಿತವಾದ ಗಂಗೆಯನ್ನು ಸೇವಿಸುವವನು ಪರಮಗತಿಯನ್ನೇ ಪಡೆಯುವನು.

## ಅಂತ್ಯಕಾಲದಲ್ಲಿ ಗಂಗಾಚಿಂತನೆ ತಾರಕ

೨೯೭. ಉಪಕ್ರಮದ್ಭಿರ್ಯಃ ಪ್ರಾಣೈಃ ಪ್ರಯತಃ ಶಿಷ್ಟಸಮ್ಮತಃ।
ಚಿಂತಯೇನ್ಮನಸಾ ಗಂಗಾಂ ಸ ಗತಿಂ ಪರಮಾಂ ಲಭೇತ್ ॥

ಅನು – ಆಸನ್ನಮರಣನೂ ಸಾವಧಾನದಿಂದ ಮನಸ್ಸಿನಲ್ಲಿ ಗಂಗೆಯನ್ನು ಸ್ಮರಿಸಿದರೆ ಶಿಷ್ಟರಾದ ವಿಷ್ಣುದೂತರಿಗೆ ಸಮ್ಮತನಾಗಿ ಪರಮಗತಿಯನ್ನು ಪಡೆಯುವನು.

ವಿ–೧. ಅಂತ್ಯಕಾಲದಲ್ಲಿಗಂಗೆಯನ್ನುಮನಸಾ ಸ್ಮರಿಸುವವನಿಗೂ ಸದ್ಗತಿ ಖಚಿತಎಂದರ್ಥ.

೨. 'ಕಸ್ತಾಂ ನ ಸೇವೇತ ಮರಿಷ್ಯಮಾಣಃ' ಎಂಬ ಶ್ರೀಮದ್ಭಾಗವತದ (೧/೧೯/೬) ಉಕ್ತಿ ಇಲ್ಲಿ ಗಮನಾರ್ಹ.

## ಗಂಗೆಯು ಭಯಾದಿಗಳಿಗೆ ಪರಿಹಾರಕ

೨೯೮. ನ ಭಯೇಭ್ಯೋ ಭಯಂ ತಸ್ಯ ನ ಪಾಪೇಭ್ಯೋ ನ ರಾಜತಃ।
ಆದೇಹಪತನಾದ್ಗಂಗಾಮುಪಾಸತೇ ಯಃ ಪುಮಾನಿಹ ॥

ಅನು – ತನ್ನ ದೇಹ ಬೀಳುವವರೆಗೂ ಯಾವ ಪುರುಷನು ಗಂಗೆಯನ್ನು ಉಪಾಸಿಸುವನೋ ಅವನಿಗೆ ಭಯಕ್ಕೆ ಕಾರಣವಾದ ಕ್ರೂರಮೃಗಗಳಿಂದಲೂ, ಪಾಪಗಳಿಂದಲೂ, ರಾಜನಿಂದಲೂ ಭಯವಿರದು.

ವಿ – ೧. ತನ್ನ ದೇಹ ಬೀಳುವವರೆಗೂ ಗಂಗೆಯನ್ನು ಉಪಾಸಿಸುವುದು ಎಂದರೆ ತನ್ನ ದೇಹಪತನವಾಗುವವರೆಗೂ ಗಂಗಾ ಸ್ಮರಣೆಯನ್ನು ಮಾಡುವ ಸಂಕಲ್ಪದಿಂದ ಗಂಗೆಯನ್ನು ಉಪಾಸಿಸುವುದು ಎಂಬ ವಿಶೇಷಾರ್ಥ ವ್ಯಾಖ್ಯಾನದಲ್ಲಿದೆ.

೨. ಗಂಗೆ ಪಾಪನಾಶಕವಾಗಿರುವಂತೆ ಭಯನಾಶಕವೂ ಆಗಿದೆ ಎಂದರ್ಥ.

## ಗಂಗೆಯ ಹಿರಿಮೆ

೨೯೯. ಮಹಾಪುಣ್ಯಾಂ ಹಿ ಗಗನಾತ್ ಪತಂತೀಂ ವೈ ಮಹೇಶ್ವರಃ।
ದಧಾರ ಶಿರಸಾ ಗಂಗಾಂ ತಾಮೇವ ದಿವಿ ಸೇವತೇ ॥
ಅಲಂಕೃತಾಸ್ತ್ರಯೋ ಲೋಕಾಃ ಪಥಿಭಿರ್ವಿಮಲೈಸ್ತ್ರಿಭಿಃ।
ಯಸ್ತು ತಸ್ಯಾ ಜಲಂ ಸೇವೇತ್ ಕೃತಕೃತ್ಯಃ ಪುಮಾನ್ ಭವೇತ್ ॥

ಅನು – ಆಕಾಶದಿಂದ ಧುಮುಕಿದ ಮಹಾಪುಣ್ಯಕರಳಾದ ಗಂಗೆಯನ್ನು ಮಹೇಶ್ವರನು ತನ್ನ ಶಿರಸ್ಸಿನಲ್ಲಿ ಧರಿಸಿದ. ಅಲ್ಲಿಂದ ಮೂರು ಕವಲಾಗಿ ಹೊರಟ ಗಂಗೆಯಿಂದ ಮೂರು

ಲೋಕಗಳು ಅಲಂಕೃತವಾಗಿವೆ. ಅಂತಹ ಗಂಗಾಜಲವನ್ನು ಸೇವಿಸುವ ಪುರುಷನು ಕೃತಕೃತ್ಯನಾಗುವನು.

ವಿ – ೧. ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿ ಶಿವ ಗಂಗಾಧರನೆಂದು ವಿಖ್ಯಾತನಾದ ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

೨. ಮೂರು ಲೋಕದಲ್ಲೂ ಹರಿಯುವ ಏಕಮಾತ್ರ ನದಿ ಎಂಬುದು ಗಂಗೆಯ ಮತ್ತೊಂದು ವಿಶೇಷ.

## ಗಂಗೆಯು ಸರ್ವೋತ್ತಮವಾದ ನದಿ

೩೦೦. ದಿವಿ ಜ್ಯೋತಿರ್ಯಥಾಽಽದಿತ್ಯಃ ಪಿತೄಣಾಂ ಚೈವ ಚಂದ್ರಮಾಃ ।
ದೇವೇಶಶ್ಚ ಯಥಾ ನೃಣಾಂ ಗಂಗಾ ಚ ಸರಿತಾಂ ತಥಾ ॥

ಅನು – ಸೂರ್ಯನು ಹೇಗೆ ಆಕಾಶದಲ್ಲಿ ಜ್ಯೋತಿಯೋ ಪಿತೃಗಳಿಗೆ ಹೇಗೆ ಚಂದ್ರನೋ ಮನುಜರಿಗೆ ಹೇಗೆ ದೇವೇಶನಾದ ನಾರಾಯಣನೋ ಹಾಗೆ ನದಿಗಳಿಗೆ ಗಂಗಾ.

ವಿ – ೧. ಸೂರ್ಯನು ಬೆಳಕಿಗೆ ಕಾರಣನಾದಂತೆ, ಚಂದ್ರನು ತೃಪ್ತಿಗೆ ಕಾರಣನಾದಂತೆ, ಭಗವಂತನು ಮೋಕ್ಷಕ್ಕೆ ಕಾರಣನಾದಂತೆ, ಗಂಗೆಯು ಶುದ್ಧಿಗೆ ಕಾರಣ ಎಂದರ್ಥ.

೨. ಗಂಗೆಯು ಸರ್ವನದಿಗಳಿಗಿಂತಲೂ ಮಿಗಿಲು ಎಂದರ್ಥ : 'ನಾಸ್ಯ ತೀರ್ಥಸಲಿಲಸ್ಯ ಸಮಂ ವಾಃ' (ಸುಮಧ್ವವಿಜಯ ೬/೪೭)

## ಗಂಗೆಯ ವಿಯೋಗ ಅತ್ಯಂತ ದುಃಖಕರ

೩೦೧. ಮಾತ್ರಾ ಪಿತ್ರಾ ಸುತೈರ್ದಾರೈರ್ವಿಯುಕ್ತಸ್ಯ ಧನೇನ ವಾ ।
ನ ಭವೇದ್ಧಿ ತಥಾ ದುಃಖಂ ಯಥಾ ಗಂಗಾವಿಯೋಗಜಮ್ ॥

ಅನು – ಗಂಗಾವಿಯೋಗದಿಂದ ಆಗುವ ದುಃಖವು ತಂದೆ, ತಾಯಿ, ಮಗ, ಹೆಂಡತಿ, ಧನ ಇವುಗಳನ್ನು ಕಳೆದುಕೊಂಡವನಿಗೂ ಆಗದು.

ವಿ – ಇತರ ಎಲ್ಲರ ವಿಯೋಗಕ್ಕಿಂತ ಗಂಗೆಯ ವಿಯೋಗ ಹೆಚ್ಚು ದುಃಖಕರ ಎಂದರ್ಥ.

## ಗಂಗಾದರ್ಶನ ಇತರವಸ್ತುಗಳ ದರ್ಶನಕ್ಕಿಂತ ಮಿಗಿಲು

೩೦೨. ನಾರಣ್ಯೈರ್ನೇಷ್ಟವಿಷಯೈರ್ನ ಸುತೈರ್ನ ಧನಾಗಮೈಃ ।
ತಥಾ ಪ್ರಸಾದೋ ಭವತಿ ಗಂಗಾಂ ವೀಕ್ಷ್ಯ ಯಥಾ ಭವೇತ್ ॥

ಅನು – ಗಂಗೆಯನ್ನು ಕಂಡಾಗ ದೊರೆಯುವ ಪ್ರಸನ್ನತೆಯು ಅರಣ್ಯಗಳಿಂದಲೂ, ಬಯಸಿದ ವಿಷಯಗಳಿಂದಲೂ, ಪುತ್ರರಿಂದಲೂ, ಹಣದಿಂದಲೂ ಲಭಿಸದು.

ವಿ – ಗಂಗೆಯ ದರ್ಶನವೂ ಸಹ ಪುತ್ರಾದಿದರ್ಶನಕ್ಕಿಂತ ಮಿಗಲು ಎಂದರ್ಥ.

### ಗಂಗೆಯ ದರ್ಶನದಿಂದ ದೃಷ್ಟಿ ಸಾರ್ಥಕ

**೩೦೩. ಪೂರ್ಣಮಿಂದುಂ ಯಥಾ ದೃಷ್ಟ್ವಾ ನೃಣಾಂ ದೃಷ್ಟಿಃ ಪ್ರಸೀದತಿ।**
**ತಥಾ ತ್ರಿಪಥಗಾಂ ದೃಷ್ಟ್ವಾ ನೃಣಾಂ ದೃಷ್ಟಿಃ ಪ್ರಸೀದತಿ ॥**

ಅನು – ಪೂರ್ಣಚಂದ್ರನನ್ನು ಕಂಡ ಮನುಷ್ಯರ ಕಣ್ಣು ಪ್ರಸನ್ನಗೊಳ್ಳುವಂತೆ ಗಂಗೆಯನ್ನು ಕಂಡ ಜನರ ಕಣ್ಣೂ ಪ್ರಸನ್ನಗೊಳ್ಳುವುದು.

ವಿ – ಗಂಗೆಯ ದರ್ಶನವೂ ಸಹ ಪ್ರಸನ್ನತೆಗೆ ಸಾಧನ ಎಂದರ್ಥ.

### ಗಂಗೆಯ ಸ್ಮರಣೆ ಶ್ರೀಹರಿಗೆ ಅತ್ಯಂತ ಪ್ರೀತಿಕರ

**೩೦೪. ತದ್ಭಾವಸ್ತದ್ಗತಮನಾಸ್ತನ್ನಿಷ್ಠಸ್ತತ್ಪರಾಯಣಃ।**
**ಗಂಗಾಂ ಯಸ್ತು ಗತೋ ಭಕ್ತ್ಯಾ ಸ ತಸ್ಯಾಃ ಪ್ರಿಯತಾಂ ವ್ರಜೇತ್ ॥**

ಅನು – ಅದನ್ನೇ ಭಜಿಸುವ, ಅಲ್ಲೇ ನೆಟ್ಟ ಮನಸ್ಸಿನ, ಅದನ್ನೇ ನೆನೆಯುವ, ಅದನ್ನೇ ಆಶ್ರಯಿಸಿರುವ ಮನುಷ್ಯನು ಗಂಗೆಯನ್ನು (ಸ್ನಾನಾದಿಗಳಿಗಾಗಿ) ಹೊಂದಿದರೆ ಅವನೇ ಗಂಗೆಗೆ ಅತಿಪ್ರಿಯನಾಗುವನು.

ವಿ – ಗಂಗೆಯ ಬಳಿಗೆ ಯಾಂತ್ರಿಕವಾಗಿ ತೆರಳದೆ ಭಕ್ತಿಭಾವದಿಂದ ತೆರಳಬೇಕು ಎಂಬುದು ಇಲ್ಲಿಯ ಭಾವ.

### ಗಂಗಾಸ್ನಾನಕ್ಕಿಂತ ಮಿಗಿಲಾದ ಕರ್ತವ್ಯವಿಲ್ಲ

**೩೦೫. ಭೂಸ್ಥೈಃ ಖಸ್ಥೈರ್ದಿವಿಷ್ಠೈಶ್ಚ ಭೂತೈರುಚ್ಚಾವಚೈರಪಿ।**
**ಗಂಗಾಂ ವಿಗಾಹ್ಯ ಸತತಮೇತತ್ ಕಾರ್ಯತಮಂ ಸತಾಮ್ ॥**

ಅನು – ಭೂಮಿಯಲ್ಲಿನ, ಅಂತರಿಕ್ಷದಲ್ಲಿನ, ಸ್ವರ್ಗಲೋಕದಲ್ಲಿನ, ಹಿರಿಯಕಿರಿಯ ಸಜ್ಜೀವರಿಗೆಲ್ಲಾ ಗಂಗೆಯಲ್ಲಿ ಮೀಯುವುದೇ ಅತ್ಯಂತ ಶ್ರೇಷ್ಠವಾದ ಕಾರ್ಯ.

### ಗಂಗೆಯಿಂದ ಸಗರಪುತ್ರರ ಉದ್ಧಾರ

**೩೦೬. ವಿಶ್ವಲೋಕೇಷು ಪುಣ್ಯತ್ವಾತ್ ಗಂಗಾಯಾಂ ಪ್ರಥಿತಂ ಯಶಃ।**
**ಯತ್ ಪುತ್ರಾನ್ ಸಗರಸ್ಯೈಷಾ ಭಸ್ಮಾಖ್ಯಾನನಯದ್ದಿವಮ್ ॥**

ಅನು – ಭಸ್ಮೀಭೂತರಾದ ಸಗರನ ಪುತ್ರರನ್ನು ಸ್ವರ್ಗಕ್ಕೆ ಕರೆದೊಯ್ದದ್ದರಿಂದ ಎಲ್ಲ ಲೋಕಗಳಲ್ಲೂ ಪುಣ್ಯಕರವಾಗಿ ಗಂಗೆಯ ಯಶಸ್ಸು ಪ್ರಸಿದ್ಧವಾಗಿದೆ.

ವಿ – ೧. ಗಂಗೆಯು ಭಗೀರಥಪ್ರಯತ್ನದಿಂದ ಭೂಮಿಗೂ ಅನಂತರ ಪಾತಾಲಕ್ಕೂ ಹರಿದು ಕಪಿಲ ಮುನಿಗೆ ದ್ರೋಹಮಾಡಿ ಭಸ್ಮವಾಗಿದ್ದ ೬೦,೦೦೦ ಸಗರಪುತ್ರರನ್ನು ಉದ್ಧರಿಸಿದ ಪ್ರಸಂಗ ಶ್ರೀಮದ್ಭಾಗವತಾದಿಗಳಲ್ಲಿ ನಿರೂಪಿತವಾಗಿದೆ.

೨. ಗಂಗೆಯ ಮಹಿಮೆ ಅನೇಕ ಶ್ಲೋಕಗಳಲ್ಲಿ ಇಲ್ಲಿ ಬಗೆ ಬಗೆಯಾಗಿ ನಿರೂಪಿತವಾಗಿರುವುದು ಗಮನಾರ್ಹ.

೩. ಮೇಲ್ನೋಟಕ್ಕೆ ಇದು ಗಂಗಾಮಾಹಾತ್ಮ್ಯದಂತೆ ಕಂಡರೂ ಗಂಗೆ ಮುಖ್ಯವಾಗಿ ವಿಷ್ಣು ಪಾದೋದಕವಾದ್ದರಿಂದ ಇದೆಲ್ಲಾ ಪ್ರಧಾನವಾಗಿ ವಿಷ್ಣುವಿನ ಮಹಿಮೆಯನ್ನೇ ನಿರೂಪಿಸುವ ಸಾಧನ ಎಂದು ತಿಳಿಯಬೇಕು.

೪. ಜಲ ಎಂದರೆ ತೀರ್ಥ; ಗಂಗೆ ಸಕಲ ತೀರ್ಥಗಳಿಗೂ ಮಿಗಿಲು. ತೀರ್ಥ ಎಂದರೆ ಶಾಸ್ತ್ರ; ಇದರಿಂದ ಸಕಲಶಾಸ್ತ್ರಗಳಿಗೂ ಮಿಗಿಲಾದ ಶಾಸ್ತ್ರವೆಂದರೆ ಶ್ರೀಹರಿಯು ಶ್ರೀವೇದವ್ಯಾಸರೂಪದಿಂದ ರಚಿಸಿದ ಶ್ರೀಮನ್ಮಹಾಭಾರತ ಭಾಗವತಾದಿಗಳು ಎಂದರ್ಥ; ಅನಂತರದಲ್ಲಿ ಜೀವೋತ್ತಮರಾದ ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳಿಗೂ ಅವುಗಳ ಟೀಕಾಟಿಪ್ಪಣಿಗಳಿಗೂ ಈ ಮಾತು ಅನ್ವಯಿಸುತ್ತದೆ.

೫. ಇಲ್ಲಿ ಗಂಗಾಸೇವನೆ ಎಂದರೆ ಶ್ರವಣಮನನಾದಿಗಳ ಮೂಲಕ ಮಾಡುವ ಶಾಸ್ತ್ರಾಧ್ಯಯನ ಎಂಬುದು ಮುಖ್ಯಭಾವ.

೬. ಶಾಸ್ತ್ರಾಧ್ಯಯನ ಮಾತ್ರವಲ್ಲದೆ ಅವುಗಳ ದರ್ಶನ ಸ್ಪರ್ಶನ ಮೊದಲಾದವುಗಳೂ ಸಹ ಸರ್ವಪಾಪಪರಿಹಾರಕ, ಸರ್ವೇಷ್ಟಸಾಧಕ ಎಂಬ ಮುಖ್ಯಭಾವ ಈ ಗಂಗಾಮಾಹಾತ್ಮ್ಯದ ಹೃದಯ ಎಂದು ತಿಳಿಯಬೇಕು.

### ಭಗವಂತನು ಧ್ವನ್ಯಾತ್ಮಕಶಬ್ದಗಳಿಂದಲೂ ಪ್ರತಿಪಾದ್ಯ

**೩೦೭. ದಧ್ನೋಮಥನಶಬ್ದಶ್ಚಾಪ್ಯಂತರ್ನಾದಸ್ವರೂಪತಃ ।**
**ಭೀಷಕತ್ವಂ ಹರೇಬ್ರೂಯಾದಂತರ್ನಾದೋ ಹಿ ಭೀಷಣಃ ॥**

ಅನು – ಮೊಸರನ್ನು ಕಡೆಯುವ ಶಬ್ದವು ಅಂತರ್ನಾದಸ್ವರೂಪದ್ದಾಗಿದ್ದು ಭಗವಂತನ ಭೀಷಕತ್ವವನ್ನು ತಿಳಿಸುವುದು. ಅಂತರ್ನಾದವು ಭೀಷಣವಲ್ಲವೇ!!

ವಿ – ೧. ಈ ಶ್ಲೋಕವನ್ನಾರಂಭಿಸಿ ಮುಂದಿನ ನಾಲ್ಕು ಶ್ಲೋಕಗಳು ಕರ್ಮನಿರ್ಣಯದಲ್ಲಿ ಶ್ರೀಮದಾಚಾರ್ಯರಿಂದ ಉದಾಹರಿಸಲ್ಪಟ್ಟ ಶಬ್ದತತ್ತ್ವದ ವಚನಗಳು.

೨. ಕೇವಲ ಲೌಕಿಕ ವೈದಿಕ ಶಾಸ್ತ್ರಶಬ್ದಗಳನ್ನಲ್ಲದೆ ಜಗತ್ತಿನ ಪ್ರತಿಯೊಂದು ಧ್ವನಿಯೂ ಭಗವಂತನ ಗುಣವನ್ನು ವರ್ಣಿಸುವುದು ಎಂಬ ತತ್ವವನ್ನು ಈ ವಚನಗಳು ಸಮರ್ಥಿಸುತ್ತವೆ.

### ಆನೆಗಳ ಘೀಳಿಡುವಿಕೆಯೂ ಭಗವತ್ಪರ

೩೦೮. ಗಜಬೃಂಹಿತಮಪ್ಯೇವಂ ಧಿಕ್ಕಾರಸಹಿತಂ ವದೇತ್ ।
ಸ್ವರಿತೇನ ಸಮಾಯೋಗಾತ್ ಧಿಕ್ಕೃತೌ ಸ್ವರಿತೋ ಯತಃ ॥

ಅನು – ಆನೆ ಘೀಳಿಡುವುದು ಸ್ವರಿತದಿಂದ ಕೂಡಿದ್ದರಿಂದ ಧಿಕ್ಕಾರವನ್ನು ತಿಳಿಸುವುದು. ಧಿಕ್ಕಾರದಲ್ಲೇ ಸ್ವರಿತವಲ್ಲವೇ!!

### ಕಾಲ್ಗೆಜ್ಜೆಗಳ ಧ್ವನಿಯೂ ಹರಿಪರ

೩೦೯. ಮಹಾಮಂತ್ರಜಲಾದ್ಯೈಶ್ಚ ಯುಕ್ತಮೇತಾದೃಶಂ ವದೇತ್ ।
ಪಾದಭೂಷಾ ಚ ಧಿಕ್ಕಾರಂ ತತ್ಕೃತಂ ಸ್ವರಿತೋ ವದೇತ್ ॥

ಅನು – ಮಹಾಮಂತ್ರಜಲಾದಿಗಳಿಂದ ಕೂಡಿದ ಶಬ್ದವು ಧಿಕ್ಕಾರವನ್ನು ಹೇಳುವುದು. ಪಾದದ ಗೆಜ್ಜೆಯ ಸ್ವರಿತವು ಭಗವಂತನು ನಡೆಸುವ ಧಿಕ್ಕಾರವನ್ನು ಹೇಳುವುದು.

### ಚಕೋರಾದಿಗಳ ಧ್ವನಿಯೂ ಹರಿಪರ

೩೧೦. ಅದ್ಭುತತ್ವಂ ಹರೇರ್ವಕ್ತಿ ಪಿಂಗಾ ಕಂಠಗಶಬ್ದವತ್ ।
ತಾಮೇವಾದ್ಭುತತಾಂ ವಕ್ತಿ ಗೃಹಗೋಧಾಽಪರಾಽಪಿ ಚ ॥

ಅನು – ಕಂಠದ(ಹಾ ಹಾ ಎಂಬ) ಧ್ವನಿಯಂತೆ ಚಕೋರಿ ಪಕ್ಷಿಯ ಧ್ವನಿಯು ಹರಿಯ ಅದ್ಭುತತೆಯನ್ನು ಹೇಳುವುದು. ಅದೇ ಅದ್ಭುತತೆಯನ್ನು ಮನೆಯ ಹಲ್ಲಿಯು ಮತ್ತು ಅರಣ್ಯದ ಹಲ್ಲಿಯು ಹೇಳುವುದು.

ವಿ : ೧. ಈ ಶ್ಲೋಕಗಳಲ್ಲಿ ಶ್ರೀಹರಿಯು ವರ್ಣಾತ್ಮಕಶಬ್ದಗಳಿಂದ ಮಾತ್ರವಲ್ಲದೇ ಸಕಲ ಧ್ವನ್ಯಾತ್ಮಕ ಶಬ್ದಗಳಿಂದಲೂ ಪ್ರತಿಪಾದ್ಯನಾಗಿರುವನು ಎಂಬ ವಿಶೇಷಾಂಶ ನಿರೂಪಿತವಾಗಿದೆ.

೨. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ಐತರೇಯೋಪನಿಷದ್ಭಾಷ್ಯ, ಕರ್ಮನಿರ್ಣಯ ಮೊದಲಾದ ಕೃತಿಗಳಲ್ಲಿ ಕಾಣಬಹುದು :

ಸರ್ವೈಶ್ಚ ವೈದಿಕಪದ್ಯೈರಪಿಲೋಕಶಬ್ದೈ-
ರ್ಮೇಘಾಗ್ನಿವಾರಿಧಿರವೈಶ್ಚ ಸರ್ವೈಃ ।

ಏಕೋಽಭಿಧೇಯಃ ಪರಿಪೂರ್ಣಗುಣಃ ಪ್ರಿಯೋಽಲಂ
ನಾರಾಯಣೋ ಮಮ ಸದೈವ ಸುತುಷ್ಟಿಮೇತು ॥ (ಐತರೇಯಭಾಷ್ಯ)

## ಅರ್ಧೋದಯ ಮಹೋದಯಗಳ ಲಕ್ಷಣಗಳು

೩೦೧. ಅಮಾರ್ಕಶ್ರವಣೇ ಪಾತೇ ಯುಕ್ತಾ ಚೇತ್ ಪುಷ್ಯಮಾಘಯೋಃ ।
ಅರ್ಧೋದಯಃ ಸ ವಿಜ್ಞೇಯಃ ಕಿಂಚಿನ್ನ್ಯೂನಂ ಮಹೋದಯಃ ॥

ಅನು – ಪುಷ್ಯ, ಮಾಘಮಾಸಗಳ ಭಾನುವಾರವು ಶ್ರವಣನಕ್ಷತ್ರ ಮತ್ತು ವ್ಯತೀಪಾತದಿಂದ ಕೂಡಿದ್ದರೆ ಅದನ್ನು ಅರ್ಧೋದಯ ಕಾಲ ಎನ್ನುವರು. ಸ್ವಲ್ಪ ಕಡಿಮೆಯಾದರೆ ಮಹೋದಯ ಎನ್ನುವರು.

ವಿ – ೧. ಇಲ್ಲಿ ಅರ್ಧೋದಯ ಶಬ್ದವು ಹೆಚ್ಚಿನ ಪರ್ವಕಾಲಗಳಿಂದ ಕೂಡಿದ್ದು ಮಹೋದಯವು ಅದಕ್ಕಿಂತ ಸ್ವಲ್ಪ ಕಡಿಮೆಯಾಗಿದ್ದರೂ ಅರ್ಧೋದಯ ಮಹೋದಯ-ಶಬ್ದಗಳ ಔಚಿತ್ಯವನ್ನು ವ್ಯಾಖ್ಯಾನದಲ್ಲಿ ಸಮರ್ಥಿಸಲಾಗಿದೆ. ಅರ್ಧಶಬ್ದವು ಒಂದರ ಅರ್ಧಭಾಗ ಎಂಬರ್ಥದಲ್ಲಿ ಬಳಕೆಯಾಗಿಲ್ಲ. ಆದರೆ ಆ+ಋದ್ಧ ಎಂಬ ನಿಷ್ಪತ್ತಿಯಿಂದ ಕೂಡಿದ್ದು ಇನ್ನೂ ಹೆಚ್ಚಿನದು ಎಂದ ಅರ್ಥವನ್ನು ನೀಡುತ್ತದೆ.

೨. ಮೇಲ್ನೋಟಕ್ಕೆ ಅರ್ಧೋದಯಕ್ಕಿಂತ ಮಹೋದಯವೇ ಮಿಗಿಲು ಎಂದು ತೋರುವುದುಂಟು. ವಸ್ತುಸ್ಥಿತಿ ಹಾಗಲ್ಲ. ಅರ್ಧೋದಯವೇ ಮಹೋದಯಕ್ಕಿಂತ ತುಂಬಾ ಮಿಗಿಲಾದುದು. ಅದರಲ್ಲಿಯ ಅರ್ಧಶಬ್ದಕ್ಕೆ ಅತಿಋದ್ಧ ಎಂದರ್ಥವೇ ಹೊರತು ಅರ್ಧಭಾಗ ಎಂದರ್ಥವಲ್ಲ ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

## ಹಿರಣ್ಯದಾನದ ಹಿರಿಮೆ

೩೦೨. ಸ್ವರ್ಗಾಯ ಬಾಹುಸ್ತು ಹಿರಣ್ಯದಾನಂ ತತೋ ವಿಶಿಷ್ಟಂ ಕನಕಪ್ರದಾನಮ್ ॥

ಅನು – ಸ್ವರ್ಣದಾನಕ್ಕೆ ಎತ್ತಿದ ಕೈ ಸ್ವರ್ಗಕ್ಕೇ ಎತ್ತಿದ ಕೈಯಾಗುವುದು. ಆದ್ದರಿಂದ ಸ್ವರ್ಣದಾನವು (ಉಳಿದ ದಾನಗಳಿಗಿಂತ) ಉತ್ತಮವಾದುದು.

ವಿ : ಇದರಲ್ಲಿ ಸುವರ್ಣದಾನದ ಮಹತ್ತ್ವ ನಿರೂಪಿತವಾಗಿದೆ. ಸುವರ್ಣಶಬ್ದಕ್ಕೆ ಸು + ವರ್ಣ, ನಿರ್ದೋಷವಾದ ಶಾಸ್ತ್ರ ಎಂಬುದೇ ಮುಖ್ಯಾರ್ಥ. ಎಂದರೆ ಇದು ಜ್ಞಾನದಾನದ ಮಹತ್ತ್ವವನ್ನು ವರ್ಣಿಸುವ ಶ್ಲೋಕ ಎಂದರ್ಥ.

## ಭಾಗವತೋತ್ತಮರ ಲಕ್ಷಣ

೩೧೩. ಗೃಹೀತ್ವಾsಪೀಂದ್ರಿಯೈರರ್ಥಾನ್ ಯೋ ನ ದ್ವೇಷ್ಟಿ ನ ಹೃಷ್ಯತಿ ।
ವಿಷ್ಣೋರ್ಮಾಯಾಮಿಮಾಂ ಪಶ್ಯನ್ ಸ ವೈ ಭಾಗವತೋತ್ತಮಃ ॥

ಅನು – ತನಗೆ ಯೋಗ್ಯವಾದ ವಿಷಯಗಳನ್ನು ಅನುಭವಿಸಿಯೂ ಭಗವಂತನ ಇಚ್ಛೆಯನ್ನು ಕಾಣುತ್ತಾ, ಹೆಚ್ಚಿನದನ್ನು ಬಯಸದ, ಅದರ ವಿರೋಧಿಗಳನ್ನು ದ್ವೇಷಿಸ-ದವನೇ ಭಾಗವತಶ್ರೇಷ್ಠ.

ವಿ – ೧. ಇದು ಭಾಗವತವಚನ (೧೧/೨/೪೮)

೨. ತನಗೆ ಯೋಗ್ಯವಾದುದನ್ನು ಅನುಭವಿಸಿ, ತನಗೆ ಯೋಗ್ಯವಾದುದನ್ನು ದೊರಕಿಸಿದ ಭಗವಂತನ ಇಚ್ಛೆಯನ್ನು ಕಾಣುತ್ತಾ, ತನ್ನ ಯೋಗ್ಯತೆಗಿಂತ ಅಧಿಕವಾದ ವಿಷಯಗಳನ್ನು ಪಡೆಯಲು ಅದಕ್ಕೆ ಅನುಕೂಲಕರವಾಗಿ ನಡೆಯದೆ ಪ್ರತಿಕೂಲವನ್ನು ವಿರೋಧಿಸದೆ ಇರುವವನು ಭಾಗವತಶ್ರೇಷ್ಠ ಎಂದು ಭಾವ.

೩. ಇದಕ್ಕೆ ಶ್ರೀಮದಾಚಾರ್ಯರು ನೀಡಿರುವ ತಾತ್ಪರ್ಯ ಹೀಗಿದೆ :

ವಿಷ್ಣೋರಿಚ್ಛಾನುಸಾರ್ಯೇತಜ್ಜ್ಞಾತ್ವಾ ಯೋಗ್ಯಂ ನ ಚಾಧಿಕಮ್ ।
ಹೃಷ್ಯತಿ ದ್ವೇಷ್ಟಿ ವಾ ಯಸ್ತು ಸ ವೈ ಭಾಗವತೋತ್ತಮಃ ॥

## ಕರ್ಮಾದಿಗಳಿಂದುಂಟಾಗುವ ಫಲವು ನಶ್ವರ

೩೧೪. ಏವಂ ಲೋಕಂ ಪರಂ ವಿದ್ಯಾತ್ ನಶ್ವರಂ ಕರ್ಮನಿರ್ಮಿತಮ್ ।
ಅತುಲ್ಯಾತಿಶಯಧ್ವಂಸಾದ್ಯಥಾ ಮಂಡಲವರ್ತಿನಾಮ್ ॥

ಅನು – ಹೀಗೆ ಕರ್ಮದಿಂದ ದೊರೆಯುವ ಪರಲೋಕವನ್ನು ನಶ್ವರ ಎಂದು ತಿಳಿಯಬೇಕು. ಹೇಗೆ ಯುದ್ಧರಂಗದಲ್ಲಿರುವವರಿಗೆ ಅಸಮಾನವಾದ ಸೇನಾದಿಗಳು ನಾಶದಿಂದ ಹೇಗೋ ಹಾಗೆ.

ವಿ – ೧. ಭಾಗವತವಚನ (೧೧/೩/೨೧)

೨. ಕರ್ಮದಿಂದ ಎಂದೂ ನಿತ್ಯಲೋಕಪ್ರಾಪ್ತಿಯಾಗದು :

'ಶುಭೇನ ಕರ್ಮಣಾ ಸ್ವರ್ಗಂ ನಿರಯಂ ಚ ವಿಕರ್ಮಣಾ ।
ಮಿಥ್ಯಾಜ್ಞಾನೇನ ಚ ತಮೋ ಜ್ಞಾನೇನೈವ ಪರಂ ಪದಮ್ ॥ (ಅಣುಭಾಷ್ಯ ೩/೧)

೩. ಸ್ವರ್ಗಾದಿ ಲೋಕಗಳ ಸುಖವು ಮತ್ತೊಂದರೊಂದಿಗೆ ತುಲನೆಗೆ ನಿಲುಕದಿದ್ದರೂ ಧ್ವಂಸವಾಗುವುದು ಅಯುಕ್ತವಲ್ಲ. ಯುದ್ಧದಲ್ಲಿನ ಅತುಲ್ಯವಾದ ಸೇನಾದ್ಯತಿಶಯವು ಧ್ವಂಸ-ವಾಗುವಂತೆ ಇದೂ ಸಹ ಎಂದು ಭಾವ.

## ದುರ್ಮತಗಳನ್ನು ನಿಂದಿಸದಿದ್ದರೆ ಪ್ರತ್ಯವಾಯ

೩೧೫. ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ॥

ಅನು – ಯಾರು ಅವಿದ್ಯೆಯನ್ನು ಉಪಾಸಿಸುವರೋ ಅವರು ಅಂಧಂತಮಸ್ಸನ್ನು ಹೊಂದುವರು; ಯಾರು ಕೇವಲ ವಿದ್ಯೆಯಲ್ಲಿ ರತರೋ ಅವರು ಅವಿದ್ಯೋಪಾಸಕನಿಗಿಂತ ಹೆಚ್ಚಿನ ತಮಸ್ಸನ್ನು ಹೊಂದುವರು.

ವಿ – ೧. ಇದು ಈಶಾವಾಸ್ಯೋಪನಿಷದ್ವಾಕ್ಯ (೯).

೨. ವಿದ್ಯೆಯ ಉಪಾಸನೆಯ ಜೊತೆಗೆ ಅವಿದ್ಯೆಯ ಖಂಡನೆಯು ಅತ್ಯಾವಶ್ಯಕ. ಅದಿಲ್ಲದಿದ್ದರೆ ಕೇವಲ ಅವಿದ್ಯೋಪಾಸನೆಗಿಂತಲೂ ಅದು ಮಾರಕ ಎಂದು ಭಾವ.

೩. ಹೆಚ್ಚಿನ ವಿವರಗಳನ್ನು ಈಶಾವಾಸ್ಯೋಪನಿಷದ್ಭಾಷ್ಯ, ಬೃಹದಾರಣ್ಯಕೋಪನಿಷದ್ಭಾಷ್ಯ ಮತ್ತು ಅವುಗಳ ವ್ಯಾಖ್ಯಾನಗಳಲ್ಲಿ ಕಾಣಬಹುದು.

೪. ಸ್ವಪಕ್ಷಸ್ಥಾಪನೆಯಂತೆ ಪರಪಕ್ಷಖಂಡನೆಯೂ ಸಹ ಸಿದ್ಧಾಂತಸ್ಥಾಪನೆಯ ಅವಿಭಾಜ್ಯ ಅಂಗ ಎಂಬುದು ಇಲ್ಲಿಯ ಮುಖ್ಯಭಾವ.

## ಪ್ರಾಣಿಹಿಂಸೆಯು ನಿಷಿದ್ಧ

೩೧೬. ಯದ್ಘ್ರಾಣಭಕ್ಷೋ ವಿಹಿತಃ ಸುರಾಯಾ-
ಸ್ತಥಾ ಪಶೋರಾಲಭನಂ ನ ಹಿಂಸಾ।
ಏವಂ ವ್ಯವಾಯಃ ಪ್ರಜಯಾ ನ ರತ್ಯಾ
ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಮ್॥

ಅನು – ಸುರೆ ಘ್ರಾಣಭಕ್ಷಕ್ಕಷ್ಟೇ ವಿಹಿತ. ಯಜ್ಞದಲ್ಲಿ ಪಶುವಧೆ ವಿಹಿತವೇ ಹೊರತು ಪಶು ಹಿಂಸೆಯಲ್ಲ. ಅದರಂತೆ ಮೈಥುನವು ಸಂತಾನಕ್ಕೇ ಹೊರತು ಭೋಗಕ್ಕಲ್ಲ. ಈ ಸ್ವಧರ್ಮವನ್ನು ಅವಿವೇಕಿಗಳು ತಿಳಿದಿಲ್ಲ.

ವಿ – ೧. ಇದು ಭಾಗವತದ ವಚನ (೧೧/೫/೧೩)

೨. ಯಜ್ಞದಲ್ಲಿ ಪಶುವನ್ನು ಬಲಿಕೊಡುವುದು 'ಅಗ್ನೀಷೋಮೀಯಂ ಪಶುಮಾಲಭೇತ' ಎಂಬುದಾಗಿ ವಿಹಿತವಾಗಿದೆ. ಅದರಂತೆ 'ನ ಹಿಂಸ್ಯಾತ್ ಸರ್ವಾ ಭೂತಾನಿ' ಎಂಬುದಾಗಿ ಯಾವ ಪ್ರಾಣಿಯ ಹಿಂಸೆಯೂ ತರವಲ್ಲ ಎಂಬ ಭೂತದಯೆಯ ಮಾತೂ ಇದೆ. ಅದಕ್ಕೆ ಉತ್ತರ ಶ್ರೀಮದ್ಭಾಗವತದಲ್ಲಿ ಹೀಗೆ ಬಂದಿದೆ ಎಂಬುದು ವಿಶೇಷ. ಅದರಂತೆ ಪ್ರಾಣಿಹಿಂಸೆಯನ್ನು ಆಹಾರ

ಮೊದಲಾದ ಕಾರಣಕ್ಕೋಸ್ಕರ ಮಾಡುವುದು ನಿಷಿದ್ಧ. ಆದರೆ ಯಜ್ಞದಲ್ಲಿ ವಿಹಿತರೀತಿಯಲ್ಲಿ ಬಲಿ ಕೊಡುವ ಕಾರ್ಯಕ್ಕೆ ಮಾತ್ರವಿಹಿತ.

೩. ಶ್ರೀಮದಾಚಾರ್ಯರು ಶ್ರೀಮದ್ಭಾಗವತತಾತ್ಪರ್ಯನಿರ್ಣಯದಲ್ಲಿ ಯಜ್ಞದಲ್ಲಿ ಮಾತ್ರ ಪಶುವಧೆಗೆ ಕಾರಣವನ್ನು ನೀಡಿರುವರು :

ಯಜ್ಞೇಷ್ವಾಲಭನಂ ಪ್ರೋಕ್ತಂ ದೇವತೋದ್ದೇಶತಃ ಪಶೋಃ।
ಹಿಂಸಾ ನಾಮ ತದನ್ಯತ್ರ ತಸ್ಮಾತ್ ತಾಂ ನಾಚರೇದ್ಬುಧಃ ॥
ಯತೋ ಯಜ್ಞೇ ಮೃತಾ ಊರ್ಧ್ವಂ ಯಾಂತಿ ದೇವೇ ಚ ಪೈತೃಕೇ।
ಅತೋ ಲಾಭಾದಾಲಭನಂ ಸ್ವರ್ಗಸ್ಯ ನ ತು ಮಾರಣಮ್ ॥

ಯಜ್ಞದಲ್ಲಿ ಬಲಿಕೊಡುವುದು ಎಂದರೆ ದೇವತಾಪ್ರೀತಿಗೋಸ್ಕರವಾಗಿ ಅದನ್ನು ಸಮರ್ಪಿಸುವುದು ಎಂದರ್ಥ. ಆದ್ದರಿಂದ ಅದು ಹಿಂಸೆ ಎಂದೆನಿಸದು. ಆ ರೀತಿ ದೇವಕಾರ್ಯ ಪಿತೃಕಾರ್ಯಗಳಲ್ಲಿ ಬಲಿಕೊಡಲ್ಪಡುವ ಪಶುಗಳು ಬಳಿಕ ಊರ್ಧ್ವಲೋಕಗಳಿಗೆ ತೆರಳುವುದರಿಂದ ಅವಕ್ಕೆ ಲಾಭವೇ ಹೊರತು ನಷ್ಟವಿಲ್ಲ. ಆದ್ದರಿಂದ ಅದನ್ನು ಸ್ವರ್ಗಪ್ರಾಪ್ತಿ ಎನ್ನುವರೇ ಹೊರತು ವಧೆ ಎನ್ನುವುದಿಲ್ಲ.

೪. ಶ್ರೀಮದಾಚಾರ್ಯರ ವಿವರಣೆ ಯಜ್ಞದಲ್ಲಿ ಪಶುವಧೆಯ ಹಿನ್ನೆಲೆಯನ್ನು ವಿವೇಚಿಸುವ ಅಪೂರ್ವ ಭಾಗ. ಇದರಿಂದ ಅಶ್ವಮೇಧಾದಿ ಯಜ್ಞಗಳಲ್ಲಿ ಅಶ್ವಾದಿಗಳನ್ನು ಬಲಿಕೊಡುವ ಪ್ರಕ್ರಿಯೆಗೆ ಕಾರಣವನ್ನು ತಿಳಿದಂತಾಗುವುದು. ಯಜ್ಞಗಳಲ್ಲಿ ಹಾಗೆ ಬಲಿಕೊಡುವಾಗ ಆ ಪಶುಗಳ ಸಮ್ಮತಿಯನ್ನು ಪಡೆದೇ ಬಲಿಕೊಡುವುದು ಮತ್ತೊಂದು ವಿಶೇಷ. ಇದರಿಂದ ವಧೆಯ ಪಾಪದ ಬದಲು ಯಜ್ಞದ ಆಚರಣೆಯ ಪುಣ್ಯವೇ ಲಭಿಸುವುದು ಎಂದಾಗುವುದು. ಇದು ಒಂದು ರೀತಿಯಲ್ಲಿ ಕೊಲೆ ಮತ್ತು ಶಸ್ತ್ರಚಿಕಿತ್ಸೆಗಿರುವ ವ್ಯತ್ಯಾಸದಂತೆ ಎಂದು ತಿಳಿಯಬೇಕು. ಕೊಲೆಯ ಉದ್ದೇಶ ಸಂಹಾರವಾದರೆ, ಶಸ್ತ್ರಚಿಕಿತ್ಸೆಯ ಉದ್ದೇಶ ರೋಗಪರಿಹಾರವಲ್ಲವೇ!

### ಅಶಕ್ತರಿಗೂ ಶ್ರವಣವು ಕಡ್ಡಾಯ

೩.೧೭. ಸದಾಽಶಕ್ತಃ ಸದಾ ಶ್ರೋತುಂ ಕಥಾಂ ಪೌರಾಣಿಕೀಂ ನರಃ।
ಮುಹೂರ್ತಂ ವಾಽಪಿ ಶೃಣುಯಾನ್ನಿಯತಾತ್ಮಾ ದಿನೇದಿನೇ ॥

ಅನು – ಪುರಾಣಕಥೆಗಳನ್ನು ಸದಾ ಶ್ರವಣ ಮಾಡಲು ಅಶಕ್ತನಾದವನು ಪ್ರತಿ-ದಿನದಲ್ಲೂ ಒಂದು ಮುಹೂರ್ತಕಾಲವಾದರೂ ಏಕಾಗ್ರಚಿತ್ತದಿಂದ ಶ್ರವಣ ಮಾಡಲೇ ಬೇಕು.

ವಿ – ೧. ಸ್ಕಂದಪುರಾಣಬ್ರಹ್ಮೋತ್ತರಕಾಂಡ ಜಯದೇವನಾರದಸಂವಾದದ ೩೨ನೇ ಅಧ್ಯಾಯದ ವಚನ.

೨. 'ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್' (ಶ್ರವಣಾದಿಗಳಿಲ್ಲದೇ ಒಂದು ಕ್ಷಣವೂ ಇರಕೂಡದು) ಎಂಬುದು ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರ ಆದೇಶ. ಆದರೆ ಅಂತಹ ಶ್ರವಣವನ್ನು ಸದಾ ಮಾಡಲು ರೋಗಾದಿ ಕಾರಣಗಳಿಂದ ಅಶಕ್ತನಾದವನು ಒಂದು ಮುಹೂರ್ತಕಾಲವಾದರೂ ಮಾಡಲೇ ಬೇಕು ಎಂಬ ವಿಶೇಷಾಂಶ ಇಲ್ಲಿದೆ.

೩. ಇಲ್ಲಿ ಮುಹೂರ್ತ ಎಂದರೆ ಎರಡು ಘಳಿಗೆ. ೪೮ ನಿಮಿಷಗಳು ಎಂದರ್ಥ. ಮತ್ತೊಂದು ಅರ್ಥದಲ್ಲಿ ಸ್ವಲ್ಪಕಾಲವಾದರೂ ಮಾಡಲೇಬೇಕು ಎಂದು ತಾತ್ಪರ್ಯ.

## ಪುಣ್ಯದಿನಗಳಲ್ಲಿ ವಿಶೇಷ ಶ್ರವಣ

೩೧೮. ಅತಃ ಪ್ರತಿದಿನಂ ಶ್ರೋತುಮಶಕ್ತೋ ಯದಿ ಮಾನವಃ ।
ಪುಣ್ಯಮಾಸೇಷು ವಾ ಪುಣ್ಯದಿನೇ ಪುಣ್ಯತಿಥಿಷ್ವಪಿ ॥

ಅನು – ಆದರಂತೆ ಪ್ರತಿದಿನದಲ್ಲೂ ಶ್ರವಣ ಮಾಡಲಾಗದ ಮನುಷ್ಯನು ಪುಣ್ಯಮಾಸಗಳಲ್ಲಾಗಲೀ ಪುಣ್ಯದಿನಗಳಲ್ಲಾಗಲೀ ಪುಣ್ಯತಿಥಿಗಳಲ್ಲಾಗಲೀ ತಪ್ಪದೇ ಶ್ರವಣ ಮಾಡಲೇ ಬೇಕು.

ವಿ – ೧. ಪ್ರತಿದಿನವೂ ಮುಹೂರ್ತಕಾಲದಷ್ಟೂ ಸಹ ಶ್ರವಣ ಮಾಡಲಾಗದವನು ವಿಶೇಷ ಪ್ರಸಂಗಗಳಲ್ಲಾದರೂ ಶ್ರವಣ ಮಾಡಲೇಬೇಕು ಎಂದು ಭಾವ.

೨. ಇಲ್ಲಿ ಪುಣ್ಯಮಾಸಗಳು ಎಂದರೆ ಮಾರ್ಗಶೀರ್ಷಾದಿ ಪುಣ್ಯಮಾಸಗಳು ಎಂದೂ, ಪುಣ್ಯತಿಥಿಗಳು ಎಂದರೆ ಏಕಾದಶ್ಯಾದಿ ಪುಣ್ಯತಿಥಿಗಳು ಎಂದೂ, ಪುಣ್ಯದಿನಗಳು ಎಂದರೆ ಗುರುಗಳ ಆರಾಧನೆ ಮೊದಲಾದ ದಿನಗಳೆಂದು ಎಂಬ ಅರ್ಥವಿಶೇಷ ವ್ಯಾಖ್ಯಾನದಲ್ಲಿದೆ.

೩. 'ಮಾಸಾನಾಂ ಮಾರ್ಗಶೀರ್ಷೋऽಹಂ' ಎಂಬ ಭಗವದ್ಗೀತಾವಚನದಿಂದ ಇಲ್ಲಿ ಪುಣ್ಯಮಾಸ ಎಂದರೆ ಮಾರ್ಗಶೀರ್ಷಾದಿ ಎಂಬ ಅರ್ಥ ಉಚಿತವಾಗುತ್ತದೆ.

## ಪುರಾಣಶ್ರವಣದ ಫಲ

೩೧೯. ಯಃ ಶೃಣೋತಿ ಕಥಾಂ ತಸ್ಯಾಂ ಪುರಾಣೈಃ ಸಮುದೀರಿತಾಮ್ ।
ಸ ನಿಸ್ತರತಿ ಸಂಸಾರಂ ದಗ್ಧ್ವಾ ಕರ್ಮಮಹಾಟವೀಮ್ ॥

ಅನು – ಪುರಾಣಗಳಲ್ಲಿ ಬಂದಿರುವ ಕಥೆಗಳನ್ನು ಯಾವನು ಶ್ರವಣ ಮಾಡುವನೋ ಅವನು ಕರ್ಮವೆಂಬ ಗೊಂಡಾರಣ್ಯವನ್ನು ಸುಟ್ಟು ಸಂಸಾರವನ್ನು ದಾಟಿಬಿಡುವನು.

ವಿ – ೧. ಪುರಾಣಶ್ರವಣದಿಂದ ಕರ್ಮದ ಬಂಧನ ರೂಪವಾದ ಸಂಸಾರವು ನಾಶವಾಗಿ ಜ್ಞಾನದ್ವಾರಾ ಸದ್ಗತಿ ಲಭಿಸುವುದು ಎಂದರ್ಥ.

೨. 'ಸಮುದೀರಿತಾಂ' ಎಂಬಲ್ಲಿ 'ಸಂ' ಎಂಬುದಕ್ಕೆ ವಿಷ್ಣು (ಅಕಯಪ್ರವಿಸಂಭೂಮಸಖಿಹಾ ವಿಷ್ಣುವಾಚಕಾಃ – ಬೃಹದ್ಭಾಷ್ಯ) ಎಂಬ ಅರ್ಥವಿರುವುದರಿಂದ ಇಲ್ಲಿ ಕಥಾಂ ಎಂಬುದಕ್ಕೆ ವಿಷ್ಣುಕಥಾಂ ಎಂದೇ ಅರ್ಥ ಎಂದು ವ್ಯಾಖ್ಯಾನದಲ್ಲಿದೆ.

## ಕಲಿಯುಗದಲ್ಲಿ ಪುರಾಣಶ್ರವಣದ ಪ್ರಾಶಸ್ತ್ಯ

೩೨೦. ಕಲೌ ಯುಗೇ ವಿಶೇಷೇಣ ಪುರಾಣಶ್ರವಣಾದೃತೇ ।
ನಾಸ್ತಿ ಧರ್ಮಃ ಪರಃ ಪುಣ್ಯಂ ನಾಸ್ತಿ ಮುಕ್ತಿಕರಃ ಪಥಃ ॥

ಅನು – ವಿಶೇಷವಾಗಿ ಕಲಿಯುಗದಲ್ಲಿ ಪುರಾಣಶ್ರವಣದ ಹೊರತು ಮುಕ್ತಿಗೆ ಸಾಧನವಾಗುವಂತಹ ಬೇರೊಂದು ಶ್ರೇಷ್ಠವಾದ ಪುಣ್ಯಕರವಾದ ಧರ್ಮದ ಹಾದಿಯಿಲ್ಲ.

ವಿ – ಇಲ್ಲಿ 'ಪರಃ' ಎಂಬುದಕ್ಕೆ ಪರಲೋಕಸುಖಸಂಪಾದಕ ಎಂದೂ, 'ಪುಣ್ಯಂ' ಎಂಬುದಕ್ಕೆ ಭೂಲೋಕಸುಖಸಂಪಾದಕಂ ಎಂದೂ ವ್ಯಾಖ್ಯಾನದಲ್ಲಿ ಅರ್ಥ ತಿಳಿಸಲಾಗಿದೆ.

## ನಾಮಸಂಕೀರ್ತನದ ಮಹತ್ವ

೩೨೧. ಪುರಾಣಶ್ರವಣಾದೇಶ್ಚ ನಾಮಸಂಕೀರ್ತನಂ ಪರಮ್ ।
ಶ್ರುತಮೇವ ಮನುಷ್ಯಾಣಾಂ ಕಲ್ಪದ್ರುಮಮಹಾಫಲಮ್ ॥

ಅನು – ಪುರಾಣಶ್ರವಣಾದಿಗಳಿಗಿಂತಲೂ ಇನ್ನೊಬ್ಬರಿಂದ ಕಿವಿಗೆ ಬೀಳುವ ಶ್ರೀಹರಿಯ ನಾಮಸಂಕೀರ್ತನೆಯು ಮನುಷ್ಯರಿಗೆ ಕಲ್ಪವೃಕ್ಷದಂತೆ ಮಹಾಫಲವನ್ನು ನೀಡುವಂತಹುದು.

## ಹರಿಕಥೆಯು ಅಮೃತಕ್ಕಿಂತ ಮಿಗಿಲು

೩೨೨. ಪಿಬನ್ನೇವಾಮೃತಂ ಯತ್ನಾದೇಕಃ ಸ್ಯಾದಜರಾಮರಃ ।
ವಿಷ್ಣೋಃ ಕಥಾಮೃತಂ ಕುರ್ಯಾತ್ ಕುಲಮೇವಾಜರಾಮರಮ್ ॥

ಅನು – ಪ್ರಯತ್ನ ಪಟ್ಟು ಅಮೃತ ಕುಡಿದವನು ತಾನೊಬ್ಬನೇ ಮುಪ್ಪು ಸಾವುಗಳನ್ನು ಗೆಲ್ಲುವನು. ಆದರೆ ವಿಷ್ಣುಕಥಾಮೃತವನ್ನು ಶ್ರವಣಮಾಡಿದಾಗ ಇಡೀ ಕುಲವೇ ಅಜರಾಮರವಾಗುವುದು.

ವಿ – ಅಮೃತವನ್ನು ಪಾನ ಮಾಡಿದವನಷ್ಟೇ ಅದರ ಪ್ರಯೋಜನ ಪಡೆದರೆ, ಹರಿಕಥಾಪಾನ ಮಾಡಿದವನು ಇಡೀ ಕುಲವನ್ನೇ ಉದ್ಧರಿಸುವನು. ಆದ್ದರಿಂದ ಅಮೃತಪಾನಕ್ಕಿಂತ ಹರಿಕಥಾಶ್ರವಣ ಅತ್ಯಂತ ಮಿಗಿಲಾದುದು ಎಂದು ಭಾವ.

## ಪೌರಾಣಿಕನ್ನು ಗೌರವಿಸಬೇಕು

೩೨೩. ಬಾಲೋ ಯುವಾಽಥ ವೃದ್ಧೋ ವಾ ದರಿದ್ರೋ ದುರ್ಬಲೋಽಪಿ ವಾ।
ಪುರಾಣಜ್ಞಃ ಸದಾ ವಂದ್ಯಃ ಪೂಜ್ಯಶ್ಚ ಸುಕೃತಾರ್ಥಿಭಿಃ ॥

ಅನು – ಚಿಕ್ಕವನಿರಲಿ, ತರುಣನಿರಲಿ, ವೃದ್ಧನಾಗಿರಲಿ, ಬಡವನಾಗಿರಲಿ, ದುರ್ಬಲನಾಗಿರಲಿ, ಪುರಾಣ ಹೇಳುವವನನ್ನು ಸುಕೃತ ಬಯಸುವವರು ಸದಾ ಕೊಂಡಾಡಬೇಕು ಗೌರವಿಸಬೇಕು.

ವಿ – ೧. ಪುರಾಣ ಹೇಳುವವರನ್ನು ಅವರ ವಯಸ್ಸು ಅಂತಸ್ತು ಮೊದಲಾದವುಗಳನ್ನು ಗಮನಿಸದೆ ಆದರದಿಂದ ಕಾಣಬೇಕು ಎಂಬ ವಿಶೇಷಾಂಶ ಇಲ್ಲಿ ನಿರೂಪಿತವಾಗಿದೆ.

೨. ಇಲ್ಲಿ 'ದುರ್ಬಲಃ' ಎಂಬುದಕ್ಕೆ ಕರ್ಮಾನುಷ್ಠಾನ ಮಾಡಲು ಅಗತ್ಯವಾದ ಶಕ್ತಿ ಸಾಲದವನು ಎಂಬ ಅರ್ಥ ವ್ಯಾಖ್ಯಾನದಲ್ಲಿದೆ.

೩. ಇಲ್ಲಿ ವೃದ್ಧಪುರಾಣಿಕರನ್ನು ಹೇಗೋ ಹಾಗೆ ಚಿಕ್ಕವಯಸ್ಸಿನ ಪುರಾಣಿಕರನ್ನೂ ಗೌರವಿಸಬೇಕು ಎಂಬ ಅರ್ಥವಿಶೇಷವನ್ನು 'ವಾ'ಶಬ್ದಕ್ಕೆ ಉಪಮಾರ್ಥಕ ವಿವರಣೆಯನ್ನು ನೀಡಿ ವ್ಯಾಖ್ಯಾನದಲ್ಲಿ ತಿಳಿಸಿರುವರು.

## ಪೌರಾಣಿಕನ ಹಿರಿಮೆ

೩೨೪. ಗುರವಃ ಸಂತಿ ಲೋಕಸ್ಯ ತತ್ತ್ವತೋ ಗುಣತಶ್ಚ ಯೇ।
ತೇಷಾಮಪಿ ಚ ಸರ್ವೇಷಾಂ ಪುರಾಣಜ್ಞಃ ಪರೋ ಗುರುಃ ॥

ಅನು – ತತ್ವಜ್ಞಾನನಿಮಿತ್ತದಿಂದಾಗಿ, ಹರಿಭಕ್ತಿ ಮೊದಲಾದ ಗುಣಗಳಿಂದಾಗಿ ಲೋಕಕ್ಕೆ ಗುರುಗಳೆನ್ನಿಸುವವರು ಇರುವರು. ಆದರೆ ಅವರೆಲ್ಲರಿಗಿಂತಲೂ ಪುರಾಣ ಬಲ್ಲವನು ಹೆಚ್ಚಿನ ಗುರು ಎನಿಸುವನು.

ವಿ – ೧. ಪುರಾಣಬಲ್ಲವನು ಶ್ರೇಷ್ಠ ಶಾಸ್ತ್ರಜ್ಞನಾದ ಗುರು ಎಂಬ ಅರ್ಥದಲ್ಲಿ ಇಲ್ಲಿ ನಿರೂಪಿಸಿರುವರು.

೨. 'ಯದಿ ವಿದ್ಯಾತ್ ಚತುರೋ ವೇದಾನ್ ಸಾಂಗೋಪನಿಷದಾನ್ ದ್ವಿಜಃ।
ನ ಚೇತ್ಪುರಾಣಂ ಸಂವಿದ್ಯಾತ್ ನೈವ ಸ ಸ್ಯಾದ್ವಿಚಕ್ಷಣಃ ॥'

– ಎಂಬ ಮಾತಿನ ಮೂಲಕ ಶ್ರೀಮದಾಚಾರ್ಯರು ಪುರಾಣಪರಿಜ್ಞಾನದ ಹಿರಿಮೆ ಅತ್ಯಂತ ವಿಶಿಷ್ಟವಾದುದು ಎಂದು ನಿರೂಪಿಸಿರುವುದನ್ನು ಇಲ್ಲಿ ಗಮನಿಸಬೇಕು. ಎಂದರೆ, ಸಾಮಾನ್ಯರು ತಿಳಿದಿರುವಂತೆ ಪುರಾಣ ಪ್ರವಚನ ಶಾಸ್ತ್ರಜ್ಞಾನಕ್ಕಿಂತ ಕಡಿಮೆಯೆಂದಲ್ಲ. ಪುರಾಣ ಅತ್ಯಂತ ಗಹನ

ಶಾಸ್ತ್ರವಾದ್ದರಿಂದ ಶ್ರೇಷ್ಠ ಶಾಸ್ತ್ರಜ್ಞನು ಮಾತ್ರವೇ ಪುರಾಣಗಳನ್ನು ಅರಿಯಬಲ್ಲವನಾದ್ದರಿಂದ ಅವನ ಸ್ಥಾನ ಇತರ ಜ್ಞಾನಿಗಳಿಗಿಂತ ಮಿಗಿಲು ಎಂಬುದು ಇದರ ಭಾವ.

೩. 'ಭಾಷಾತ್ರಯಂ ನ ಜಾನಾತಿ ರೀತೀನಾಂ ಶತಮೇವ ಚ ।
ಪುರಾಣಾರ್ಥಂ ವದನ್ ಯಾತಿ ನರಕಂ ನಾತ್ರ ಸಂಶಯಃ ॥

ಎಂಬುದಾಗಿ ತತ್ವಪ್ರದೀಪದಲ್ಲಿ ಉದಾಹೃತವಾದ ಬ್ರಹ್ಮಪುರಾಣದ ವಾಕ್ಯ ಪುರಾಣ ಜ್ಞಾನದ ಹಿರಿಮೆಯನ್ನು ವಿವರಿಸಿದೆ.

೪. ಪುರಾಣ ಪರಿಜ್ಞಾನದ ಹಿರಿಮೆಯನ್ನು ವಿವರಿಸುವ ಮೂಲಕ ಈ ಶ್ಲೋಕ ಪುರಾಣ-ಪ್ರವಚನದ ಮಹಿಮೆಯನ್ನು ಸಾದರಪಡಿಸಿರುವ ರೀತಿ ಅನನ್ಯವಾದುದು.

## ಪೌರಾಣಿಕನ ಲಕ್ಷಣ

೩.೨೫. ಪುರಾಣಜ್ಞಃ ಶುಚಿರ್ದಾಂತಃ ಶಾಂತೋ ವಿಜಿತಮತ್ಸರಃ ।
ಸಾಧುಃ ಕಾರುಣ್ಯವಾನ್ ವಾಗ್ಮೀ ವದೇತ್ ಪುಣ್ಯಕಥಾಂ ಸುಧೀಃ ॥

ಅನು – ಶುಚಿಯಾದವನು, ಇಂದ್ರಿಯ ನಿಗ್ರಹವುಳ್ಳವನು, ಭಗವನ್ನಿಷ್ಠೆಯಿಂದ ಕೂಡಿದವನು, ಅಸೂಯೆ ತೊರೆದವನು, ಸಜ್ಜನನು, ಕರುಣಾಳುವು, ವಾಗ್ಮಿಯು, ಒಳ್ಳೆಯ ಬುದ್ಧಿವಂತನು ಆದವನೇ ಪುರಾಣಜ್ಞ. ಅಂತಹವನು ಪುಣ್ಯಕಥೆಯನ್ನು ಹೇಳಬೇಕು.

ವಿ : ಪುರಾಣ ಹೇಳುವವರ ಅರ್ಹತೆಯನ್ನು ಇಲ್ಲಿ ವಿವೇಚಿಸಲಾಗಿದೆ. ಶುಚಿತ್ವ, ಜಿತೇಂದ್ರಿಯತ್ವ, ಕಾಮಕ್ರೋಧಾದಿಗಳ ಪರಿತ್ಯಾಗ, ಕಾರುಣ್ಯ, ವಾಗ್ಮಿತೆ ಇವೆಲ್ಲಾ ಪುರಾಣಿಕನಿಗೆ ಅತ್ಯಗತ್ಯ ಎಂದು ಭಾವ.

## ಪೌರಾಣಿಕನ ವಿಶೇಷಕರ್ತವ್ಯ

೩.೨೬. ವ್ಯಾಸಾಸನಂ ಸಮಾರೂಢೋ ಯದಾ ಪೌರಾಣಿಕೋ ದ್ವಿಜಃ ।
ಆಸಮಾಪ್ತೇಃ ಪ್ರಸಂಗಸ್ಯ ನಮಸ್ಕುರ್ಯಾನ್ನ ಕಸ್ಯಚಿತ್ ॥

ಅನು – ವ್ಯಾಸಪೀಠದಲ್ಲಿ ಮಂಡಿಸಿದ ಪುರಾಣಿಕನಾದ ದ್ವಿಜನು ಆ ಪುರಾಣ ಮುಗಿಸುವ ಮುನ್ನ ಬೇರಾರಿಗೂ ಪೀಠದಿಂದೆದ್ದು ನಮಸ್ಕರಿಸಕೂಡದು.

ವಿ – ೧. ಪುರಾಣಿಕನಲ್ಲಿ ಪ್ರವಚನಸಮಯದಲ್ಲಿ ವಿಶೇಷವಾಗಿ ಶ್ರೀವೇದವ್ಯಾಸರ ಸನ್ನಿ-ಧಾನವಿರುವುದರಿಂದ ಅವನು ಆ ಸಮಯದಲ್ಲಿ ಬೇರಾರಿಗೂ ನಮಸ್ಕರಿಸಕೂಡದು ಎಂದರ್ಥ.

೨. ಇದು ವಿವಾಹಮಂಟಪದಲ್ಲಿ ಕಂಕಣ ಧರಿಸಿದ ವಧೂವರರಲ್ಲಿ ಲಕ್ಷ್ಮೀನಾರಾಯಣರ ಸನ್ನಿಧಾನವಿರುವುದರಿಂದ ಕಂಕಣ ಬಿಚ್ಚುವ ಮುನ್ನ ಅವರು ಇತರರಿಗೆ ನಮಸ್ಕರಿಸುವಂತಿಲ್ಲ ಎಂಬ ಪ್ರಸಂಗದಂತೆ ಎಂದು ತಿಳಿಯಬೇಕು :

ವ್ಯಾಸಾಸನಂ = ವೇದವ್ಯಾಸಸನ್ನಿಧಾನಸಂಪಾದಕಾಸನಂ ... (ವ್ಯಾಖ್ಯಾನ)

೩. ಇದಕ್ಕೆ ಅಪವಾದವಾಗಿ ತನಗೆ ವಿದ್ಯೋಪದೇಶ ಮಾಡಿದ ಗುರುಗಳು, ಜನ್ಮವಿತ್ತ ತಂದೆ ತಾಯಿಗಳು, ಯತಿಗಳು ಪೀಠಾಧೀಶರು ಮೊದಲಾದ ಸ್ವೋತ್ತಮರು ಬಂದಾಗ ಮಾತ್ರ ಪೌರಾಣಿಕನು ಅವರಿಗೆ ನಮಸ್ಕರಿಸಿ ಪುರಾಣ ಮುಂದುವರಿಸಬೇಕು ಎಂಬ ವಿಶೇಷಾಂಶವು ವ್ಯಾಖ್ಯಾನದಲ್ಲಿದೆ: ಕಸ್ಯಚಿನ್ನಮೋ ನ ಕುರ್ಯಾತ್ ಇತ್ಯನೇನ ಸಾಧಾರಣಬ್ರಾಹ್ಮಣಸ್ಯ ನಮಸ್ಕಾರಸ್ಯೈವ ನಿಷೇಧಃ ಕೃತಃ, ನ ತು ಗುರ್ವಾದಿನಮಸ್ಕಾರಸ್ಯ ಇತ್ಯಭ್ಯುಪಗಮಾತ್ ।(ವ್ಯಾ)

## ಪುರಾಣಶ್ರವಣಕ್ಕೆ ಅನರ್ಹರು

೩.೨೭. ಯೇ ಧೂರ್ತಾಃ ಯೇ ಚ ದುರ್ವೃತ್ತಾಃ ಯೇ ಚಾನ್ಯೇ ವಿಜಿಗೀಷವಃ ।
ತೇಷಾಂ ಕುಟಿಲವರ್ತಿನಾಮಗ್ರೇ ನೈವ ವದೇತ್ ಕಥಾಮ್ ॥

ಅನು – ಯಾರು ಕಪಟಿಗಳೋ, ದುರಾಚಾರಿಗಳೋ, ಮತ್ತೊಬ್ಬರ ಮೇಲೆ ಸ್ಪರ್ಧೆಗೆಂದು ಬಂದವರೋ, ಅಂತಹ ವಕ್ರಜನಗಳ ಎದುರಿನಲ್ಲಿ ಪುರಾಣಕಥೆಯನ್ನು ಸರ್ವಥಾ ಹೇಳಕೂಡದು.

ವಿ – ೧. ಪುರಾಣಶ್ರವಣ ಮಾಡಿಸುವವನಂತೆ ಶ್ರವಣ ಮಾಡುವವರೂ ಸಹ ಯೋಗ್ಯರೇ ಆಗಿರಬೇಕು ಎಂದರ್ಥ.

೨. ಇಲ್ಲಿ ದುರ್ವೃತ್ತರು ಎಂಬುದಕ್ಕೆ 'ವೃಂತಾಕಭಕ್ಷಣ' (ಬದನೆಕಾಯಿ ತಿನ್ನುವುದು) ಮೊದಲಾದವನ್ನು ಮಾಡುವ ದುರಾಚಾರಿಗಳು ಎಂಬರ್ಥ ವ್ಯಾಖ್ಯಾನದಲ್ಲಿದೆ.

## ಪುರಾಣಕ್ಕೆ ನಿಷಿದ್ಧಸ್ಥಳಗಳು

೩.೨೮. ನ ದುರ್ಜನಸಮಾಕೀರ್ಣೇ ನ ಶೂದ್ರಶ್ವಾಪದಾವೃತೇ ।
ದೇಶೇ ನ ದ್ಯೂತಸದನೇ ವದೇತ್ ಪುಣ್ಯಕಥಾಂ ಸುಧೀಃ ॥

ಅನು – ದುರ್ಜನರಿಂದ ತುಂಬಿದ ಸ್ಥಳದಲ್ಲಾಗಲೀ, ಶೂದ್ರರು ನಾಯಿಗಳು ಮೊದಲಾದವರಿಂದ ತುಂಬಿದ ಸ್ಥಳದಲ್ಲಾಗಲೀ, ಜೂಜಿನ ಸ್ಥಾನದಲ್ಲಾಗಲೀ ಜ್ಞಾನಿಯಾದವನು ಪುರಾಣಕಥೆಯನ್ನು ಹೇಳಕೂಡದು.

ವಿ : ೧. ಇದು 'ಅನಾವಿಷ್ಕುರ್ವನ್ನನ್ವಯಾತ್' ಎಂಬ ಬ್ರಹ್ಮಸೂತ್ರದ ವಿವರಣೆಯಂತಿರುವ ಶ್ಲೋಕ.

೨. ಅನರ್ಹರಿಗೆ ಪುರಾಣವನ್ನು ಶ್ರವಣ ಮಾಡಿಸಕೂಡದು ಎಂಬುದು ಇಲ್ಲಿಯ ಭಾವ.

## ಪುರಾಣಶ್ರವಣದ ವಿಶೇಷ ನಿಯಮಗಳು

೩೨೯. **ಅಭಕ್ತಾ ಯೇ ಕಥಾಂ ಪುಣ್ಯಾಂ ಶೃಣ್ವಂತಿ ಮನುಜಾಧಮಾಃ।**
**ತೇಷಾಂ ಪುಣ್ಯಫಲಂ ನಾಸ್ತಿ ದುಃಖಂ ಸ್ಯಾಜ್ಜನ್ಮಜನ್ಮನಿ॥**

ಅನು – ಭಕ್ತಿಯಿಲ್ಲದೆ ಪುರಾಣಶ್ರವಣ ಮಾಡುವ ನೀಚಮನುಷ್ಯರಿಗೆ ಆದರ ಪುಣ್ಯ ಎಂದೂ ಲಭಿಸದು. ಅವರಿಗೆ ಜನ್ಮ ಜನ್ಮಗಳಲ್ಲೂ ದುಃಖವೇ ಒದಗುವುದು.

ವಿ : ೧. ಭಕ್ತಿಯಿಲ್ಲದೆ ಕೇವಲ ಪ್ರತಿಷ್ಠೆಗೆಂದು ಮಾಡುವ ಪುರಾಣಶ್ರವಣಾದಿಗಳು ತಾರಕವಲ್ಲ ಎಂದರ್ಥ.

೨. ಇದು "ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ" ಎಂಬಲ್ಲಿನ "ಜನ್ಮಜನ್ಮನಿ" ಎಂಬ ಪ್ರಯೋಗವು ಸಾಧು ಎಂಬುದಕ್ಕೆ ಪುರಾವೆಯೂ ಆಗಿದೆ.

## ಪೌರಾಣಿಕನನ್ನು ಕಾಣಿಕೆ ನೀಡಿ ಗೌರವಿಸಲೇಬೇಕು

೩೩೦. **ಪುರಾಣಂ ಯೇ ತ್ವಸಂಪೂಜ್ಯ ತಾಂಬೂಲಾದ್ಯೈರುಪಾಯನೈಃ।**
**ಶೃಣ್ವಂತಿ ಚ ಕಥಾಂ ಭಕ್ತ್ಯಾ ದರಿದ್ರಾ ಸ್ಯುರ್ನ ಪಾಪಿನಃ॥**

ಅನು – ತಾಂಬೂಲ ಮೊದಲಾದ ಕಾಣಿಕೆಗಳಿಂದ ಪೌರಾಣಿಕನನ್ನು ಆದರದಿಂದ ಪೂಜಿಸದೆ ಪುರಾಣಶ್ರವಣ ಮಾಡುವವರು ದರಿದ್ರರೂ ಪಾಪಿಗಳೂ ಆಗುವರು.

ವಿ – ೧. 'ಅಸಂಪೂಜ್ಯ' ಎಂಬ ಪದದಿಂದ ಶಕ್ತರಾದವರು ಪುರಾಣಿಕನನ್ನು ಗೌರವಿಸದೆ ಕೇಳಿದರೆ ಮೇಲೆ ಹೇಳಿದ ಅನರ್ಥ ಎಂದು ತಿಳಿಯಬೇಕು.

೨. ಕಾಣಿಕೆ ಸಲ್ಲಿಸಲು ಶಕ್ತಿಯಿಲ್ಲದವರು ಕೇವಲ ಭಕ್ತಿಯಿಂದ ಕೇಳಿದರೆ ಅವರಿಗೆ ಪುಣ್ಯ-ಲಭಿಸುವುದು. ಪಾಪ ಒದಗದು ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ.

## ಪುರಾಣದ ಮಧ್ಯೆ ಎದ್ದು ಹೋಗುವುದು ತರವಲ್ಲ

೩೩೧. **ಕಥಾಯಾಂ ಕೀರ್ತ್ಯಮಾನಾಯಾಂ ಯೇ ಗಚ್ಛಂತ್ಯನ್ಯತೋ ನರಾಃ।**
**ಭೋಗಾಂತರೇ ಪ್ರಣಶ್ಯಂತಿ ತೇಷಾಂ ದಾರಾಶ್ಚ ಸಂಪದಃ॥**

ಅನು – ಪುರಾಣಪ್ರವಚನ ನಡೆದಿದ್ದಾಗ ಅಲ್ಲಿಂದ ಬೇರೆಡೆಗೆ ಎದ್ದು ಹೋಗುವ ಮನುಷ್ಯರಿಗೆ ಅವರ ಪತ್ನಿಯರು ಸಂಪತ್ತು ಮೊದಲಾದವುಗಳು ಕೈಗೆಟುಕದೇ ಹೋಗುವವು.

ವಿ – ೧. ಪುರಾಣಶ್ರವಣವನ್ನು ಮಧ್ಯದಲ್ಲಿಯೇ ತೊರೆದು ಹೋಗುವವರಿಗೆ ಪತ್ನಿನಾಶ, ಸಂಪನ್ನಾಶ ಮೊದಲಾದ ಅನರ್ಥ ಒದಗುವವು ಎಂದರ್ಥ.

೨. ಅತ್ಯಂತ ಅನಿವಾರ್ಯವಾದ ಕಾರಣಗಳಿಂದ ಮಧ್ಯೆ ಎದ್ದು ಹೋಗುವವರಿಗೆ ಇದು ಅನ್ವಯಿಸುವುದಿಲ್ಲ ಎಂದು ತಿಳಿಯಬೇಕು. ಪುರಾಣದ ಮೇಲಾಗಲೀ, ಪೌರಾಣಿಕನ ಮೇಲಾಗಲೀ ಅವಜ್ಞೆಯಿಂದ ಎದ್ದು ಹೋಗುವವರಿಗೆ ಮೇಲೆ ಹೇಳಿದ ಅನರ್ಥ ತಪ್ಪಿದ್ದಲ್ಲ ಎಂದರ್ಥ.

## ಪುರಾಣಶ್ರವಣದ ಮತ್ತೊಂದು ವಿಧಿ

೩೩೨. ಸೋಷ್ಣೀಷಮಸ್ತಕಾ ಯೇ ಚ ಕಥಾಂ ಶೃಣ್ವಂತಿ ಪಾವನೀಮ್ ।
ತೇ ಬಲಾಕಾಃ ಪ್ರ ಜಾಯಂತೇ ಪಾಪಿನೋ ಮನುಜಾಧಮಾಃ ॥

ಅನು – ತಲೆಯ ಮೇಲೆ ಶಿರಸ್ತ್ರಾಣ ಮೊದಲಾದವುಗಳನ್ನು ಧರಿಸಿ ಪುರಾಣ ಕೇಳುವ ಪಾಪಿ ಮನುಷ್ಯರು ಮುಂದಿನ ಜನ್ಮದಲ್ಲಿ ಬಲಾಕಪಕ್ಷಿಗಳಾಗಿಯೂ ಚಂಡಾಲಾದಿಗಳಾಗಿಯೂ ಜನಿಸುವರು.

ವಿ – ತಲೆಯ ಮೇಲೆ ಶಿರಸ್ತ್ರಾಣ ಎಂದರೆ ಹೆಲ್ಮೆಟ್, ಟೊಪ್ಪಿಗೆ ಮೊದಲಾದವುಗಳನ್ನು ಧರಿಸಿ ಕೇಳುವುದು ಉಚಿತವಲ್ಲ ಎಂದರ್ಥ.

## ಉನ್ನತಾಸನದಲ್ಲಿ ಕುಳಿತು ಪುರಾಣ ಕೇಳುವುದು ತರವಲ್ಲ

೩೩೩. ಯೇ ಚ ತುಂಗಾಸನಾರೂಢಾಃ ಕಥಾಂ ಶೃಣ್ವಂತಿ ಡಾಂಭಿಕಾಃ ।
ಅಕ್ಷಯಾನ್ ನರಕಾನ್ ಭುಕ್ತ್ವಾ ತೇ ಭವಂತ್ಯೇವ ವಾಯಸಾಃ ॥

ಅನು – ಯಾರು ಎತ್ತರದ ಆಸನದ ಮೇಲೆ ಕುಳಿತು ಡಾಂಭಿಕರಾಗಿ ಪುರಾಣಕಥೆಯನ್ನು ಕೇಳುವರೋ ಅವರು ದೀರ್ಘಕಾಲ ನರಕಗಳನ್ನು ಅನುಭವಿಸಿ ಮುಂದೆ ಕಾಗೆಗಳಾಗಿ ಹುಟ್ಟುವರು.

ವಿ – ಇದೂ ಸಹ ಅಶಕ್ತಿ ರೋಗ ಮೊದಲಾದ ಕಾರಣದಿಂದ ಆಸನಗಳ ಮೇಲೆ ಕುಳಿತು ಕೇಳುವವರಿಗೆ ಅನ್ವಯಿಸುವುದಿಲ್ಲ ಎಂದು ತಿಳಿಯಬೇಕು. ಅದಕ್ಕೆಂದೇ ಇಲ್ಲಿ ಡಾಂಭಿಕಾಃ ಎಂದು ಕರೆದಿರುವುದು ಗಮನಾರ್ಹ.

## ನಿಷಿದ್ಧಾಸನವೂ ತ್ಯಾಜ್ಯ

೩೩೪. ಯೇ ಚ ವೀರಾಸನಾರೂಢಾ ಯೇ ಚಾಧ್ಯಾಸನಸಂಸ್ಥಿತಾಃ ।
ಶೃಣ್ವಂತಿ ಸತ್ಕಥಾಂ ತೇ ವೈ ಭವಂತ್ಯರ್ಜುನಪಾದಪಾಃ ॥

ಅನು – ಯಾರು ಕಾಲುಮೇಲೆ ಕಾಲು ಹಾಕಿಕೊಂಡಾಗಲೀ, ಸುವರ್ಣಾದಿ ಆಸನಗಳ ಮೇಲೆ ಕುಳಿತಾಗಲೀ ಪುರಾಣಕಥೆಯನ್ನು ಶ್ರವಣ ಮಾಡುವರೋ ಅವರು ಅರ್ಜುನ-ವೃಕ್ಷಗಳಾಗಿ (ಮತ್ತಿಯ ಮರ) ಹುಟ್ಟುವರು.

### ಪೌರಾಣಿಕನಿಗೆ ವಂದಿಸಿಯೇ ಪುರಾಣಶ್ರವಣವು ವಿಹಿತ

೩೩೫. ಅಸಂಪ್ರಣಮ್ಯ ಶೃಣ್ವಂತೋ ವಿಷವೃಕ್ಷಾ ಭವಂತಿ ತೇ ।
ತಥಾ ಶಯಾನಾಃ ಶೃಣ್ವಂತೋ ಭವಂತ್ಯಜಗರಾ ನರಾಃ ॥

ಅನು – ವ್ಯಾಸಪೀಠಕ್ಕೆ ಭಕ್ತಿಯಿಂದ ನಮಸ್ಕರಿಸದೆ ಪುರಾಣಶ್ರವಣ ಮಾಡುವವರು ವಿಷವೃಕ್ಷಗಳಾಗಿ ಹುಟ್ಟುವರು. ಅದರಂತೆ ಮಲಗಿ ಕೇಳುವವರು ಹೆಬ್ಬಾವುಗಳಾಗಿ ಹುಟ್ಟುವರು.

ವಿ – ೧. ಇದರಿಂದ ವ್ಯಾಸಪೀಠಕ್ಕೆ ನಮಸ್ಕರಿಸಿಯೇ ಪುರಾಣಶ್ರವಣ ಮಾಡಬೇಕು ಎಂಬ ವಿಶೇಷವಿಧಿ ನಿರೂಪಿತವಾಯಿತು ಎಂದು ತಿಳಿಯಬೇಕು.

೨. ಅಶಕ್ತಿ ಅನಾರೋಗ್ಯ ಮೊದಲಾದ ಕಾರಣಗಳಿಂದ ಮಲಗಿ ಕೇಳುವುದಕ್ಕೆ ಇದು ಅನ್ವಯಿಸುವುದಿಲ್ಲ ಎಂಬ ವಿಶೇಷಾಂಶ ಗಮನಿಸಬೇಕು. ಆದ್ದರಿಂದ 'ಮಲಗಿ ಪರಮಾದರದಿ ಪಾಡಲು' ಎಂಬ ವಾಕ್ಯಕ್ಕೆ ಇದು ವಿರುದ್ಧವಾಗದು.

### ಪೌರಾಣಿಕನಿಗೆ ಸಮಾನವಾದ ಆಸನದಲ್ಲೂ ಕುಳಿತುಕೊಳ್ಳಬಾರದು

೩೩೬. ಯೇ ಶ್ರುಣ್ವಂತಿ ನರಾ ವಕ್ತುಃ ಸಮಾನಾಸನಸಂಸ್ಥಿತಾಃ ।
ಗುರುತಲ್ಪಸಮಂ ಪಾಪಂ ಸಂಪ್ರಾಪ್ಯ ನರಕಂ ವ್ರಜೇತ್ ॥

ಅನು – ಯಾವ ಜನರು ಪೌರಾಣಿಕನಿಗೆ ಸಮಾನವಾದ ಪೀಠದಲ್ಲಿ ಕುಳಿತು ಪುರಾಣಶ್ರವಣ ಮಾಡುವರೋ ಅವರು ಗುರುತಲ್ಪಗಮನ ಮಾಡಿದವನಿಗೆ ಒದಗುವ ಪಾಪವನ್ನು ಹೊಂದಿ ನರಕಕ್ಕೆ ಬೀಳುವರು.

ವಿ – ಗುರುತಲ್ಪಗಮನ ಎನ್ನುವುದು ಪಂಚಮಹಾಪಾತಕಗಳಲ್ಲಿ ಒಂದು . ಎಂದರೆ ಪೌರಾಣಿಕನಿಗೆ ಸಮನಾದ ಪೀಠದಲ್ಲಿ ಕುಳಿತು ಪುರಾಣ ಕೇಳುವುದು ಮಹಾಪಾತಕ ಎಂದರ್ಥ.

### ಪುರಾಣದ ಮಧ್ಯೆ ಆಕ್ಷೇಪದ ಮಾತುಗಳು ನಿಷಿದ್ಧ

೩೩೭. ಕಥಾಯಾಂ ವರ್ತಮಾನಾಯಾಂ ಯೇ ವದಂತಿ ದುರುತ್ತರಮ್ ।
ತೇ ಗರ್ದಭಾಃ ಪ್ರ ಜಾಯಂತೇ ಕೃಕಲಾಸಾಸ್ತತಃ ಪರಮ್ ॥

ಅನು – ಪುರಾಣಪ್ರವಚನ ನಡೆದಿರುವಾಗ ಯಾರು ಕುತರ್ಕದಿಂದ ಆಕ್ಷೇಪ-ಗಳನ್ನೆತ್ತುವರೋ ಅವರು ಮೊದಲು ಕತ್ತೆಗಳಾಗಿ ಹುಟ್ಟಿ ಬಳಿಕ ಒತಿಕೇತಗಳಾಗಿ ಜನಿಸುವರು.

ವಿ – ೧. ಇಲ್ಲಿ ಯೋಗ್ಯ ಪ್ರಶ್ನೆಗಳನ್ನು ಕೇಳುವುದನ್ನು ನಿಷೇಧಿಸಿಲ್ಲ. ಆಕ್ಷೇಪಗಳನ್ನು ಮಾಡುವುದನ್ನಷ್ಟೇ ನಿಷೇಧಿಸಿರುವರು ಎಂದು ತಿಳಿಯಬೇಕು : ಆಕ್ಷೇಪಮಿತ್ಯಾದೇರಧ್ಯಾಹಾರೇಣ **ದುರುತ್ತರಪ್ರಸಕ್ತೇರುಕ್ತತ್ವಾತ್ ।(ವ್ಯಾ)**

೨. 'ಪ್ರ ಜಾಯಂತೇ' ಎಂಬ ಪದದಲ್ಲಿನ ಪ್ರ ಎಂಬ ಉಪಸರ್ಗಕ್ಕೆ ವಿಷ್ಣು ಎಂದರ್ಥ-ವಾಗುವುದರಿಂದ ವಿಷ್ಣುವಿನ ಕೋಪಕ್ಕೆ ಒಳಗಾಗಿ ಅವರು ಅಂತಹ ಹೀನ ಯೋನಿಯಲ್ಲಿ ಜನಿಸುವರು ಎಂಬ ಅರ್ಥವಿಶೇಷ ವ್ಯಾಖ್ಯಾನದಲ್ಲಿದೆ : 'ಅಕಯುಪ್ರವಿಸಂಭೂಮುಸಖಾ ವಿಷ್ಣುವಾಚಕಾಃ' ಇತಿ ವಚನಾತ್ ಪ್ರಶಬ್ದೋ ವಿಷ್ಣುರಿತ್ಯರ್ಥಲಾಭೇ, ಕೋಪೇನ ಇತ್ಯಸ್ಯ ಶೇಷ ಇತಿ **ಚಾಭ್ಯುಪೇತ್ಯ, ವಿಷ್ಣೋಃ ಕೋಪೇನ ಗರ್ದಭಾ ಜಾಯಂತ ಇತ್ಯರ್ಥಸ್ಯೋಕ್ತತ್ವಾತ್ ।(ವ್ಯಾ)**

## ಪೌರಾಣಿಕನ ಮಹತ್ತ್ವ

೩೩೮. **ಯೇ ಶ್ರಾವಯಂತಿ ಮನುಜಾನ್ ಪುಣ್ಯಾಂ ಪೌರಾಣಿಕೀಂ ಕಥಾಮ್ ।**
**ಕಲ್ಪಕೋಟಿಶತಂ ತೇಽಗ್ರೇ ತಿಷ್ಠಂತಿ ಬ್ರಹ್ಮಣಃ ಪದೇ ॥**

ಅನು – ಯಾರು ಪುಣ್ಯಕರವಾದ ಪುರಾಣಕಥೆಗಳನ್ನು ಜನರಿಗೆ ತಿಳಿಸುವರೋ ಅಂತಹವರು ಮೊದಲು ಬ್ರಹ್ಮಲೋಕದಲ್ಲಿ ನೂರಾರು ಕೋಟಿ ಕಲ್ಪಗಳವರೆಗೆ ನೆಲೆಸಿದ್ದು ಬಳಿಕ ವೈಕುಂಠದಲ್ಲಿ ಶಾಶ್ವತ ನೆಲೆಸುವರು.

ವಿ – ಪುರಾಣಪ್ರವಚನ ಅತ್ಯಂತ ವಿಶಿಷ್ಟವಾದ ಪುಣ್ಯಕಾರ್ಯವಾದ್ದರಿಂದ ಅದು ಮುಂದೆ ವಿಶೇಷ ಹರಿಪ್ರೀತಿಗೆ ಕಾರಣವಾಗಿ ಮುಕ್ತಿಗೆ ಸಾಧನವಾಗುವುದು ಎಂದರ್ಥ.

## ಪೌರಾಣಿಕನ ಸನ್ಮಾನದ ಫಲ

೩೩೯. **ಪುರಾಣಸ್ಯ ಪ್ರಯಚ್ಛಂತಿ ಯೇ ಸ್ರಜಂ ವಸನಂ ನವಮ್ ।**
**ಭೋಗಿನೋ ಜ್ಞಾನಸಂಪನ್ನಾಸ್ತೇ ಭವಂತಿ ಭವೇಭವೇ ॥**

ಅನು – ಯಾರು ವಿಷ್ಣುಪ್ರೀತಿಗಾಗಿ ಪೌರಾಣಿಕನಿಗೆ ಮಾಲೆ, ಹೊಸವಸ್ತ್ರ ಮೊದಲಾದವುಗಳನ್ನು ಸಮರ್ಪಿಸುವರೋ ಅವರು ಪ್ರತಿಜನ್ಮದಲ್ಲೂ ವಿಶೇಷಭೋಗ-ಗಳನ್ನು ಹೊಂದಿ ಜ್ಞಾನವನ್ನು ಸಹ ಸಂಪಾದಿಸಿಕೊಂಡವರಾಗಿ ಆಗುವರು.

ವಿ – ಮೇಲಿನ ೨೩ ಶ್ಲೋಕಗಳು ಸ್ಕಂದಪುರಾಣ ಬ್ರಹ್ಮೋತ್ತರಖಂಡದಲ್ಲಿ ಜಯನಾರದ-ಸಂವಾದತ್ವೇನ ೨೨ನೇ ಅಧ್ಯಾಯದಲ್ಲಿವೆ.

### ಭಗವಂತನು ಸ್ವಗತಭೇದವಿವರ್ಜಿತ

೩೪೦. ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರೋ
ನಿಶ್ಚೇತನಾತ್ಮಕಶರೀರಗುಣೈಶ್ಚ ಹೀನಃ ।
ಆನಂದಮಾತ್ರಕರಪಾದಮುಖೋದರಾದಿಃ
ಸರ್ವತ್ರ ಚ ಸ್ವಗತಭೇದವಿವರ್ಜಿತಾತ್ಮಾ ॥

ಅನು – ಪರಮಾತ್ಮನು ದೋಷರಹಿತವೂ ಪೂರ್ಣವೂ ಆದ ಗುಣಗಳನ್ನೇ ದೇಹವನ್ನಾಗಿ ಉಳ್ಳವನು; ಸ್ವತಂತ್ರನು; ಜಡಶರೀರರಹಿತನು; ಪ್ರಕೃತಿಯ ಗುಣಗಳಿಂದ ರಹಿತನು; ಕೇವಲ ಆನಂದಸ್ವರೂಪವಾದ ಹಸ್ತ, ಪಾದ, ಮುಖ, ಉದರಾದಿಗಳನ್ನು ಹೊಂದಿರುವವನು ಮತ್ತು ಸರ್ವತ್ರ ಸ್ವಗತಭೇದವಿವರ್ಜಿತನು.

ವಿ – ೧. ಇದು ಮ.ಭಾ.ತಾ.ನಿ. ವಚನ (೧/೧೧)

೨. ಸ್ವಗತಭೇದ ಎಂದರೆ ತನಗೂ ತನ್ನ ಗುಣಕ್ರಿಯಾದಿ ಧರ್ಮಗಳಿಗೂ ರೂಪರೂಪಗಳಿಗೂ ಹಸ್ತಪಾದಾದಿ ಅವಯವಗಳಿಗೂ ಇರುವ ಭೇದ ಎಂದರ್ಥ; ಇಂತಹ ಭೇದವು ಭಗವಂತನ ಅನಂತರೂಪಗಳಲ್ಲಿ ಎಂದೂ ಇಲ್ಲವಾದ್ದರಿಂದ ಅವನು ಸ್ವಗತಭೇದವಿವರ್ಜಿತ.

### ರುದ್ರದೇವರಿಂದ ನೃಸಿಂಹನ ಪ್ರಾರ್ಥನೆ

೩೪೧. ಸ್ತುಹಿ ಶ್ರುತಂ ಗರ್ತಸದಂ ಯುವಾನಂ
ಮೃಗಂ ನ ಭೀಮಮುಪಹತ್ನುಮುಗ್ರಮ್ ।

ಅನು – (ಎಲೈ ರುದ್ರನೇ!) ಹೃದಯಗುಹೆಯಲ್ಲಿ ನೆಲೆಸಿರುವ, ನಿತ್ಯತರುಣನಾದ ಸಿಂಹದಂತೆ ಭಯಂಕರವಾದ, ಶತ್ರುಗಳ ಬಳಿಗೆ ಹೋಗಿ ಸಂಹರಿಸುವ ಸ್ವಭಾವವುಳ್ಳ, ಶತ್ರುಭಯಂಕರನಾದ, ಶ್ರುತಿಪ್ರತಿಪಾದ್ಯನಾದ ನರಸಿಂಹನನ್ನು ಸ್ತುತಿಸು.

ವಿ–೧. ಋಗ್ವೇದ(೨/೩೩/೧೧.)ದ ಈ ಮಂತ್ರವು ಮಹಾಭಾರತತಾತ್ಪರ್ಯನಿರ್ಣಯದಲ್ಲಿ (೧/೬೨) ಉದಾಹೃತವಾಗಿದೆ. ವಿವರಗಳನ್ನು ಅದರ ವ್ಯಾಖ್ಯಾನಗಳಲ್ಲಿ ಹಾಗೂ ನಮ್ಮ ಪ್ರಕಾಶನದ ಕನ್ನಡಾನುವಾದದಲ್ಲಿ ಕಾಣಬಹುದು.

೨. 'ಮೃಡಾ ಜರಿತ್ರೇ ರುದ್ರ ಸ್ತವಾನೋಽನ್ಯಂ ತೇಽಸ್ಮನ್ನಿವಪಂತು ಸೇನಾಃ' ಎಂಬುದು ಈ ಮಂತ್ರದ ಉತ್ತರಾರ್ಧ.

### ಭೇದದ ಸತ್ಯತ್ವ

೩೪೨. ಅಸತ್ಯಃ ಸ್ವಗತೋ ಭೇದೋ ವಿಷ್ಣೋರ್ನಾನ್ಯದಸತ್ಯಕಮ್ ।
ಜಗತ್ಪ್ರವಾಹಃ ಸತ್ಯೋಽಯಂ ಪಂಚಭೇದಸಮನ್ವಿತಃ ॥

ಅನು – ವಿಷ್ಣುವಿನಲ್ಲಿರುವ ಸಕಲಭೇದಗಳೂ ಅಸತ್ಯ. ಇತರ ಯಾವುದೂ ಅಸತ್ಯವಲ್ಲ. ಪಂಚಭೇದಗಳಿಂದ ಯುಕ್ತವಾದ ಈ ಜಗತ್ಪ್ರವಾಹವು ಸತ್ಯವೇ ಆಗಿದೆ.

ವಿ – ೧. ಹಿಂದೆ ತಿಳಿಸಿದ ಭಗವಂತನ ಸ್ವಗತಭೇದವಿವರ್ಜಿತತ್ವವೇ ಮೊದಲಾದ ವಿಷಯಗಳನ್ನು ವಿವರಿಸುವ ಈ ವಚನವೂ ಮಹಾಭಾರತತಾತ್ಪರ್ಯನಿರ್ಣಯದಲ್ಲಿದೆ. (೧/೬೯). ಮುಂದಿನ ನಾಲ್ಕು ಶ್ಲೋಕಗಳೂ ತಾತ್ಪರ್ಯನಿರ್ಣಯದ್ದೇ.

೨. ಪಂಚಭೇದಗಳ ವಿವರಣೆಯನ್ನು ಮುಂದಿನ ಶ್ಲೋಕದಲ್ಲಿ ಕಾಣಬಹುದು.

## ಪಂಚಭೇದಗಳು

೩೪೩. ಜೀವೇಶಯೋರ್ಭಿದಾ ಚೈವ ಜೀವಭೇದಃ ಪರಸ್ಪರಮ್ ।
ಜಡೇಶಯೋರ್ಜಡಾನಾಂ ಚ ಜಡಜೀವಭಿದಾ ತಥಾ ।
ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ಸರ್ವಶಃ ॥

ಅನು – ಜೀವೇಶ್ವರಭೇದ, ಜೀವಜೀವಭೇದ, ಜಡೇಶ್ವರಭೇದ, ಜಡಜಡಭೇದ ಮತ್ತು ಜಡಜೀವಭೇದ ಎಂಬ ಈ ಪಂಚಭೇದಗಳು ನಿತ್ಯವಾಗಿವೆ. ಸಕಲ ಅವಸ್ಥೆಗಳಲ್ಲೂ ಸಕಲ ರೀತಿಯಲ್ಲೂ ಇವು ಸತ್ಯ.

ವಿ – ಇದು ಮ.ಭಾ.ತಾ.ನಿ. ವಚನ (೧/೭೦).

## ಜೀವತ್ರೈವಿಧ್ಯ

೩೪೪. ತ್ರಿವಿಧಾ ಜೀವಸಂಘಾಸ್ತು ದೇವಮಾನುಷದಾನವಾಃ ।
ತತ್ರ ದೇವಾ ಮುಕ್ತಿಯೋಗ್ಯಾ ಮಾನುಷೇಷೂತ್ತಮಾಸ್ತಥಾ ॥
ಮಧ್ಯಮಾ ಮಾನುಷಾ ಯೇ ತು ಸೃತಿಯೋಗ್ಯಾಃ ಸದೈವ ಹಿ ।
ಅಧಮಾ ನಿರಯಾಯೈವ ದಾನವಾಸ್ತು ತಮೋಲಯಾಃ ॥

ಅನು – ದೇವತೆಗಳು ಮನುಷ್ಯರು ಮತ್ತು ದಾನವರು ಎಂಬುದಾಗಿ ಜೀವ ಸಮೂಹಗಳು ಮೂರುವಿಧ. ಅವರಲ್ಲಿ ದೇವತೆಗಳು ಮತ್ತು ಮನುಷ್ಯೋತ್ತಮರು ಮುಕ್ತಿಯೋಗ್ಯರು. ಮಧ್ಯಮ ಮನುಷ್ಯರು ಸರ್ವದಾ ಸಂಸಾರಕ್ಕೆ ಯೋಗ್ಯರು. ಅಧಮ ಮನುಷ್ಯರು ತಮಸ್ಸಿಗೆ ಯೋಗ್ಯರು. ದಾನವರು ಅಂಧಂತಮಸ್ಸನ್ನು ಹೊಂದುವರು.

ವಿ – ೧. ಮಹಾಭಾರತತಾತ್ಪರ್ಯನಿರ್ಣಯದ (೧/೮೬,೮೭) ಈ ವಚನವು ಜೀವ-ತ್ರೈವಿಧ್ಯವನ್ನು ಅವರ ಗತಿಗಳನ್ನು ವಿವರಿಸುತ್ತಿದೆ.

೨. ಈ ಜೀವತ್ರೈವಿಧ್ಯದ ಸ್ಪಷ್ಟವಿವೇಚನೆಯನ್ನು ತಾತ್ಪರ್ಯನಿರ್ಣಯದ ವ್ಯಾಖ್ಯಾನಗಳಲ್ಲಿ ಕಾಣಬಹುದು.

೩. ಇದರ ಬಗೆಗಿನ ಶ್ರೀಸತ್ಯಾಭಿನವತೀರ್ಥರ ರಾಮಾಮೃತಮಹಾರ್ಣವದ ದುರ್ಘಟಾರ್ಥ-ದೀಪಿಕೆಯಲ್ಲಿನ ಸ್ಫುಟತರ ವಿವೇಕದ ಸಂಗ್ರಹ ಇಲ್ಲಿದೆ : ''ಜೀವರು ಮೂರುವಿಧ ಉತ್ತಮ, ಮಧ್ಯಮ ಮತ್ತು ಅಧಮ ಎಂದು. ಮೋಕ್ಷವೂ ಮೂರುವಿಧ. ಸನ್ಮೋಕ್ಷ, ಸದಸನ್ಮೋಕ್ಷ ಮತ್ತು ಅಸನ್ಮೋಕ್ಷ ಎಂದು. ಉತ್ತಮ ಜೀವರಿಗೆ ಸಮ್ಯಗ್ ಜ್ಞಾನದಿಂದ ಸನ್ಮೋಕ್ಷ, ಅಲ್ಲಿ ಕೇವಲ ಸುಖವಿದ್ದು ದುಃಖವಿಲ್ಲದ್ದರಿಂದ ಅದಕ್ಕೆ ಸನ್ಮೋಕ್ಷ ಎಂದು ಹೆಸರು. ಇವರ ವಾಸ ವೈಕುಂಠಾದಿ ಲೋಕಗಳಲ್ಲಿ. ಮಧ್ಯಮರು ಮೂರುವಿಧ. ಉತ್ತಮ, ಮಧ್ಯಮ ಮತ್ತು ಅಧಮ ಎಂದು. ಮಧ್ಯಮೋತ್ತಮರಿಗೆ ಮಿಶ್ರಜ್ಞಾನದಿಂದ ಸದಸನ್ಮೋಕ್ಷ. ಸುಖದುಃಖಗಳೆರಡೂ ಇರುವುದರಿಂದ ಅದಕ್ಕೆ ಸದಸನ್ಮೋಕ್ಷ ಎಂದು ಹೆಸರು. ಆದರೂ ಇವರಿಗೆ ದುಃಖಕ್ಕಿಂತ ಸುಖವು ಹೆಚ್ಚು. ಇವರಲ್ಲಿ ಕೆಲವರದು ಸ್ವರ್ಗದಲ್ಲಿ ವಾಸ. ಮತ್ತೆ ಕೆಲವರದು ಭೂಲೋಕದಲ್ಲಿ. ಮಧ್ಯಮಮಧ್ಯಮರಿಗೆ ಮೋಕ್ಷವಿಲ್ಲ. ಎಂದೂ ಸಂಸಾರವೇ. ಸ್ವರ್ಗ ನರಕ ಮತ್ತು ಭೂಲೋಕಗಳಲ್ಲಿ ನಿತ್ಯಸಂಚಾರ. ಮಧ್ಯಮಾಧಮರಿಗೆ ಮಿಶ್ರಜ್ಞಾನದಿಂದ ಸದಸನ್ಮೋಕ್ಷ. ಮೇಲೆ ತಿಳಿಸಿದ ಸದಸನ್ಮೋಕ್ಷದಿಂದ ಇದು ಸ್ವಲ್ಪಭಿನ್ನ. ಇಲ್ಲಿ ಸುಖಕ್ಕಿಂತ ದುಃಖ ಹೆಚ್ಚು. ಇವರದ್ದು ನರಕದಲ್ಲಿಯೇ ವಾಸ. ಅಧಮಜೀವರಿಗೆ ಮಿಥ್ಯಾಜ್ಞಾನದಿಂದ ಅಸನ್ಮೋಕ್ಷ. ಕೇವಲ ದುಃಖವಿದ್ದು ಸುಖದ ಲೇಶವೂ ಇಲ್ಲದ್ದರಿಂದ ಇದಕ್ಕೆ ಅಸನ್ಮೋಕ್ಷ ಎಂದು ಹೆಸರು. ಇವರ ವಾಸ ತಮಸ್ಸಿನಲ್ಲಿಯೇ''.

## ವಿಷ್ಣುಪೂಜೆಯು ಕಡ್ಡಾಯ

೩೪೫. ವರಂ ಪ್ರಾಣಪರಿತ್ಯಾಗಃ ಶಿರಸೋ ವಾಽಪಿ ಕರ್ತನಮ್ ।
ನ ತ್ವೇವಾಪೂಜ್ಯ ಭುಂಜೀಯಾದ್ಭಗವಂತಂ ಜನಾರ್ದನಮ್ ॥

ಅನು – ಜನಾರ್ದನನಾದ ಭಗವಂತನನ್ನು ಪೂಜಿಸದೇ ಉಣ್ಣುವುದಕ್ಕಿಂತ ಪ್ರಾಣತ್ಯಾಗ ಅಥವಾ ಶಿರಶ್ಛೇದವೇ ಲೇಸು.

ವಿ – ೧. ಇದು ಪಂಚರಾತ್ರಾಗಮದ ವಚನ.

೨. ಭಗವಂತನ ಪೂಜೆಯ ಮಹತ್ವವನ್ನು ವಿಶೇಷವಾಗಿ ಪಂಚರಾತ್ರ, ನಾರದೀಯಪುರಾಣ ಮೊದಲಾದವುಗಳಿಂದ ಈ ಘಟ್ಟದಲ್ಲಿ ವಿವರಿಸತೊಡಗಿದ್ದಾರೆ. ಶ್ರೀಮದಾಚಾರ್ಯರ ಕೃಷ್ಣಾಮೃತಮಹಾರ್ಣವದಲ್ಲಿ ಈ ವಿಷಯವು ವಿಸ್ತಾರವಾಗಿ ನಿರೂಪಿತವಾಗಿದೆ.

## ಸಂಕ್ಷಿಪ್ತವಾಗಿಯಾದರೂ ಪೂಜಿಸಲೇಬೇಕು

೩೪೬. ಯದಿ ವಿಸ್ತರತಃ ಪೂಜಾ ಕರ್ತುಂ ನೈವ ಹಿ ಶಕ್ಯತೇ ।
ತದಾ ಸಂಕ್ಷೇಪತೋ ವಾಽಪಿ ವಿಷ್ಣೋಃ ಪೂಜನಮಾಚರೇತ್ ॥

ಅನು – ಒಂದು ವೇಳೆ ವಿಸ್ತಾರವಾಗಿ ವಿಷ್ಣುವಿನ ಪೂಜೆಯನ್ನು ಮಾಡಲಾಗದಿದ್ದರೆ ಸಂಕ್ಷಿಪ್ತವಾಗಿಯಾದರೂ ಆಚರಿಸಲೇ ಬೇಕು.

ವಿ : ಕಾರಣಾಂತರದಿಂದ ವಿಸ್ತೃತಪೂಜೆ ಮಾಡಲಾಗದವರು ಸಂಕ್ಷೇಪಪೂಜೆಯನ್ನಾದರೂ ಮಾಡಲೇಬೇಕು ಎಂಬ ಮುಖ್ಯಪ್ರಮೇಯ ಇಲ್ಲಿ ನಿರೂಪಿತವಾಗಿದೆ.

## ಅಶಕ್ತರು ತುಳಸೀದಳದಿಂದಲಾದರೂ ಪೂಜಿಸಲೇ ಬೇಕು

೩೪೭. ಸಂಕ್ಷೇಪತೋಽಪಿ ಪೂಜಾಯಾಂ ಯದ್ಯಶಕ್ತೋ ಭವೇತ್ ತದಾ ।
ಜಲಂ ದಲಂ ತುಲಸ್ಯಾ ವಾಽವಶ್ಯಂ ವಿಷ್ಣೋಃ ಸಮರ್ಪಯೇತ್ ॥

ಅನು – ಸಂಕ್ಷಿಪ್ತವಾಗಿಯೂ ಪೂಜಿಸಲು ಅಶಕ್ತನಾದರೆ ನೀರು ಅಥವಾ ತುಳಸೀ ದಲಗಳನ್ನಾದರೂ ಅವಶ್ಯವಾಗಿ ಭಗವಂತನಿಗೆ ಅರ್ಪಿಸಬೇಕು.

ವಿ – ಮೇಲಿನ ಎರಡು ಶ್ಲೋಕಗಳು ನಾರದೀಯಪುರಾಣವಚನಗಳು.

೨. ಕಾರಣಾಂತರದಿಂದ ಸಂಕ್ಷಿಪ್ತಪೂಜೆಯೂ ಅಸಾಧ್ಯವಾದಲ್ಲಿ ನೈವೇದ್ಯಕ್ಕೆಂದು ಜಲ, ಪೂಜೆಗೆಂದು ತುಲಸೀದಳಗಳನ್ನಾದರೂ ಸಮರ್ಪಿಸಬೇಕು ಎಂದರ್ಥ.

## ನಾಮಗಳಲ್ಲಿ ಮುದ್ರಾಧಾರಣೆ

೩೪೮. ಇತ್ಯಾಯುಧಾನಿ ಸಂಪ್ರಾರ್ಥ್ಯ ಗೃಹೀತ್ವಾ ಮುದ್ರಿಕಾಸ್ತತಃ ।
ಧಾರಯೇತ್ ತಿಲಕೇಷ್ವೇತಾ ವಿಷ್ಣುಸಾಯುಜ್ಯಸಿದ್ಧಯೇ ॥

ಅನು – ಹೀಗೆ ಆಯುಧಗಳನ್ನು ಪ್ರಾರ್ಥಿಸಿ ಮುದ್ರೆಯನ್ನು ಕೈಯಲ್ಲಿ ಹಿಡಿದು ನಾಮಗಳಲ್ಲಿ ಈ ಮುದ್ರೆಗಳನ್ನು ವಿಷ್ಣುಸಾಯುಜ್ಯಪ್ರಾಪ್ತಿಗಾಗಿ ಧರಿಸಬೇಕು.

ವಿ – ೧. ಇದು ವಾರಾಹ ವಚನ.

೨. ಈ ಹಿಂದೆ ಗರುಡಪುರಾಣದ ವಚನಗಳಿಂದ ಪಂಚಾಯುಧಸ್ತೋತ್ರ ಹಾಗೂ ಅದರ ಫಲಶ್ರುತಿಯನ್ನು ತಿಳಿಸಿರುವುದನ್ನು ಗಮನಿಸಬೇಕು. ವರಾಹಪುರಾಣದಲ್ಲೂ ಇದರ ವಿವರಣೆಗಳಿವೆ.

## ವೇದ ಮಹಾಭಾರತಗಳ ತುಲಾಭಾರ

೩.೪೯. ಭಾರತಂ ಸರ್ವವೇದಾಶ್ಚ ತುಲಾಮಾರೋಪಿತಾಃ ಪುರಾ ।
ದೈವೈರ್ಬ್ರಹ್ಮಾದಿಭಿಃ ಸರ್ವೈರ್ಋಷಿಭಿಶ್ಚ ಸಮನ್ವಿತೈಃ ।
ವ್ಯಾಸಸ್ಯೈವಾಜ್ಞಯಾ ತತ್ರ ತ್ವತ್ಯರಿಚ್ಯತ ಭಾರತಮ್ ॥

ಅನು – ಹಿಂದೆ ಮಹಾಭಾರತ ಮತ್ತು ಸಕಲವೇದಗಳು ಶ್ರೀವೇದವ್ಯಾಸರ ಆದೇಶದಂತೆಯೇ ಬ್ರಹ್ಮಾದಿದೇವತೆಗಳಿಂದಲೂ ಸಕಲ ಋಷಿಗಳಿಂದಲೂ ಒಂದು ತಕ್ಕಡಿಯಲ್ಲಿರಿಸಿ ತೂಗಲ್ಪಟ್ಟವು. ಆಗ ಮಹಾಭಾರತವು ವೇದಾದಿ ಇತರ ಸಕಲಶಾಸ್ತ್ರಗಳನ್ನು ಮೀರಿಸಿತು.

ವಿ – ೧. ಇದು ಮಹಾಭಾರತತಾತ್ಪರ್ಯನಿರ್ಣಯ(೨/೯-೧೦)ದಲ್ಲಿ ಉದಾಹೃತವಾದ ಬ್ರಹ್ಮಾಂಡಪುರಾಣದ ವಚನ. ಗೀತಾತಾತ್ಪರ್ಯದಲ್ಲಿಯೂ ಶ್ರೀಮದಾಚಾರ್ಯರು ಇದನ್ನು ಉದಾಹರಿಸಿದ್ದಾರೆ.

೨. ಇಲ್ಲಿ ತಕ್ಕಡಿಯಲ್ಲಿ ತೂಗಿದ್ದು ಆ ಶಾಸ್ತ್ರಗಳ ಪ್ರತಿನಿಧಿಗಳ ಮೂಲಕ ಎಂಬ ವಿಶೇಷವನ್ನು ಶ್ರೀಟೀಕಾಕೃತ್ಪಾದರು ತಮ್ಮ ನ್ಯಾಯದೀಪಿಕೆಯಲ್ಲಿ ತಿಳಿಸಿದ್ದಾರೆ :ಭಾರತಾದೇಸ್ತುಲಾರೋಪಣಂ ನಾಮ ತತ್ಪ್ರತಿನಿಧೇರಾರೋಪಣಮ್ ।

೩. ಗೀತಾತಾತ್ಪರ್ಯ ನ್ಯಾಯದೀಪಿಕೆಯ ಮೇಲಿನ ತಮ್ಮ ಗುರುಗಳಾದ ಶ್ರೀಸತ್ಯನಾಥತೀರ್ಥರ ಟಿಪ್ಪಣಿಯನ್ನು ಇಲ್ಲಿ ಶ್ರೀಸತ್ಯಾಭಿನವರು ಉಲ್ಲೇಖಿಸಿದ್ದಾರೆ.

## ನೈವೇದ್ಯ ವಿಚಾರ

೩.೫೦. ಛಿಂಧಿ ಸರ್ವಜ್ಞ ಸರ್ವೇಶ ಸಂಶಯಂ ಮೇ ಮಹತ್ತರಮ್ ।
ವಿಷ್ಣೋರ್ನೈವೇದ್ಯಶೇಷೇಣ ವೈಶ್ವದೇವಾದಿಕಂ ಚರೇತ್ ॥
ಇತ್ಯುಕ್ತಂ ತು ತ್ವಯಾ ಪೂರ್ವಂ ತತ್ರಾಸ್ಮಿನ್ ಸಂಶಯೋ ಮಹಾನ್ ।
ತ್ವದರ್ಪಿತಾನ್ನಂ ದೇವೇಶ ದೇವಾನಾಮುಚಿತಂ ನೃಣಾಮ್ ॥
ಭಕ್ತಾನಾಂ ಮೋಕ್ಷದಂ ತಸ್ಮಾತ್ ತಸ್ಮಾದ್ಗ್ರಾಹ್ಯಂ ತು ತನ್ಮುಖೈಃ ।
ತ್ವದರ್ಪಿತಂ ತು ನೈವೇದ್ಯಂ ಕಥಂ ತ್ವಂ ಪುರುಷೋತ್ತಮ ।
ಗೃಹ್ಣಾಸಿ ಭೋ ಹ್ಯಧಿಷ್ಠಾನೇ ತ್ವದುಚ್ಛಿಷ್ಟಂ ಯತಃ ಪುರಾ ॥

ಅನು – ''ಹೇ ಸರ್ವೇಶನೇ! ನನ್ನ ಈ ಹಿರಿದಾದ ಸಂಶಯವನ್ನು ಪರಿಹರಿಸು – ವಿಷ್ಣುವಿನ ನೈವೇದ್ಯಶೇಷದಿಂದಲೇ ವೈಶ್ವದೇವಾದಿಗಳನ್ನು ಆಚರಿಸಬೇಕು ಎಂದು ನೀನು ಹಿಂದೆ ತಿಳಿಸಿದಿ. ಈ ವಿಷಯದಲ್ಲಿ ನನಗೊಂದು ದೊಡ್ಡ ಸಂಶಯವಿದೆ. ಹೇ ದೇವೇಶ!

ನಿನಗೆ ಅರ್ಪಿಸಿದ ಅನ್ನವೇ ದೇವತೆಗಳಿಗೂ ಮತ್ತು ಮನುಜರಿಗೂ ಉಚಿತ. ಭಕ್ತರಿಗೆ ಅದು ಮೋಕ್ಷದಾಯಕ. ಆದ್ದರಿಂದ ಅವರಿಂದ ಅದು ಗ್ರಾಹ್ಯ. ಆದರೆ ಹೇ ಪುರುಷೋತ್ತಮ! ನಿನಗೆ ಅರ್ಪಿಸಿದ ನೈವೇದ್ಯವನ್ನು ನೀನೆ ಹೇಗೆ ತಾನೆ (ವೈಶ್ವದೇವಾದಿಗಳಲ್ಲಿ ಅನ್ನವೇ ಮೊದಲಾದ) ಅಧಿಷ್ಠಾನದಲ್ಲಿ ಸ್ವೀಕರಿಸುವಿ? ಅದು ನೈವೇದ್ಯಕಾಲದಲ್ಲಿ ನಿನ್ನಿಂದ ಉಚ್ಛಿಷ್ಟವಲ್ಲವೇ.''

ವಿ – ೧. ನೈವೇದ್ಯದ ಹಾಗೂ ವೈಶ್ವದೇವದ ಬಗೆಗಿನ ಮುಖ್ಯಸಮಸ್ಯೆಗಳನ್ನು ಪರಿಹರಿಸಲು ಇಲ್ಲಿ ಭಗವಂತ ಮತ್ತು ಬ್ರಹ್ಮದೇವರ ನಡುವಿನ ಸಂವಾದರೂಪವಾದ ಪಂಚರಾತ್ರವಚನಗಳನ್ನು ಉಲ್ಲೇಖಿಸುತ್ತಿದ್ದಾರೆ.

೩೫೧. ಸಾಧುಸಾಧು ಮಹಾಭಾಗ ಶ್ರುಣುಷ್ವ ಕಮಲಾಸನ ।
ತ್ವಯಾ ಪೃಷ್ಟಂ ಪ್ರವಕ್ಷ್ಯಾಮಿ ಶ್ರುಣುಷ್ವೈಕಮನಾ ಭವ ॥

ಅನು – ''ಹೇ ಮಹಾನುಭಾವನೇ! ಕಮಲಾಸನನೇ! ನೀನು ಒಳ್ಳೆ ಪ್ರಶ್ನೆಯನ್ನೇ ಕೇಳಿದೆ. ಒಂದೇ ಮನಸ್ಸಿನಿಂದ ಆದರದಿಂದ ಕೇಳುವವನಾಗು.

ವಿ – ಹಿಂದಿನ ಶ್ಲೋಕದಲ್ಲಿ ಬ್ರಹ್ಮದೇವರು ಮಾಡಿದ ಪ್ರಶ್ನೆಗೆ ಭಗವಂತನು ಈ ಶ್ಲೋಕದಿಂದ ಆರಂಭಿಸಿ ಹನ್ನೊಂದು ಶ್ಲೋಕಗಳಲ್ಲಿ ಉತ್ತರಿಸ ಹೊರಟಿದ್ದಾನೆ.

## ಶ್ರೀಹರಿಯ ನೈವೇದ್ಯಸ್ವೀಕಾರದ ವೈಭವ

೩೫೨. ಯಥಾಽಗ್ನೌ ಸಂಸ್ಕೃತಾಜ್ಯಂ ವಾ ಅಗ್ನಾವೇವ ಹಿ ಹೂಯತೇ ।
ಮದರ್ಪಿತಂ ಪ್ರಗೃಹ್ಣಾಮಿ ಯಜ್ಞಹೋಮದ್ವಿಜಾತಿಷು ॥
ಅಸಂಗೋಽಹಂ ಮಹಾಭಾಗ ತಸ್ಮಾನ್ಮೇ ನಾಸ್ತಿ ಕರ್ಮಣಾ ।
ಬಂಧನಂ ಪುರುಷಶ್ರೇಷ್ಠ ಮಾ ಶಂಕಾ ಹ್ಯತ್ರ ಪುತ್ರಕ ॥

ಅನು – ಹೇಗೆ ಅಗ್ನಿಯಲ್ಲಿ ಸಂಸ್ಕಾರಗೊಂಡ ತುಪ್ಪವು ಅಗ್ನಿಯಲ್ಲಿಯೇ ಹೋಮಿಸಲ್ಪಡುವುದೋ ಹಾಗೆ ನನಗೆ ಅರ್ಪಿತವಾದದ್ದನ್ನೇ ನಾನು ಯಜ್ಞ, ಹೋಮ ಮತ್ತು ದ್ವಿಜರಲ್ಲಿ ಸ್ವೀಕರಿಸುವೆ. ಹೇ ಮಹಾಭಾಗ! ಪುರುಷಶ್ರೇಷ್ಠ! ನಾನು ಅಸಂಗ. ಆದ್ದರಿಂದ ನನಗೆ ಕರ್ಮಬಂಧನವಿಲ್ಲ. ಎಲೈ ಪುತ್ರ! ಈ ವಿಷಯದಲ್ಲಿ ಸಂಶಯ ಬೇಡ.

ವಿ : 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ'; 'ನದಿಯ ಜಲ ನದಿಗೆರೆವ ತೆರದಂದದಲಿ' ಎಂಬ ಮಾತುಗಳ ಭಾವವೂ ಇದೇ ಆಗಿದೆ.

## ನೈವೇದ್ಯಶೇಷದಿಂದಲೇ ಯಜ್ಞಾದಿಗಳು ವಿಹಿತ

೩.೫೩. ನಿವೇದಿತಾನ್ನಶೇಷೇಣ ಯೇ ಯಜಂತಿ ದ್ವಿಜಾತಿಷು।
ಸರ್ವಸ್ಥಂ ಮಾಂ ಸಮುದ್ದಿಶ್ಯ ತೇ ಸ್ಮೃತಾಃ ಕರ್ಮಕೌಶಲಾಃ॥

ಅನು – ನೈವೇದ್ಯಾನ್ನದ ಶೇಷದಿಂದ ಎಲ್ಲೆಡೆ ಇರುವ ನನ್ನನ್ನು ಉದ್ದೇಶಿಸಿ ಯಾರು ಬ್ರಾಹ್ಮಣಾದಿಗಳಲ್ಲಿ ಹೋಮಿಸುವರೋ ಅವರೇ ಕರ್ಮಕೌಶಲರು(ಯೋಗಿಗಳು) ಎಂದು ಕರೆಯಲ್ಪಡುವರು.

ವಿ – ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಯೋಗವನ್ನು 'ಯೋಗಃ ಕರ್ಮಸು ಕೌಶಲಮ್' ಎಂದು ವ್ಯಾಖ್ಯಾನಿಸಿದ್ದು, ಅದರ ದೃಷ್ಟಾಂತವೆಂಬಂತೆ ಇಲ್ಲಿ ನೈವೇದ್ಯ ಮತ್ತು ಬ್ರಾಹ್ಮಣಭೋಜನಗಳನ್ನು ವಿವರಿಸಲಾಗಿದೆ.

## ಶ್ರೀಹರಿಗರ್ಪಿತವಾಗದ ಯಜ್ಞಾದಿಗಳು ವ್ಯರ್ಥ

೩.೫೪. ಅಯೋಗ್ಯಂ ತು ಯಥಾ ಹೋಮೇ ಘೃತಂ ಸಂಸ್ಕಾರವರ್ಜಿತಮ್।
ಋತೇ ಮದರ್ಪಣಂ ಪ್ರಾಜ್ಞ ಯಜ್ಞಾದೌ ವಿಫಲಂ ಭವೇತ್॥

ಅನು – ಹೇ ಪ್ರಾಜ್ಞನೇ! ಹೇಗೆ ಸಂಸ್ಕಾರಗೊಳ್ಳದ ತುಪ್ಪವು ಹೋಮದಲ್ಲಿ ಯೋಗ್ಯವಲ್ಲದಾಗುವುದೋ ಹಾಗೆ ನನಗೆ ಅರ್ಪಿಸದ್ದು ಯಜ್ಞಾದಿಗಳಲ್ಲಿ ವಿಫಲವಾಗು-ವುದು.

ವಿ : ಸಂಸ್ಕಾರವಿಲ್ಲದ ಘೃತ ಹೋಮಕ್ಕೆ ನಿಷಿದ್ಧವಾಗಿರುವಂತೆ, ಕೃಷ್ಣಾರ್ಪಣ ಬುದ್ಧಿಯಿಲ್ಲದ ಯಜ್ಞಾದಿಗಳು ನಿರರ್ಥಕ ಎಂದರ್ಥ.

## ಶ್ರೀಹರಿಯ ನೈವೇದ್ಯಸ್ವೀಕಾರದ ರಹಸ್ಯ

೩.೫೫. ಅಹಂ ಯದಿ ನ ಗೃಹ್ಣಾಮಿ ತೇಷಾಂ ತು ಗ್ರಹಣಂ ಕುತಃ।
ಭಕ್ತಾನಾಮದನಾರ್ಥಾಯ ಗೃಹ್ಣಾಮಿ ಕಮಲಾಸನ॥

ಅನು – ಹೇ ಕಮಲಾಸನ! ಒಂದು ವೇಳೆ ನಾನು ಸ್ವೀಕರಿಸದಿದ್ದರೆ ಅವರಾದರೂ ಹೇಗೆ ಸ್ವೀಕರಿಸಿಯಾರು? ಭಕ್ತರು ಉಣ್ಣಲು ಅನುಕೂಲವಾಗಲು ನಾನು ಸ್ವೀಕರಿಸುವೆ.

ವಿ – ಭಗವಂತನ ವ್ಯಾಪಾರಗಳಿಲ್ಲದಿದ್ದರೆ ಉಳಿದ ಯಾರ ವ್ಯಾಪಾರವೂ ನಡೆಯದಿರು-ವುದರಿಂದ ಬ್ರಾಹ್ಮಣಾದಿಗಳಲ್ಲಿ ನಿಂತು ಭಗವಂತನು ಅವರಿಗೆ ನೀಡುವ ತನ್ನ ನೈವೇದ್ಯವನ್ನು ತಾನೇ ಸ್ವೀಕರಿಸುವನು ಎಂದು ಭಾವ.

೨. ಆ ಅನ್ನವನ್ನು ಸ್ವೀಕರಿಸಿ ಅವರಿಗೆ ಉಣ್ಣಲು ಅನುವುಮಾಡಿಕೊಡುವುದರ ಜೊತೆಗೆ ಭಗವಂತನಿಗೆ ನಿವೇದಿಸಿದ ಅನ್ನವನ್ನು ಉಣ್ಣುವುದರ ಫಲವಾದ ಮೋಕ್ಷಾದಿಗಳನ್ನೂ ಭಗವಂತನು ಅನುಗ್ರಹಿಸುವನು :

ಹೃದಿ ರೂಪಂ ಮುಖೇ ನಾಮ ನೈವೇದ್ಯಮುದರೇ ಹರೇಃ ।
ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಯಸ್ಯ ಸೋಽಚ್ಯುತಃ ॥ – ಕೃ.ಮಹಾರ್ಣವ

## ನೈವೇದ್ಯಶೇಷದಿಂದಲೇ ಪಿತ್ರಾದಿಕಾರ್ಯಗಳು ವಿಹಿತ

೩.೫೬. ತಸ್ಮಾನ್ನೈವೇದ್ಯಶೇಷೇಣ ದದತಾಂ ನಾಸ್ತಿ ಪಾತಕಮ್ ।
ಪಿತೃನ್ ದೇವಾಂಸ್ತಥಾ ವಿಪ್ರಾನುದ್ದಿಶ್ಯ ಪುರುಷರ್ಷಭ ॥

ಅನು – ಹೇ ಪುರುಷಶ್ರೇಷ್ಠ! ಆದ್ದರಿಂದ ನನ್ನ ನೈವೇದ್ಯಶೇಷವನ್ನು ಪಿತೃಗಳನ್ನು, ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ಉದ್ದೇಶಿಸಿ ನೀಡುವವನಿಗೆ ಯಾವ ಪಾಪವೂ ಇಲ್ಲ.

## ಶ್ರೀಹರಿಗೆ ನಿವೇದಿಸದ್ದು ಮಾರಕ

೩.೫೭. ಮಮ ನೈವೇದ್ಯಶೇಷೇಣ ಯೇ ನಿಂದಂತಿ ಮದರ್ಚನಮ್ ।
ಅಧಿಷ್ಠಾನೇಷು ದೇವೇಶ ತೇ ಯಾಂತಿ ಹ್ಯಧರಂ ತಮಃ ॥

ಅನು – ಹೇ ದೇವಶ್ರೇಷ್ಠನೇ! ನನ್ನ ನೈವೇದ್ಯಶೇಷದಿಂದ (ಬ್ರಾಹ್ಮಣನೇ ಮೊದಲಾದ) ಅಧಿಷ್ಠಾನಗಳಲ್ಲಿ ನಡೆಸುವ ನನ್ನ ಪೂಜೆಯನ್ನು ನಿಂದಿಸುವವರು ಅಂಧಂತಮಸ್ಸನ್ನು ಹೊಂದುವರು.

## ಪ್ರತಿಮಾನೈವೇದ್ಯದಲ್ಲಿ ವಿಶೇಷ

೩.೫೮. ಪ್ರತಿಮಾಯಾಮರ್ಪಿತಂ ಮೇ ನಾರ್ಪಯೇತ್ ಪ್ರತಿಮಾಂತರೇ ।
ಅಗ್ನಿವಿಪ್ರಾದ್ಯಧಿಷ್ಠಾನೇಷ್ವರ್ಪಯೇತ್ ತು ಮದಾಜ್ಞಯಾ ॥

ಅನು – ನನಗೆ ಪ್ರತಿಮೆಯೊಂದರಲ್ಲಿ ಅರ್ಪಿಸಿದ್ದನ್ನು ಮತ್ತೊಂದು ಪ್ರತಿಮೆಯಲ್ಲಿ ಅರ್ಪಿಸಬಾರದು. ಆದರೆ ಅಗ್ನಿ ಬ್ರಾಹ್ಮಣ ಮೊದಲಾದ ಅಧಿಷ್ಠಾನಗಳಲ್ಲಿ ಅರ್ಪಿಸಬೇಕು. ಇದು ನನ್ನ ಆಜ್ಞೆ.

ವಿ – ಬ್ರಹ್ಮದೇವರ ಪ್ರಶ್ನೆಗೆ ಇದು ಭಗವಂತನ ನೇರ ಉತ್ತರ. ಒಂದೆಡೆ ಅರ್ಪಿಸಿದ್ದನ್ನು ತನಗೇ ಇನ್ನೊಂದೆಡೆ ಅರ್ಪಿಸಬಾರದು ಎಂಬುದು ಪ್ರತಿಮೆಗಳಿಗೆ ಮಾತ್ರ ಸಂಬಂಧಿಸಿದ ವಿಷಯ.

ಬ್ರಾಹ್ಮಣಭೋಜನ ಮೊದಲಾದವುಗಳಲ್ಲಿ ಇದು ಅನ್ವಯಿಸುವುದಿಲ್ಲ. ಹೀಗೆ ವ್ಯವಸ್ಥಿತ ವಿಕಲ್ಪವನ್ನನುಸರಿಸಿದರೆ ಯಾವ ಅನುಪಪತ್ತಿಯೂ ಇರಲಾರದು ಎಂದು ಭಾವ.

೩೫೯. ಯಥಾSಗ್ನೌ ಸಂಸ್ಕೃತಾಜ್ಯಂ ತು ನ ಹಿ ಸಂಸ್ಕ್ರಿಯತೇ ಪುನಃ ।
ಅರ್ಪಿತಂ ಪ್ರತಿಮಾಯಾಂ ವೈ ನಾರ್ಪಯೇತ್ ಪ್ರತಿಮಾಂತರೇ ॥

ಅನು – ಹೇಗೆ ಅಗ್ನಿಯಲ್ಲಿ ಸಂಸ್ಕರಿಸಲ್ಪಟ್ಟ ತುಪ್ಪವು ಮತ್ತೊಮ್ಮೆ ಸಂಸ್ಕರಿಸಲ್ಪಡುವುದಿಲ್ಲವೋ ಹಾಗೆ ಒಂದು ಪ್ರತಿಮೆಯಲ್ಲಿ ಅರ್ಪಿಸಲ್ಪಟ್ಟಿದ್ದನ್ನು ಮತ್ತೊಂದು ಪ್ರತಿಮೆಯಲ್ಲಿ ಅರ್ಪಿಸಬಾರದು.

ವಿ : ಮನೆಯಲ್ಲಿ ಅನೇಕ ಭಗವನ್ಮೂರ್ತಿಗಳನ್ನು ಪೂಜಿಸುವುದಾದಲ್ಲಿ ಅವುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿಯೇ ನೈವೇದ್ಯ ಸಮರ್ಪಿಸಬೇಕು. ಒಂದು ಮೂರ್ತಿಗೆ ಅರ್ಪಿಸಿದ್ದನ್ನು ಮತ್ತೊಂದು ಮೂರ್ತಿಗೆ ಅರ್ಪಿಸಕೂಡದು ಎಂಬ ವಿಶೇಷ ನಿಯಮ ಇಲ್ಲಿ ಉಕ್ತವಾಗಿದೆ.

## ಬ್ರಾಹ್ಮಣಭೋಜನವು ಶ್ರೀಹರಿಯ ಪೂಜೆ

೩೬೦. ಸಂಸ್ಕೃತಾಜ್ಯಂ ಯಥಾ ಹ್ಯಗ್ನೌ ಹೂಯತೇSಗ್ನೌ ತಥೈವ ಚ ।
ಉಭಯತ್ರಾಪಿ ಗೃಹ್ಣಾಮಿ ನೈಕವಾರಂ ಪುನಃಪುನಃ ॥
ಏವಮೇವ ಯಥಾ ಬ್ರಹ್ಮನ್ ನೈಕವಾರಂ ದ್ವಿಜಾತಿಷು ।
ಪೌನಃಪುನ್ಯೇನ ಹ್ಯೇಕತ್ರ ತಜ್ಜಾತೀಯೇ ತಥೈವ ಚ ।
ನ ಗೃಹ್ಣಾಮಿ ಮಹಾಪ್ರಾಜ್ಞ ಗೃಹ್ಣಾಮಿ ತತ್ರ ತತ್ರ ವೈ ॥

ಅನು – ಹೇ ಬ್ರಹ್ಮನೇ ! ಹೇಗೆ ಅಗ್ನಿಯಲ್ಲಿ ಸಂಸ್ಕರಿಸಲ್ಪಟ್ಟ ತುಪ್ಪವು ಮತ್ತೆ ಅಗ್ನಿಯಲ್ಲಿಯೇ ಹೋಮಿಸಲ್ಪಟ್ಟಾಗ ಎರಡರಲ್ಲಿಯೂ ಮತ್ತೆ ಮತ್ತೆ ಅನೇಕಬಾರ ಸ್ವೀಕರಿಸುವೆನೋ ಹಾಗೆಯೇ ಬ್ರಾಹ್ಮಣಾದಿಗಳಲ್ಲಿ ಮತ್ತೆ ಮತ್ತೆ ಸ್ವೀಕರಿಸುವೆನು. ಆದರೆ ಹೇ ಮಹಾಜ್ಞಾನಿಯೇ! ಒಂದೇ ಜಾತಿಯ ಬ್ರಾಹ್ಮಣನಲ್ಲಿ ಮತ್ತೆ ಮತ್ತೆ ಸ್ವೀಕರಿಸುವುದಿಲ್ಲ. ವಿಶಿಷ್ಟಜಾತಿಯ ಬ್ರಾಹ್ಮಣರಲ್ಲಿಯಾದರೋ ಮತ್ತೆ ಮತ್ತೆ ಸ್ವೀಕರಿಸುವೆನು.

ವಿ – ಹೇಗೆ ಪ್ರತಿಮೆಯೊಂದರಲ್ಲಿ ಅರ್ಪಿಸಿದ್ದನ್ನು ಮತ್ತೊಂದು ಪ್ರತಿಮೆಯಲ್ಲಿ ಭಗವಂತನು ಸ್ವೀಕರಿಸುವುದಿಲ್ಲವೋ ಹಾಗೆ ಭಗವಂತನು ಬ್ರಾಹ್ಮಣನೊಬ್ಬನಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅನೇಕ ಬಾರಿಯಾಗುವಂತೆ ಸ್ವೀಕರಿಸುವುದಿಲ್ಲ. ಆದರೆ ವಿಶಿಷ್ಟಜಾತಿಯಲ್ಲಿ ಅಂದರೆ ಯತಿಯೊಬ್ಬನೊಳಗೆ ತಾನು ಸ್ವೀಕರಿಸಿದುದರ ಶೇಷವನ್ನು ಗೃಹಸ್ಥಾದಿಗಳಲ್ಲಿ ಮತ್ತೆ ಸ್ವೀಕರಿಸುವನು ಎಂದು ಭಾವ.

## ವಿಷ್ಣುನೈವೇದ್ಯ ಸಕಲರಿಗೂ ಗ್ರಾಹ್ಯ

೩೬೧. ವಿಷ್ಣುನಾಽತ್ತಂ ಸಮಶ್ನಂತಿ ಹೀತ್ಯಾದಿ ಶ್ರುತಿಚೋದಿತಮ್ ।
ವಿಷ್ಣ್ವಯ್ಯಂ ಪುರುಷಶ್ರೇಷ್ಠ ಮಾನಮಸ್ಮಿನ್ ಮಹಾಮತೇ ॥

ಅನು – ಹೇ ಮಹಾಜ್ಞಾನಿಯೇ! ಪುರುಷಶ್ರೇಷ್ಠನೇ! ''ವಿಷ್ಣುನಾಽತ್ತಂ ಸಮಶ್ನಂತಿ ಹಿ'' ಮೊದಲಾದ ಶ್ರುತಿಗಳು ಈ ವಿಷಯದಲ್ಲಿ ಪ್ರಮಾಣವೆಂದು ಅಂಗೀಕರಿಸಲ್ಪಡಬೇಕು.

ವಿ – ೧. ಇದುವರೆಗೂ ನೀಡಿದ ಉತ್ತರಕ್ಕೆ ಭಗವಂತನು ಶ್ರುತಿಯನ್ನು ಪ್ರಮಾಣವನ್ನಾಗಿ ಉದಾಹರಿಸುತ್ತಿದ್ದಾನೆ.

೨. ವಿಷ್ಣುನಾಽತ್ತಂ = ಭಗವಂತನಿಗೆ ನಿವೇದಿತವಾದದ್ದನ್ನು, ಸಮಶ್ನಂತಿ = (ದೇವಾದಿಗಳು) ಭಕ್ತಿಪೂರ್ವಕವಾಗಿ ಉಣ್ಣುವರು, ಹಿ = (ಎಂಬುದು) ಪ್ರಸಿದ್ಧ.

೩. ಭಗವಂತನ ವಾಕ್ಯಗಳು ಸ್ವತಃ ಪ್ರಮಾಣವಾಗಿದ್ದರೂ ಅಪ್ರಾಮಾಣ್ಯಶಂಕೆಯನ್ನು ಪರಿಹರಿಸಲು ಮಾತ್ರ ಈ ಶ್ರುತಿಯ ಉದಾಹರಣೆ. ಹೆಚ್ಚಿನ ಪ್ರಮಾಣಗಳು ದಾರ್ಢ್ಯವನ್ನು ಉಂಟುಮಾಡುವವು. ಆದ್ದರಿಂದಲೇ ಶ್ರುತಿಯೂ ಹಿ ಎಂದು ಮತ್ತೊಂದು ಪ್ರಮಾಣಪ್ರಸಿದ್ಧಿಯನ್ನು ಸೂಚಿಸುತ್ತಿದೆ ಎಂದು ತಿಳಿಯಬೇಕು ಹೊರತು ಭಗವದ್ವಾಕ್ಯದ ಪ್ರಾಮಾಣ್ಯವು ಶ್ರುತಿಯನ್ನು ಆಶ್ರಯಿಸಿದೆ ಎಂದು ಸರ್ವಥಾ ತಿಳಿಯಕೂಡದು.

೪. ಶ್ರೀಟೀಕಾಕೃತ್ಪಾದರು ತಮ್ಮ ನ್ಯಾಯಸುಧಾ, ಕರ್ಮನಿರ್ಣಯಟೀಕೆ ಮೊದಲಾದೆಡೆ ಈ ವಿಷಯದ ಸವಿಸ್ತೃತ ಉಪಪಾದನೆಯನ್ನು ನೀಡಿರುವರು.

೫. ಮೇಲಿನ ೧೨ ಶ್ಲೋಕಖಂಡಗಳು ಪಂಚರಾತ್ರದಿಂದಾರಿಸಲ್ಪಟ್ಟಿವೆ.

## ಭಗವಂತನಿಗೆ ಅರ್ಪಿಸದ ಸಕಲವೂ ನಿಷಿದ್ಧ

೩೬೨. ತಾಂಬೂಲಂ ಗಂಧಪುಷ್ಪಾದ್ಯಮಾಪಃ ಕ್ಷೀರಂ ಘೃತಂ ಮಧು ।
ಫಲಾನಿ ಭಕ್ಷ್ಯಭೋಜ್ಯಾನಿ ವಸ್ತ್ರಾದ್ಯಾಭರಣಾನಿ ಚ ॥
ವಿಷ್ಣೋರನರ್ಪಿತಂ ಮೋಹಾತ್ ಯೋ ಭುಂಕ್ತೇ ಮೋಹಕೃತ್ತಮಃ ।
ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ॥
ಕ್ರಿಮಿರಾಶಿಮಯೇ ಘೋರೇ ನರಕೇ ಪೂಯಶೋಣಿತೇ ।
ನಿಮಜ್ಯ ಪಿತೃಭಿಃ ಸಾರ್ಧಂ ಪಶ್ಚಾತ್ ಕಲ್ಪಶತತ್ರಯಮ್ ॥
ಕ್ರಿಮಿರ್ಭೂತ್ವಾ ಶ್ವವಿಷ್ಠಾಯಾಂ ತತಶ್ಚಂಡಾಲತಾಂ ವ್ರಜೇತ್ ।
ತಸ್ಮಾದನರ್ಪಿತಂ ವಿಷ್ಣೋರ್ನ ಸೇವೇತ ಕದಾಚನ ॥

ಅನು – ತಾಂಬೂಲ, ಗಂಧ, ಪುಷ್ಪ, ನೀರು, ಹಾಲು, ತುಪ್ಪ, ಜೇನು, ಹಣ್ಣು, ಭಕ್ಷ್ಯ, ಭೋಜ್ಯ, ಬಟ್ಟೆ, ಆಭರಣ ಮೊದಲಾದವುಗಳನ್ನು ಭಗವಂತನಿಗೆ ಅರ್ಪಿಸದೆ ಅಜ್ಞಾನದಿಂದ ಭುಂಜಿಸುವವನು ಅತಿಯಾದ ಮಿಥ್ಯಾಜ್ಞಾನಕ್ಕೆ ಕಾರಣನಾಗುವನು. ಸಹಸ್ರಕೋಟಿ ಕಲ್ಪಗಳವರೆಗೆ ಅಥವಾ ಶತಕೋಟಿಕಲ್ಪಗಳವರೆಗೆ ಅವನು ತನ್ನ ಪಿತೃಗಳ ಜೊತೆಗೆ ಕೀವು,ರಕ್ತಗಳಿಂದ ಕೂಡಿದ ಕ್ರಿಮಿರಾಶಿಗಳಿಂದ ತುಂಬಿದ ಘೋರನರಕದಲ್ಲಿ ಮುಳುಗಿ ನಂತರ ಮೂರುನೂರು ಕಲ್ಪಗಳ ವರೆಗೆ ನಾಯಿಯ ಮಲದಲ್ಲಿ ಕ್ರಿಮಿಯಾಗಿದ್ದು, ನಂತರ ಚಂಡಾಲ ಜನ್ಮವನ್ನು ಹೊಂದುವನು. ಆದ್ದರಿಂದ ವಿಷ್ಣುವಿಗೆ ಅರ್ಪಿಸದಿದ್ದನ್ನು ಎಂದೂ ಸೇವಿಸಬಾರದು.

ವಿ – ಮೋಹಕೃತ್ತಮಃ = ಅತಿಶಯವಾದ ಅಜ್ಞಾನಕ್ಕೆ ಜನಕ ಎಂದರೆ ತನ್ನ ಅಜ್ಞಾನ ಅಥವಾ ಮಿಥ್ಯಾಜ್ಞಾನಗಳಿಂದ ಭಗವಂತನಿಗೆ ಅರ್ಪಿಸದ ಮೇಲೆ ತಿಳಿಸಿದ ಪದಾರ್ಥಗಳನ್ನು ಭುಂಜಿಸುವ ವ್ಯಕ್ತಿಯು ತನ್ನ ಒಡನಾಡಿಗಳಿಗೂ ತನ್ನ ಆಚರಣೆಯೇ ಸರಿ ಎಂಬ ಮಿಥ್ಯಾಜ್ಞಾನಕ್ಕೆ ಕಾರಣವಾಗುವನು ಎಂದರ್ಥ ಎಂದು ವ್ಯಾಖ್ಯಾನದಲ್ಲಿದೆ.

## ಶ್ರೀಹರಿಗೆ ಅನರ್ಪಿತವಾದದ್ದು ಸರ್ವಥಾ ತ್ಯಾಜ್ಯ

೩೬೩. ಪರಮಾಪದ್ಗತೋ ವಾಽಪಿ ಮಹೋತ್ಸವಯುತೋಽಪಿ ವಾ ।
ಅನರ್ಪಿತಂ ಹರೇರ್ಯತ್ ತು ಭುಕ್ತಂ ತಚ್ಚ ಸುರಾಸಮಮ್ ॥

ಅನು – ಅತಿಯಾದ ಆಪತ್ಕಾಲದಲ್ಲೇ ಆಗಲಿ ಅಥವಾ ದೊಡ್ಡ ಉತ್ಸವದಲ್ಲಿ ಇರುವವನಾಗಲಿ ಶ್ರೀಹರಿಗೆ ಅರ್ಪಿಸದಿದ್ದನ್ನು ಭುಂಜಿಸಿದರೆ ಅದು ಮದ್ಯಕ್ಕೆ ಸಮ.

ವಿ – ೧. ಭಗವಂತನಿಗೆ ಅರ್ಪಿಸದಿದ್ದನ್ನು ಭುಂಜಿಸುವುದು, ಪಂಚಮಹಾಪಾತಕಗಳಲ್ಲಿ ಕಂಠತಃ ಗಣಿತವಲ್ಲದಿದ್ದರೂ ಪಂಚಮಹಾಪಾತಕಗಳಲ್ಲಿ ಒಂದಾದ ಸುರಾಪಾನಕ್ಕೆ ಇದು ಸಮ ಎಂಬುದರ ಮೂಲಕ ಅವುಗಳಂತೆಯೇ ಇದೂ ತ್ಯಾಜ್ಯ ಎಂದು ಭಾವ.

೨. ಮೇಲಿನ ಎರಡು ಶ್ಲೋಕಗಳು ಆತ್ರೇಯವಚನಗಳು ಎಂದು ವ್ಯಾಖ್ಯಾನದಲ್ಲಿದೆ.

## ಭಾಗವತದಲ್ಲಿ ಶ್ರೀರಾಮನ ಸ್ತೋತ್ರ

೩೬೪. ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಂ
ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಮ್ ।
ಮಾಯಾಮೃಗಂ ದಯಿತಯೇಪ್ಸಿತಮನ್ವಧಾವ-
ದ್ವಂದಾಮಹೇ ಪುರುಷ ತೇ ಚರಣಾರವಿಂದಮ್ ॥

ಅನು – ತ್ಯಜಿಸಲು ಕಷ್ಟವಾದ ದೇವತೆಗಳು ಬಯಸುವ ರಾಜ್ಯಲಕ್ಷ್ಮಿಯನ್ನು ತ್ಯಜಿಸಿ ಪೂಜ್ಯರ ಮಾತಿನಂತೆ ಅರಣ್ಯಕ್ಕೆ ಹೊರಟ, ಪತ್ನಿ ಬಯಸಿದ ಮಾಯಾಮೃಗವನ್ನು ಬೆನ್ನಟ್ಟಿದ, ಹೇ ಧರ್ಮಿಷ್ಠನಾದ ಪುರುಷನಾಮಕನಾದ ಭಗವಂತನೇ! ನಿನ್ನ ಚರಣಕಮಲಗಳನ್ನು ವಂದಿಸುವೆವು.

ವಿ – ಇದು ಭಾಗವತ ಏಕಾದಶಸ್ಕಂಧ ಪಂಚಮಾಧ್ಯಾಯದಲ್ಲಿ ಬರುವ ಶ್ರೀರಾಮಸ್ತೋತ್ರ. (೧೧/೫/೩೪)

## ಕ್ರೋಧವು ನಿಂದ್ಯ

೨೮೫. ಅಪಕಾರಿಣಿ ಕೋಪಶ್ಚೇತ್ ಕೋಪೇ ಕೋಪಃ ಕಥಂ ನ ತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಚತುರ್ಣಾಮಪಕಾರಿಣಿ ॥

ಅನು – ಅಪಕಾರಿಯಲ್ಲಿ ನಿನಗೆ ಕೋಪವೆಂದಾದರೆ ಕೋಪದಲ್ಲೇಕೆ ನಿನಗೆ ಕೋಪವಿಲ್ಲ? ಧರ್ಮ ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಿಗೂ ಅದು ಅಪಕಾರಿಯಲ್ಲವೇ!!

ವಿ – ಅರಿಷಡ್ವರ್ಗಗಳಲ್ಲಿ ಒಂದಾದ ಕ್ರೋಧವನ್ನು ತ್ಯಜಿಸಲು ತರ್ಕಬದ್ಧವಾಗಿ ಈ ಶ್ಲೋಕವು ವಿಧಿಸುತ್ತಿದೆ. ಅಪಕಾರವೆಸಗಿದ್ದೇ ಕೋಪತಾಳಲು ಕಾರಣ ಎಂದಾದರೆ ಪುರುಷಾರ್ಥಗಳಿಗೆಲ್ಲ ಅಪಕಾರವೆಸಗುವ ಕೋಪದಲ್ಲಿಯೂ ಕೋಪ ತಾಳಬೇಕು. ಪುರುಷಾರ್ಥಗಳ ಸಾಧನೆಗೆ ಅಡೆತಡೆಯಾಗುವ ಕೋಪವನ್ನು ನಿಗ್ರಹಿಸಬೇಕು ಎಂದು ಭಾವ.

## ಯತಿಯೇ ಬ್ರಾಹ್ಮಣರಲ್ಲಿ ಮುಖ್ಯ

೨೮೬. ಕಂಥಾಕೌಪೀನವಾಸಾಸ್ತು ದಂಡಧೃಗ್ಧ್ಯಾನತತ್ಪರಃ ।
ಏಕಾಕೀ ರಮತೇ ನಿತ್ಯಂ ತಂ ದೇವಾ ಬ್ರಾಹ್ಮಣಂ ವಿದುಃ ॥

ಅನು – ಕಂಥಾಕೌಪೀನಧರಿಸಿರುವ, ದಂಡ ಹಿಡಿದ, ಧ್ಯಾನದಲ್ಲಿ ಮಗ್ನನಾದ, ಒಬ್ಬೊಂಟಿಗನಾಗಿಯೇ ನಿತ್ಯವೂ ಆನಂದಿಸುವ ವ್ಯಕ್ತಿಯನ್ನು ದೇವತೆಗಳು ಬ್ರಾಹ್ಮಣ ಎನ್ನುವರು.

ವಿ – ೧. ಇದು ಸ್ಮೃತಿವಿಶೇಷದಲ್ಲಿ ಬರುವ ವಚನ.

೨. ಕಂಥಾಕೌಪೀನಧಾರೀ, ದಂಡಧೃಕ್ ಮೊದಲಾದ ವಿಶೇಷಣಗಳಿಂದ ಇಲ್ಲಿ ಪ್ರಸ್ತುತ-ನಾದವನು ಸನ್ಯಾಸಿ. ಬ್ರಾಹ್ಮಣ ಎಂದರೆ ಮುಖ್ಯಬ್ರಾಹ್ಮಣ ಎಂದರ್ಥ ಎಂದು ವ್ಯಾಖ್ಯಾನದಲ್ಲಿದೆ.

## ಪ್ರಾಣವಸ್ತ್ರಬುದ್ಧಿಯಿಂದ ಉದಕಪಾನವು ದಿವ್ಯವಸ್ತ್ರಲಾಭಕ್ಕೆ ಮಾರ್ಗ

೩೬೭. ಲಂಭುಕೋ ಹ ವಾಸೋ ಭವತ್ಯನಗ್ನೋ ಹ ಭವತಿ ।

ಅನು – ಅಲೌಕಿಕವಸ್ತ್ರವನ್ನು ಹೊಂದಿದವನಾಗುತ್ತಾನೆ, ನಗ್ನನಾಗುವುದಿಲ್ಲ.

ವಿ – ೧. ಇದು ಛಾಂದೋಗ್ಯೋಪನಿಷತ್ತಿನ ಪಂಚಮಾಧ್ಯಾಯದ್ವಿತೀಯಖಂಡವಚನ.

೨. ಪ್ರಾಣವಸ್ತ್ರಬುದ್ಧಿಯಿಂದ ಭೋಜನದ ಮೊದಲು ಮತ್ತು ನಂತರದ ನೀರನ್ನು ಕುಡಿಯುವವನು ಸ್ವರ್ಗವನ್ನು ಹೊಂದಿ ದಿವ್ಯವಸ್ತ್ರಗಳನ್ನು ಹೊಂದುತ್ತಾನೆ. ಮತ್ತೆ ಹುಟ್ಟಿದಾಗ ದಿವ್ಯವಸ್ತ್ರವನ್ನೇ ಪಡೆಯುವನು. ಕೊನೆಗೆ ಮುಕ್ತನಾಗಿ ಎಂದೂ ನಗ್ನನಾಗದ ಅವಸ್ಥೆಯನ್ನು ಹೊಂದುವನು :

"ಪ್ರಾಣಸ್ಯ ವಸ್ತ್ರಬುದ್ಧ್ಯಾ ತು ಭೋಜನೋಭಯತಃ ಪಿಬನ್ ।
ಸ್ವರ್ಗೇ ಮುಕ್ತೌ ತಥಾ ದಿವ್ಯವಸ್ತ್ರಲಾಭೀ ಭವತ್ಯಲಮ್ ॥ ಇತಿ ಪ್ರಭಂಜನೇ ।"
– ಛಾಂದೋಗ್ಯೋಪನಿಷದ್ಭಾಷ್ಯ

## ಸನ್ನ್ಯಾಸಿಯೇ ನರೋತ್ತಮ

೩೬೮. ಯಃ ಸ್ವತಃ ಪರತೋ ವಾಽಪಿ ಜಾತನಿರ್ವೇದ ಆತ್ಮವಾನ್ ।
ಹೃದಿ ಕೃತ್ವಾಽಚ್ಯುತಂ ಗೇಹಾತ್ ಪ್ರವ್ರಜೇತ್ ಸ ನರೋತ್ತಮಃ ॥

ಅನು – ಭಗವಂತನನ್ನೇ ಧ್ಯಾನಿಸುವ ಯಾವ ಪುರುಷನು ತಾನಾಗಿಯೇ ಅಥವಾ ಇನ್ನೊಂದೆಡೆಯಿಂದ ವೈರಾಗ್ಯ ಹೊಂದಿ ಹೃದಯದಲ್ಲಿ ಅಚ್ಯುತನನ್ನೇ ನೆನೆಯುತ್ತಾ ಮನೆಯಿಂದ ಹೊರಡುವನೋ ಅವನೇ ನರೋತ್ತಮ.

ವಿ – ೧. ಇದು ಭಾಗವತವಚನ.

೨. ಜಗತ್ತಿನ ಭೋಗಗಳಲ್ಲಿ ವಿರಕ್ತಿ, ಹಾಗೂ ಸದಾ ಭಗವದ್ಭಕ್ತಿ ಇವೇ ಒಬ್ಬ ಮನುಷ್ಯೋತ್ತಮನ ಲಕ್ಷಣ ಎಂದು ಭಾವ.

## ಶ್ರೀಹರಿಯ ಅಪೂರ್ವವಾದ ಮಹಿಮೆ

೩೬೯. ತತ್ ತಸ್ಥುಷಶ್ಚ ಜಗತಶ್ಚ ಭವಾನಧೀಶೋ
ಯನ್ಮಾಯಯೋತ್ಥಗುಣವಿಕ್ರಿಯಯೋಪನೀತಾನ್ ।
ಅರ್ಥಾನ್ ಜುಷನ್ನಪಿ ಹೃಷೀಕಪತೇ ನ ಲಿಪ್ತೋ
ಯೇಽನ್ಯೇ ಸ್ವತಃ ಪರಿಹೃತಾದಪಿ ಬಿಭ್ಯತಿ ಸ್ಮ ॥

ಅನು – ನೀನು ಜಡಗಳಿಗೂ ಚೇತನಗಳಿಗೂ ಸರ್ವಸ್ವಾಮಿಯಾದವನು. ನಿನ್ನ ಇಚ್ಛೆಯಿಂದಲೇ ಗುಣಗಳಿಗೆ ಅನುಗುಣವಾಗಿ ನಾನಾವಿಧವಾದ ವಿಕಾರಗಳಿಗೆ ಒಳಗಾಗಿರುವ ಈ ವಿಷಯಗಳನ್ನು ಸೇವಿಸುತ್ತಿದ್ದರೂ ಎಲ್ಲ ಇಂದ್ರಿಯಗಳ ಅಧಿಪತಿಯಾದ ಶ್ರೀಕೃಷ್ಣನೇ!, ಇತರರು ಅವುಗಳನ್ನು ಜಯಿಸಿದ್ದೂ ಅಂಜುವಂತಹ ಇವುಗಳ ಲೇಪಕ್ಕೆ ನೀನು ಸರ್ವಥಾ ಒಳಗಾಗದವನು.

ವಿ – ಇದು ಭಾಗವತವಚನ (೧೧/೬/೧೭)

## ಶಿಷ್ಯನ ಲಕ್ಷಣಗಳು

೩೭೦. ಆಸ್ತಿಕೋ ಧರ್ಮಶೀಲಶ್ಚ ಶೀಲವಾನ್ ವಿಷ್ಣುತತ್ಪರಃ।
ಗಂಭೀರಶ್ಚತುರೋ ಧೀರಃ ಶಿಷ್ಯ ಇತ್ಯಭಿಧೀಯತೇ ॥

ಅನು – ಆಸ್ತಿಕನೂ, ಧಾರ್ಮಿಕನೂ, ಶೀಲವಂತನೂ, ವಿಷ್ಣುಭಕ್ತನೂ, ಗಂಭೀರನೂ, ಚತುರನೂ, ಧೀರನೂ ಆದವನನ್ನು ಶಿಷ್ಯ ಎನ್ನುವರು.

ವಿ – ೧. ಅಧ್ಯಾತ್ಮವಿದ್ಯೆಯ ಅಧ್ಯಯನಕ್ಕೆ ಹೊರಡುವವನ ಮೂಲಭೂತಗುಣಗಳನ್ನು ಇಲ್ಲಿ ವಿವರಿಸಲಾಗಿದೆ.

೨. ಶ್ರೀಮದಾಚಾರ್ಯರು ಸೂತ್ರಭಾಷ್ಯದಲ್ಲಿ 'ಅಥ'ಶಬ್ದದ ವಿವರಣೆಯಲ್ಲಿ ನೀಡಿರುವ ಅಧಿಕಾರಿಯ ಲಕ್ಷಣಗಳನ್ನು, ಅವರ ಸಾಕ್ಷಾಚ್ಛಿಷ್ಯರಾದ ಶ್ರೀವಿಷ್ಣುತೀರ್ಥರ ಸನ್ಯಾಸಪದ್ಧತಿಯಲ್ಲಿನ ವಿವರಗಳನ್ನೂ ಇಲ್ಲಿ ಗಮನಿಸಬೇಕು.

೩೭೧. ಶರೀರಂ ವಸು ವಿಜ್ಞಾನಂ ವಾಸಃ ಕರ್ಮ ಗುಣಾನಸೂನ್।
ಗುರ್ವರ್ಥಂ ಧಾರಯೇದ್ಯಸ್ತು ಸ ಶಿಷ್ಯ ನೇತರಃ ಸ್ಮೃತಃ॥

ಅನು – ತನ್ನ ದೇಹ, ಸಂಪತ್ತು, ವಿಜ್ಞಾನ, ವಸ್ತ್ರ, ಕರ್ಮ, ಗುಣ ಮತ್ತು ಪ್ರಾಣಗಳನ್ನು ಗುರುವಿಗಾಗಿಯೇ ಧರಿಸಿರುವವನು ಶಿಷ್ಯ; ಬೇರೆಯವನಲ್ಲ.

ವಿ : ತನ್ನ ಸಮಸ್ತವನ್ನು ಗುರುಸೇವೆಗೆಂದು ಮೀಸಲಿಡುವುದು ಶಿಷ್ಯನಾದವನ ಮುಖ್ಯಕರ್ತವ್ಯ ಎಂದರ್ಥ : 'ಶಿಷ್ಯಸ್ವಾರ್ಥಃ ಸ್ವೀಯ ಏವ' – (ಮ.ಭಾ.ತಾ.ನಿ.)

೩೭೨. ಯಸ್ತ್ವಾಚಾರ್ಯಪರಾಧೀನಃ ಸದ್ವೃತ್ತೌ ಶಾಸ್ಯತೇ ಯದಿ।
ಶಾಸನೇ ಸ್ಥಿತವೃತ್ತಿಶ್ಚ ಶಿಷ್ಯಃ ಸದ್ಭಿರುದಾಹೃತಃ॥

ಅನು – ಯಾರು ಗುರುವಿಗೆ ಅಧೀನನಾಗಿಯೇ ಇರುವನೋ ಸತ್ಕಾರ್ಯದಲ್ಲಿ

ಗುರುವಿನಿಂದ ತಿಳಿ ಹೇಳಲ್ಪಡುತ್ತಾ ಅದರಂತೆಯೇ ನಡೆಯುವನೋ ಅವನನ್ನು ಸಜ್ಜನರು ಶಿಷ್ಯ ಎನ್ನುವರು.

ವಿ : ಗುರುವಿಗೆ ಸಂಪೂರ್ಣವಾಗಿ ಅಧೀನನಾಗಿ ನಡೆದುಕೊಳ್ಳುವುದು ಶಿಷ್ಯನ ಮುಖ್ಯ ಕರ್ತವ್ಯ ಎಂದರ್ಥ.

## ಜ್ಞಾನಹೀನನಾದ ಗುರುವನ್ನು ಆಶ್ರಯಿಸಬಾರದು

೩೭೩. ಜ್ಞಾನಹೀನಂ ಗುರುಂ ಪ್ರಾಪ್ಯ ಕುತೋ ಮೋಕ್ಷಮವಾಪ್ನುಯಾತ್ ।
ಭಿನ್ನನಾವಾಶ್ರಯಃ ಸ್ತಬ್ಧೋ ಯಥಾ ಪಾರಂ ನ ಗಚ್ಛತಿ ॥

ಅನು – ಜ್ಞಾನ ಹೀನನಾದ ಗುರುವನ್ನು ಹೊಂದಿ ಹೇಗೆ ತಾನೆ ಮೋಕ್ಷವನ್ನು ಹೊಂದಲಾದೀತು? ತೂತುಬಿದ್ದ ನೌಕೆಯನ್ನಾಶ್ರಯಿಸಿ ಅಜ್ಞಾನಿಯು ತೀರವನ್ನು ಹೇಗೆ ಮುಟ್ಟುವುದಿಲ್ಲವೋ ಹಾಗೆ.

ವಿ – ೧. ಇದು ಮಹಾಭಾರತದ ವಚನ.

೨. ಗುರುವನ್ನು ಆಶ್ರಯಿಸುವುದು ಜ್ಞಾನಪ್ರಾಪ್ತಿಗಾಗಿ; ಆದ್ದರಿಂದ ಜ್ಞಾನಹೀನನಾದ ಗುರುವನ್ನು ಸರ್ವಥಾ ಆಶ್ರಯಿಸಕೂಡದು ಎಂದರ್ಥ.

೩. ಇದು ಇಂದಿನ ಕಾಲದ ಬಾಬಾಗಳು ಮೊದಲಾದವರಿಗೆ ವಿಶೇಷವಾಗಿ ಅನ್ವಯಿಸುವ ವಚನ ಎಂದು ತಿಳಿಯಬಹುದು. ಅವರು ಜ್ಞಾನ ನೀಡುವ ಬದಲು ಬೂದಿ ಮೊದಲಾದವುಗಳನ್ನು ನೀಡುವುದೇ ಗುರುತ್ವ ಎಂದು ತಿಳಿದವರು. ಇದರಂತೆ ಅವರನ್ನು ಗುರುಗಳೆಂದು ನಂಬುವ ಜನರೂ ಸಹ ಅವಿವೇಕಿಗಳೇ ಎಂದರ್ಥ.

## ಸನ್ನ್ಯಾಸಾಶ್ರಮದ ಮಹತ್ತ್ವ

೩೭೪. ತ್ರಿಂಶತ್ ಪೂರ್ವಾನ್ ತ್ರಿಂಶತ್ ಪರಾನ್ ತ್ರಿಂಶಚ್ಚ ಪರತಃ ಪರಾನ್ ।
ಸದ್ಯಃ ಸನ್ನ್ಯಸನಾದೇವ ನರಕಾತ್ ತ್ರಾಯತೇ ಪಿತೄನ್ ॥

ಅನು – ಸನ್ನ್ಯಾಸ ಪಡೆಯುವ ಮಾತ್ರದಿಂದಲೇ ತತ್ಕ್ಷಣ ಹಿಂದಿನ ಮೂವತ್ತು ಪಿತೃಗಳನ್ನು ಮುಂದಿನ ಮೂವತ್ತು ಪೀಳಿಗೆಗಳನ್ನು ಅದರ ಮುಂದಿನ ಮೂವತ್ತನ್ನೂ ನರಕದಿಂದ ಪಾರುಮಾಡುವನು.

ವಿ : ೧. ಇದು ಸನ್ನ್ಯಾಸಾಶ್ರಮದ ಪ್ರಶಂಸೆ. ಯೋಗ್ಯರೀತಿಯಲ್ಲಿ ಸನ್ನ್ಯಾಸ ಸ್ವೀಕರಿಸುವುದು ವಂಶೋದ್ಧಾರಕ್ಕೆ ಕಾರಣ ಎಂದರ್ಥ.

೨. ಸನ್ನ್ಯಾಸಿಗಳಿಗೆ ಪಿತೃಕಾರ್ಯ ವಿಹಿತವಾಗಿಲ್ಲವಾದ್ದರಿಂದ ಅದರಿಂದ ಪ್ರತ್ಯವಾಯವೇ? ಎಂಬ ಶಂಕೆಗೆ ಇದು ಉತ್ತರವಾಗಿದೆ. ಸನ್ನ್ಯಾಸದೀಕ್ಷೆಯ ಕಾಲಕ್ಕೇ ಅವರೆಲ್ಲರ ಉದ್ಧಾರವಾಗು-ವುದರಿಂದ ಅನಂತರ ಅದರ ಅಗತ್ಯ ಅವರಿಗಿರುವುದಿಲ್ಲ ಎಂದರ್ಥ.

## ಯತಿಪೂಜೆಯ ಹಿರಿಮೆ

೩೭೫. ಯತ್ರ ಭಿಕ್ಷುರಹಂ ತತ್ರ ತಂ ಚ ಮಾಂ ವಿದ್ಧಿ ಭಾರತ ।
ಪೂಜಿತೇ ಪೂಜಿತೋಽಹಂ ವೈ ಪೂಜಿತಾಃ ಸರ್ವದೇವತಾಃ ॥

ಅನು – ಹೇ ಭರತಕುಲೋತ್ಪನ್ನನೇ! ಎಲ್ಲಿ ಸನ್ನ್ಯಾಸಿಯು ಇರುವನೋ ಅಲ್ಲಿ ನಾನಿರುವೆ. ಅವನು ಪೂಜಿತನಾದರೆ ನಾನೂ ಪೂಜಿತನಾದಂತೆ. ಎಲ್ಲ ದೇವತೆಗಳೂ ಪೂಜಿತರಾದಂತೆ.

ವಿ : ಸನ್ನ್ಯಾಸಿಗಳಲ್ಲಿ ಶ್ರೀಹರಿಯ ವಿಶೇಷ ವಿಭೂತಿ ರೂಪ ಇರುವ ವಿವರ ಶ್ರೀಮದ್ಭಾಗವತ ಏಕಾದಶಸ್ಕಂಧದಲ್ಲಿ ಬಂದಿದ್ದು (ಆಶ್ರಮಾಣಾಮಹಂ ತುರ್ಯಃ - ೧೬/೧೯) ಇದು ಅದಕ್ಕೆ ವಿವರಣೆಯಂತಿದೆ.

## ಯತಿಗಳು ಸದಾ ಪೂಜ್ಯರು

೩೭೬. ದುರ್ವೃತ್ತೋ ವಾ ಸುವೃತ್ತೋ ವಾ ಮೂರ್ಖಃ ಪಂಡಿತ ಏವ ವಾ ।
ಕಾಷಾಯದಂಡಮಾತ್ರೇಣ ಯತಿಃ ಪೂಜ್ಯೋ ಯುಧಿಷ್ಠಿರ ॥

ಅನು – ಹೇ ಯುಧಿಷ್ಠಿರ! ಹೇಗೆ ಸದಾಚಾರಿಯಾದ ಪಂಡಿತನಾದ ಯತಿಯು ಪೂಜ್ಯನೋ ಹಾಗೆಯೇ ದುರಾಚಾರಿಯೂ ಮೂರ್ಖನೂ ಆದ ಯತಿಯು ಸಹ ಕಾಷಾಯದಂಡಮಾತ್ರದಿಂದಲೇ ಪೂಜ್ಯನೆನಿಸುವನು.

ವಿ – ಇಲ್ಲಿ ಪೂಜ್ಯತ್ವಕ್ಕೆ ಸದಾಚಾರ ಮತ್ತು ಪಾಂಡಿತ್ಯವನ್ನು ಕಾರಣವನ್ನಾಗಿ ಶ್ಲೋಕದಲ್ಲಿ ತಿಳಿಸಿರುವುದು ಅಸಂಗತವೆನಿಸುವುದು; ಸದಾಚಾರಿಗಳೂ ಹಾಗೂ ಪಂಡಿತರು ಪೂಜ್ಯರೆಂಬುದು ವಿವಾದಿತವೇ ಅಲ್ಲ; ಆದ್ದರಿಂದ ಇಲ್ಲಿನ 'ವಾ'ಶಬ್ದಕ್ಕೆ ಯಥಾ ಎಂಬರ್ಥದಲ್ಲಿ ವ್ಯಾಖ್ಯಾನದಲ್ಲಿ ಅನ್ವಯಿಸಲಾಗಿದೆ.

## ಇತರ ಆಶ್ರಮಿಗಳಿಗಿಂತ ಯತಿಯು ಶ್ರೇಷ್ಠ

೩೭೭. ಬ್ರಹ್ಮಚಾರಿಸಹಸ್ರೇಣ ವಾನಪ್ರಸ್ಥಶತೇನ ಚ ।
ಗೃಹಸ್ಥಾನಾಂ ತಥಾ ಕೋಟ್ಯಾ ಯತಿರೇಕೋ ವಿಶಿಷ್ಯತೇ ॥

ಅನು – ಸಾವಿರ ಬ್ರಹ್ಮಚಾರಿಗಳಿಗಿಂತಲೂ, ನೂರು ವಾನಪ್ರಸ್ಥರಿಗಿಂತಲೂ, ಕೋಟಿ ಗೃಹಸ್ಥರಿಗಿಂತಲೂ ಒಬ್ಬ ಯತಿಯೇ ಶ್ರೇಷ್ಠ.

ವಿ – ೧. ಯತಿಯ ಶ್ರೇಷ್ಠತೆಯನ್ನು ನಿರ್ವಿವಾದವಾಗಿ ಶ್ರೀಮದಾಚಾರ್ಯರು ಗೀತಾಭಾಷ್ಯದ ಐದನೇ ಅಧ್ಯಾಯದಲ್ಲಿ ವಿವರಿಸಿರುವುದನ್ನು ಇಲ್ಲಿ ತಿಳಿಯಬೇಕು.

೨. ಇದು ಈ ಕೆಳಗಿನ ಶ್ಲೋಕದ ವಿವರಣೆಯಂತಿದೆ.

ವಟೌ ತು ಸಮದತ್ತಂ ಸ್ಯಾತ್ ಗೃಹಸ್ಥೇ ದ್ವಿಗುಣಂ ಭವೇತ್ ।
ವಾನಪ್ರಸ್ಥೇ ಶತಗುಣಂ ಯತೌ ದತ್ತಮನಂತಕಮ್ ॥

## ಯತಿಭೋಜನದ ಮಹಿಮೆ

೩೭೮. ಸಕೃದೇಕೇನ ಭುಕ್ತೇನ ಕೋಟಿಕೋಟಿಗುಣಂ ಭವೇತ್ ।
ಕಿಂಪುನರ್ಬಹುಭಿರ್ಭುಕ್ತೈಸ್ತೇಭ್ಯಃ ಸಂಖ್ಯಾ ನ ವಿದ್ಯತೇ ॥

ಅನು – ಒಮ್ಮೆ ಒಬ್ಬ (ಯತಿಯು) ಉಣ್ಣುವುದು (ಬ್ರಹ್ಮಚಾರಿ ಮೊದಲಾದವರು ಉಣ್ಣುವುದಕ್ಕಿಂತ) ಕೋಟಿಕೋಟಿಪಟ್ಟು ಅಧಿಕ. ಅನೇಕರು ಉಂಡರೆ ಮತ್ತೇನು? ಅದಕ್ಕೆ ಸಂಖ್ಯೆಯೇ ಇಲ್ಲ.

ವಿ – ಒಬ್ಬ ಸನ್ಯಾಸಿಗೆ ಭಿಕ್ಷೆ ನೀಡುವುದರಿಂದ ದೊರೆಯುವ ಪುಣ್ಯವು ಉಳಿದ ಯಾವುದೇ ಆಶ್ರಮಿಗೆ ನೀಡುವ ಅನ್ನದಾನಕ್ಕಿಂತ ಅತ್ಯಧಿಕಪಟ್ಟು ಹೆಚ್ಚಿನದು ಎಂದು ಭಾವ.

## ಪಿತೃಕಾರ್ಯದಲ್ಲಿ ಯತಿಗಳಿಗೆ ಭಿಕ್ಷೆಯು ವಿಹಿತ

೩೭೯. ತಸ್ಯ ಶ್ರಾದ್ಧೇ ವಿಶೇಷೇಣ ಪುಣ್ಯೇಷು ದಿವಸೇಷು ಚ ।
ನಾಮ ಚೋದ್ದಿಶ್ಯ ದಾತವ್ಯಂ ಪಿತೄಣಾಂ ತೃಪ್ತಿಮಿಚ್ಛತಾ ॥

ಅನು – ಪಿತೃಗಳ ತೃಪ್ತಿಯನ್ನು ಬಯಸುವವನು ಶ್ರಾದ್ಧದಿನದಲ್ಲಿ, ಪುಣ್ಯದಿವಸಗಳಲ್ಲಿ ಪಿತೃಗಳ ಹೆಸರನ್ನು ಹೇಳಿ ಯತಿಗೆ (ಭಿಕ್ಷೆ) ನೀಡಬೇಕು.

ವಿ – ೧. ಯತಿಭಿಕ್ಷೆಯು ಶ್ರಾದ್ಧದಿನಗಳಲ್ಲಿ ಅತ್ಯಂತ ಹೆಚ್ಚಿನ ಪುಣ್ಯಕರ. ಪಿತೃಗಳಿಗೂ ಪ್ರೀತಿಕರ ಎಂಬುದು ಭಾಗವತದ ಸಪ್ತಮಸ್ಕಂಧದಲ್ಲಿ ವಿಸ್ತೃತವಾಗಿ ತಿಳಿಸಲ್ಪಟ್ಟಿದೆ.

೨. ಮೇಲಿನ ೭ ಶ್ಲೋಕಗಳು ಮಹಾಭಾರತದಲ್ಲಿಯವು.

## ಯದುಕುಲಸಂಹಾರಕ್ಕೆ ಕಾರಣ

೩೮೦. ತದಿದಂ ಯಾದವಕುಲಂ ವೀರ್ಯಶೌರ್ಯಶ್ರಿಯೋದ್ಧತಮ್ ।
ಲೋಕಂ ಜಿಘೃಕ್ಷತ್ಯೌದ್ಧತ್ಯಂ ವೇಲಾಮಿವ ಮಹಾರ್ಣವಃ ॥

ಅನು – ವೀರ್ಯ, ಶೌರ್ಯ ಸಂಪತ್ತುಗಳಿಂದ ಕೂಡಿರುವ ಈ ಯಾದವ ಕುಲವು ಮಹಾಸಾಗರವು ತೀರವನ್ನು ಹೇಗೋ ಹಾಗೆ ಊರ್ಧ್ವಲೋಕವನ್ನು ಪಡೆಯುವುದು.

ವಿ – ೧.ಇದು ಭಾಗವತದ ವಚನ. (೧೧/೬/೨೯)

೨. ಮೇಲ್ನೋಟಕ್ಕೆ ಈ ಶ್ಲೋಕಕ್ಕೆ ವೀರ್ಯಶೌರ್ಯ ಸಂಪತ್ತುಗಳಿಂದ ಉನ್ಮತ್ತವಾದ ಯಾದವ ಕುಲವು ಊರ್ಧ್ವಲೋಕಗಳನ್ನೇ ಆಕ್ರಮಿಸಬಯಸುವುದು ಎಂಬ ಅರ್ಥ ತೋರುತ್ತದೆ; ಆದರೆ ಅತ್ಯಂತ ಭಗವನ್ನಿಷ್ಠವಾದ ಯದುಕುಲವು ಅಂತಹ ಅಯೋಗ್ಯಕಾರ್ಯವನ್ನು ಸರ್ವಥಾ ಮಾಡಲಾರದು ಎಂಬುದು ಸ್ಪಷ್ಟ; ಈ ಹಿನ್ನೆಲೆಯಲ್ಲಿ ಇದಕ್ಕೆ ತಾತ್ಪರ್ಯಭೂತವಾದ ಅರ್ಥವನ್ನು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಬಂದಿರುವಂತೆ ವ್ಯಾಖ್ಯಾನದಲ್ಲಿ ವಿವರಿಸಲಾಗಿದೆ.

೩೮೧. **ಯದ್ಯಸಂಹೃತ್ಯ ದೃಪ್ತಾನಾಂ ಯದೂನಾಂ ವಿಪುಲಂ ಕುಲಮ್ ।**
**ಗಂತಾऽಸ್ಮ್ಯನೇನ ಲೋಕೋऽಯಮುಲ್ಬಣೇನ ವಿನಂಕ್ಷ್ಯತಿ ॥**

ಅನು – ನಾನೇನಾದರೂ ಬೀಗುತ್ತಿರುವ ಈ ಯಾದವರ ಅಪಾರವಾದ ಸಮೂಹವನ್ನು ಉಪಸಂಹರಿಸದೆ ಪರಂಧಾಮಕ್ಕೆ ತೆರಳಿದಲ್ಲಿ ಈ ಲೋಕದಲ್ಲಿ ಕಲಿಯುಗವು ಪ್ರವೇಶಿಸಲು ಅಶಕ್ಯವಾಗುವುದು.

ವಿ – ೧. ಇದು ಭಾಗವತದ ವಚನ (೧೧/೬/೩೦).

೨. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಈಗಾಗಲೇ ಶ್ಲೋಕ ೧೫೭ ರ ವಿವರಣೆಯಲ್ಲಿ ನೀಡಲಾಗಿದೆ.

ವಿಧಿನಿಷೇಧಗಳ ಅಂತರ್ಯ

೩೮೨. **ದೋಷಬುದ್ಧ್ಯೋಭಯಾತೀತೋ ನಿಷಿದ್ಧಾನ್ನ ನಿವರ್ತತೇ ।**
**ಗುಣಬುದ್ಧ್ಯಾ ಚ ವಿಹಿತಂ ನ ಕರೋತಿ ಯಥಾऽರ್ಭಕಃ ॥**

ಅನು – ಜ್ಞಾನಿಯಾದವನು ಬಾಲಕನು ಹೇಗೋ ಹಾಗೆ, ನಾನು ಸ್ವತಂತ್ರಕರ್ತನಲ್ಲ ಭಗವಂತನೇ ಸ್ವತಂತ್ರಕರ್ತ ಎಂಬ ಎರಡು ವಿಧ ಭಾವನೆಗಳಿಂದ ಕೂಡಿರುವನಾದ್ದರಿಂದ ದೋಷಬುದ್ಧಿಯಿಂದ ನಿಷಿದ್ಧಕಾರ್ಯಗಳಿಂದ ಹಿಂತೆಗೆಯಲಾರ, ಗುಣಬುದ್ಧಿಯಿಂದ ವಿಹಿತಕಾರ್ಯದಲ್ಲಿ ತೊಡಗಲಾರ ಎಂದರೆ ಕೇವಲ ಮೋಕ್ಷಕ್ಕಾಗಿಯೇ ಆ ಎರಡೂ ಕಾರ್ಯಗಳಲ್ಲಿ ತೊಡಗುವನು.

ವಿ – ೧. ಇದು ಭಾಗವತದ ವಚನ (೧೧/೭/೧೧).

೨. ಜ್ಞಾನಿಯಾದವನು ವಿಹಿತಗಳನ್ನು ಬಿಡಲಾರ. ನಿಷಿದ್ಧಗಳನ್ನು ಮಾಡಲಾರ. ಆದರೆ ಅವನು

ಹಾಗೆ ಮಾಡುವಲ್ಲಿ ಗುಣಬುದ್ಧಿ ದೋಷಬುದ್ಧಿಗಳು ಕಾರಣವಾಗದೆ ಕೇವಲ ಭಗವತ್ಪ್ರೀತಿಪೂರ್ವಕವಾದ ಕರ್ತವ್ಯಬುದ್ಧಿಯಿಂದ ಮಾತ್ರ ಮಾಡುವನು ಎಂದರ್ಥ.

### ವಿಷ್ಣುಸನ್ನಿಧಿಯಲ್ಲಿ ಮಾಡಿದ್ದು ಅನಂತಮಡಿ

೩೮೩. ಗೃಹೇ ತ್ವೇಕಗುಣಂ ಪ್ರೋಕ್ತಂ ಗೋಷ್ಠೇ ಶತಗುಣಂ ಭವೇತ್ ।
ನದ್ಯಾಂ ಶತಸಹಸ್ರಂ ತು ಅನಂತಂ ವಿಷ್ಣುಸನ್ನಿಧೌ ॥

ಅನು – ಮನೆಯಲ್ಲಿ ಮಾಡುವ ಕಾರ್ಯ ಅದರಷ್ಟೇ ಫಲಕೊಡುತ್ತದೆ; ಗೋಷ್ಠದಲ್ಲಿ ಮಾಡಿದ ಪುಣ್ಯ ನೂರುಪಟ್ಟು ಹೆಚ್ಚು ಫಲ ನೀಡುವುದು; ನದೀತೀರದಲ್ಲಿ ಮಾಡಿದ್ದು ಲಕ್ಷಪಟ್ಟು ಫಲನೀಡಿದರೆ, ಭಗವತ್ಸನ್ನಿಧಿಯಲ್ಲಿ ಮಾಡಿದ್ದು ಅನಂತಪಟ್ಟು ಫಲಿಸುವುದು.

ವಿ – ೧. ಇದು ವ್ಯಾಸವಚನ.

೨. ಧರ್ಮಕಾರ್ಯವು ಸ್ಥಳವಿಶೇಷದ ಮಹಿಮೆಯಿಂದಾಗಿ ಫಲವಿಶೇಷವನ್ನು ಕೊಡುವುದು ಎಂದರ್ಥ.

೩. ಗೋವುಗಳ ಸನ್ನಿಧಿ ನದೀತೀರ, ವಿಷ್ಣುಸನ್ನಿಧಿ ಇವು ಒಂದಕ್ಕಿಂತ ಒಂದು ಮಿಗಿಲು. ವಿಷ್ಣುಸನ್ನಿಧಿಯಲ್ಲಿ ಮಾಡಿದ್ದು ಮಾತ್ರ ಅನಂತ ಎಂಬುದು ವಿಶೇಷ.

೪. ಇದರಿಂದ ಮನೆಯಲ್ಲಿ ಪುಣ್ಯಕಾರ್ಯ ಮಾಡಬಾರದು ಎಂದರ್ಥವಲ್ಲ. ಮನೆಯಲ್ಲಿ ಸಾಲಿಗ್ರಾಮ, ವಿಷ್ಣುಪ್ರತಿಮೆಗಳನ್ನು ಇರಿಸಿಕೊಂಡಿದ್ದೇ ಪುಣ್ಯಕಾರ್ಯಮಾಡಿದಾಗ ವಿಶೇಷ ಫಲ ಎಂದು ಭಾವ.

### ತಾರತಮ್ಯಕ್ರಮದಲ್ಲಿ ಶ್ರೀಹರಿಗುರುಗಳಲ್ಲಿ ಭಕ್ತಿ ಕರ್ತವ್ಯ

೩೮೪. ಗುರೂನ್ ಕೃಷ್ಣಂ ಚ ತೀರ್ಥಂ ಚ ಯತ್ನಭಕ್ತ್ಯಾ ಸ್ವಶಕ್ತಿತಃ ।
ಜ್ಯೇಷ್ಠಾಂಶ್ಚ ಪ್ರಣಮೇದ್ವಿದ್ವಾನ್ ತಾರತಮ್ಯಕ್ರಮೇಣ ವೈ ॥

ಅನು – ಜ್ಞಾನಿಯಾದವನು ಪ್ರಯತ್ನಪೂರ್ವಕವಾದ ಭಕ್ತಿಯಿಂದ ತನ್ನ ಶಕ್ತಿಗೆ ತಕ್ಕಂತೆ ಗುರುಗಳನ್ನೂ, ಶ್ರೀಕೃಷ್ಣನನ್ನೂ, ಗಂಗಾದಿತೀರ್ಥಗಳನ್ನೂ, ಹಿರಿಯರನ್ನೂ ತಾರತಮ್ಯಕ್ರಮದಲ್ಲಿ ನಮಸ್ಕರಿಸಲೇಬೇಕು.

ವಿ – ೧. ಇದು ವ್ಯಾಸವಚನ.

೨. ಇಲ್ಲಿ ಯತ್ನ ಎಂಬುದಕ್ಕೆ ಹರಿಗುರ್ವಾದಿಪ್ರಾರ್ಥನಾದಿರೂಪ ಪ್ರಯತ್ನದಿಂದ ಸಾಧ್ಯವಾದ ಭಕ್ತಿಯಿಂದ ಎಂದೂ; ಸ್ವಶಕ್ತಿತಃ ಎಂಬುದಕ್ಕೆ ಸ್ವತಂತ್ರನಾದ ಭಗವಂತ ನೀಡಿದ ಶಕ್ತಿಗನುಗುಣವಾಗಿ ಎಂದೂ ಅರ್ಥ ಎಂದು ವ್ಯಾಖ್ಯಾನದಲ್ಲಿದೆ.

೩. ಇದು :

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

– ಎಂಬ ಶ್ವೇತಾಶ್ವತರೋಪನಿಷತ್ತಿನ ವಾಕ್ಯಕ್ಕೆ ವಿವರಣೆಯಂತಿದೆ.

## ಸನ್ಯಾಸಿಗಳು ಆಶ್ರಮಜ್ಯೇಷ್ಠರಿಗೆ ನಮಸ್ಕರಿಸಬೇಕು

೩೮೫. ಯೋ ಭವೇತ್ ಪೂರ್ವಸನ್ಯಾಸೀ ತುಲ್ಯೋ ವೈ ಧರ್ಮವಾನ್ ಯದಿ ।
ತಸ್ಮೈ ಪ್ರಣಾಮಃ ಕರ್ತವ್ಯೋ ನೇತರಸ್ಮೈ ಕದಾಚನ ॥

ಅನು – ತನಗಿಂತ ಮೊದಲು ಸನ್ಯಾಸಸ್ವೀಕರಿಸಿದವನು ತನ್ನಂತೆಯೇ ಧರ್ಮಿಷ್ಠನಾಗಿದ್ದಲ್ಲಿ ಅವನಿಗೆ ನಮಸ್ಕರಿಸುವುದು ಕರ್ತವ್ಯ. ಇತರರಿಗೆ ಎಂದೂ ನಮಸ್ಕರಿಸಕೂಡದು.

ವಿ – ೧. ಇದು ದತ್ತಾತ್ರೇಯವಚನ.

೨. ಸನ್ಯಾಸಿಗಳಲ್ಲದವರಿಗಂತೂ ನಮಸ್ಕರಿಸುವಂತಿಲ್ಲ; ಆದರೆ ಆಶ್ರಮಜ್ಯೇಷ್ಠರಾದವರಿಗೆ ಮಾತ್ರ ಅವರು ಯೋಗ್ಯರಾಗಿದ್ದಲ್ಲಿ ನಮಸ್ಕರಿಸಬೇಕು; ಧರ್ಮಭ್ರಷ್ಠರಾಗಿದ್ದಲ್ಲಿ ಅವರಿಗೂ ನಮಸ್ಕರಿಸಬೇಕಿಲ್ಲ ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ : ಹರಿಭಕ್ತ್ಯಾದಿಧರ್ಮರಹಿತಾಯ ಜ್ಯೇಷ್ಠಸನ್ಯಾಸಿನೇ ನಮಸ್ಕಾರೋ ನ ಕರ್ತವ್ಯ ಇತ್ಯರ್ಥಲಾಭಾರ್ಥಂ ಧರ್ಮವಾನ್ ಇತ್ಯರ್ಥಸ್ಯೋಕ್ತತ್ವಾತ್ ।

೩. ಈ ನಿಯಮ ಬಿಡಿಸನ್ಯಾಸಿಗಳಿಗೆ ಮಾತ್ರ ಅನ್ವಯಿಸುವುದು, ಪೀಠಾಧಿಪತಿಗಳಿಗಲ್ಲ ಎಂದು ತಿಳಿಯಬಹುದು.

## ಯತಿಗಳಿಗೆ ನಿಷಿದ್ಧಕಾರ್ಯಗಳು

೩೮೬. ಛೇದನೇ ಭೇದನೇ ಪಾಕೇ ಯತಿಃ ಕಶ್ಚಿತ್ ಪ್ರವರ್ತತೇ ।
ತಾದೃಶಂ ಕಶ್ಮಲಂ ದೃಷ್ಟ್ವಾ ಸವಾಸಾ ಜಲಮಾವಿಶೇತ್ ॥

ಅನು – ಎಲೆಗಳು ಮೊದಲಾದವುಗಳನ್ನು ಕತ್ತರಿಸುವುದು, ಸೌದೆ ಮೊದಲಾದವುಗಳನ್ನು ಒಡೆಯುವುದು ಮತ್ತು ತಾನೇ ಅಡಿಗೆ ಮಾಡಿಕೊಳ್ಳುವುದು ಮೊದಲಾದವುಗಳು ಯತಿಗೆ ನಿಷಿದ್ಧ. ಯತಿಯು ಅಂತಹ ದುಷ್ಕಾರ್ಯದಲ್ಲಿ ತೊಡಗಿದ್ದನ್ನು ಕಂಡರೆ ಕೂಡಲೇ ಸಚೇಲ ಸ್ನಾನ ಮಾಡಬೇಕು.

ವಿ – ೧. ಇದು ಸನ್ಯಾಸಧರ್ಮದ ವಚನ ಎಂಬುದಾಗಿ ವ್ಯಾಖ್ಯಾನದಲ್ಲಿದೆ.

೨. ಯತಿಗಳದು ಪ್ರಧಾನವಾಗಿ ಅಹಿಂಸಾವ್ರತ. ಅವರು ಅಡುಗೆಗಾಗಿ ಸಹ ಕತ್ತರಿಸುವುದು, ಒಡೆಯುವುದು ಮೊದಲಾದವುಗಳನ್ನು ಮಾಡುವಂತಿಲ್ಲ. ಸ್ವತಃ ಅಡುಗೆಯನ್ನೂ ಸಹ ಮಾಡಿಕೊಳ್ಳುವಂತಿಲ್ಲ ಎಂಬ ವಿಶೇಷಧರ್ಮ ಇಲ್ಲಿ ಸೂಚಿತವಾಗಿದೆ.

೩. ಆದ್ದರಿಂದಲೇ ಯತಿಗಳಿಗೆ ಭಿಕ್ಷಾನ್ನದಿಂದಲೇ ಜೀವನ ಎಂಬ ವಿಧಿ ಉಕ್ತವಾಗಿದೆ.

೪. ಇಲ್ಲಿ ಕಶ್ಚಿತ್ ಎಂಬ ಪದದಿಂದ ಸಾಮಾನ್ಯವಾಗಿ ಇಂತಹ ದುರ್ವ್ಯಾಪಾರದಲ್ಲಿ ತೊಡಗುವ ಯತಿಗಳು ತುಂಬಾ ಕಡಿಮೆ ಎಂದರ್ಥ : **ಏತೇನ ಯೋ ಯತಿಃ ಇತಿ ವಕ್ತವ್ಯಮ್, ಕಶ್ಚಿದಿತಿ ಕಥನಂ ವ್ಯರ್ಥಮಿತಿ ದೂಷಣಂ ಪರಾಸ್ತಮ್ । ಏವಂ ದುರ್ವ್ಯಾಪಾರಕರ್ತಾ ಯತಿರ್ಭೂಮಂಡಲೇ ಪ್ರಾಯೋ ನ ತಿಷ್ಠತಿ । (ವ್ಯಾ)**

೫. ''ಯತಿಯು ಪೂಜ್ಯ'' ಎಂಬ ವಚನವಿರುವುದರಿಂದ ಇಂತಹ ದುಷ್ಕಾರ್ಯವನ್ನು ಕಾರಣಾಂತರದಿಂದ ಮಾಡುವ ಯತಿಯನ್ನೂ ಸಹ ಗೌರವಿಸಬೇಕು. ಆದರೆ ಅವನು ದುಷ್ಕಾರ್ಯಗಳನ್ನು ಕಂಡಾಗ ಮಾತ್ರ ಸಚೇಲಸ್ನಾನಮಾಡಿ ಶುದ್ಧನಾಗಬೇಕು ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ : **ಕಾಷಾಯದಂಡಮಾತ್ರೇಣ ಯತಿಃ ಪೂಜ್ಯೋ ಯುಧಿಷ್ಠಿರ ಇತಿ ವಚನಾಚ್ಛೇದನಾದಿದುರ್ವ್ಯಾಪಾರಕರ್ತಾऽಪಿ ಯತಿಃ ಛೇದನಾದ್ಯಭಾವವೇಲಾಯಾಂ ದೃಷ್ಟಶ್ಚೇತ್ ಪೂಜ್ಯ ಏವ । ಛೇದನಾದಿವೇಲಾಯಾಂ ದೃಷ್ಟಶ್ಚೇತ್ ಸ ಪೂಜ್ಯೋ ನ ಭವತಿ, ಕಿಂತು ಸವಾಸಾ ಜಲಮಾವಿಶೇದಿತ್ಯರ್ಥಲಾಭಾರ್ಥಂ 'ಸೋऽಪಿ' ಇತ್ಯಾದೇರಧ್ಯಾಹಾರೇಣ ಯಃಕಶ್ಚಿದ್ಯತಿಃ ಛೇದನಾದಿದುರ್ವ್ಯಾಪಾರಂ ಕರೋತಿ ಸೋऽಪಿ ಯತಿಃ ಪೂಜ್ಯಃ, ಪರಂತು ತಾದೃಶಂ ಕಶ್ಮಲಂ ದೃಷ್ಟ್ವಾ ಸವಾಸಾ ಜಲಮಾವಿಶೇತ್ಯರ್ಥ ಅತ್ರೋಚ್ಯತ ಇತ್ಯಭ್ಯುಪಗಮಾತ್ ।**

## ಏಕಾನ್ನ ನಿಷೇಧ

೩೮೭. **ಚರೇನ್ಮಾಧುಕರಂ ಭೈಕ್ಷ್ಯಂ ಯತಿರ್ಮ್ಲೇಚ್ಛಕುಲಾದಪಿ ।**
**ಏಕಾನ್ನಂ ತು ನ ಭುಂಜೀತ ಬೃಹಸ್ಪತಿಸಮೋ ಯದಿ ॥**

ಅನು – ಯತಿಯು ಮಧುಕರವೃತ್ತಿಯ ಭಿಕ್ಷಾಟನೆಯನ್ನು ಮ್ಲೇಚ್ಛಕುಲದಿಂದಾದರೂ ಮಾಡಬಹುದು. ಆದರೆ ಅವನು ಬೃಹಸ್ಪತಿ ಸಮನಾಗಿದ್ದರೂ ಒಬ್ಬನ ಮನೆಯ ಅನ್ನವನ್ನು ಮಾತ್ರ ತಿನ್ನಲೇ ಕೂಡದು.

ವಿ – ೧. ಯತಿಗೆ ಸ್ವಯಂಪಾಕ ನಿಷಿದ್ಧವಾದ್ದರಿಂದ ಮಧುಕರವೃತ್ತಿಯಿಂದಲೇ ಜೀವನ. ಆದರೆ ಅಂತಹ ಮಧುಕರವೃತ್ತಿಯನ್ನು ಒಂದು ಮನೆಯಲ್ಲಿ ಮಾತ್ರ ಮಾಡದೆ ಅನೇಕ ಮನೆಗಳಲ್ಲಿ ಮಾಡಬೇಕು. ಒಂದು ದಿನಕ್ಕೆ ಏಳು ಮನೆಗಳನ್ನು ಮೀರದಂತೆ ಭಿಕ್ಷಾಟನೆ ಮಾಡಬೇಕು ಎಂಬ ವಿಶೇಷಾಂಶ ಶ್ರೀಮದಾಚಾರ್ಯರ 'ಸನ್ಯಾಸಪದ್ಧತಿ' ಕೃತಿಯಲ್ಲಿದೆ :

೨. ಇನ್ನೊಂದು ಯೋಗ್ಯಮನೆ ಸಿಕ್ಕದಿದ್ದಲ್ಲಿ ಮ್ಲೇಚ್ಛಕುಲದಿಂದಾದರೂ ಭಿಕ್ಷೆ ಸ್ವೀಕರಿಸಬಹುದು ಎಂಬ ಇಲ್ಲಿಯ ಮಾತಿಗೆ ಒಬ್ಬನ ಮನೆಯ ಅನ್ನ ಸರ್ವಥಾ ವಿಹಿತವಲ್ಲ ಎಂದಷ್ಟೇ ತಾತ್ಪರ್ಯ. ಮ್ಲೇಚ್ಛಾನ್ನ ಭಕ್ಷಣೆ ಮಾಡಬೇಕು ಎಂದಲ್ಲ – ಏಕಾದಶಿಯಂದು ಅನ್ನ ತಿನ್ನುವುದಕ್ಕಿಂತ ಗೋಮಾಂಸ ಭಕ್ಷಣ, ಸುರಾಪಾನಾದಿಗಳು ಶ್ರೇಷ್ಠ ಎಂಬ ಮಾತು ಹೇಗೋ ಹಾಗೆ.

೩. ಇದೂ ಸಹ ಸನ್ಯಾಸಧರ್ಮದ ವಚನ ಎಂದು ವ್ಯಾಖ್ಯಾನದಲ್ಲಿದೆ.

## ಅಪರೋಕ್ಷದಿಂದಲೇ ಮುಕ್ತಿ

೩೮೮. **ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ ।**
**ಸಮುದ್ಧರಂತಿ ಹ್ಯಾತ್ಮಾನಮಾತ್ಮನೈವಾಶುಭಾಶಯಾತ್ ॥**

ಅನು – ಸಾಮಾನ್ಯವಾಗಿ ಲೋಕದ ಬಗ್ಗೆಯೂ ಭಗವಂತನ ಬಗ್ಗೆಯೂ ಚೆನ್ನಾಗಿ ತಿಳಿದ ಜ್ಞಾನಿಗಳು ತಮ್ಮನ್ನು ಧ್ಯಾನದಲ್ಲಿ ತೊಡಗಿಸಿಕೊಂಡೇ ಅನರ್ಥಕ್ಕೆ ಆಗರವಾದ ಈ ಸಂಸಾರದಿಂದ ಉದ್ಧರಿಸಿಕೊಳ್ಳುವರು.

ವಿ – ೧. ಇದು ಭಾಗವತವಚನ(೧೧/೭/೧೯)

೨. ಅಪರೋಕ್ಷಜ್ಞಾನಿಗಳಾದವರು ಉದ್ಧಾರವಾಗಲಿ ಎಂಬ ಕಾರಣದಿಂದ ಎಲ್ಲರಿಗೂ ತತ್ತ್ವೋಪದೇಶ ಮಾಡತೊಡಗುವುದಿಲ್ಲ. ಏಕೆಂದರೆ ಎಷ್ಟೇ ತತ್ತ್ವೋಪದೇಶಮಾಡಿದರೂ ಅಯೋಗ್ಯಜನರಿಗೆ ಅದು ಪಾಂಡಿತ್ಯಕ್ಕೆ ಮಾತ್ರ ಕಾರಣವಾಗುವುದೇ ಹೊರತು ಅಪರೋಕ್ಷಜ್ಞಾನ-ದ್ವಾರಾ ಮುಕ್ತಿಗೆ ಕಾರಣವಾಗದು. ಅಯೋಗ್ಯಜನರು ಪಾಂಡಿತ್ಯಗಳಿಸಿದರೂ ಭಗವಂತನಲ್ಲಿಯಾಗಲೀ ಭಗವದ್ಭಕ್ತರಲ್ಲಿಯಾಗಲೀ ಭಕ್ತಿ ಹೊಂದಿದವರಾಗುವುದಿಲ್ಲ. ಮುಂದೊಮ್ಮೆ ಅವರು ದುರ್ಜನರ ಸಹವಾಸಕ್ಕೆ ಒಳಗಾಗಿ ತಮ್ಮ ಸ್ವರೂಪಕ್ಕೆ ಉಚಿತವಾದ ಭಗವದ್ದ್ವೇಷಾದಿಗಳನ್ನು ಮಾಡಿ ಅನರ್ಥಕ್ಕೇ ಗುರಿಯಾಗುವರು. ಆದ್ದರಿಂದ ಯೋಗ್ಯರಿಗೆ ಮಾತ್ರ ಜ್ಞಾನೋಪದೇಶವನ್ನು ಅವರು ಮಾಡುವರು. ಅಂತಹವರು ದೊರೆಯದಿದ್ದಲ್ಲಿ ಧ್ಯಾನದಲ್ಲಿ ತೊಡಗಿ ಜೀವನ ಸಾರ್ಥಕ ಮಾಡಿಕೊಳ್ಳುವರೇ ಹೊರತು ಸಿಕ್ಕವರಿಗೆ ಉಪದೇಶಮಾಡಿ ಕಾಲವ್ಯಯ ಮಾಡಿಕೊಳ್ಳಲಾರರು ಎಂದು ಭಾವ.

೩. ಇದರ ಭಾವವಿವರಣರೂಪವಾದ ಶ್ರೀಮದ್ಭಾಗವತತಾತ್ಪರ್ಯದ ವಾಕ್ಯಗಳು ಹೀಗಿವೆ :

'.......... ........ .......... ಲೋಕೇ ತತ್ತ್ವೇ ಚ ವಿಚಕ್ಷಣಾಃ ।
ಪಾರೋಕ್ಷ್ಯೇಣೈವ ತತ್ತ್ವಂ ತು ಲೋಕಂ ಚಾಪಿ ವಿದಂತಿ ಯೇ ।
ತೇಽಪಿ ಸತ್ಸ್ನೇಹನಿರ್ಮುಕ್ತಾಸ್ತಮೋ ಯಾಂತಿ ವಿನಿಶ್ಚಯಾತ್ ।
ಅಪರೋಕ್ಷ್ಯಾನ್ನ ಚ ಜ್ಞಾನಂ ತೇಷಾಮುತ್ಪದ್ಯತೇ ಕ್ವಚಿತ್ ॥' ಇತಿ ಸದ್ಗುಣೇ ।

## ಯತಿಯ ಮುಖ್ಯಕರ್ತವ್ಯಗಳು

೩೮೯. ಧ್ಯಾನಂ ಶೌಚಂ ತಥಾ ಭೈಕ್ಷ್ಯಂ ನಿತ್ಯಮೇಕಾಂತಶೀಲತಾ ।
ಯತೇಶ್ಚತ್ವಾರಿ ಕರ್ಮಾಣಿ ಪಂಚಮಂ ನೋಪಲಭ್ಯತೇ ॥

ಅನು – ಧ್ಯಾನ, ಶೌಚ, ಭಿಕ್ಷಾಟನ ಮತ್ತು ಸದಾ ಏಕಾಂತವಾಸ ಈ ನಾಲ್ಕೂ ಯತಿಯ ಮುಖ್ಯಕರ್ಮಗಳು. ಐದನೆಯದೆಂಬುದು ಇಲ್ಲ.

ವಿ – ೧. ಇದು ಸನ್ನ್ಯಾಸಧರ್ಮದ ವಚನ ಎಂದು ವ್ಯಾಖ್ಯಾನದಲ್ಲಿದೆ.

೨. ಇಲ್ಲಿ ಧ್ಯಾನ ಎಂಬ ಪದದಿಂದ ಪಾಠಪ್ರವಚನಕಾರ್ಯವೂ ಸಹ ಗ್ರಾಹ್ಯ.

೩. ಶೌಚ ಎಂಬುದು ಬಾಹ್ಯಶೌಚ ಅಂತಃಶೌಚ ಎಂಬುದಾಗಿ ಎರಡು ಬಗೆ. ಅವೆರಡೂ ಯತಿಗೆ ಬಹಳ ಮುಖ್ಯ.

೪. ಭೈಕ್ಷ್ಯ ಎಂದರೆ ಹಿಂದೆ ತಿಳಿಸಿದಂತೆ ಮಧುಕರವೃತ್ತಿ.

೫. ಏಕಾಂತವಾಸ ಎಂಬುದಕ್ಕೆ ಅಯೋಗ್ಯಜನರಿಂದ ಸರ್ವಥಾ ದೂರವಿರುವುದು ಎಂದರ್ಥ.

## ಭಿಕ್ಷಾಟನೆಗೆ ತೆರಳುವಾಗ ಹೇಳಬೇಕಾದ ಮಂತ್ರ

೩೯೦. ನೈವೇದ್ಯಾರ್ಥಂ ಮಹಾವಿಷ್ಣೋಃ ಸಾಧು ಮಾಧುಕರಂ ಶುಚಿ ।
ಆನಯಿಷ್ಯಾಮಿ ಭಗವಾನ್ ಪ್ರೀಯತಾಂ ಮೇ ಜನಾರ್ದನಃ ॥

ಅನು – ಮಹಾವಿಷ್ಣುವಿನ ನೈವೇದ್ಯಕ್ಕೋಸ್ಕರ ಶುದ್ಧವಾದ ಶುಚಿಯಾದ ಮಧುಕರವೃತ್ತಿಯ ಅನ್ನವನ್ನು ತರುವೆನು. ಭಗವಂತನಾದ ಜನಾರ್ದನನು ನನಗೆ ಪ್ರಸನ್ನನಾಗಲಿ.

ವಿ – ೧. ಇದು ವಿಷ್ಣುತೀರ್ಥೀಯವಚನ ಎಂದು ವ್ಯಾಖ್ಯಾನದಲ್ಲಿದೆ.

೨. ಇದರಿಂದ ಮಧುಕರವೃತ್ತಿಯಿಂದ ಬೇಡಿ ತಂದ ಅನ್ನವನ್ನು ಮುಂದೆ ಶ್ರೀಹರಿಗೆ ನೈವೇದ್ಯಮಾಡಿಯೇ ಯತಿಯು ಸ್ವೀಕರಿಸಬೇಕು ಎಂಬ ವಿಶೇಷಧರ್ಮ ಸೂಚಿತವಾಗಿದೆ.

೩. ಇಲ್ಲಿ 'ಸಾಧು' ಎಂಬುದಕ್ಕೆ ಅಪರ್ಯುಷಿತತ್ವಾತ್ ಸಾಧು ಎಂದೂ, ಶುಚಿ ಎಂಬುದಕ್ಕೆ ಕೇಶಾದಿರಹಿತತ್ವಾತ್ ಶುದ್ಧಂ ಎಂದೂ ವಿವರಣೆ ವ್ಯಾಖ್ಯಾನದಲ್ಲಿದೆ.

## ಐದು ವಿಧವಾದ ಭಿಕ್ಷಾನ್ನ

೩೯೧. ಮಾಧೂಕರಮಸಂಕ್ಲೃಪ್ತಂ ಪ್ರಾಕ್ಪ್ರಣೀತಮಯಾಚಿತಮ್ ।
ತಾತ್ಕಾಲಿಕಂ ಚೋಪಪನ್ನಂ ಭೈಕ್ಷ್ಯಂ ಪಂಚವಿಧಂ ಸ್ಮೃತಮ್ ॥

ಅನು – ಮಾಧೂಕರ, ಪ್ರಾಕ್‌ಪ್ರಣೀತ, ಅಯಾಚಿತ ತಾತ್ಕಾಲಿಕ ಮತ್ತು ಉಪಪನ್ನ ಎಂಬುದಾಗಿ ಭಿಕ್ಷಾನ್ನ ಐದು ಬಗೆಯದಾಗಿದೆ.

ವಿ – ಇದು ವ್ಯಾಸವಚನ. ಈ ಐದು ಬಗೆಯ ಭಿಕ್ಷಾನ್ನದ ವಿವರ ಮುಂದಿನ ಶ್ಲೋಕಗಳಲ್ಲಿ ಬಂದಿದೆ.

## ಪ್ರಾಕ್ಪ್ರಣೀತ ಭಿಕ್ಷೆಯ ಲಕ್ಷಣ

೩೯೨. ಶಯನೋತ್ಥಾಪನಾತ್ ಯತ್ ಪ್ರಾಕ್ ಪ್ರಾರ್ಥಿತಂ ಭಕ್ತಿಸಂಯುತೈಃ।
ತತ್ ಪ್ರಾಕ್ಪ್ರಣೀತಮಿತ್ಯಾಹ ಭಗವಾನುಶನಾ ಮುನಿಃ॥

ಅನು – ಬೆಳಿಗ್ಗೆ ಏಳುವ ಮುನ್ನ ಭಕ್ತಿಯಿಂದ ಕೂಡಿದ ಜನರು ತಮ್ಮಲ್ಲಿ ಭಿಕ್ಷೆ ಸ್ವೀಕರಿಸಬೇಕು ಎಂದು ಪ್ರಾರ್ಥಿಸಿಕೊಂಡು ನೀಡುವ ಅನ್ನ ಪ್ರಾಕ್‌ಪ್ರಣೀತ ಎಂಬುದಾಗಿ ಪೂಜ್ಯರಾದ ಶುಕ್ರಾಚಾರ್ಯರು ತಿಳಿಸಿರುವರು.

## ಅಯಾಚಿತ ಭಿಕ್ಷೆಯ ಲಕ್ಷಣ

೩೯೩. ಭಿಕ್ಷಾಟನಾನನುದ್ಯೋಗಾತ್ ಪ್ರಾಕ್ ಕೇನಾಪಿ ನಿಮಂತ್ರಿತಃ।
ಅಯಾಚಿತಂ ತದ್ಭೈಕ್ಷ್ಯಂ ಭೋಕ್ತವ್ಯಂ ಮನುರಬ್ರವೀತ್॥

ಅನು – ಭಿಕ್ಷಾಟನೆಗೆ ತೆರಳುವ ಮುನ್ನ ಯಾರಾದರೂ ಬಂದು ನೀಡುವ ಭಿಕ್ಷೆ ಅಯಾಚಿತ ಎನ್ನಿಸುವುದು ಎಂದು ಮನುವು ಹೇಳುವನು.

ವಿ – ಇವೆರಡೂ ಏಕಾನ್ನಭೋಜನ ಎನ್ನಿಸುವುದಿಲ್ಲ ಎಂಬ ಪ್ರಶ್ನೆಗೆ ವ್ಯಾಖ್ಯಾನದಲ್ಲಿ ಉತ್ತರವಿದೆ. ಏಕಾನ್ನಂ ನ ಭುಂಜೀತ ಎಂಬ ನಿಯಮ ತಾನಾಗಿ ಭಿಕ್ಷೆಗೆ ತೆರಳಿದಾಗ ಅನ್ವಯಿಸುವಂತಹುದು. ಇದ್ದಲ್ಲಿಗೆ ಸಜ್ಜನರು ತಂದುಕೊಡುವ ಭಿಕ್ಷೆಗೆ ಅನ್ವಯಿಸದು ಎಂದರ್ಥ : ನನು ಏಕಾನ್ನಂ ನ ಭುಂಜೀತ ಇತ್ಯನೇನೈಕಶಿಷ್ಯಾನ್ನಂ ನ ಗ್ರಾಹ್ಯಮಿತ್ಯುಕ್ತತ್ವಾತ್ ಕೇನಾಪಿ ನಿಮಂತ್ರಿತ ಇತ್ಯಾದಿನಾ ಏಕಶಿಷ್ಯಾನ್ನಂ ಗ್ರಾಹ್ಯಮಿತಿ ಕಥನಮಯುಕ್ತಮಿತಿ ಚೇನ್ನ। 'ಏಕಾನ್ನಂ ನ ಭುಂಜೀತ' ಇತ್ಯಸ್ಯ ಏಕಸ್ಯ ಶಿಷ್ಯಸ್ಯ ಗೃಹಂ ಗತ್ವಾ ಯಾಚನಂ ಕೃತ್ವಾ, ಅನ್ನಂ ನ ಗ್ರಾಹ್ಯಮಿತ್ಯರ್ಥೇ ತಾತ್ಪರ್ಯಮಿತ್ಯಂಗೀಕಾ-ರಾತ್। (ವ್ಯಾ)

## ತಾತ್ಕಾಲಿಕ ಭಿಕ್ಷೆಯ ಲಕ್ಷಣ

೩೯೪. ಉಪಸ್ಥಾನೇ ಚ ಯತ್ ಪ್ರೋಕ್ತಂ ಭಿಕ್ಷಾರ್ಥಂ ಬ್ರಾಹ್ಮಣೇನ ವೈ।
ತಾತ್ಕಾಲಿಕಮಿತಿ ಪ್ರೋಕ್ತಂ ಭೋಕ್ತವ್ಯಂ ಮೋಕ್ಷಕಾಂಕ್ಷಿಭಿಃ॥

ಅನು – ಭಿಕ್ಷೆಗೆ ಹೊರಟು ನಿಂತಾಗ ಯೋಗ್ಯಬ್ರಾಹ್ಮಣನು ಬಂದು ತನ್ನ ಮನೆಯಲ್ಲಿ ಭಿಕ್ಷಾ ಸ್ವೀಕಾರ ಮಾಡಬೇಕೆಂದು ಪ್ರಾರ್ಥಿಸಿದಾಗ ಸ್ವೀಕರಿಸುವ ಭಿಕ್ಷೆ ತಾತ್ಕಾಲಿಕ ಎನ್ನಿಸುವುದು. ಮೋಕ್ಷ ಬಯಸುವವರು ಅದನ್ನು ಸ್ವೀಕರಿಸಬೇಕು.

### ಉಪಪನ್ನ ಭಿಕ್ಷೆಯ ಲಕ್ಷಣ

೩೯೫. ಸಿದ್ಧಮನ್ನಂ ಭಕ್ತಜನೈರಾನೀತಂ ಯನ್ಮಠಂ ಪ್ರತಿ ।
ಉಪಪನ್ನಂ ತದಿತ್ಯಾಹುರ್ಮುನಯೋ ಮೋಕ್ಷಕಾಂಕ್ಷಿಣಃ ॥

ಅನು – ಸಿದ್ಧಮಾಡಿದ ಅನ್ನವನ್ನು ಭಕ್ತಜನರು ಮಠಕ್ಕೆ ತಂದು ಸಮರ್ಪಿಸಿದ ಭಿಕ್ಷೆ ಉಪಪನ್ನ ಎನ್ನಿಸುವುದು ಎಂದು ಮೋಕ್ಷಕಾಂಕ್ಷಿಗಳಾದ ಮುನಿಗಳು ಹೇಳುವರು.

### ಐದುವಿಧ ಭಿಕ್ಷೆಗಳ ಮಹತ್ವ

೩೯೬. ಭಿಕ್ಷಾಃ ಪಂಚವಿಧಾ ಹ್ಯೇತಾಃ ಸೋಮಪಾನಮಿತಿ ಸ್ಮೃತಾಃ ।
ತಾಸಾಮೇವೈಕತಮಯಾ ವರ್ತಯನ್ ಸಿದ್ಧಿಮಾಪ್ನುಯಾತ್ ॥

ಅನು – ಈ ಐದುವಿಧಭಿಕ್ಷೆಗಳು ಸೋಮಪಾನದಂತೆ ಮೋಕ್ಷದ ಸಾಧಕ ಎಂದು ಹೇಳುವರು. ಇವುಗಳಲ್ಲಿ ಯಾವುದಾದರೂ ಒಂದರ ಮೂಲಕ ಬದುಕುತ್ತಾ ಸಿದ್ಧಿಯನ್ನು ಹೊಂದಬೇಕು.

ವಿ – ಮೇಲಿನ ಆರುಶ್ಲೋಕಗಳು ವ್ಯಾಸವಚನಗಳು.

### ಯತಿಸಂಸ್ಕಾರ ವಿಧಿ

೩೯೭. ಖಾತಂ ಯತಿರ್ಯದ್ಯಗವರ್ಷವಾಸ-
ಸ್ತುಷಾಗ್ನಿನಾ ತಂ ದಹೇತ್ ಪೂರಯೇಚ್ಚ ।
ಅಬ್ಧೇಃ ಸಮೀಪೇ ಯದಿ ವಾ ವನೇ
ವಾ ನದ್ಯಾಸ್ತೀರೇ ಕ್ಷೇತ್ರವರೇऽಪಿ ವಾऽಸ್ಯೇತ್ ।
ರಕ್ಷಾಂ ಚ ಕೃತ್ವಾऽಶ್ಮಸುಕಂಟಕಾದ್ಯೈಃ
ಸ್ವಕೀಯಗೇಹಾನಿ ತತೋ ವ್ರಜೇಯುಃ ॥

ಅನು – ಇನ್ನೂ ಪ್ರಥಮಚಾತುರ್ಮಾಸ್ಯದ ವ್ರತವನ್ನು ಪೂರೈಸದ ಯತಿಯು ಮೃತನಾದಲ್ಲಿ ಅವನ ದೇಹವನ್ನು ಹೊಟ್ಟಿನ ಅಗ್ನಿಯಿಂದ ದಹಿಸಬೇಕು. ಅಥವಾ ಹೂಳಬೇಕು. ಸಮುದ್ರದ ಬಳಿಯಲ್ಲಾಗಲೀ, ಕಾಡಿನಲ್ಲಾಗಲೀ, ನದೀತೀರದಲ್ಲಾಗಲೀ,

ಉತ್ತಮಕ್ಷೇತ್ರದಲ್ಲಾಗಲೀ ಅವನ ದೇಹವನ್ನು ಇರಿಸಬೇಕು. ಅದಕ್ಕೆ ಕಲ್ಲು ಮುಳ್ಳು ಮೊದಲಾದವುಗಳಿಂದ ರಕ್ಷಣೆಯನ್ನು ನೀಡಿ ತಮ್ಮ ಮನೆಗಳಿಗೆ ತೆರಳಬೇಕು.

ವಿ – ೧. ಇದು ವಿಷ್ಣುತೀರ್ಥೀಯವಚನ.

೨. ಪ್ರಥಮಚಾತುರ್ಮಾಸ್ಯವನ್ನು ಪೂರೈಸುವ ಮುನ್ನವೇ ಮರಣ ಹೊಂದುವ ಯತಿಯ ಸಂಸ್ಕಾರದ ವಿಧಿಯನ್ನು ಇಲ್ಲಿ ನಿರೂಪಿಸಿರುವರು.

೩. ಅವನ ದೇಹವನ್ನು ಪೂರ್ತಿ ಸುಡುವ ಮುನ್ನವೇ ಹೂಳಿ ಮಣ್ಣಿನಿಂದ ಮುಚ್ಚಬಹುದು ಎಂಬ ವಿವರಣೆಯು ವ್ಯಾಖ್ಯಾನದಲ್ಲಿದೆ.

೪. ಈ ನಿಯಮ ವಿಘ್ನಾದಿಗಳ ಕಾರಣದಿಂದ ಪ್ರಥಮಚಾತುರ್ಮಾಸ್ಯ ಮಾಡದ ಯತಿಗೆ ಅನ್ವಯಿಸುವುದಿಲ್ಲ. ಮರಣದ ಕಾರಣದಿಂದ ಪ್ರಥಮಚಾತುರ್ಮಾಸ್ಯವನ್ನು ಪೂರೈಸದ ಯತಿಗೆ ಮಾತ್ರ ಅನ್ವಯಿಸುವುದು ಎಂಬ ವಿಶೇಷಾಂಶ ವ್ಯಾಖ್ಯಾನದಲ್ಲಿದೆ : ಏತೇನಾಪ್ರಾಪ್ತಪ್ರಥಮ-ಚಾತುರ್ಮಾಸ್ಯವ್ರತ ಇತಿ ವಕ್ತವ್ಯಮ್, ಅಗವರ್ಷವಾಸ ಇತಿ ಕಥನಮಯುಕ್ತಮಿತಿ ದೂಷಣಾನವಕಾಶಃ । ಅಗವರ್ಷವಾಸ ಇತ್ಯಾಸ್ಯಾಪ್ರಾಪ್ತಪ್ರಥಮಚಾತುರ್ಮಾಸ್ಯವ್ರತ ಇತಿ ತಾತ್ಪರ್ಯಾರ್ಥ ಇತ್ಯಂಗೀಕಾರಾತ್ । ಏತೇನೈವ ವಿಘ್ನನಿಮಿತ್ತಕಾಪ್ರಾಪ್ತಪ್ರಥಮಚಾತುರ್ಮಾಸ್ಯ-ವ್ರತಸ್ಯ ಯತೇರ್ದೇಹಸ್ಯ ದಾಹಾಯೋಗಾತ್ ಅಪ್ರಾಪ್ತಪ್ರಥಮಚಾತುರ್ಮಾಸ್ಯವ್ರತೋ ಯದಿ, ತರ್ಹಿ ಯತಿದೇಹಂ ದಹೇದಿತಿ ಕಥನಮಯುಕ್ತಮಿತಿ ಶಂಕಾ ಪರಿಹೃತಾ । ಮರಣೇನ ಇತ್ಯಸ್ಯಾಧ್ಯಾಹಾರ ಇತ್ಯಂಗೀಕೃತ್ಯ ಮರಣನಿಮಿತ್ತಕಾಪ್ರಾಪ್ತಪ್ರಥಮಚಾತುರ್ಮಾಸ್ಯವ್ರತಸ್ಯ ಯತೇ-ರ್ದೇಹಂ ದಹೇದಿತ್ಯರ್ಥ ಅತ್ರೋಚ್ಯತ ಇತ್ಯಭ್ಯುಪಗಮಾತ್ ॥ (ವ್ಯಾ)

## ಭೋಜನಕಾಲದಲ್ಲಿ ಪಂಚರೂಪಗಳ ಚಿಂತನೆ

೩೯೮. ಸಂಕರ್ಷಣಶ್ಚ ಪ್ರದ್ಯುಮ್ನಃ ತತ್ರ ಭೋಕ್ತೃಷು ಸಂಸ್ಥಿತೌ ।
ಭೋಕ್ತೃಶಕ್ತಿಪ್ರದೌ ನಿತ್ಯಂ ಭೋಕ್ತಾರೌ ಚ ವಿಶೇಷತಃ ॥

ಅನು – ಸಂಕರ್ಷಣ ಮತ್ತು ಪ್ರದ್ಯುಮ್ನ ಭೋಕ್ತೃಗಳಲ್ಲಿ ನೆಲೆಸಿದ್ದು ನಿತ್ಯ ಭೋಕ್ತೃತ್ವಶಕ್ತಿ-ಯನ್ನು ನೀಡಿ ವಿಶೇಷತಃ ತಾವೇ ಭೋಜನಸ್ವೀಕರಿಸುವರು.

ವಿ – ಇವು ಐತರೇಯೋಪನಿಷದ್ಭಾಷ್ಯದ ವಚನಗಳು

೩೯೯. ನಾರಾಯಣಾನಿರುದ್ಧೌ ತು ಭೋಜ್ಯವಸ್ತುಷು ಸಂಸ್ಥಿತೌ ।
ತರ್ಪಕೌ ಸರ್ವಜೀವಾನಾಂ ತಸ್ಮಾದ್ಭೋಜ್ಯೌ ನ ಚರ್ವ್ಯತಃ ॥
ಅವಕಾಶಪ್ರದೋ ನಿತ್ಯಂ ವಾಸುದೇವ ನಭಸ್ಥಿತಃ ।

ಅನು – ನಾರಾಯಣ ಮತ್ತು ಅನಿರುದ್ಧ ಎರಡು ರೂಪಗಳು ಭೋಜ್ಯಪದಾರ್ಥಗಳಲ್ಲಿ ನೆಲೆಸಿದ್ದು, ಸಕಲ ಜೀವರಿಗೂ ತೃಪ್ತಿಯನ್ನು ನೀಡುವರು. ಸ್ವತಃ ತಿನ್ನಲ್ಪಡುವವರಲ್ಲ. ವಾಸುದೇವರೂಪದಿಂದ ಕಂಠ ಮೊದಲಾದ ಅವಕಾಶಗಳಲ್ಲಿ ನೆಲೆಸಿದ್ದು ನಿತ್ಯ ಶ್ರೀಹರಿಯು ಅವಕಾಶಪ್ರದನಾಗಿರುವನು.

## ಪಂಚರೂಪೋಪಾಸನೆಯ ಫಲ

೪೦೦. **ಏವಂ ಪಂಚಾತ್ಮಕಂ ವಿಷ್ಣುಂ ಯ ಉಪಾಸ್ತೇ ಸದೈವ ಹಿ ।**
**ಅವಕಾಶಪ್ರದಃ ಸೋಽಪಿ ಸ್ವಜಾತೀನಾಂ ಭವಿಷ್ಯತಿ ।**
**ಭೋಕ್ತಾ ಚಾಪ್ಯಾಯಕಶ್ಚೈವ ತಸ್ಯ ವಿಷ್ಣೋಃ ಪ್ರಸಾದತಃ ॥**

ಅನು – ಹೀಗೆ ಭೋಜನಯಜ್ಞದಲ್ಲಿ ಪಂಚರೂಪದ ಶ್ರೀಹರಿಯನ್ನು ಸದಾ ಉಪಾಸನೆ ಮಾಡುವವನು ಸಹ ಸ್ವಜಾತಿಯವರಿಗೆ ಭೋಜನಾದಿ ಅವಕಾಶ ಕಲ್ಪಿಸುವವನಾಗುವನು. ಮತ್ತು ಅವನು ಉತ್ತಮಭೋಕ್ತೃವು ಎನ್ನಿಸಿ ಶ್ರೀಹರಿಯ ಅನುಗ್ರಹದಿಂದ ಇತರರಿಗೆ ತೃಪ್ತಿ ನೀಡುವವನೂ ಆಗುವನು.

ವಿ – ೧. ಈ ಭೋಜನಪ್ರಸಂಗದ ವಿವರದ ವಾಕ್ಯಗಳು ಶ್ರೀಮದಾಚಾರ್ಯರಿಂದ ಐತರೇಯಭಾಷ್ಯದಲ್ಲಿ ಉದ್ಧೃತ.

೨. ಈ ರೀತಿಯ ಪಂಚರೂಪದ ಉಪಾಸನೆ ಮಾಡುವವನಿಗೆ ಇತರರಿಗೆ ಭೋಜನ ನೀಡುವ ಸಾಮರ್ಥ್ಯವನ್ನು ಶ್ರೀಹರಿ ವಿಶೇಷವಾಗಿ ಕರುಣಿಸುವನು. ಅಂತಹವನು ಉತ್ತಮಭೋಕ್ತೃವೂ ಇತರರಿಗೆ ತೃಪ್ತಿನೀಡುವವನೂ ಆಗುವನು.

೩. ಇತರರಿಗೆ ಭೋಜನ ನೀಡಿದಾಗ ವಿಶೇಷಸಂತೃಪ್ತಿ ಅನುಭವಕ್ಕೆ ಬರುವುದು ಇದಕ್ಕೆ ನಿದರ್ಶನ.

## ಯತಿಗಳ ವಪನವಿಚಾರ

೪೦೧. **ಕಾರ್ತಿಕ್ಯಾಂ ವಪನಂ ಕೃತ್ವಾ ಸಮಭ್ಯರ್ಚ್ಯ ತ್ರಿವಿಕ್ರಮಮ್ ।**
**ತದಂತೇ ವಪನಂ ಕೃತ್ವಾ ವ್ರಜೇತ್ ತಸ್ಮಾಚ್ಚ ತದ್ದಿನೇ ॥**

ಅನು – ಒಂದು ಗ್ರಾಮದಲ್ಲಿ ಚಾತುರ್ಮಾಸ್ಯವ್ರತಕ್ಕೋಸ್ಕರ ನೆಲೆಸಿದ ಯತಿಗಳ ಗುಂಪು ನಾಲ್ಕುತಿಂಗಳವರೆಗೆ ಚಾತುರ್ಮಾಸ್ಯವ್ರತವನ್ನು ಕೈಗೊಳ್ಳುವೆನು ಎಂದು ಸಂಕಲ್ಪಮಾಡಿದ್ದಲ್ಲಿ ಕಾರ್ತಿಕಮಾಸದಲ್ಲಿ ವಪನ ಮಾಡಿಸಿಕೊಳ್ಳಬೇಕು. ಪಕ್ಷಾವ್ವೈ ಮಾಸಾಃ ಎಂಬ ನ್ಯಾಯದಂತೆ ಎರಡುತಿಂಗಳುಗಳ ಕಾಲ ಚಾತುರ್ಮಾಸ್ಯವ್ರತವನ್ನು ಕೈಗೊಳ್ಳುವೆನು

ಎಂದು ಸಂಕಲ್ಪ ಮಾಡಿದ್ದಲ್ಲಿ ಎರಡು ತಿಂಗಳುಗಳ ಬಳಿಕ ಎಂದರೆ ಭಾದ್ರಪದಮಾಸದ ಹುಣ್ಣಿಮೆಯಂದು ವಪನ ಮಾಡಿಸಿಕೊಳ್ಳಬೇಕು. ಬಳಿಕ ತ್ರಿವಿಕ್ರಮರೂಪದ ಹರಿಯನ್ನು ಪೂಜಿಸಿ, ಒಬ್ಬರನ್ನೊಬ್ಬರು ಆದರಿಸಿಕೊಂಡು ಆ ಗ್ರಾಮದಿಂದ ಬೇರೊಂದು ಗ್ರಾಮಕ್ಕೆ ತೆರಳಬೇಕು.

ವಿ – ಇದು ವಿಷ್ಣುತೀರ್ಥೀಯವಚನ. ಮೇಲ್ನೋಟಕ್ಕೆ ಸುಬೋಧವೆನ್ನಿಸದ ಈ ವಾಕ್ಯವನ್ನು ಮೇಲೆ ಅನುವಾದಿಸಿರುವ ಕ್ರಮದಲ್ಲಿ ವ್ಯಾಖ್ಯಾನದಲ್ಲಿ ಅರ್ಥೈಸಿರುವರು.

## ಯತಿಗೆ ನಿಷಿದ್ಧಕಾರ್ಯಗಳು

೪೦೨. ಗಂಧಮಾಲ್ಯಾದ್ಯಲಂಕಾರಂ ತಾಂಬೂಲಂ ಶುಕ್ಲವಾಸಸೀ ।
ದಿವಾಸ್ವಾಪಂ ಚ ಯಾನಂ ಚ ನಿಶ್ಯನ್ನಂ ವರ್ಜಯೇದ್ಯತಿಃ ॥

ಅನು – ಗಂಧಲೇಪನ, ಮಾಲಾಧಾರಣೆ ಮೊದಲಾದ ಅಲಂಕಾರ, ತಾಂಬೂಲ, ಬಿಳಿವಸ್ತ್ರ, ಹಗಲು ನಿದ್ರೆ, ವಾಹನದ ಮೇಲೆ ಪ್ರಯಾಣ, ರಾತ್ರಿಭೋಜನ ಇವುಗಳನ್ನು ಯತಿಯು ತ್ಯಜಿಸಬೇಕು.

ವಿ – ೧. ಇದೂ ಸಹ ವಿಷ್ಣುತೀರ್ಥೀಯವಚನ.

೨. ಹಗಲುನಿದ್ರೆಯನ್ನು ಇತರರೂ ಸಹ ಮಾಡಕೂಡದು ಎಂಬುದು ವಿಶೇಷ.

## ಭಿಕ್ಷಾಹಾರದ ಮಹಿಮೆ

೪೦೩. ಭಿಕ್ಷಾಹಾರೋ ನಿರಾಹಾರೋ ಭಿಕ್ಷಾ ನೈವ ಪ್ರತಿಗ್ರಹಃ ।
ಅಸತೋ ವಾ ಸತೋ ವಾಽಪಿ ಸೋಮಪಾನಂ ದಿನೇದಿನೇ ॥

ಅನು – ಭಿಕ್ಷಾಹಾರವೆಂದರೆ ನಿರಾಹಾರದ ಫಲವನ್ನು ಕೊಡುವುದು. ಭಿಕ್ಷೆಯು ಪ್ರತಿಗ್ರಹ ಎನ್ನಿಸದು. ಸಜ್ಜರಿಂದಲೇ ಆಗಲಿ, ಅಸಜ್ಜನರಿಂದಲೇ ಆಗಲಿ ಪ್ರತಿದಿನದಲ್ಲಿ ಭಿಕ್ಷೆ ಸ್ವೀಕರಿಸುವುದು ಸೋಮಪಾನದ ಫಲವನ್ನು ನೀಡುವುದು.

ವಿ – ೧. ಇದು ಬೋಧಾಯನವಚನ.

೨. ಅಸಜ್ಜನರಿಂದ ಭಿಕ್ಷೆ ಸರ್ವಥಾ ನಿಷಿದ್ಧ. ಆದ್ದರಿಂದ ಇಲ್ಲಿ ಅಸತಃ ಎಂಬುದಕ್ಕೆ ದುಷ್ಟರಿಂದ ಎಂದರ್ಥವಲ್ಲ ಎಂಬುದನ್ನು ವ್ಯಾಖ್ಯಾನದಲ್ಲಿ ತಿಳಿಸಿರುವರು. ಸತಃ ಎಂದರೆ ಮಧ್ವಶಾಸ್ತ್ರದ ವ್ಯಾಖ್ಯಾತೃತ್ವಾದಿ ಗುಣದಿಂದ ಕೂಡಿದವರಿಂದ ಎಂದೂ, ಅಸತಃ ಎಂದರೆ ಮಧ್ವಶಾಸ್ತ್ರವ್ಯಾಖ್ಯಾತೃತ್ವಾದಿ ಗುಣವಿಲ್ಲದವರಿಂದ ಎಂದೂ ಅರ್ಥ. ಎಂದರೆ, ವಿಶೇಷಜ್ಞಾನವಿರುವ ಅಥವಾ

ಜ್ಞಾನವಿಲ್ಲದೇ ಇರುವ ಸಜ್ಜನರಿಂದ ಭಿಕ್ಷೆ ಸ್ವೀಕರಿಸಬಹುದು ಎಂದು ಭಾವ : ಏತೇನೈವ ದುರ್ಜನಭಿಕ್ಷಯಾ ಗ್ರಾಹ್ಯತ್ವಾಭಾವಾದಸತೋ ವೇತಿ ಕಥನಮಯುಕ್ತಮಿತಿ ಶಂಕಾನವಕಾಶಃ । ಅಸತ ಇತ್ಯಸ್ಯ ದುರ್ಜನಾದಿತ್ಯರ್ಥ ಇತ್ಯನಂಗೀಕಾರಾತ್ । (ವ್ಯಾ)

## ಶ್ರಾದ್ಧದಿನದಂದು ಯತಿಭಿಕ್ಷೆಯ ವಿಶೇಷ

೪೦೪. ಅದತ್ವಾ ಭಿಕ್ಷವೇ ಭಿಕ್ಷಾಂ ಯಃ ಶ್ರಾದ್ಧಂ ಕುರುತೇ ದ್ವಿಜಃ ।
ತ್ರಯಸ್ತೇ ನರಕಂ ಯಾಂತಿ ದಾತಾ ಭೋಕ್ತಾ ತಥಾ ಪಿತಾ ॥

ಅನು – ಯತಿಗೆ ಭಿಕ್ಷಾಸಂಕಲ್ಪವನ್ನು ಮಾಡದೆ ಯಾವ ಬ್ರಾಹ್ಮಣನು ಶ್ರಾದ್ಧವನ್ನು ಮಾಡುವನೋ ಆಗ ಅವನು ಶ್ರಾದ್ಧಭೋಜನ ಮಾಡುವವನು ಮತ್ತು ಪಿತೃ ಮೂವರೂ ನರಕವನ್ನು ಹೊಂದುವರು.

ವಿ – ೧. ಶ್ರಾದ್ಧದಿನದಂದು ಯತಿಗಳನ್ನು ಭಿಕ್ಷೆಗೆ ಆಹ್ವಾನಿಸಿದ್ದಲ್ಲಿ ಮೊದಲಿಗೆ ಭಿಕ್ಷಾಸಂಕಲ್ಪವನ್ನು ಮಾಡಿಯೇ ಬಳಿಕ ಶ್ರಾದ್ಧವನ್ನು ಮಾಡಬೇಕು ಎಂದರ್ಥ.

## ಹಸ್ತೋದಕದ ಮಹಿಮೆ

೪೦೫. ಯತಿಹಸ್ತೇ ಜಲಂ ದದ್ಯಾದ್ಭೈಕ್ಷ್ಯಂ ದದ್ಯಾತ್ ಪುನರ್ಜಲಮ್ ।
ತದನ್ನಂ ಮೇರುಣಾ ತುಲ್ಯಂ ತಜ್ಜಲಂ ಸಾಗರೋಪಮಮ್ ॥

ಅನು – ಯತಿಯ ಕೈಯಲ್ಲಿ ಜಲವನ್ನು ನೀಡಬೇಕು. ಅನಂತರ ಭಿಕ್ಷೆಯನ್ನು ನೀಡಿ ಮತ್ತೊಮ್ಮೆ ಜಲವನ್ನು ನೀಡಬೇಕು. ಹೀಗೆ ನೀಡಿದ ಭಿಕ್ಷಾನ್ನವು ಮೇರುಪರ್ವತಕ್ಕೆ ಸಮ. ಜಲವು ಸಾಗರಕ್ಕೆ ಸಮ.

ವಿ – ಭಿಕ್ಷಾನ್ನ ಮೇರುಪರ್ವತಕ್ಕೆ ಸಮ ಎಂದರೆ ಮೇರುಪರ್ವತದಷ್ಟು ಅನ್ನ ನೀಡಿದ್ದಕ್ಕೆ ಸಮ ಎಂದೂ, ಸಾಗರೋಪಮಂ ಎಂದರೆ ನೀಡಿದ ನೀರು ಸಮುದ್ರದಷ್ಟು ಅಪಾರ ಎಂದೂ ಭಾವ. : ತದನ್ನಂ ದತ್ತಮನ್ನಂ ಮೇರುಣಾ ದತ್ತಮೇರುಪರ್ವತಸಮಾನಾನ್ನೇನ ತುಲ್ಯಮ್, ದತ್ತ-ಮೇರುಪರ್ವತಸಮಾನಾನ್ನವತ್ಪುಣ್ಯಪ್ರದಮಿತಿ ಯಾವತ್ । ತಜ್ಜಲಂ ಪೂರ್ವದತ್ತಜಲಂ ಪುನ-ರ್ದತ್ತಜಲಂ ಚ ಪ್ರತ್ಯೇಕಂ ಸಾಗರೋಪಮಮ್ । ದತ್ತಸಾಗರಸಮಾನೋದಕವತ್ ಪುಣ್ಯಪ್ರದಮಿತಿ ಯಾವತ್ । 'ಮೇರುಣಾ ತುಲ್ಯಮ್' ಇತ್ಯುಪಮಾ, 'ಸಾಗರೋಪಮಮ್' ಇತ್ಯುಪಮಾ ಚಾಭೂತೋಪಮೇತಿ ॥ (ವ್ಯಾ)

## ಪೂಜಾಕಾಲದ ಪ್ರಾರ್ಥನೆ

೪೦೬. ನ ಜಾನೇ ಕರ್ಮ ಯತ್ಕಿಂಚಿನ್ನಾಪಿ ಲೌಕಿಕವೈದಿಕೇ।
ತಥಾಽಪಿ ಮತ್ಕೃತಾಂ ಪೂಜಾಂ ಸ್ವೀಕುರುಷ್ವ ಜನಾರ್ದನ ॥

ಅನು – ಹೇ ಜನಾರ್ದನನೇ! ನನಗೆ ಯಾವೊಂದು ಕರ್ಮವೂ ತಿಳಿದಿಲ್ಲ. ಲೌಕಿಕ ವೈದಿಕಗಳನ್ನೂ ನಾನು ಅರಿಯೆ. ಆದರೂ ಸಹ ನಾನು ಮಾಡುವ ಪೂಜೆಯನ್ನು ಸ್ವೀಕರಿಸು.

ವಿ – ಇಲ್ಲಿ ಯಾವುದೇ ಕರ್ಮ ಎಂದರೆ ಷೋಡಶೋಪಚಾರಗಳ ಮಧ್ಯದಲ್ಲಿ ಯಾವ ಒಂದು ಉಪಚಾರ ಎಂದು ಅರ್ಥ ; ಲೌಕಿಕವೈದಿಕ ಎಂದರೆ ಷೋಡಶಪೂಜಾಸಾಧನವಾದ ಲೌಕಿಕವೈದಿಕ ಮಂತ್ರಗಳು ಎಂದರ್ಥ.

೪೦೭. ಕಾಮತೋಽಕಾಮತೋ ವಾಽಪಿ ನ ಕೃತಂ ನಿಯಮಾರ್ಚನಮ್।
ಕೇನಚಿದ್ವಿಘ್ನದೋಷೇಣ ಪರಿಪೂರ್ಣಂ ತದಸ್ತು ಮೇ ॥

ಅನು – ಇಚ್ಛೆಯಿದ್ದೋ ಇಲ್ಲವೋ ನಾನು, ಯಾವುದೋ ವಿಘ್ನದ ತಪ್ಪಿನಿಂದಾಗಿ, ನಿಯಮಪೂರ್ವಕವಾದ ಪೂಜೆಯನ್ನು ಮಾಡಲಿಲ್ಲ. ನಿನ್ನ ದಯೆಯಿಂದ ಅದು ಪೂರ್ಣವೆನ್ನಿಸಲಿ.

## ಷಂಢ ಯತಿಯ ಲಕ್ಷಣ

೪೦೮. ಅದ್ಯ ಜಾತಾಂ ಯಥಾ ನಾರೀಂ ತಥಾ ಷೋಡಶವಾರ್ಷಕೀಮ್।
ಶತವರ್ಷಾಂ ಚ ಯೋ ದೃಷ್ಟ್ವಾ ನಿರ್ವಿಕಾರಃ ಸ ಷಂಡಕಃ ॥

ಅನು – ಆಗ ತಾನೇ ಜನಿಸಿದ ಅಥವಾ ನೂರುವರ್ಷದ ಸ್ತ್ರೀಯನ್ನು ಕಂಡಾಗ ಹೇಗೋ ಹಾಗೆ ಹದಿನಾರುವರ್ಷದ ತರುಣಿಯನ್ನು ಕಂಡಾಗಲೂ ಯಾವ ಯತಿಯು ವಿಕಾರ-ಗೊಳ್ಳುವುದಿಲ್ಲವೋ ಅವನು ಷಂಢಯತಿ ಎನ್ನಿಸುವನು.

ವಿ – ಇಲ್ಲಿ ಷಂಢಯತಿ ಸರ್ವಥಾ ವಿಕಾರ ಹೊಂದದ ಶ್ರೇಷ್ಠಯತಿ ಎಂದರ್ಥ.

## ಪಂಗು ಯತಿಯ ಲಕ್ಷಣ

೪೦೯. ಭಿಕ್ಷಾರ್ಥಮಟನಂ ಯಸ್ಯ ವಿಣ್ಮೂತ್ರಕರಣಾಯ ವೈ।
ಯೋಜನಾನ್ನ ಪರಂ ಯಾತಿ ಸರ್ವಥಾ ಪಂಗುರೇವ ಸಃ ॥

ಅನು – ಭಿಕ್ಷಾಟನೆಗಾಗಿಯಾಗಲಿ, ಮಲಮೂತ್ರವಿಸರ್ಜನೆಗಾಗಲೀ ಗ್ರಾಮದಿಂದ

ಲೋಕವಾರ್ತೆಯನ್ನು ಕೇಳಿದರೂ ಕೇಳದಂತಿರುವ ಯತಿಯು ಬಧಿರ(ಕಿವುಡ)ಯತಿ ಎನ್ನಿಸುವನು.

ವಿ – ಎಷ್ಟೇ ಆಕರ್ಷಕವಾಗಿದ್ದರೂ ಲೋಕವಾರ್ತೆಗೆ ಕಿವಿಗೊಡದ ಯತಿ ಕಿವುಡಯತಿ ಎಂದು ಇಲ್ಲಿ ಪ್ರಶಂಸಿಸಲಾಗಿದೆ : ಲೋಕವಿಷಯಕಮ್ ಇತ್ಯಸ್ಯಾಧ್ಯಾಹಾರೇಣ ಹಿತಾದಿರೂಪಂ ಲೋಕ-ವಿಷಯಕಂ ವಾಕ್ಯಂ ಶ್ರುತ್ವಾಽಪಿ ನ ಶೃಣೋತೀವೇತ್ಯರ್ಥಸ್ಯೋಕ್ತತ್ವಾತ್ । (ವ್ಯಾ)

## ಮೂಕ ಯತಿಯ ಲಕ್ಷಣ

೪೧೨. ಸಾನ್ನಿಧ್ಯೇ ವಿಷಯಾಣಾಂ ಯಃ ಸಮರ್ಥೋಽ ವಿಗತೇಂದ್ರಿಯಃ ।
ಸುಪ್ತವದ್ವರ್ತತೇ ನಿತ್ಯಂ ಸ ಯತಿರ್ಮೂಕ ಉಚ್ಯತೇ ॥

ಅನು – ವಿಷಯಭೋಗಸಮರ್ಥನಾಗಿದ್ದರೂ ವಿಷಯಗಳು ಒದಗಿ ಬಂದಾಗಲೂ, ಇಂದ್ರಿಯಗಳು ಪಟುವಾಗಿದ್ದಾಗಲೂ ಯಾವನು ಅವುಗಳ ಬಗ್ಗೆ ನಿದ್ರಿಸುವವನಂತೆ ವರ್ತಿಸುವನೋ ಅಂತಹ ಯತಿಯು ಮೂಕಯತಿ ಎನ್ನಿಸುವನು.

ವಿ – ೧. ಅತ್ಯಂತ ಆಕರ್ಷಕವಿಷಯಾದಿಗಳ ಸಂಪರ್ಕ ಒದಗಿದಾಗಲೂ ನಿಯಮಭಂಗ-ವಾಗದಿರಲೆಂದು ಲೌಕಿಕವಾಕ್ಯಪ್ರಯೋಗವನ್ನು ಯಾವುದೇ ರೀತಿಯಲ್ಲಿ ಮಾಡದಿರುವ ಯತಿಯು ಮೂಕ ಯತಿ ಎನ್ನಿಸುವನು ಎಂದರ್ಥ.

೨. ಮೇಲಿನ ೮ ಶ್ಲೋಕಗಳು ಸ್ಮೃತ್ಯಂತರವಚನಗಳು ಎಂದು ವ್ಯಾಖ್ಯಾನದಲ್ಲಿದೆ.

## ಯತಿಗೆ ವಿಶೇಷ ನಿಷಿದ್ಧಪ್ರತಿಗ್ರಹಗಳು

೪೧೩. ಕ್ಷೇತ್ರಂ ಗಾವೋ ಹಿರಣ್ಯಂ ಚ ಯತೇರ್ಯಸ್ಯ ಪ್ರತಿಗ್ರಹಃ ।
ತಾದೃಶಂ ಕಶ್ಮಲಂ ದೃಷ್ಟ್ವಾ ಸವಾಸಾ ಜಲಮಾವಿಶೇತ್ ॥

ಅನು – ಭೂಮಿದಾನ, ಗೋದಾನ, ಹಿರಣ್ಯದಾನಗಳನ್ನು ಯತಿಯು ಸ್ವೀಕರಿಸುವುದನ್ನು ಕಂಡಾಗ ಕೂಡಲೇ ಉಟ್ಟಬಟ್ಟೆಯೊಂದಿಗೆ ಸ್ನಾನ ಮಾಡಬೇಕು.

೪೧೪. ಕಾಂಚನಂ ಚ ತಿಲಾ ಗಾವೋ ಭೂಮಿರ್ಧಾನ್ಯಂ ಧನಾನಿ ಚ ।
ಪ್ರತಿಗೃಹ್ಯ ಯತಿಶ್ಚೈತಾನ್ ಪತತೇ ನಾತ್ರ ಸಂಶಯಃ ॥

ಅನು – ಚಿನ್ನ, ಎಳ್ಳು, ಗೋವುಗಳು, ಭೂಮಿ, ಧಾನ್ಯ ಹಾಗೂ ಧನಗಳನ್ನು ದಾನವಾಗಿ ಸ್ವೀಕರಿಸುವ ಯತಿಯು ನರಕಕ್ಕೆ ಬೀಳುವನು. ಇದು ನಿಃಸಂಶಯ.

ವಿ – ೧. ಮೇಲಿನ ಎರಡು ಶ್ಲೋಕಗಳು ಸಂಗ್ರಹದಲ್ಲಿನ ವಚನಗಳು ಎಂದು ವ್ಯಾಖ್ಯಾನವಿದೆ.

೨. ಯತಿಗೆ ಭಿಕ್ಷಾನ್ನದ ಹೊರತು ಬೇರೆ ಎಲ್ಲ ಬಗೆಯ ದಾನದ ಸ್ವೀಕಾರವು ಅತ್ಯಂತ ನಿಷಿದ್ಧ ಎಂದರ್ಥ.

## ಯತಿಗೆ ಅತ್ಯಂತ ನಿಷಿದ್ಧಕಾರ್ಯಗಳು

೪೧೫. ಪತತ್ಯಸೌ ಧ್ರುವಂ ಭಿಕ್ಷುರ್ಯಸ್ಯ ಭಿಕ್ಷೋರ್ದ್ವಯಂ ಭವೇತ್ ।
ಧೀಪೂರ್ವಂ ರೇತಉತ್ಸರ್ಗೋ ದ್ರವ್ಯಸಂಗ್ರಹ ಏವ ಚ ॥

ಅನು – ಬುದ್ಧಿಪೂರ್ವಕವಾಗಿ ರೇತಸ್ಸಿನ ಉತ್ಸರ್ಗ, ಹಾಗೂ ದ್ರವ್ಯಸಂಗ್ರಹ ಇವೆರಡನ್ನೂ ಮಾಡುವ ಯತಿಯು ನಿಶ್ಚಿತವಾಗಿ ನರಕದಲ್ಲಿ ಬೀಳುವನು.

ವಿ – ೧. ಇದು ಜಮದಗ್ನಿವಚನ.

೨. 'ಅಸೌ' ಎಂಬ ಪದದಿಂದ ಆ ಯತಿಯು ಎಷ್ಟೇ ಜ್ಞಾನಿಯಾಗಿದ್ದರೂ ನರಕತಪ್ಪಿದ್ದಲ್ಲ ಎಂಬ ವಿಶೇಷಾಂಶ ಸೂಚಿತ : ಅಸೌ ಚ ಇತ್ಯನೇನ ಜ್ಞಾನಿತ್ವೇನ ಪ್ರಸಿದ್ಧೋಽಪೀತ್ಯರ್ಥಃ, ಮಹಾಜ್ಞಾನ್ಯಪೀತಿ ತಾತ್ಪರ್ಯಾರ್ಥಶ್ಚೋಚ್ಯತ ಇತಿ ಸ್ವೀಕರಣಾತ್ । (ವ್ಯಾ)

೩. ಈ ವಿಷಯಕ್ಕೆ ಇನ್ನೂ ಬೇರೆ ಪ್ರಮಾಣಗಳುಂಟು ಎಂಬುದನ್ನು ಧ್ರುವಂ ಎಂಬ ಪದದಿಂದ ಸೂಚಿಸಿರುವರು : ಉಕ್ತಾರ್ಥಃ ಪ್ರಮಾಣಾಂತರೇಣಾಪಿ ನಿಶ್ಚಿತ ಇತ್ಯರ್ಥಲಾಭಾರ್ಥಂ ಪ್ರಮಾಣೇನ ನಿಶ್ಚಿತಮಿತ್ಯರ್ಥಂ ವಕ್ತುಂ ಧ್ರುವಮಿತ್ಯುಕ್ತಮಿತಿ ಸ್ವೀಕರಣಾತ್ । (ವ್ಯಾ)

## ಅಧ್ಯಾತ್ಮಪುಸ್ತಕದ ಪ್ರತಿಗ್ರಹದೋಷವಲ್ಲ

೪೧೬. ಅಧ್ಯಾತ್ಮಪುಸ್ತಕಂ ವಿಪ್ರದತ್ತಂ ಗೃಹ್ಣೀತ ಭಿಕ್ಷುಕಃ ।
ನಾತೋಽನ್ಯದ್ದ್ರವ್ಯಮಾದಾಯ ಲೇಖಯೇದ್ದೋಷವರ್ಜನಾತ್ ॥

ಅನು – ಯತಿಯು ಬ್ರಾಹ್ಮಣರು ನೀಡುವ ಅಧ್ಯಾತ್ಮದ ಗ್ರಂಥವನ್ನು ದಾನವಾಗಿ ಸ್ವೀಕರಿಸಬಹುದು. ಅಥವಾ ಅಧ್ಯಾತ್ಮಪುಸ್ತಕಕ್ಕೆ ದಾನ ನೀಡಿದಲ್ಲಿ ಆ ದ್ರವ್ಯವನ್ನು ಸ್ವೀಕರಿಸಿ ಆ ಪುಸ್ತಕವನ್ನು ಬರೆಸಿಕೊಳ್ಳಬಹುದು. ಬೇರೆ ದ್ರವ್ಯವನ್ನು ಮಾತ್ರ ಸರ್ವಥಾ ಸ್ವೀಕರಿಸಬಾರದು.

ವಿ – ೧. ಭಿಕ್ಷಾನ್ನದಂತೆ ಗ್ರಂಥವನ್ನೂ ಸಹ ಯತಿಯು ಸ್ವೀಕರಿಸಬಹುದು ಎಂಬ ವಿಶೇಷವನ್ನು ಇಲ್ಲಿ ತಿಳಿಸಿರುವರು.

೨. ಗ್ರಂಥವನ್ನು ಕೊಳ್ಳಲೆಂದು ದ್ರವ್ಯ ನೀಡಿದಲ್ಲಿ, ಅದನ್ನು ಸ್ವೀಕರಿಸಿ ಗ್ರಂಥವನ್ನು ಕೊಳ್ಳುವುದೂ ಸಹ ದೋಷವಲ್ಲ ಎಂಬುದು ಇದರಿಂದ ಸೂಚಿತ.

೨. ಯತಿಗೆ ಭಿಕ್ಷಾನ್ನದ ಹೊರತು ಬೇರೆ ಎಲ್ಲ ಬಗೆಯ ದಾನದ ಸ್ವೀಕಾರವು ಅತ್ಯಂತ ನಿಷಿದ್ಧ ಎಂದರ್ಥ.

## ಯತಿಗೆ ಅತ್ಯಂತ ನಿಷಿದ್ಧಕಾರ್ಯಗಳು

೪೧೫. ಪತತ್ಯಸೌ ಧ್ರುವಂ ಭಿಕ್ಷುರ್ಯಸ್ಯ ಭಿಕ್ಷೋರ್ದ್ವಯಂ ಭವೇತ್ ।
ಧೀಪೂರ್ವಂ ರೇತಉತ್ಸರ್ಗೋ ದ್ರವ್ಯಸಂಗ್ರಹ ಏವ ಚ ॥

ಅನು – ಬುದ್ಧಿಪೂರ್ವಕವಾಗಿ ರೇತಸ್ಸಿನ ಉತ್ಸರ್ಗ, ಹಾಗೂ ದ್ರವ್ಯಸಂಗ್ರಹ ಇವೆರಡನ್ನೂ ಮಾಡುವ ಯತಿಯು ನಿಶ್ಚಿತವಾಗಿ ನರಕದಲ್ಲಿ ಬೀಳುವನು.

ವಿ – ೧. ಇದು ಜಮದಗ್ನಿವಚನ.

೨. 'ಅಸೌ' ಎಂಬ ಪದದಿಂದ ಆ ಯತಿಯು ಎಷ್ಟೇ ಜ್ಞಾನಿಯಾಗಿದ್ದರೂ ನರಕತಪ್ಪಿದ್ದಲ್ಲ ಎಂಬ ವಿಶೇಷಾಂಶ ಸೂಚಿತ : ಅಸೌ ಚ ಇತ್ಯನೇನ ಜ್ಞಾನಿತ್ವೇನ ಪ್ರಸಿದ್ಧೋಽಪೀತ್ಯರ್ಥಃ, ಮಹಾಜ್ಞಾನ್ಯಪೀತಿ ತಾತ್ಪರ್ಯಾರ್ಥಶ್ಚೋಚ್ಯತ ಇತಿ ಸ್ವೀಕರಣಾತ್ । (ವ್ಯಾ)

೩. ಈ ವಿಷಯಕ್ಕೆ ಇನ್ನೂ ಬೇರೆ ಪ್ರಮಾಣಗಳುಂಟು ಎಂಬುದನ್ನು ಧ್ರುವಂ ಎಂಬ ಪದದಿಂದ ಸೂಚಿಸಿರುವರು : ಉಕ್ತಾರ್ಥಃ ಪ್ರಮಾಣಾಂತರೇಣಾಪಿ ನಿಶ್ಚಿತ ಇತ್ಯರ್ಥಲಾಭಾರ್ಥಂ ಪ್ರಮಾಣೇನ ನಿಶ್ಚಿತಮಿತ್ಯರ್ಥಂ ವಕ್ತುಂ ಧ್ರುವಮಿತ್ಯುಕ್ತಮಿತಿ ಸ್ವೀಕರಣಾತ್ । (ವ್ಯಾ)

## ಅಧ್ಯಾತ್ಮಪುಸ್ತಕದ ಪ್ರತಿಗ್ರಹದೋಷವಲ್ಲ

೪೧೬. ಅಧ್ಯಾತ್ಮಪುಸ್ತಕಂ ವಿಪ್ರದತ್ತಂ ಗೃಹ್ಣೀತ ಭಿಕ್ಷುಕಃ ।
ನಾತೋಽನ್ಯದ್ದ್ರವ್ಯಮಾದಾಯ ಲೇಖಯೇದ್ದೋಷವರ್ಜನಾತ್ ॥

ಅನು – ಯತಿಯು ಬ್ರಾಹ್ಮಣರು ನೀಡುವ ಅಧ್ಯಾತ್ಮದ ಗ್ರಂಥವನ್ನು ದಾನವಾಗಿ ಸ್ವೀಕರಿಸಬಹುದು. ಅಥವಾ ಅಧ್ಯಾತ್ಮಪುಸ್ತಕಕ್ಕೆ ದಾನ ನೀಡಿದಲ್ಲಿ ಆ ದ್ರವ್ಯವನ್ನು ಸ್ವೀಕರಿಸಿ ಆ ಪುಸ್ತಕವನ್ನು ಬರೆಸಿಕೊಳ್ಳಬಹುದು. ಬೇರೆ ದ್ರವ್ಯವನ್ನು ಮಾತ್ರ ಸರ್ವಥಾ ಸ್ವೀಕರಿಸಬಾರದು.

ವಿ – ೧. ಭಿಕ್ಷಾನ್ನದಂತೆ ಗ್ರಂಥವನ್ನೂ ಸಹ ಯತಿಯು ಸ್ವೀಕರಿಸಬಹುದು ಎಂಬ ವಿಶೇಷವನ್ನು ಇಲ್ಲಿ ತಿಳಿಸಿರುವರು.

೨. ಗ್ರಂಥವನ್ನು ಕೊಳ್ಳಲೆಂದು ದ್ರವ್ಯ ನೀಡಿದಲ್ಲಿ, ಅದನ್ನು ಸ್ವೀಕರಿಸಿ ಗ್ರಂಥವನ್ನು ಕೊಳ್ಳುವುದೂ ಸಹ ದೋಷವಲ್ಲ ಎಂಬುದು ಇದರಿಂದ ಸೂಚಿತ.

೩. ಇದೂ ಸಹ ಜಮದಗ್ನಿವಚನ.

## ಸ್ತ್ರೀಗಮನ ದೋಷಕ್ಕೆ ಪ್ರಾಯಶ್ಚಿತ್ತ

೪೧೭. ಯತಿಶ್ಚ ಬ್ರಹ್ಮಚಾರೀ ಚ ಗತ್ವಾ ಸ್ತ್ರಿಯಮಕಾಮತಃ।
ಗುರುತಲ್ಪಂ ಸಮುದ್ದಿಷ್ಟಂ ಪೂರ್ಣಮಬ್ದಂ ತಥಾ ಚರೇತ್ ॥

ಅನು – ಯತಿಯಾಗಲೀ ಬ್ರಹ್ಮಚಾರಿಯಾಗಲೀ ಸ್ತ್ರೀಗಮನವನ್ನು ಮಾಡಿ ಬಳಿಕ ಬ್ರಹ್ಮಚರ್ಯದಿಂದ ಇದ್ದರೂ ಅದು ಗುರುತಲ್ಪಗಮನಕ್ಕೆ ಸಮಾನವಾದ ಪಾಪವೆನ್ನಿಸುವುದು. ಅದರ ಪರಿಹಾರಕ್ಕಾಗಿ ಒಂದು ವರ್ಷಕಾಲ ಪೂರ್ಣ ಎಂಬ ಹೆಸರಿನ ವ್ರತವನ್ನು ಆಚರಿಸಬೇಕು.

ವಿ – ೧. ಇದು ಹಾರೀತವಚನ.

೨. ಒಮ್ಮೆ ಸ್ತ್ರೀಗಮನಮಾಡಿದರೂ ಅದು ಯತಿಯ ಪಾಲಿಗೆ ಗುರುತಲ್ಪಗಮನದಷ್ಟು ಮಹಾಪಾತಕ ಎಂದರ್ಥ : ಗುರುತಲ್ಪಂ ಗುರುಸ್ತ್ರೀಗಮನಜನ್ಯಪಾಪಸಮಾನಪಾಪಂ (ವ್ಯಾ)

೩. ಇಲ್ಲಿ ಪೂರ್ಣಾಬ್ದಂ ಎಂಬುದಕ್ಕೆ ಒಂದು ವರ್ಷಕಾಲ ಪೂರ್ಣನಾಮಕ ವ್ರತ ಎಂದು ಅರ್ಥ : ಪೂರ್ಣಂ ಪೂರ್ಣನಾಮಕವ್ರತಂ ಯಥಾ ಶಾಸ್ತ್ರೇ ಉಕ್ತಂ ತಥಾ ಚರೇದಿತಿ। (ವ್ಯಾ)

೪೧೮. ಕಾಮತೋ ಬ್ರಹ್ಮಚಾರೀ ತು ಪೂರ್ಣಮೇವಾಚರೇದ್ವ್ರತಮ್।
ಯತಿಸ್ತು ಮರಣಾಚ್ಛುದ್ಧಿಂ ಶಿಶ್ನಸ್ಯ ಕೃಂತನೇನ ವಾ ॥

ಅನು – ಬ್ರಹ್ಮಚಾರಿಯಾದವನು ಬಹುಕಾಲಪರ್ಯಂತ ಸ್ತ್ರೀಸಂಗಮಾಡಿದಲ್ಲಿ ಅವನು ಪೂರ್ಣ ಎಂಬ ಹೆಸರಿನ ವ್ರತವನ್ನೇ ವಿಶೇಷವಾಗಿ ಆಚರಿಸಬೇಕು. ಯತಿಯಾದವನು ಹಾಗೆ ಮಾಡಿದಲ್ಲಿ ದೇಹತ್ಯಾಗ ಮಾಡಿಯಾಗಲೀ, ಶಿಶ್ನವನ್ನು ಕತ್ತರಿಸಿಕೊಂಡಾಗಲೀ ಶುದ್ಧನಾಗಬೇಕು.

ವಿ – ಬ್ರಹ್ಮಚಾರಿಗೆ ವ್ರತಲೋಪವಾದಲ್ಲಿ ಪೂರ್ಣನಾಮಕ ವ್ರತದ ವಿಶೇಷಾಚರಣೆ ಪರಿಹಾರವಾದರೆ, ಯತಿಗೆ ಮಾತ್ರ ದೇಹತ್ಯಾಗ ಅಥವಾ ಶಿಶ್ನಕೃಂತನವೇ ಮುಖ್ಯಪರಿಹಾರ ಎಂಬ ವಿಶೇಷಾಂಶ ಇಲ್ಲಿ ಉಕ್ತವಾಗಿದೆ.

## ಯತಿಗೆ ಎರಡು ಭೋಜನ ನಿಷಿದ್ಧ

೪೧೯. ಭಿಕ್ಷುರ್ದ್ವಿರ್ಭೋಜನಂ ಕುರ್ಯಾತ್ ಕದಾಚಿಜ್ಜ್ಞಾನದುರ್ಬಲಃ।
ಸ್ವಸ್ಥಾವಸ್ಥೋ ಯದಾ ಭುಂಕ್ತೇ ತದಾ ಚಾಂದ್ರಾಯಣಂ ಚರೇತ್ ॥

ಅನು – ಜ್ಞಾನಸಂಪಾದನೆಗೆ ಅನುಕೂಲವಿಲ್ಲದ ಯತಿಯು ಒಮ್ಮೊಮ್ಮೆ ಎರಡು ಬಾರಿ ಉಣ್ಣಬಹುದು. ಆದರೆ ಜ್ಞಾನಸಂಪಾದನೆಗೆ ಅನುಕೂಲವಾದ ಶಕ್ತಿ ಹೊಂದಿದ್ದ ಯತಿಯು ಸುಖಕ್ಕೆಂದು ಎರಡು ಬಾರಿ ಉಂಡಲ್ಲಿ ಅದರ ಪರಿಹಾರಕ್ಕೆಂದು ಚಾಂದ್ರಾಯಣವ್ರತವನ್ನು ಆಚರಿಸಬೇಕು.

ವಿ – ಅತ್ಯಂತ ಅಶಕ್ತನಾದ ಯತಿಯು ಹಸಿವಿನಿಂದ ಬಹಳವಾಗಿ ಪೀಡಿತನಾಗಿದ್ದಲ್ಲಿ ಅಂದು ಮಾತ್ರ ಮತ್ತೊಮ್ಮೆ ಭೋಜನ ಮಾಡಬಹುದು ಎಂದರ್ಥ. ನಿತ್ಯ ಎರಡು ಭೋಜನ ಅವನಿಗೂ ನಿಷಿದ್ಧ ಎಂಬುದು ವಿಶೇಷ.

## ಆಪತ್ಕಾಲದಲ್ಲಿ ಯತಿಧರ್ಮ

೪೨೦. ಅಸ್ವಸ್ಥಃ ಪ್ರಾಣರಕ್ಷಾರ್ಥಂ ಪುನರ್ಮೂಲಫಲಾದಿಕಮ್ ।
ಭಕ್ಷಯನ್ನೈವ ಲಿಪ್ಯೇತ ಭೇಷಜಂ ದಂತಧಾವನಮ್ ॥

ಅನು – ಅತ್ಯಂತ ಹೆಚ್ಚಿನ ಅಶಕ್ತಿ ಮೊದಲಾದ ಉಪದ್ರವಗಳಿಗೆ ಒಳಗಾದ ಯತಿಯು ಪ್ರಾಣರಕ್ಷಣೆಗೆಂದು ಗಡ್ಡೆ ಗೆಣಸು ಮೊದಲಾದವನ್ನು ಔಷಧಿಯನ್ನೂ ಅಕಾಲದಲ್ಲಿ ದಂತಧಾವನವನ್ನೂ ಮಾಡಿಕೊಂಡರೆ ದೋಷವೆನ್ನಿಸದು.

ವಿ – ಸನ್ಯಾಸಿಗಳಿಗೆ ದಂತಧಾವನ ವಿಹಿತವಾಗಿದ್ದರೂ ಅಕಾಲದಲ್ಲಿ ದಂತಧಾವನ ನಿಷಿದ್ಧ. ಆಪತ್ಕಾಲದಲ್ಲಿ ಮಾತ್ರ ದೋಷವಿಲ್ಲ ಎಂದರ್ಥ : ಏತೇನ ಸನ್ಯಾಸಿನಾ ದಂತಧಾವನಸ್ಯ ವಿಹಿತತ್ವೇನ ಪಾಪಪ್ರಸಕ್ತೇರಭಾವಾದ್ದಂತಧಾವನೇ ಕೃತೇಽಪಿ ಪಾಪಲೇಪೋ ನಾಸ್ತೀತಿ ಕಥನಮಯುಕ್ತಮಿತಿ ಶಂಕಾ ನಿರಸ್ತಾ । ಸನ್ಯಾಸಿನಾಂ ವಿಹಿತಕಾಲಾತಿರಿಕ್ತಕಾಲೇ ದಂತಧಾವನಸ್ಯ ನಿಷಿದ್ಧತ್ವೇನ ಪಾಪಪ್ರಸಕ್ತೇರ್ವಿದ್ಯಮಾನತ್ವಾತ್ ವಿಹಿತಕಾಲಾತಿರಿಕ್ತಕಾಲೇ ಪ್ರಾಣರಕ್ಷಾರ್ಥಂ ದಂತಧಾವನೇ ಕೃತೇಽಪಿ ಪಾಪಲೇಪೋ ನಾಸ್ತೀತಿ ಕಥನಸ್ಯ ಯುಕ್ತತ್ವಾತ್ । (ವ್ಯಾ)

## ಚಾತುರ್ಮಾಸ್ಯದ ಮಧ್ಯದಲ್ಲಿ ಸೀಮೋಲ್ಲಂಘನೆಯಾದಲ್ಲಿ ಪ್ರಾಯಶ್ಚಿತ್ತ

೪೨೧. ಚಾತುರ್ಮಾಸ್ಯಾಂತರೇ ಭಿಕ್ಷುರ್ಗ್ರಾಮಸೀಮ್ನಃ ಪರಂ ವ್ರಜೇತ್ ।
ಜಪೇತ್ ತ್ರಿಸಹಸ್ರಂ ತು ಪ್ರಾಣಾಯಾಮಶತಂ ಚರೇತ್ ॥

ಅನು – ಚಾತುರ್ಮಾಸ್ಯಕ್ಕೆ ಕುಳಿತ ಯತಿಯು ಆ ಅವಧಿಯು ಪೂರೈಸುವ ಮುನ್ನ ಸೀಮೋಲ್ಲಂಘನ ಮಾಡಿದಲ್ಲಿ ಮೂರುಸಾವಿರಪ್ರಣವಮಂತ್ರವನ್ನು ಜಪಿಸಬೇಕು ಮತ್ತು ಪ್ರಣವಸಮೇತವಾದ ನೂರು ಪ್ರಾಣಾಯಾಮ ಮಾಡಬೇಕು.

ವಿ – ಚಾತುರ್ಮಾಸ್ಯದೀಕ್ಷೆಗೆ ಕುಳಿತ ಯತಿಯು ಮಧ್ಯದಲ್ಲಿ ಸೀಮೋಲ್ಲಂಘನ ಮಾಡುವುದು

ನಿಷಿದ್ಧ ಎಂದು ಮುಖ್ಯತಾತ್ಪರ್ಯ. ಅತ್ಯಂತ ಅನಿವಾರ್ಯಕಾರಣದಿಂದ ಹಾಗೆ ಸೀಮೋಲ್ಲಂಘನೆ ಮಾಡಿದಲ್ಲಿ ಪ್ರಾಯಶ್ಚಿತ್ತ ಇಲ್ಲಿ ಉಕ್ತವಾಗಿದೆ.

## ಏಕಾಂತಸಮಾಧಿಯಿಂದ ಮುಕ್ತಿಪ್ರಾಪ್ತಿ

೪೨೨. ನಿಮೇಷಮಾತ್ರಂ ಯಸ್ತಿಷ್ಠೇದೇಕಾಂತೇ ಸು ಸಮಾಹಿತಃ ।
ಸ ಹಿತ್ವಾ ದುಷ್ಕೃತಂ ಘೋರಮಮೃತತ್ವಂ ಸಮಶ್ನುತೇ ॥

ಅನು – ಎವೆಯಿಕ್ಕುವಷ್ಟು ಕಾಲವಾದರೂ ಯಾವ ಯತಿಯು ಏಕಾಂತದಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳುವನೋ ಅವನು ಪಾಪಗಳನ್ನು ಕಳೆದುಕೊಂಡು ಮುಕ್ತಿಯನ್ನು ಪಡೆಯುವನು.

ವಿ – ೧. ಇಲ್ಲಿ 'ಸಮಾಹಿತಃ' ಎಂಬುದಕ್ಕೆ ವಿಷ್ಣುವಿನಲ್ಲಿ ಮನಸ್ಸನ್ನು ಚೆನ್ನಾಗಿ ನೆಲೆಗೊಳಿಸಿದವನು ಎಂದೂ, 'ಏಕಾಂತೇ' ಎಂದರೆ ಜನರಹಿತಪ್ರದೇಶದಲ್ಲಿ ಎಂದೂ ಅರ್ಥ : ಸಂ ವಿಷ್ಣೌ ಸ್ಥಾಪಿತಃ ಸಮ್ಯಕ್ ಸ್ಥಾಪಿತಾಂತಃಕರಣಃ; ಏಕಾಂತೇ ಜನರಹಿತಪ್ರದೇಶೇ.

೨. ಯತಿಗೆ ಏಕಾಂತವಾಸ ಹಾಗು ವಿಷ್ಣುಧ್ಯಾನ ಸದಾ ವಿಹಿತ ಎಂದು ಮುಖ್ಯಭಾವ.

೩. ನಿಮಿಷಮಾತ್ರ ಏಕಾಂತವಾಸವು ಮುಕ್ತಿಫಲಕ ಎಂದರೆ ಅದಕ್ಕಿಂತ ಹೆಚ್ಚು ಏಕಾಂತವಾಸ ವಿಶೇಷಫಲಕ ಎಂದು ಭಾವ : ನನು ನಿಮೇಷಮಾತ್ರಂ ಯ ಏಕಾಂತೇ ತಿಷ್ಠತಿ ತಸ್ಯ ಮೋಕ್ಷಶ್ಚೇತ್, ನಿಮೇಷಾಧಿಕಕಾಲಂ ಯ ಏಕಾಂತೇ ತಿಷ್ಠತಿ ತಸ್ಯ ನಿಮೇಷಾವಸ್ಥಾನೇನೈವ ಮೋಕ್ಷಸ್ಯ ಸಿದ್ಧತ್ವಾತ್, ನಿಮೇಷಾಧಿಕಕಾಲ ಏಕಾಂತಾವಸ್ಥಾನಂ ವ್ಯರ್ಥಂ ಸ್ಯಾದಿತಿ ಚೇತ್, ನ । ಯೋ ನಿಮೇಷಮಾತ್ರಮೇಕಾಂತೇ ತಿಷ್ಠತಿ ತನ್ಮೋಕ್ಷಾಪೇಕ್ಷಯಾಽಧಿಕಮೋಕ್ಷಃ ಯೋ ನಿಮೇಷಾಧಿಕಕಾಲಮೇಕಾಂತೇ ತಿಷ್ಠತಿ ತಸ್ಯ ಭವತೀತ್ಯಂಗೀಕಾರಾತ್ । (ವ್ಯಾ)

೪. ಮೇಲಿನ ೬ ಶ್ಲೋಕಗಳು ಹಾರೀತವಚನಗಳೆಂದು ವ್ಯಾಖ್ಯಾನದಲ್ಲಿದೆ.

॥ ಇತಿ ಶ್ರೀಮದಶ್ರುತಪದವಾಕ್ಯಪ್ರಮಾಣವ್ಯಾಖ್ಯಾತೄಣಾಮ್ ಅಭಿನವಚಂದ್ರಿಕಾಭಿನವ-
ತಾಂಡವಾಭಿನವಗದಾಭಿನವಾಮೃತಾದಿಬಹುಗ್ರಂಥಕರ್ತೄಣಾಂ ಜಗತ್ಪೂಜ್ಯಪಾದುಕಾನಾಂ
ಶ್ರೀ ಸತ್ಯನಾಥಶ್ರೀಪಾದಾನಾಂ ಶಿಷ್ಯೇಣ ಸತ್ಯಾಭಿನವಯತಿನಾ ಕೃತಾಯಾಂ
ರಾಮಾಮೃತಮಹಾರ್ಣವಃ ಸಂಪೂರ್ಣಮ್ ॥

॥ ಶ್ರೀಮಧ್ವೇಶಾರ್ಪಣಮಸ್ತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವನುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

- - - - -

# ಶ್ಲೋಕಾನುಕ್ರಮಣಿಕೆ

॥ಶ್ರೀಕೃಷ್ಣಾರ್ಪಣಮಸ್ತು॥

ಪರಿಶಿಷ್ಟ– ೧.

## (ಶ್ರೀಸತ್ಯನಾಥ)ಗುರುಪರಂಪರಾ ಸ್ತೋತ್ರಮ್

ರಘುನಾಥ ಸದಾ ಪಾಹಿ ರಘುನಾಥಗೃಹೋದ್ಭವ ।
ರಘುನಾಥಕೃಪಾಯಾತರಘುನಾಥಪದಾಶ್ರಯ ॥ ೧ ॥

ವೇಂಕಟೇಶ ಸದಾ ದೇಹಿ ವೇಂಕಟೇಶ ಪದಾರ್ಚನಮ್ ।
ವೇಂಕಟೇಶಸದಾಧ್ಯಾತವೇಂಕಟೇಶಗುರುಪ್ರಿಯ ॥ ೨ ॥

ಪೂರ್ಣಬೋಧಗುರುಂ ವಂದೇ ಪೂರ್ಣಭಾಷ್ಯಾದಿಕಾರಿಣಮ್ ।
ಪೂರ್ಣಾನಂದಪದಾಸಕ್ತಂ ಪೂರ್ಣಮದ್ಗುರುಪೂಜಿತಮ್ ॥ ೩ ॥

ಪದ್ಮನಾಭಮುನಿಂ ನೌಮಿ ಪದ್ಮನಾಭಾರ್ಚಕಂ ಸದಾ ।
ಪದ್ಮನಾಭಗ್ರಂಥಕಾರಂ ಪದ್ಮಾಕ್ಷೇಶಪ್ರಸಾದತಃ ॥ ೪ ॥

ಗುರುಂ ನರಹರಿಂ ಸೇವೇ ಗುರುಪಾದಪ್ರಭಾವಜಮ್ ।
ಗುರುಶ್ರೀಸತ್ಯನಾಥೇಂದ್ರಗುರುಶ್ರೀಪಾದಶೇಖರಮ್ ॥ ೫ ॥

ಮಾಧವೇಶಮಹಂ ಯಾಮಿ ಮಾಧವೇಶಾನುವರ್ತಿನಮ್ ।
ಮಾಧವೇಶಕೃಪಾದೃಷ್ಟಿಂ ಮಾಧವೇಶಪ್ರಭಾವತಃ ॥ ೬ ॥

ಸದಾಽಕ್ಷೋಭ್ಯಮುನೇ ಪಾಹಿ ಸದಾಕ್ಷೋಭ್ಯ ಜಗದ್ಗುರೋ ।
ಸದಾಽಕ್ಷೋಭ್ಯಕುವಾದೀಂದ್ರಸದಾಕ್ಷೋಭ್ಯೇಶಭಾವಿತ ॥ ೭ ॥

ಜಯತೀರ್ಥ ಗುರೋ ರಕ್ಷ ಜಯತೀರ್ಥ ಕೃಪಾಕರ ।
ಜಯತೀರ್ಥಸುಧಾಪಾನ ಜಯತೀರ್ಥಗುರುಸ್ತುತ ॥ ೮ ॥

ವಿದ್ಯಾಧಿರಾಜಂ ರಾಜೇಂದ್ರಂ ವಿದ್ಯಾಧಿಕಮಹಂ ಭಜೇ ।
ವಿದ್ಯಾಧಿಕಛಾತ್ರಯುಕ್ತವಿದ್ಯಾಧೀಶಗುರುಪ್ರಿಯಮ್ ॥ ೯ ॥

ಕವೀಂದ್ರಃ ಪಾತು ಯೋಗೀಂದ್ರಃ ಕವೀಂದ್ರಾಧಿಪತಿರ್ಗುರುಃ ।
ಕವೀಂದ್ರಸತ್ಯನಾಥೇಂದ್ರಕವೀಂದ್ರಾರಾಧ್ಯಸತ್ಪದಃ ॥ ೧೦ ॥

ವಾಗೀಶಂ ಚಿಂತಯೇ ನಿತ್ಯಂ ವಾಗೀಶಸದೃಶಂ ಗುರುಮ್ ।
ವಾಗೀಶಶ್ರೀಭಾರತೀಶವಾಗೀಶಶ್ರೀಶಭಾವತಃ ॥ ೧೧ ॥

ರಾಮಚಂದ್ರಗುರುಂ ಸೇವೇ ರಾಮಚಂದ್ರಪ್ರಸಾದಜಮ್ ।
ರಾಮಚಂದ್ರಪ್ರಸಾದೇನ ರಾಮಚಂದ್ರಪ್ರಸಾದತಾ ॥ ೧೨ ॥

ವಿದ್ಯಾನಿಧಿಮುನಿಂ ವಂದೇ ವಿದ್ಯಾನಿಧಿಮಹಾನಿಧಿಮ್ ।
ವಿದ್ಯಾನಿಧಿಗ್ರಂಥಕರ್ತೃವಿದ್ಯಾನಿಧಿಮಹಾಗುರುಮ್ ॥ ೧೩ ॥

ರಘುನಾಥಗುರುಃ ಪಾಯಾತ್ ರಘುನಾಥಪದಾರ್ಚಕಃ ।
ರಘುನಾಥವಿಮಾನಾಪ್ತರಘುನಾಥಪದಾರ್ಚಕಃ ॥ ೧೪ ॥

ರಘುವರ್ಯ ಗುರೋ ದೇಹಿ ರಘುವರ್ಯಪದಾರ್ಚನಮ್ ।
ರಘುವರ್ಯಪದಾಸಕ್ತರಘುವರ್ಯಾರ್ಚನಪ್ರದ ॥ ೧೫ ॥

ರಘೂತ್ತಮಗುರುರ್ದದ್ಯಾತ್ ರಘೂತ್ತಮಕಥಾದರಮ್ ।
ರಘೂತ್ತಮಗ್ರಂಥಜಾತರಘೂತ್ತಮಕಥಾದೃತಃ ॥ ೧೬ ॥

ವೇದವ್ಯಾಸಗುರುಂ ಯಾಚೇ ವೇದವ್ಯಾಸಕೃತಾಗಮಮ್ ।
ವೇದವ್ಯಾಸಾರ್ಚನಪ್ರಾಪ್ತ ವೇದವ್ಯಾಸಸಮಾಶ್ರಯಮ್ ॥ ೧೭ ॥

ವಿದ್ಯಾಧೀಶ ಗುರೋ ರಕ್ಷ ವಿದ್ಯಾಧೀಶಹರೇಃ ಸಮಃ ।
ವಿದ್ಯಾಧೀಶಹರಿಪ್ರಾಪ್ತ ವಿದ್ಯಾಧೀಶಹರಿಪ್ರಿಯ ॥ ೧೮ ॥

ಶ್ರೀಮದ್ವೇದನಿಧಿಂ ನೌಮಿ ಶ್ರೀಮದ್ವೇದಪರಾಯಣಮ್ ।
ಶ್ರೀಮದ್ವೇದಪದಾಧೀಶಶ್ರೀಮದ್ವೇದಪದಾಶ್ರಯಮ್ ॥ ೧೯ ॥

ಸತ್ಯವ್ರತಗುರುಂ ಸ್ತೌಮಿ ಸತ್ಯವ್ರತಪರಂಪರಮ್ ।
ಸತ್ಯವ್ರತಪ್ರಸಾದಾಪ್ತಸತ್ಯವ್ರತಮಹಾಗುರುಮ್ ॥ ೨೦ ॥

ಸತ್ಯನಿಧ್ಯಾರ್ಯಮಾಶಾಸೇ ಸತ್ಯನಿಧ್ಯರ್ಯಪೂಜಕಮ್ ।
ಸತ್ಯನಿಧ್ಯಾರ್ಯಬುದ್ಧೀಶಸತ್ಯನಿಧ್ಯರ್ಯಪೂಜಿತಮ್ ॥ ೨೧ ॥

ಸತ್ಯನಾಥಗುರೂನ್ ಯಾಮಿ ಸತ್ಯನಾಥಾರ್ಚಕಾನ್ ಸದಾ ।
ಸತ್ಯನಾಥಗ್ರಂಥಕರ್ತ್ೄನ್ ಸತ್ಯನಾಥಪದಾಶ್ರಯಾನ್ ॥ ೨೨ ॥

ಸತ್ಯನಾಥಗುರೂನ್ ವಂದೇ ಸತ್ಯಾಭಿನವಸಂಸ್ತುತಾನ್ ।
ಸತ್ಯಸಿಧ್ಯರ್ಪಿತಪ್ರಾಣಾನ್ ಸತ್ಯಶಾಸ್ತ್ರವಿಚಕ್ಷಣಾತ್ ॥ ೨೩ ॥

ಸತ್ಯನಾಥಕೃಪಾಪಾತ್ರಸತ್ಯಾಭಿನವರಕ್ಷಕಾನ್ ।
ಸತ್ಯನಾಥಗುರೂನ್ ಸೇವೇ ಸತ್ಯೇಶ್ವರಪದಾರ್ಚಕಾನ್ ॥ ೨೪ ॥

ಸತ್ಯನಾಥಗುರುಸ್ತುತ್ಯಾ ಸತ್ಯಾಭಿನವಶಬ್ದಯಾ ।
ಸತ್ಯನಾಥಹರೇಃ ಪ್ರೀತ್ಯಾ ಸತ್ಯನಾಥಪದಂ ಭವೇತ್ ॥ ೨೫ ॥

॥ ಇತಿ ಶ್ರೀಸತ್ಯಾಭಿನವಯತಿಕೃತ ಗುರುಸ್ತುತಿಃ (ಶ್ರೀಸತ್ಯನಾಥ) ಗುರುಪರಂಪರಾಸ್ತೋತ್ರಮ್ ॥

* * * * *

# ಶ್ರೀಸತ್ಯಾಧೀಶತೀರ್ಥ ಚರಿತಮ್

ಮಧ್ಯದ್ವೀಪಂ ಸಮಾಗತ್ಯ ಜಗ್ಮುಃ ಸಂಗಲಿಗೀಂ ಪ್ರತಿ ।
ತತೋ ಬಡ್ಡೀಜಗನ್ನಾಥಾಚಾರ್ಯೇಭ್ಯಃ ಪ್ರೀತಿಪೂರ್ವಕಮ್ ॥
ತತೋ ದಿಗ್ವಿಜಯಾರ್ಥಂ ತಾನ್ ಪ್ರೇಷಯಿತ್ವಾ ಗುರೂತ್ತಮಾಃ । .............

ಅನುಜ್ಞಾತಾಸ್ತತಸ್ತೈಸ್ತೇ ಸತ್ಯಾಧೀಶಮುನೀಶ್ವರಾಃ ।
ಪೂರ್ವದೇಶೇ ಸಂಚರಂತಶ್ಚಕ್ರುರ್ದಿಗ್ವಿಜಯಂ ತದಾ ॥
ತತಶ್ಚತುರ್ವಿಧೋಪಾಯೈಃ ಸಂಪಾದ್ಯ ವಿಪುಲಂ ಧನಮ್ ।
ಪುನರ್ಗುರುಪಾದಾಂಭೋಜದರ್ಶನಾರ್ಥಂ ಸಮಾಗತಾಃ ॥
ನಾಚಾರಪುರಮಾಗತ್ಯ ಪ್ರಣಮ್ಯ ಗುರುಶೇಖರಾನ್ ।
ಚತ್ವಾರಿಂಶತ್ಸಹಸ್ರಾಣಿ ಸೂಕರಾಣಾಂ ಸಮಾರ್ಪಯನ್ ॥
ನಾನಾವಿಧಪದಾರ್ಥಾಸ್ತೇ ವಸ್ತ್ರಾಭರಣಪೂರ್ವಕಾನ್ ।
ಸತ್ಯಾಧೀಶೈಃ ಸಮಾನೀತಾನ್ ದೃಷ್ಟ್ವಾ ತುಷ್ಟಿಂ ಪ್ರಪೇದಿರೇ ॥
ತಾನ್ ಪದಾರ್ಥಾನಥ ಮಠೇ ಸ್ಥಾಪಯಿತ್ವಾ ಗುರೂತ್ತಮಾಃ ।
ವಿತ್ತರೂಪಂ ತದಖಿಲಂ ಬ್ರಾಹ್ಮಣೇಭ್ಯೋ ದದುರ್ಮುದಾ ॥
ಸತ್ಯಾಧೀಶಸ್ವಾಮಿನೋಽಥ ತೇಷಾಂ ಛಾಯಾನುವರ್ತಿನಃ ।
ಭೂತ್ವಾ ಪುನಃ ಪುನರ್ಗತ್ವಾ ಚಕ್ರುರ್ದಿಗ್ವಿಜಯಂ ಭುವಿ ॥
ನಾನಾವಿಧಪದಾರ್ಥಾಂಸ್ತೇ ಸಂಪಾದ್ಯ ಚ ಪುನಃ ಪುನಃ ।
ಸತ್ಯಾಭಿನವತೀರ್ಥೇಭ್ಯೋ ದದುರಾನೀಯ ಸರ್ವಶಃ ॥
ಸತ್ಯಾಧೀಶಯತೀನ್ ಪ್ರೀತ್ಯಾ ತತಃ ಪೂರ್ವದಿಶಂ ಪ್ರತಿ ।
ಗುರವಃ ಪ್ರೇಷಯಾಮಾಸುರ್ಗತಾಸ್ತೇಽಪ್ಯತಿಹರ್ಷಿತಾಃ ॥
ನಾನಾದೇಶಗತೈಃ ಸಮ್ಯಕ್ ಪೂಜಿತಾ ಪಾರ್ಥಿವಾದಿಭಿಃ ।
ಸಪ್ತಗೋದಾವರೀತೀರಂ ಪ್ರಾಪ್ತಾಸ್ತೇ ರೋಗಪೀಡಿತಾಃ ॥
ತತೋ ರಾಜಮಹೇಂದ್ರಾಖ್ಯಪುರಂ ಪ್ರಾಪ್ತಾ ಗುರೂತ್ತಮಾಃ ।
ಜ್ಞಾತ್ವಾ ಶರೀರಪ್ರಕೃತಿಂ ಪರಾಧೀನಮತೀವ ತೇ ॥
ಅಂತಕಾಲೇ ಸಮಾಯಾತೇ ತದಾ ವಿಜ್ಞಪ್ತಿಪತ್ರಿಕಾಮ್ ।
ಲೇಖಯಿತ್ವಾಽನುಸಂಸ್ಥಾನಂ ಪದಾರ್ಥಾನ್ ವಿವಿಧಾಂಸ್ತಥಾ ॥
ಸಂಪಾದಿತಪದಾರ್ಥಾನಪ್ಯಖಿಲಂ ದೇವತಾರ್ಚನಮ್ ।
ಪ್ರೇಷಯಿತ್ವಾ ಗುರೂಣಾಂ ಚ ಸಮೀಪಂ ತತ್ತತಃ ಪರಮ್ ॥
ಆಷಾಢದರ್ಶೇ ಸ್ನಾತ್ವಾಽಥ ಜಪ್ತ್ವಾ ತೇ ಪ್ರಣವಾದಿಕಾನ್ ।
ಸನ್ನಿಯಮ್ಯೇಂದ್ರಿಯಗ್ರಾಮಂ ಪರಂ ಹರಿಪದಂ ಯಯುಃ ॥

— ಶ್ರೀಪೂರ್ಣಬೋಧಗುರುವಂಶಕಥಾಕಲ್ಪತರುಃ(೧೯/೨೨,೨೩;೨೦/೪೮-೬೦)

* * *

## ಶ್ರೀಸತ್ಯಾಧಿರಾಜತೀರ್ಥ ಚರಿತಮ್

ಚಿಂತಾಮಣ್ಯುಪನಾಮಾಖ್ಯವಿಧ್ಯಾಧೀಶಾಖ್ಯಪಂಡಿತಾನ್ ।
ಕುಂಭಕೋಣಪುರಾತ್ ತೀವ್ರಂ ಸಮಾಹೂಯಾತಿವಿಶ್ರುತಾನ್ ॥
ದತ್ವಾತುರ್ಯಾಶ್ರಮಂ ತೇಭ್ಯಃ ಶ್ರೀಪಾದಾಃ ಪ್ರೀತಿಪೂರ್ವಕಮ್ ।
ನ್ಯಾಸಾದಿಕಂ ದರ್ಶಯಿತ್ವಾತದಾ ಸನ್ಯಾಸಿಶೇಖರಾಃ ।
ಪ್ರಣವಂ ಚೋಪದಿಶ್ಯಾಥ ತೇಷು ಪ್ರೀತಾ ಗುರೂತ್ತಮಾಃ ।
ಸತ್ಯಾಧಿರಾಜತೀರ್ಥಾ ಇತ್ಯೇವಂ ನಾಮ ದದುಸ್ತದಾ ॥
ಅಭಿಷಿಚ್ಯಾಣುಸಂಸ್ಥಾನಂ ದತ್ವಾತೇಭ್ಯೋಽತಿಹರ್ಷಿತಾಃ ।
ಪ್ರೇಷಯಾಮಾಸುರಥ ತಾನ್ ವಿಜಯಾಖ್ಯಪುರೀಂ ಪ್ರತಿ ॥
ಉಷಿತ್ವಾಮಾಸಮೇಕಂ ತೇ ತತ್ರ ಶಿಷ್ಯೈಃ ಸಮರ್ಚಿತಾಃ ।
ತಪ್ತಮುದ್ರಾದಿಕಾಂಸ್ತೇಭ್ಯೋ ದತ್ವಾ ತಸ್ಮಾದ್ವಿನಿರ್ಗತಾಃ ॥
ಸಪ್ತಗೋದಾವರೀತೀರಂ ಜಗ್ಮುರ್ದಿಗ್ವಿಜಯೇಚ್ಛಯಾ ।
ತತ್ರ ರಾಜಮಹೇಂದ್ರಾಖ್ಯಪುರಂ ಪ್ರಾಪ್ಯ ಗುರೂತ್ತಮಾಃ ॥
ಲೋಕೈಃ ಸಂಪಾದಯಾಮಾಸುರ್ವಿತ್ತಂ ತೇ ಬಹುಲಂ ತದಾ ।
ಸತ್ಯಾಧೀಶಮುನೇಸ್ತತ್ರ ವೃಂದಾವನಮವೇಕ್ಷ್ಯ ತೇ ॥
ಸ್ವಪ್ನೇ ತೈರರ್ಥಿತಾಸ್ತೇಭ್ಯಃ ದತ್ವಾ ಸ್ವರ್ಣಾಕ್ಷಿಣೀ ಮುದಾ ।
ತಸ್ಮಾನ್ನಿರ್ಗತ್ಯ ತತ್ರಸ್ಥಾನನುಜ್ಞಾಪ್ಯ ಪುರಂ ಪ್ರತಿ ॥
ಇತಸ್ತತಃ ಸಂಚರಂತಃ ಸತ್ಯನೂತ್ನಾಂತಿಕಂ ಯಯುಃ ।
ಆಗತ್ಯ ಗುರುಪಾದಾಬ್ಜಯುಗಂ ದೃಷ್ಟ್ವಾಽತಿಹರ್ಷಿತಾಃ ॥
ಸ್ವಾನೀತಕನಕೈಸ್ತೇಭ್ಯಸ್ತೇಽಭಿಷೇಕಂ ಪ್ರಚಕ್ರಿರೇ ।
ಸತ್ಯಾಭಿನವತೀರ್ಥಾಸ್ತೈರಭಿಷಿಕ್ತಾ ಮುದಾನ್ವಿತಾಃ ॥
ಬ್ರಾಹ್ಮಣೇಭ್ಯೋ ದದುರ್ದ್ರವ್ಯಂ ನಿರ್ಮಾಲ್ಯಮಿತಿ ಚಾತ್ಮನಃ ।
ಏವಂ ಪುನಃ ಪುನರ್ಗತ್ವಾ ಸಂಪಾದ್ಯ ಬಹುಲಂ ಧನಮ್ ॥
ಸ್ವಗುರುಭ್ಯೋ ದದುಃ ಸರ್ವಂ ತದರ್ಥಂ ಸಮುಪಾರ್ಜಿತಮ್ ।
ತತಸ್ತೇ ವೇಂಕಟಾಧೀಶಯಾತ್ರಾಂ ಕೃತ್ವಾಽತಿಶೀಘ್ರತಃ ।
ಬೇಲೂರಮಾಗತಾ ಗಂತುಂ ರೌಗಾರ್ತಾಶ್ಚೋಲಮಂಡಲಮ್ ॥
ತಸ್ಮಿನ್ ಕ್ಷೀರನದೀತೀರೇ ಕ್ರೋಶಮಾತ್ರೇ ಗುರೂತ್ತಮಾಃ ।
ತಾರಣಾಷಾಢಶುಕ್ಲಸ್ಥನವಮೀದಿವಸೇ ತದಾ ॥
ಕೃತ್ವಾ ಸ್ನಾನಾದಿಕಂ ವಿದ್ಯಾಪತಿವೃಂದಾವನಾಂತಿಕೇ ।
ಸತ್ಯಾಭಿನವತೀರ್ಥೇಭ್ಯೋ ಲಿಖಿತ್ವಾಪತ್ರಿಕಾಂ ತದಾ ॥
ಪ್ರೇಷಯಿತ್ವಾಽಣುಸಂಸ್ಥಾನಪದಾರ್ಥಾನ್ ಬ್ರಾಹ್ಮಣೈಃ ಸಹ ।
ದೇಹಂ ತ್ಯಕ್ತ್ವಾ ಹರಿಪದಂ ಜಗ್ಮುರತ್ಯಂತದುರ್ಲಭಮ್ ॥

— ಶ್ರೀಪೂರ್ಣಬೋಧಗುರುವಂಶಕಥಾಕಲ್ಪತರುಃ(೨೩/೨-೧೬)

* * *

# ನಮ್ಮ ಪ್ರಕಾಶನಗಳು

## ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ ಸರ್ವಮೂಲಗ್ರಂಥಗಳು

| | | |
|---|---|---|
| 1) | ಸಂಸ್ಕೃತಲಿಪಿಯಲ್ಲಿ (ಏಳು ಸಂಪುಟಗಳು) | 3500.00 |
| 2) | ಕನ್ನಡಲಿಪಿಯಲ್ಲಿ (ಏಳು ಸಂಪುಟಗಳು) | (ಪ್ರತಿಗಳು ಮುಗಿದಿವೆ) |
| 3) | ತೆಲುಗುಲಿಪಿಯಲ್ಲಿ (ಆರು ಸಂಪುಟಗಳು) | 2000.00 |

## ಉಪಲಬ್ಧವಿರುವ ಇತರ ಸಂಸ್ಕೃತ ಕೃತಿಗಳು

| | | |
|---|---|---|
| 4) | ಮಹಾಭಾರತತಾತ್ಪರ್ಯನಿರ್ಣಯಃ (ಭಾವಪ್ರಕಾಶಿಕಾಸಮೇತ) | 800.00 |
| 5) | ದ್ವಾದಶಸ್ತೋತ್ರಮ್ (ಎರಡು ವ್ಯಾಖ್ಯಾನಗಳ ಸಮೇತ) | 100.00 |
| 6) | ಶ್ರೀಮದ್ಭಗವದ್ಗೀತಾ (ಶ್ರೀಮದಾನಂದತೀರ್ಥಕೃತ ಗೀತಾಭಾಷ್ಯ, ಶ್ರೀಪದ್ಮನಾಭತೀರ್ಥರ ಗೀತಾಭಾಷ್ಯಟೀಕಾ ಹಾಗೂ ಶ್ರೀವಾದಿರಾಜಸ್ವಾಮಿಗಳ ಭಗವದ್ಗೀತಾಲಕ್ಷಾಲಂಕಾರ ಸಮೇತ) | 550.00 |
| 7) | ಶ್ರೀಮದ್ಭಗವದ್ಗೀತಾ (ಶ್ರೀವಿದ್ಯಾಧಿರಾಜತೀರ್ಥರು ಹಾಗೂ ಶ್ರೀರಾಘವೇಂದ್ರಸ್ವಾಮಿಗಳ ವ್ಯಾಖ್ಯಾನಸಮೇತ) | 400.00 |
| 8) | ಶ್ರೀಸುಮತೀಂದ್ರತೀರ್ಥರ ಮಂತ್ರರತ್ನಕೋಶಃ (ಶ್ರೀಸುಮತೀಂದ್ರತೀರ್ಥರ ಇತರ ಕೆಲವು ಕೃತಿಗಳ ಸಮೇತ) | 25.00 |
| 9) | ಸುಮಧ್ವವಿಜಯಃ (ಮೂಲಮಾತ್ರ) | 50.00 |
| 10) | ಸ್ತೋತ್ರಮಾಲಿಕಾ (ವೈಷ್ಣವಸ್ತೋತ್ರಸಂಗ್ರಹ) | 80.00 |

## ಕನ್ನಡದಲ್ಲಿ ಅನುವಾದಿತ/ಸಂಪಾದಿತ ಇತರ ಕೃತಿಗಳು

| | | |
|---|---|---|
| 11) | ಸ್ತೋತ್ರಮಾಲಿಕಾ (8 ಸಂಪುಟಗಳಲ್ಲಿ) | 400.00 |
| 12) | ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ(ಅನುವಾದ, ವಿವರಣೆ, ವ್ಯಾಖ್ಯಾನದಲ್ಲಿನ ವಿಶೇಷಾಂಶಗಳ ಸಮೇತ) | 1600.00 |
| 13) | ಕೃಷ್ಣಾಮೃತಮಹಾರ್ಣವ (ಕನ್ನಡ ಅನುವಾದ, ವಿವರಣೆ, ವ್ಯಾಖ್ಯಾನದಲ್ಲಿನ ವಿಶೇಷಾಂಶಗಳ ಸಮೇತ) | 60.00 |
| 14) | ಶ್ರೀಹರಿಕಥಾಮೃತಸಾರ (ಮೂಲಮಾತ್ರ - ಸಂಶೋಧಿತ ಆವೃತ್ತಿ) | 100.00 |
| 15) | ಶ್ರೀಹರಿಕಥಾಮೃತಸಾರ (ಮೂಲ, ಕನ್ನಡ ಅನುವಾದ, ವಿವರಣೆ, ವ್ಯಾಖ್ಯಾನದಲ್ಲಿನ ವಿಶೇಷಾಂಶಗಳ ಸಮೇತ) | 300.00 |
| 16) | ಶ್ರೀಮಧ್ವಾಚಾರ್ಯರ ಕಾಲನಿರ್ಣಯ (ಶ್ರೀಮಧ್ವಾಚಾರ್ಯರ ಕಾಲದ ಬಗ್ಗೆ ಹೊಸಬೆಳಕು) | 15.00 |
| 17) | **ಸುಮಧ್ವ ವಿಜಯ** (ಅನುವಾದ ಸಮೇತ) | 300.00 |
| 18) | ಶ್ರೀಹರಿದಾಸರ ಉಗಾಭೋಗಗಳು (ಒಟ್ಟು ೭೫೯ ಉಗಾಭೋಗಗಳ ಸಂಕಲನ) | 80.00 |
| 19) | ಶ್ರೀಮದ್ಭಗವದ್ಗೀತಾ (ಭಗವದ್ಗೀತೆಯ ಕನ್ನಡ ಅನುವಾದ) | 40.00 |
| 20) | ಗೀತಾಮಧು (ಶ್ರೀಮಧ್ವಭಾಷ್ಯಾನುಸಾರಿಯಾದ ಗೀತಾರ್ಥಸಾರ) | 60.00 |
| 21) | ಭಾಗವತದ ಬೆಳಕು | 20.00 |
| 22) | ಶ್ರೀವೇದವ್ಯಾಸದರ್ಶನ (ಶ್ರೀವೇದವ್ಯಾಸಾವತಾರದ ಸಮಗ್ರ ಪರಿಚಯಾತ್ಮಕ ಕೃತಿ) | 50.00 |
| 23) | ಶ್ರೀಪೂರ್ಣಪ್ರಜ್ಞದರ್ಶನ (ಆಚಾರ್ಯ ಶ್ರೀಮಧ್ವರ ಸಮಗ್ರ ಪರಿಚಯಾತ್ಮಕ ಕೃತಿ) | 50.00 |
| 24) | ಶ್ರೀಜಯತೀರ್ಥದರ್ಶನ (ಶ್ರೀಜಯತೀರ್ಥರ ಜೀವನ ಹಾಗೂ ಸಾಧನೆಗಳ ನೋಟ) | 35.00 |
| 25) | ಶ್ರೀಬ್ರಹ್ಮಣ್ಯತೀರ್ಥರು (ಶ್ರೀಬ್ರಹ್ಮಣ್ಯತೀರ್ಥರ ಪರಿಚಯಾತ್ಮಕ ಕೃತಿ) | 15.00 |
| 26) | ಶ್ರೀವ್ಯಾಸರಾಜದರ್ಶನ (ಶ್ರೀವ್ಯಾಸರಾಜರ ಜೀವನ ಹಾಗೂ ಕೃತಿಗಳ ಪರಿಚಯ) | 40.00 |
| 27) | ಶ್ರೀರಘೂತ್ತಮತೀರ್ಥರು (ಶ್ರೀರಘೂತ್ತಮತೀರ್ಥರ ಜೀವನ ಹಾಗೂ ಕೃತಿಗಳ ಪರಿಚಯ) | 25.00 |
| 28) | ಶ್ರೀವಿಜಯೀಂದ್ರದರ್ಶನ (ಶ್ರೀವಿಜಯೀಂದ್ರರ ಜೀವನ ಹಾಗೂ ಕೃತಿಗಳ ಪರಿಚಯ) | 25.00 |
| 29) | ಶ್ರೀರಾಘವೇಂದ್ರದರ್ಶನ (ಶ್ರೀರಾಘವೇಂದ್ರಸ್ವಾಮಿಗಳ ಜೀವನ, ಸಾಧನೆಗಳ ಒಂದು ನೋಟ) | 30.00 |
| 30) | ಶ್ರೀಜಯತೀರ್ಥರ ಪದ್ಯಮಾಲಾ (ಸಮಗ್ರದೇವಪೂಜಾಪದ್ಧತಿ) | 50.00 |
| 31) | ಹರಿಭಜನಕಲ್ಪದ್ರುಮ (ತಾರತಮ್ಯಕ್ರಮದಲ್ಲಿ ಶ್ರೀಹರಿಗುರುಗಳ ಭಜನಪದ್ಧತಿ) | 60.00 |
| 32) | ಶ್ರೀವಾದಿರಾಜತೀರ್ಥಕೃತ ತೀರ್ಥಪ್ರಬಂಧ (ಭಾರತದ ತೀರ್ಥಕ್ಷೇತ್ರಗಳ ಪರಿಚಯ – ಕನ್ನಡ ಅನುವಾದ) | 100.00 |
| 33) | ಬಳಿತ್ಥಾಸೂಕ್ತಮ್ (ಅನುವಾದ ಹಾಗೂ ವಿವರಣೆಗಳ ಸಮೇತ) | 20.00 |
| 34) | ಸದಾಚಾರವಿನೋದ ಭಾಗ - 1 (ವೈಷ್ಣವ ಸದಾಚಾರ ದೀಪಿಕಾ) | 70.00 |
| 35) | ಮನುಸುಭಾಷಿತ (ಮನುಸ್ಮೃತಿಯಲ್ಲಿನ ಧರ್ಮಬೋಧಕಸೂಕ್ತಿಗಳ ಸಂಗ್ರಹ) | 25.00 |
| 36) | ಶ್ರೀಹೃಷೀಕೇಶತೀರ್ಥಕೃತ ಸಂಪ್ರದಾಯಪದ್ಧತಿ (ಶ್ರೀಪಾಜಕಕ್ಷೇತ್ರಮಾಹಾತ್ಮ್ಯ, ಶ್ರೀಮಧ್ವಮಾಹಾತ್ಮ್ಯ) | 20.00 |

********